ಭಾನುವಾರ, ನವೆಂಬರ್ 6, 2022 | ₹ 6.00
www.prajavani.net
/prajavani.net @prajavani /+prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಮೈಸೂರಿನ ಮಾನವೀಯ ಪರಂಪರೆಯ 'ಕಟ್ಟಡ' ಕುಸಿಯದಿರಲಿ

ಭಾನುವಾರ, ನವೆಂಬರ್ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 306 | ಪುಟ 28
www.prajavani.net
/prajavani.net @prajavani /+prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮುರುಘಾ ಮಠದಲ್ಲಿ ಸ್ಥಳ ಮಹಜರು 6A
ಲೋಕೋಪಯೋಗಿ ಇಲಾಖೆಯ 660 ಹುದ್ದೆಗಳಿಗೆ ನೇಮಕ: ಸಂದರ್ಶಕ ಮಂಡಳಿ ರಚನೆ 6A
ಗ್ರಾಮ ಸ್ವರಾಜ್ಯಕ್ಕೆ ‘ಸ್ವಗ್ರಾಮ ಫೆಲೋಶಿಪ್’ 6C
‘ಶೇ 40ಕ್ಕಿಂತ ಕಡಿಮೆ ಅಂಕಕ್ಕೆ ಕಾರಣ ದಾಖಲಿಸಿ’ 6A

ಗಂಗಾ ಕಲ್ಯಾಣ ಯೋಜನೆಗೆ ₹ 2,600 ಕೋಟಿಗೂ ಹೆಚ್ಚು ಅನುದಾನ

ಲೆಕ್ಕಕ್ಕೇ ಸಿಗದ ಅಕ್ರಮ

• ರಾಜೇಶ್ ರೈ ಚಟ್ಲ

ಒಳನೋಟ

‘ಕೊರೆಯುವವರ’ ಕಲ್ಯಾಣ!

ಪ್ರತಿಕ್ರಿಯಿಸಿ: 9606038256
feedback@prajavani.co.in

‘ಗಂಗಾ ಕಲ್ಯಾಣ’ ಯೋಜನೆ (2015-16 ರಿಂದ 2019-20)

1,12,071 ಒಟ್ಟು ಕೊಳವೆ ಬಾವಿ ಗುರಿ

₹2,653 ಕೋಟಿ ಒದಗಿಸಿದ ಅನುದಾನ

89,510 ಕೊರೆದ ಕೊಳವೆ ಬಾವಿಗಳು

₹2,125 ಕೋಟಿ ವೆಚ್ಚವಾದ ಮೊತ್ತ



ಚಿಂಚೋಳಿ ತಾಲ್ಲೂಕು ಕುಂಚಾವರಂ ಗ್ರಾಮದಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕೊರೆದ ಕೊಳವೆ ಬಾವಿ

ಬೆಂಗಳೂರು: ‘ನೋ ವಾಟರ್, ನೋ ಮನಿ’ (ನೀರಿಲ್ಲದಿದ್ದರೆ ಹಣವಿಲ್ಲ)– ಸಣ್ಣ, ಅತಿಸಣ್ಣ ರೈತರ ಕೃಷಿ ಜಮೀನಿನಲ್ಲಿ ಕೊಳವೆಬಾವಿ ಕೊರೆದು, ಪಂಪ್ ಸೆಟ್ ಅಳವಡಿಸಿ ‘ಗಂಗೆ’ಯನ್ನು ಒದಗಿಸುವ ಮಹತ್ವಾಕಾಂಕ್ಷೆಯ ‘ಗಂಗಾ ಕಲ್ಯಾಣ’ ಯೋಜನೆಯ ಕಾಮಗಾರಿ ವಹಿಸಿಕೊಂಡ ಗುತ್ತಿಗೆದಾರರಿಗೆ ಸರ್ಕಾರ ವಿಧಿಸಿದ ಷರತ್ತಿದು. ವಿವಿಧ ನಿಗಮಗಳು ಅನುಷ್ಠಾನಗೊಳಿಸುವ ಈ ಯೋಜನೆಗೆ ಬೊಕ್ಕಸದಿಂದ ₹ 2,600 ಕೋಟಿಗೂ ಹೆಚ್ಚು ಅನುದಾನ ಹರಿದುಹೋಗಿದೆ. ಆದರೆ, ಅನುಷ್ಠಾನದಲ್ಲಾಗುತ್ತಿರುವ ಲೋಪ, ಭ್ರಷ್ಟಾಚಾರವೆಂಬ ತೂರೆಗಳಲ್ಲಿ ಈ ಹಣ ಯಥೇಚ್ಛವಾಗಿ ಹರಿದಿದೆ. ಆದರೆ, ಆ ಪ್ರಮಾಣ ಎಷ್ಟೆಂಬ ಲೆಕ್ಕ ಮಾತ್ರ ಸಿಗುತ್ತಿಲ್ಲ!

ಅಂಬೇಡ್ಕರ್ ಅಭಿವೃದ್ಧಿ ನಿಗಮ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಆದಿ ಜಾಂಬವ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳು 2015ರಿಂದ 2020ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಈ ಯೋಜನೆಯಡಿ ಒಟ್ಟು 89,510 ಕೊಳವೆಬಾವಿಗಳನ್ನು ಕೊರೆದಿವೆ. ಆ ಪೈಕಿ, ಅನೇಕ ಕೊಳವೆಬಾವಿಗಳಲ್ಲಿ ನೀರು ಸಿಕ್ಕಿಲ್ಲ. ಅದರಲ್ಲೂ ಬಯಲುಸೀಮೆ ಪ್ರದೇಶದಲ್ಲಿ ಶೇ 20ರಿಂದ 40ರಷ್ಟು ಕೊಳವೆ ಬಾವಿಗಳು ವಿಫಲವಾಗಿವೆ.

ವಿಫಲವಾದ ಕೊಳವೆಬಾವಿಗಳ ಲೆಕ್ಕ ಯಾವ ನಿಗಮದ ಬಳಿಯೂ ಇಲ್ಲ. ಆದರೆ, ಕೊರೆದ ಕೊಳವೆಬಾವಿಗಳೆಲ್ಲ ‘ಸಫಲ’ ಎಂದು ಬಿಂಬಿಸಿ ಅಧಿಕಾರಿಗಳು, ಮಧ್ಯವರ್ತಿಗಳು, ಗುತ್ತಿಗೆದಾರರು, ಏಜೆನ್ಸಿಯವರು ಕೋಟಿ ಕೋಟಿ ಹಣ ನುಂಗಿದ್ದಾರೆ. ಕೊರೆದ ಆಳಕ್ಕಿಂತ ಹೆಚ್ಚು ಆಳದ ಲೆಕ್ಕ ತೋರಿಸಿ, ಹೆಚ್ಚು ಅಳತೆಯ ಕೇಸಿಂಗ್ ಕೊಳವೆಯ ನಕಲಿ ದಾಖಲೆ ಸಲ್ಲಿಸಿ ಬಿಲ್ ಮಾಡಲಾಗಿದೆ. ಇಡೀ ‘ವ್ಯವಸ್ಥೆ’ ಈ ಅಕ್ರಮಕ್ಕೆ ಕೈಜೋಡಿಸಿರುವುದು ವಿಪರ್ಯಾಸ.

ಈ ಯೋಜನೆಯಡಿ ನಡೆದಿರುವ ಅಕ್ರಮ– ಅವ್ಯವಹಾರಗಳ ಬಗ್ಗೆ ಫಲಾನುಭವಿಗಳು, ವಿವಿಧ ಸಂಘಟನೆಗಳು ಸಂಬಂಧಪಟ್ಟ ನಿಗಮಗಳ ಅಧಿಕಾರಿಗಳಿಗೆ ಹಲವಾರು ಬಾರಿ ದೂರುಗಳನ್ನು ನೀಡಿದ್ದಾರೆ. ಇವುಗಳ ವಿಚಾರಣೆಗೆ ಸರ್ಕಾರ ಸಮಿತಿಗಳನ್ನೂ ರಚಿಸಿದೆ. ಆದರೆ, ವಿಚಾರಣೆ ನಡೆದು, ದೂರುಗಳು ತಾರ್ಕಿಕ ಅಂತ್ಯ ಕಂಡಿಲ್ಲ. ಹೀಗಾಗಿ, ಗುತ್ತಿಗೆದಾರರು ಯಾರೂ ಕಪ್ಪುಪಟ್ಟಿ ಸೇರಿಲ್ಲ. ಯಾವುದೇ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಕೈಗೊಂಡಿಲ್ಲ.

‘2015-16ರಿಂದ 2019-20ರ ಅವಧಿಯಲ್ಲಿ ಯೋಜನೆಯ ಕಾಮಗಾರಿಗಳಲ್ಲಿ ಟೆಂಡರ್‌ರಹಿತ ಅನುಷ್ಠಾನ, ಭ್ರಷ್ಟಾಚಾರ ನಡೆದಿವೆ. ಸುಮಾರು ₹250 ಕೋಟಿಗೂ ಹೆಚ್ಚು ಮೊತ್ತದ ಭ್ರಷ್ಟಾಚಾರ ನಡೆದಿದೆ’ ಎಂದು ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ ವೈ.ಎ. ನಾರಾಯಣಸ್ವಾಮಿ ಧ್ವನಿ ಎತ್ತಿದ್ದರು. ಈ ಬಗ್ಗೆ ಪರಿಶೀಲಿಸಲು ಅವರ ನೇತೃತ್ವದಲ್ಲಿಯೇ ಪರಿಷತ್ತಿನ ಎಂಟು ಸದಸ್ಯರನ್ನು ಒಳಗೊಂಡ ವಿಶೇಷ ಸದನ ಸಮಿತಿಯನ್ನು 2021ರ ಜನವರಿ 22ರಂದು ರಚಿಸಲಾಗಿತ್ತು. ಈ ಸಮಿತಿ ರಾಯಚೂರು, ಬಳ್ಳಾರಿ, ಹಾಸನ, ಮಡಿಕೇರಿ, ಮೈಸೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಭೇಟಿ ನೀಡಿ, ಯೋಜನೆ ಅನುಷ್ಠಾನದಲ್ಲಿನ ಲೋಪಗಳ ಕುರಿತಂತೆ ದಾಖಲೆ, ಸಾಕ್ಷ್ಯಗಳ ಸಹಿತ ವಿಧಾನಪರಿಷತ್‌ಗೆ ಇದೇ ಸೆಪ್ಟೆಂಬರ್ 20ರಂದು ಮಧ್ಯಂತರ ವರದಿ ಸಲ್ಲಿಸಿದೆ.

ಕಳೆದ ಮುಂಗಾರು ಅಧಿವೇಶನದಲ್ಲಿ ವಿಧಾನಸಭೆಯಲ್ಲೂ ‘ಗಂಗಾ ಕಲ್ಯಾಣ’ ಅವ್ಯವಹಾರ ಪ್ರತಿಧ್ವನಿಸಿದೆ. ವಿರೋಧ ಪಕ್ಷಗಳ ಗಟ್ಟಿ ಧ್ವನಿಗೆ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 2018ರಿಂದ ಈವರೆಗೆ ಕೊರೆದ ಕೊಳವೆಬಾವಿಗಳ ಅಕ್ರಮಗಳ ಕುರಿತಂತೆ ತನಿಖೆ ನಡೆಸುವುದಾಗಿ ಭರವಸೆ ನೀಡಿದ್ದಾರೆ.

6ನೇ ಪುಟ ನೋಡಿ

ದೂರಿಗಷ್ಟೆ ಸೀಮಿತ!

‘ಗಂಗಾ ಕಲ್ಯಾಣ’ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಳೆದ ಐದು ವರ್ಷಗಳಿಂದ ಬಂದಿರುವ ದೂರುಗಳನ್ನು ವಿಚಾರಣೆ ನಡೆಸಿ ವರದಿ ನೀಡಲು ನಿವೃತ್ತ ಐಎಎಸ್ ಅಧಿಕಾರಿ ಇ. ವೆಂಕಟಯ್ಯ ಅಧ್ಯಕ್ಷತೆಯಲ್ಲಿ ನಾಲ್ವರ ಸಮಿತಿಯನ್ನು 2019ರ ಮಾರ್ಚ್ 13ರಂದು ರಚಿಸಲಾಗಿತ್ತು. ಆದರೆ, ಈ ಸಮಿತಿ ಯಾವುದೇ ವರದಿ ಸಲ್ಲಿಸಿಲ್ಲ. ವಿಶೇಷ ಸದನ ಸಮಿತಿ ರಚಿಸಿದ ಬಳಿಕ ಆ ಸಮಿತಿಯನ್ನು ರದ್ದುಪಡಿಸಲಾಗಿದೆ. ದಲಿತ ಸಂಘಟನೆ ನೀಡಿದ ದೂರಿನ ಬಗ್ಗೆ ತನಿಖೆ ನಡೆಸಲು ಇಲಾಖೆಯ ಹೆಚ್ಚುವರಿ ನಿರ್ದೇಶಕರ (ಅಭಿವೃದ್ಧಿ) ನೇತೃತ್ವದಲ್ಲಿ ನಾಲ್ವರ ತನಿಖಾ ತಂಡವನ್ನು 2020 ಸೆ.14ರಂದು ರಚಿಸಲಾಗಿತ್ತು. ಈ ಸಮಿತಿ ಯಾವುದೇ ಕ್ರಮ ತೆಗೆದುಕೊಳ್ಳದ ಕಾರಣ 2021ರ ಫೆ. 17ರಂದು ಆ ಸಮಿತಿಯನ್ನೂ ಹಿಂಪಡೆಯಲಾಗಿದೆ. ಕೋಲಾರ, ರಾಮನಗರ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಯೋಜನೆಯ ಕಾಮಗಾರಿಯಲ್ಲಿನ ಲೋಪಗಳಿಗೆ ಸಂಬಂಧಿಸಿದಂತೆ ಬಂದ ದೂರುಗಳ ಪರಿಶೀಲನೆಗೆ ಪ್ರತಿ ಜಿಲ್ಲೆಗೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿತ್ತು. ಒಂದೂವರೆ ವರ್ಷ ಕಳೆದರೂ ನೋಡಲ್ ಅಧಿಕಾರಿಗಳು ಯಾವುದೇ ವರದಿ ನೀಡಿಲ್ಲ. ಹೀಗಾಗಿ, ಈ ನೋಡಲ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ವಿಶೇಷ ಸದನ ಸಮಿತಿ ಶಿಫಾರಸು ಮಾಡಿದೆ.

ಇನ್ನಷ್ಟು ಸುದ್ದಿಗಳು 6



ವಾಯು ಮಾಲಿನ್ಯ ನವದೆಹಲಿಯಲ್ಲಿ ವಾಯು ಮಾಲಿನ್ಯ ಕಡಿಮೆ ಮಾಡಲು ಶನಿವಾರ ವಿಶೇಷ ವಾಹನದ ಮೂಲಕ ನೀರು ಸಿಂಪಡಿಸಲಾಯಿತು –ಪಿಟಿಐ ಚಿತ್ರ

ಸುದ್ದಿ 6

ಬ್ಯಾಂಕ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ

ರೈತರ ಆಸ್ತಿ ಜಪ್ತಿ ತಡೆಗೆ ಕಾಯ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಲ ಮರುಪಾವತಿ ವಿಳಂಬ ಮಾಡಿರುವ ಸಂದರ್ಭಗಳಲ್ಲಿ ರೈತರ ಆಸ್ತಿ, ಚಿನ್ನಾಭರಣ ಜಪ್ತಿ ಮಾಡದಂತೆ ನಿರ್ಬಂಧ ಹೇರಲು ಕಾಯ್ದೆ ರೂಪಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಭರವಸೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಏರ್ಪಡಿಸಿರುವ ಕೃಷಿ ಮೇಳದಲ್ಲಿ ಪ್ರಗತಿಪರ ಕೃಷಿಕರಿಗೆ ಸಾಧಕ ಪ್ರಶಸ್ತಿಯನ್ನು ಪ್ರದಾನ ಮಾಡಿದ ಅವರು, ‘ಆಸ್ತಿ ಜಪ್ತಿ, ಹರಾಜು ಕ್ರಮಕ್ಕೆ ಮುಂದಾಗದಂತೆ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ತಿಳಿಸಿದರು.

‘ಸುಸ್ತಿದಾರರಾಗಿರುವ ರೈತರಿಗೆ ಸಾಲವನ್ನು ಮರುಪಾವತಿಸಲು ಸಮಯಾವಕಾಶ ನೀಡಬೇಕು. ನಬಾರ್ಡ್‌ನ ಸಭೆಯಲ್ಲೂ ಈ ಸಂಬಂಧ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದೇನೆ’ ಎಂದರು.

‘ಸಹಕಾರ ಬ್ಯಾಂಕ್‌ಗಳು ರೈತರಿಗೆ ನಿಗದಿಗಿಂತ ಕಡಿಮೆ ಮೊತ್ತದ ಸಾಲ ವಿತರಿಸುತ್ತಿವೆ. ಜಮೀನು ವಿಸ್ತೀರ್ಣ ಆಧರಿಸಿ ಸಾಲದ ಮೊತ್ತವನ್ನು ಹೆಚ್ಚಿಸಲೂ ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ ನೀಡಿರುವೆ. ರೈತರ ಆದಾಯ ಹೆಚ್ಚಿದರೆ ರಾಜ್ಯವೂ ಅಭಿವೃದ್ಧಿ ಆಗಲಿದೆ’ ಎಂದು ಆಶಿಸಿದರು.

‘ರಾಜ್ಯದ 10 ಲಕ್ಷ ರೈತರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯಡಿ ನೆರವು ವಿತರಿಸಲಾಗಿದೆ. 6 ಲಕ್ಷ ಕೃಷಿ ಕಾರ್ಮಿಕರ ಮಕ್ಕಳನ್ನು ಗುರುತಿಸಿದ್ದು, ಅವರಿಗೂ ಶೀಘ್ರವೇ ‘ವಿದ್ಯಾನಿಧಿ’ ಅಡಿ ವಿದ್ಯಾರ್ಥಿ ವೇತನ ವಿತರಿಸಲಾಗುವುದು. ನೇಕಾರರು, ಮೀನುಗಾರರು, ಟ್ಯಾಕ್ಸಿ ಹಾಗೂ ಆಟೊರಿಕ್ಷಾ ಚಾಲಕರ ಮಕ್ಕಳಿಗೂ ಈ ಯೋಜನೆ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ದುಡಿಯುವ ವರ್ಗಕ್ಕೆ ಸರ್ಕಾರ ಬಲ ತುಂಬುತ್ತಿದೆ’ ಎಂದು ಹೇಳಿದರು.

ಶೇ 60ರಷ್ಟು ಜನರು ಕೃಷಿ ಅವಲಂಬಿತರಿದ್ದಾರೆ. ಕೃಷಿ ವಲಯದಲ್ಲಿ ಶೇ 1 ರಷ್ಟು ಬೆಳವಣಿಗೆಯಾದರೆ ಕೈಗಾರಿಕೆ ಹಾಗೂ ಸೇವಾ ವಲಯದಲ್ಲಿ ಹೆಚ್ಚಿನ ಬೆಳವಣಿಗೆ ಆಗಲಿದೆ ಎಂದು ಹೇಳಿದರು.

ಸಿರಿಧಾನ್ಯ ಮೇಳ: ಜನವರಿ ಮೊದಲ ವಾರ ರಾಜ್ಯಮಟ್ಟದ ಸಿರಿಧಾನ್ಯ ಮೇಳವನ್ನು ಆಯೋಜಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ತನಿಖಾ ಪ್ರಕ್ರಿಯೆ ಡಿಜಿಟಲೀಕರಣಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಮಿನಲ್ ಪ್ರಕರಣಗಳ ತನಿಖಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಿ, ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ಸಂರಕ್ಷಿಸಲು ಮತ್ತು ನ್ಯಾಯಾಲಯಗಳೊಂದಿಗೆ ಹಂಚಿಕೊಳ್ಳಲು ಕಾರ್ಯಪಡೆಯೊಂದನ್ನು ರಚಿಸುವಂತೆ ಹೈಕೋರ್ಟ್‌ನ ಧಾರವಾಡ ಪೀಠವು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶನ ನೀಡಿದೆ.

ತನಿಖಾ ಪ್ರಕ್ರಿಯೆಯಲ್ಲಿ ಲೋಪ ಮತ್ತು ತನಿಖೆಗೆ ಸಂಬಂಧಿಸಿದ ದಾಖಲೆಗಳಲ್ಲಿನ ಕೈಬರಹವನ್ನು ಓದಲು ಅಸಾಧ್ಯವಾಗುತ್ತಿರುವ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ನೇತೃತ್ವದ ವಿಭಾಗೀಯ ಪೀಠವು ಈ ಆದೇಶ ಹೊರಡಿಸಿದೆ.

6A ಪುಟ ನೋಡಿ

ಬಂಧಿತರ ಸಂಖ್ಯೆ 10ಕ್ಕೆ ಏರಿಕೆ • ಇಬ್ಬರು ಎಸ್‌ಡಿಪಿಐ ಮುಖಂಡರು

ಪ್ರವೀಣ್ ಹತ್ಯೆ: ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಯುವಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಜಿಲ್ಲೆಯ ಹಲವೆಡೆ, ಹುಬ್ಬಳ್ಳಿ ಹಾಗೂ ಮೈಸೂರಿನಲ್ಲಿ ಶನಿವಾರ ಶೋಧಕಾರ್ಯ ನಡೆಸಿದೆ. ಪ್ರವೀಣ್ ಹತ್ಯೆಗೆ ಸಂಚು ರೂಪಿಸಿದ ಆರೋಪದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಬೆಳ್ಳಾರೆ ಗ್ರಾಮದ ಕುನ್ನ ಗುಡ್ಡೆಯ ಕೆ.ಮಹಮ್ಮದ್ ಇಕ್ಬಾಲ್ (ಎಸ್‌ಡಿಪಿಐ ಸುಳ್ಯ ವಿಧಾನ ಸಭಾ ಕ್ಷೇತ್ರ ಘಟಕದ ಅಧ್ಯಕ್ಷ), ಬೆಳ್ಳಾರೆಯ ಕೆ.ಇಸ್ಮಾಯಿಲ್ ಶಾಫಿ (ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಶಾಫಿ ಬೆಳ್ಳಾರೆ) ಹಾಗೂ ಸುಳ್ಯದ ನಾವೂರು ಗ್ರಾಮದ ಇಬ್ರಾಹಿಂ ಷಾ ಬಂಧಿತ ಆರೋಪಿಗಳು. ಆರೋಪಿಗಳ ಮನೆಗಳಿಂದ ಕೆಲವು ಡಿಜಿಟಲ್ ಸಾಧನಗಳು, ಪೂರಕ ಸಾಕ್ಷ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ಎನ್‌ಐಎ ಅಧಿಕಾರಿಗಳಿಂದ ವಿಚಾರಣೆ

ಹುಬ್ಬಳ್ಳಿ: ಎಸ್‌ಡಿಪಿಐ ಸಂಘಟನೆಯ ಧಾರವಾಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಸ್ಮಾಯಿಲ್ ನಾಲಬಂದ್ ಹಾಗೂ ಅವರ ಕುಟುಂಬದ ಸದಸ್ಯರನ್ನು ಶನಿವಾರ ಎನ್‌ಐಎ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿ, ಮಾಹಿತಿ ಸಂಗ್ರಹಿಸಿದ್ದಾರೆ.

ಹಳೇಹುಬ್ಬಳ್ಳಿ ನೂರಾನಿ ಪ್ಲಾಟ್‌ನಲ್ಲಿರುವ ಇಸ್ಮಾಯಿಲ್ ಅವರ ನಿವಾಸಕ್ಕೆ ಬೆಳಿಗ್ಗೆ 4.30ಕ್ಕೆ ತೆರಳಿದ ನಾಲ್ವರು ಎನ್‌ಐಎ ಅಧಿಕಾರಿಗಳ ತಂಡ, 11ರವರೆಗೆ ಕುಟುಂಬದ ಸದಸ್ಯರನ್ನು ವಿಚಾರಣೆಗೆ ಒಳಪಡಿಸಿತು. ಪುತ್ರ ತಾಹಿರ್ ನಾಲಬಂದ್ ಬೆಳಗಾವಿಗೆ ತೆರಳಿದ್ದಾನೆ ಎಂದು ಕುಟುಂಬದವರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳು, ಸೋಮವಾರ (ನ.7) ಬೆಂಗಳೂರಿನ ಎನ್‌ಐಎ ಕಚೇರಿಗೆ ಕುಟುಂಬ ಸಮೇತರಾಗಿ ವಿಚಾರಣೆಗೆ ಬರುವಂತೆ ನೋಟಿಸ್ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಂಡಿ ಮೊಹಲ್ಲಾದಲ್ಲಿ ದಾಳಿ (ಮೈಸೂರು ವರದಿ): ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ಶನಿವಾರ ಕಾರ್ಯಾಚರಣೆ ನಡೆಸಿದ ಎನ್‌ಐಎ ಅಧಿಕಾರಿಗಳು ಪಿಎಫ್‌ಐ ಮುಖಂಡ ಸುಲೈಮಾನ್ ಅವರನ್ನು ವಶಕ್ಕೆ ಪಡೆದರು. ಆದರೆ ಈ ಕುರಿತು ಯಾವುದೇ ಮಾಹಿತಿಯಿಲ್ಲ ಎಂದು ಪೊಲೀಸ್ ಆಯುಕ್ತ ಚಂದ್ರಗುಪ್ತ ತಿಳಿಸಿದ್ದಾರೆ.

ಪ್ರವೀಣ್ ನೆಟ್ಟಾರು ಹತ್ಯೆ ಸಂಬಂಧ ಇದುವರೆಗೆ ಹತ್ತು ಆರೋಪಿಗಳನ್ನು ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ತಲೆ ಮರೆಸಿಕೊಂಡಿರುವ ನಾಲ್ವರು ಪ್ರಮುಖ ಆರೋಪಿಗಳ ಪತ್ತೆಗೆ ಸುಳಿವು ನೀಡುವವರಿಗೆ ₹ 5 ಲಕ್ಷದವರೆಗೆ ಬಹುಮಾನವನ್ನೂ ಘೋಷಿಸಿದೆ. ಈ ಪ್ರಕರಣ ತನಿಖೆ ಮುಂದುವರಿದಿದೆ ಎಂದೂ ಎನ್‌ಐಎ ಹೇಳಿದೆ.

ಬೆಳ್ಳಾರೆಯಲ್ಲಿ 2022ರ ಜುಲೈ 26ರ ರಾತ್ರಿ ಪ್ರವೀಣ್ ನೆಟ್ಟಾರು ಅವರನ್ನು ಹತ್ಯೆ ಮಾಡಲಾಗಿತ್ತು. ಆರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಈ ಪ್ರಕರಣದ ತನಿಖೆ ನಡೆಸಿದ್ದರು. ಬಳಿಕ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವರ್ಗಾಯಿಸಲಾಗಿತ್ತು. ಎನ್‌ಐಎ ಆ.4 ರಿಂದ ಈ ಪ್ರಕರಣದ ತನಿಖೆ ನಡೆಸುತ್ತಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸದಸ್ಯರು ಸಮಾಜದಲ್ಲಿ ಕ್ಷೋಭೆ ಉಂಟುಮಾಡುವ ಉದ್ದೇಶದಿಂದ ಈ ಕೃತ್ಯ ನಡೆಸಿದ್ದಾರೆ ಎಂದು ಎನ್‌ಐಎ ಹೇಳಿದೆ.

ಎಸ್‌ಡಿಪಿಐ ಮುಖಂಡರ ಬಂಧನವಾದ ಬಳಿಕ ಟ್ವೀಟ್ ಮಾಡಿರುವ ಎಸ್‌ಡಿಪಿಐ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್, ‘ಸಂಘಟನೆಯ ರಾಜ್ಯ ಕಾರ್ಯದರ್ಶಿ ಶಾಫಿ ಬೆಳ್ಳಾರೆ ಮತ್ತು ಸುಳ್ಯ ಅಸೆಂಬ್ಲಿ ಅಧ್ಯಕ್ಷ ಇಕ್ಬಾಲ್ ಬೆಳ್ಳಾರೆ ಅವರನ್ನು ಎನ್‌ಐಎ ವಿಚಾರಣೆ ಸಲುವಾಗಿ ವಶಪಡಿಸಿಕೊಂಡಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಎನ್‌ಐಎ ಯಾವುದೇ ಒತ್ತಡಕ್ಕೆ ಮಣಿಯದೇ ನಿಷ್ಪಕ್ಷಪಾತ ಮತ್ತು ಪ್ರಾಮಾಣಿಕ ತನಿಖೆ ನಡೆಸಲಿ ಎಂದು ಆಗ್ರಹಿಸುತ್ತೇನೆ’ ಎಂದು ಹೇಳಿದ್ದಾರೆ.

ವಾಯು ಗುಣಮಟ್ಟ: ಮತ್ತೆ ಹತ್ತು ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯು ಗುಣಮಟ್ಟ ಸುಧಾರಿಸಲು ಕಳೆದ ವರ್ಷ ಕೇಂದ್ರ ಸರ್ಕಾರ ನೀಡಿದ್ದ ₹279 ಕೋಟಿ ಜತೆಗೆ ಈ ಬಾರಿ ಇನ್ನೂ ₹140 ಕೋಟಿ ಅನುದಾನವನ್ನು ರಾಜ್ಯ ಪಡೆದಿದೆ. ಈ ಅನುದಾನದಲ್ಲಿ 10 ಕಾಮಗಾರಿಗಳನ್ನು ಒಳಗೊಂಡ ಕ್ರಿಯಾಯೋಜನೆಗೆ ರಾಜ್ಯ ಮಟ್ಟದ ಅನುಷ್ಠಾನ ಉಸ್ತುವಾರಿ ಸಮಿತಿ (ಎಸ್‌ಎಲ್‌ಎಂಐಸಿ) ಅನುಮೋದನೆ ನೀಡಿದೆ. ಬಿಎಂಟಿಸಿ ಮತ್ತು ಬಿಬಿಎಂಪಿ ಈ ಯೋಜನೆಗಳನ್ನು ಅನುಷ್ಠಾನ ಮಾಡಲಿವೆ.

15ನೇ ಹಣಕಾಸು ಆಯೋಗದಿಂದ ಪಡೆದಿದ್ದ ಅನುದಾನದಲ್ಲಿ ಎಲೆಕ್ಟ್ರಿಕ್ ಬಸ್‌ಗಳಿಗೆ ಚಾರ್ಜಿಂಗ್ ಸೌಲಭ್ಯ, ಡಬಲ್ ಡೆಕ್ಕರ್ ಎಲೆಕ್ಟ್ರಿಕ್ ಬಸ್‌ಗಳ ಖರೀದಿ ಸೇರಿ ವಿವಿಧ ಕಾಮಗಾರಿಗಳಿಗೆ ₹ 46 ಕೋಟಿಯನ್ನು ಬಿಎಂಟಿಸಿ ಪಡೆದಿದೆ. ಕಸ ಗುಡಿಸುವ ಯಂತ್ರಗಳು, ಉತ್ತಮವಾದ ಪಾದಚಾರಿ ಮಾರ್ಗ ನಿರ್ಮಾಣ, ಕಟ್ಟಡಗಳ ಅವಶೇಷ ತೆರವುಗೊಳಿಸುವ ಕಾಮಗಾರಿಗಳಿಗೆ ಬಿಬಿಎಂಪಿ ಅನುದಾನ ಪಡೆದುಕೊಂಡಿದೆ.

‘ಪ್ರಜಾವಾಣಿ’ಗೆ ಲಭಿಸಿರುವ ದಾಖಲೆಗಳ ಪ್ರಕಾರ, 15ನೇ ಹಣಕಾಸು ಆಯೋಗದಿಂದ ಮುಂದಿನ ಹಣಕಾಸು ವರ್ಷದಲ್ಲಿ ₹145 ಕೋಟಿ ಅನುದಾನ ಪಡೆಯಲು ಬೆಂಗಳೂರು ಅರ್ಹವಾಗಿದೆ.

6ನೇ ಪುಟ ನೋಡಿ

ಒಳ ಪುಟ



ಸ್ಥಿರ ಸರ್ಕಾರ ಅಗತ್ಯ: ಮೋದಿ ಪ್ರತಿಪಾದನೆ 6D

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಗರ್ ಹುಕುಂ ಅಕ್ರಮ: ವರದಿ ಸಲ್ಲಿಸಿದ ಬೆನ್ನಲ್ಲೇ ಉಪ ವಿಭಾಗಾಧಿಕಾರಿ ವರ್ಗಾವಣೆ

ಭೂಮಂಜೂರಾತಿಯಲ್ಲಿ ನಿಯಮ ಉಲ್ಲಂಘನೆ

• ಮಲ್ಲೇಶ

ಬೇಲೂರು (ಹಾಸನ ಜಿಲ್ಲೆ): ಹೇಮಾವತಿ, ಯಗಚಿ ಜಲಾಶಯದ ಮುಳುಗಡೆ ಸಂತ್ರಸ್ತರಿಗೆ ಮೀಸಲಿಟ್ಟ ಭೂಮಿಯೂ ಅನ್ಯರ ಪಾಲು, ಬೆಂಗಳೂರು ಸೇರಿದಂತೆ ತಾಲ್ಲೂಕಿನ ಹೊರಗಿನ ನಿವಾಸಿಗಳಿಗೂ ಭೂಮಿ ಮಂಜೂರು, ಶೇ 99ರಷ್ಟು ಪ್ರಕರಣಗಳಲ್ಲಿ ಫಾರಂ 53ರ ಮೂಲ ಅರ್ಜಿಗಳೇ ಇಲ್ಲ.

– ತಾಲ್ಲೂಕಿನ ಬಗರ್ ಹುಕುಂ ಸಕ್ರಮ ಸಮಿತಿಯಲ್ಲಿ 2016ರಿಂದ 2022ರವರೆಗೆ ನಡೆದಿರುವ ಭೂ ಮಂಜೂರಾತಿಯ ಅಕ್ರಮಗಳಿವು.

ಸಕಲೇಶಪುರದ ಹಿಂದಿನ ಉಪ ವಿಭಾಗಾಧಿಕಾರಿ ಪ್ರತೀಕ್ ಭಾಯಲ್ ಅವರು ಆರು ವರ್ಷಗಳ ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗೆ ಸಲ್ಲಿಸಿರುವ ಪ್ರಾಥಮಿಕ ವರದಿಯಲ್ಲಿ ಈ ವಿಷಯಗಳು ಬಹಿರಂಗವಾಗಿವೆ.

ಕೆಲ ಪ್ರಕರಣಗಳಲ್ಲಿ ಅರ್ಹ ರೈತರ ಅರ್ಜಿಗಳನ್ನು ವಜಾಗೊಳಿಸಿ, ಬಲಿಷ್ಠರಿಗೆ ಭೂಮಿ ಮಂಜೂರು ಮಾಡಿರುವ ಬಗ್ಗೆಯೂ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಪಟ್ಟಣದಿಂದ 3 ಕಿ.ಮೀ ವ್ಯಾಪ್ತಿಯಲ್ಲಿ ಭೂಮಿ ಮಂಜೂರು ಮಾಡುವಂತಿಲ್ಲ ಎಂಬ ನಿಯಮವನ್ನೂ ಉಲ್ಲಂಘಿಸಲಾಗಿದೆ. ಮಾಜಿ ಸೈನಿಕರಿಗೆ, ಹೇಮಾವತಿ, ಯಗಚಿ ಜಲಾಶಯ ಯೋಜನೆಯ ಮುಳುಗಡೆ ರೈತರಿಗೆ ಮೀಸಲಿಟ್ಟ ಭೂಮಿಯನ್ನೂ ಬಗರ್ ಹುಕುಂ ಅಡಿಯಲ್ಲಿ ಮಂಜೂರು ಮಾಡಿರುವುದು ದೃಢಪಟ್ಟಿದೆ.

‘ಸಾಕ್ಷ್ಯ ನಾಶಕ್ಕಾಗಿ ದಾಖಲೆ ಪುಸ್ತಕಗಳಲ್ಲಿ ಕೆಲವು ಹಾಳೆಗಳನ್ನು ಹರಿದು ಹಾಕಿರುವುದು ಕಂಡುಬಂದಿದೆ. ಮಂಜೂರಾದ ಭೂಮಿಗೆ ತಹಶೀಲ್ದಾರ್ ಸ್ಥಳ ಪರಿಶೀಲನೆಯ ವರದಿ ಕಡತಗಳೇ ಇಲ್ಲ’.

6A ಪುಟ ನೋಡಿ

ಯಾರ ಅವಧಿಯಲ್ಲಿ ಎಷ್ಟು ಮಂಜೂರಾತಿ

ತಹಶೀಲ್ದಾರ್	ಕಡತ	ಮಂಜೂರಾತಿ (ಎಕರೆ)	ಮೌಲ್ಯ (₹ ಕೋಟಿ)
ಬಿ.ಎ.ಜಗದೀಶ್	3	10.65	2.66
ಎಚ್.ಎಸ್. ಪರಮೇಶ್	653	1,245.03	311.25
ಜೆ.ಉಮೇಶ್	264	400.74	100.18
ಬಿ.ಎಸ್. ಪುಟ್ಟಶೆಟ್ಟಿ	390	893.57	223.39
ಮೋಹನ್‌ಕುಮಾರ್	74	200.87	50.21

ಪ್ರಜಾವಾಣಿ ವಿಶೇಷ

ಪ್ರತೀಕ್ ವರ್ಗಾವಣೆ

ಬಗರ್ ಹುಕುಂ ಸಕ್ರಮ ಸಮಿತಿಯ ಅಕ್ರಮ ಭೂ ಮಂಜೂರಾತಿ ಕುರಿತು ವರದಿ ಸಲ್ಲಿಸಿದ ಕೆಲವೇ ದಿನಗಳಲ್ಲಿ ಸಕಲೇಶಪುರ ಉಪವಿಭಾಗಾಧಿಕಾರಿ ಪ್ರತೀಕ್ ಭಾಯಲ್ ಅವರ ವರ್ಗಾವಣೆಯಾಗಿದೆ. ಸ್ಥಳೀಯ ಶಾಸಕರೊಬ್ಬರ ಶಿಫಾರಸಿನಂತೆ ಮುಖ್ಯಮಂತ್ರಿ ಕಚೇರಿಯಿಂದಲೇ ವರ್ಗಾವಣೆಗೆ ಸೂಚನೆ ನೀಡಲಾಗಿದೆ. ಇದೀಗ ಅನಮೋಲ್ ಜೈನ್ ಅವರನ್ನು ಉಪ ವಿಭಾಗಾಧಿಕಾರಿಯಾಗಿ ನಿಯೋಜಿಸಲಾಗಿದೆ.

> ಪ್ರತಿ ಕಡತದ ಸಮಗ್ರ ತನಿಖೆಗೆ ಸೂಚಿಸಿದ್ದೇನೆ. ಕೆಲ ಕಡತಗಳಲ್ಲಿ ನೈಜ ರೈತರಿಗೆ ಭೂಮಿ ಮಂಜೂರು ಮಾಡಿದ್ದರೂ, ನಿಯಮದ ಪ್ರಕಾರ ಮಾಡಿಲ್ಲ
>
> **ಪ್ರತೀಕ್ ಭಾಯಲ್,** ಹಿಂದಿನ ಉಪ ವಿಭಾಗಾಧಿಕಾರಿ

> ನನ್ನ ಅವಧಿಯಲ್ಲಿ ಅಕ್ರಮ ನಡೆದಿಲ್ಲ. ಅಧಿಕಾರಿಗಳು ನೀಡಿದ ಪ್ರಸ್ತಾವ, ವರದಿ ಪರಿಶೀಲಿಸಿ ಸಕ್ರಮಗೊಳಿಸಿದ್ದೇನೆ. ತಪ್ಪಾಗಿದ್ದರೆ ಅಧಿಕಾರಿಗಳೇ ಹೊಣೆ
>
> **ಕೆ.ಎಸ್. ಲಿಂಗೇಶ್,** ಶಾಸಕ, ಬಗರ್ ಹುಕುಂ ಸಮಿತಿ ಅಧ್ಯಕ್ಷ

1,260 ಅರ್ಜಿದಾರರಿಗೆ ಖಾತೆ

‘ಮಂಜೂರಾದ 1,430 ಅರ್ಜಿದಾರರ ಪೈಕಿ 1,384 ಅರ್ಜಿದಾರರಿಗೆ ಸಾಗುವಳಿ ಚೀಟಿ ನೀಡಿದ್ದು, 1,260 ಅರ್ಜಿದಾರರ ಹೆಸರಿಗೆ ಖಾತೆ ಮಾಡಲಾಗಿದೆ. 46 ಅರ್ಜಿದಾರರಿಗೆ ಸಾಗುವಳಿ ಚೀಟಿ ನೀಡಬೇಕಿದೆ.

ಸಾಗುವಳಿ ಚೀಟಿ ನೀಡಿರುವ 1,384 ಅರ್ಜಿದಾರರ ಕಡತಗಳಲ್ಲಿ 1,260 ಅರ್ಜಿದಾರರ ಕಡತಗಳು ಅನುದಾನ ಪ್ರಕ್ರಿಯೆಯಲ್ಲಿ ಪ್ರಮುಖ ಲೋಪದೋಷ ಹೊಂದಿದ್ದು, ಅಕ್ರಮ ಮಂಜೂರಾತಿ ಹೊಂದಿವೆ. 124 ಅರ್ಜಿದಾರರ ಕಡತಗಳು ಅನುದಾನ ಪ್ರಕ್ರಿಯೆಯಲ್ಲಿ ಕಡಿಮೆ ಲೋಪದೋಷಗಳೊಂದಿಗೆ ಮಂಜೂರಾತಿ ಹೊಂದಿವೆ’ ಎಂಬುದನ್ನು ಪ್ರತೀಕ್ ಭಾಯಲ್ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಲಾಡ್ಜ್ ಸ್ಟಾರ್ ಸೌತ್ ಶತಮಾನೋತ್ಸವ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡಮಕ್ಕಳ ಶಿಕ್ಷಣ ಮತ್ತು ಆರೋಗ್ಯ ಸುಧಾರಣೆಗೆ ಸದ್ದಿಲ್ಲದೆ ಕೆಲಸ ಮಾಡುತ್ತಿರುವ ದಕ್ಷಿಣ ಭಾರತದ ಅತಿದೊಡ್ಡ ಕೇಂದ್ರಗಳಲ್ಲಿ ಒಂದಾದ ಲಾಡ್ಜ್ ಸ್ಟಾರ್ ಸೌತ್ ನಂ. 101 ಈಗ ಶತಮಾನೋತ್ಸವದ ಸಂಭ್ರಮದಲ್ಲಿದ್ದು, ಅಣ್ಣಾಸ್ವಾಮಿ ಅಕಾಡೆಮಿಯಲ್ಲಿನ ಸ್ಕೈಲೈಟ್ ಶಾಲೆಯಲ್ಲಿ ಶನಿವಾರ ಶತಮಾನೋತ್ಸವ ಆಚರಿಸಲಾಯಿತು.

ಭಾರತದ ಗ್ರ್ಯಾಂಡ್ ಲಾಡ್ಜ್‌ನ ಗ್ರ್ಯಾಂಡ್ ಮಾಸ್ಟರ್ ಅನಿಶ್‌ಕುಮಾರ್ ಶರ್ಮಾ ಮತ್ತು ದಕ್ಷಿಣ ಭಾರತದ ಪ್ರಾದೇಶಿಕ ಗ್ರ್ಯಾಂಡ್ ಮಾಸ್ಟರ್ ವಿಂಜಮೂರ್ ಗೋವಿಂದರಾಜ್ ಮಧುಸೂದನ್ ಸೇರಿ ಹಲವರು ಈ ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾಗಿದ್ದರು.

1921ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ಸದ್ಯ 784 ಸದಸ್ಯರನ್ನು ಹೊಂದಿದೆ. ಇಡೀ ದೇಶದಾದ್ಯಂತ ಬಡ ಮಕ್ಕಳಿಗೆ ಶಿಕ್ಷಣ ಕೊಡಿಸುವ ಕೆಲಸವನ್ನು ಈ ಸಂಸ್ಥೆ ಮಾಡುತ್ತಿದೆ. ಈ ಶಾಲೆಯ ವಿದ್ಯಾರ್ಥಿಗಳಿಗೆ ಸುಮಾರು ₹7.50 ಲಕ್ಷ ಮೌಲ್ಯದ ಕಲಿಕಾ ಉಪಕರಣಗಳು, ಮಾಂಟೆಸ್ಸರಿ ಸಾಮಗ್ರಿಗಳನ್ನು ವಿತರಿಸುವ ಮೂಲಕ ಶತಮಾನೋತ್ಸವ ಆಚರಿಸಲಾಯಿತು.

‘ಭ್ರಾತೃತ್ವದ ನೆಲೆಯಲ್ಲಿ ಹುಟ್ಟಿಕೊಂಡ ಈ ಸಂಸ್ಥೆಯು 13ನೇ ಶತಮಾನದಿಂದ ತನ್ನ ಬೇರುಗಳನ್ನು ವಿಸ್ತರಿಸಿಕೊಂಡು ಬಂದಿದೆ. ದೇಶದಲ್ಲಿ 400ಕ್ಕೂ ಹೆಚ್ಚು ಘಟಕಗಳನ್ನು ಹೊಂದಿದೆ. 100 ವರ್ಷಗಳನ್ನು ದಾಟಿರುವ ಹಲವು ಸಂಸ್ಥೆಗಳು ಇವೆ. ಬೆಂಗಳೂರಿನ ಲಾಡ್ಜ್ ಸ್ಟಾರ್ ಆಫ್ ಸೌತ್ ನಂ. 101 ಕೂಡ ಶತಮಾನ ಪೂರೈಸಿದೆ. ದಾನ ಮಾಡಲು ಬೇಸರಿಸಿಕೊಳ್ಳದೆ ಕೈಲಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರಯತ್ನಿಸುತ್ತಿದ್ದೇವೆ’ ಎಂದು ಅನಿಶ್‌ಕುಮಾರ್ ಶರ್ಮಾ ಹೇಳಿದರು.

‘ಬಡವರಿಗೆ ಅನ್ನದಾನ ಮಾಡುವ ಬದಲು ಶಿಕ್ಷಣ ನೀಡುವುದರಿಂದ ಇಡೀ ಸಮುದಾಯ ಬಲಗೊಳ್ಳುತ್ತದೆ ಎಂಬುದನ್ನು ನಾವು ನಂಬಿದ್ದೇವೆ. ಅನ್ನ ಮತ್ತು ಹಣ ಸಂಪಾದಿಸುವ ಶಕ್ತಿಯನ್ನು ಒಳ್ಳೆಯ ಶಿಕ್ಷಣ ನೀಡುತ್ತದೆ’ ಎಂದು ಲಾಡ್ಜ್ ಸ್ಟಾರ್ ಆಫ್ ಸೌತ್ ಮುಖ್ಯಸ್ಥ ಮಹೇಂದ್ರ ಕುಮಾರ್ ಡಿ. ಪಟೇಲ್ ಹೇಳಿದರು.

‘ಉತ್ತಮ ಸಮಾಜ ನಿರ್ಮಾಣದ ನಿಟ್ಟಿನಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನ ಮಾಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ದಾನವು ಸಹಾನುಭೂತಿಯ ಅವಿಭಾಜ್ಯ ಅಂಗ. ನಮ್ಮಲ್ಲಿರುವ ಸಣ್ಣ ಮೂಲಗಳಿಂದ ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೇವೆ’ ಎಂದು ಮಧುಸೂದನ್ ವಿವರಿಸಿದರು.



ಅಣ್ಣಾಸ್ವಾಮಿ ಅಕಾಡೆಮಿಯಲ್ಲಿನ ಸ್ಕೈಲೈಟ್ ಶಾಲೆಗೆ ಮಾಂಟೆಸ್ಸರಿ ಸಲಕರಣೆಗಳನ್ನು ಅನಿಶ್‌ಕುಮಾರ್ ಶರ್ಮಾ ಹಸ್ತಾಂತರ ಮಾಡಿದರು. ಲಾಡ್ಜ್ ಸ್ಟಾರ್‌ನ ಬೆಂಗಳೂರು ಸಹಾಯಕ ಪ್ರಾದೇಶಿಕ ಗ್ರ್ಯಾಂಡ್ ಮಾಸ್ಟರ್ ಸುರೇಶ್‌ಬಾಬು, ವಿ.ಜಿ.ಮಧುಸೂದನ್, ಅಣ್ಣಾಸ್ವಾಮಿ ಮುದಲಿಯಾರ್ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಅನಂತ್ ರಾಮ್, ಲಾಡ್ಜ್ ಸ್ಟಾರ್ ಆಫ್ ಸೌತ್ ಮುಖ್ಯಸ್ಥ ಮಹೇಂದ್ರ ಕುಮಾರ್ ಡಿ. ಪಟೇಲ್ ಇದ್ದರು –ಪ್ರಜಾವಾಣಿ ಚಿತ್ರ

ಪ್ರಶ್ನೆಪತ್ರಿಕೆ ಸೋರಿಕೆ ತನಿಖೆಗೆ ಸಮಿತಿ

ಕೋಲಾರ: ಬೆಂಗಳೂರು ಉತ್ತರ ವಿ.ವಿ ವ್ಯಾಪ್ತಿಯ ಪದವಿ ಕಾಲೇಜುಗಳ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ತನಿಖೆ ನಡೆಸಲು ತ್ರಿಸದಸ್ಯರ ಸಮಿತಿ ರಚಿಸಲಾಗಿದೆ ಎಂದು ವಿ.ವಿಯ ಕುಲಸಚಿವ (ಮೌಲ್ಯಮಾಪನ) ಡಾ.ಡಿ. ಡೊಮಿನಿಕ್ ತಿಳಿಸಿದ್ದಾರೆ.

ಮೃತ್ತಿಕೆ ಸಂಗ್ರಹ ರಥಯಾತ್ರೆಗೆ ಸ್ವಾಗತ

ಪ್ರಜಾವಾಣಿ ವಾರ್ತೆ

ಯಲಹಂಕ: ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಅನಾವರಣಕ್ಕಾಗಿ ನಡೆಯುತ್ತಿರುವ ಪವಿತ್ರ ಮೃತ್ತಿಕೆ (ಮಣ್ಣು) ಸಂಗ್ರಹ ರಥಯಾತ್ರೆಯು ಶನಿವಾರ ಯಲಹಂಕದಲ್ಲಿ ಸಾವಿರಾರು ಜನರ ಉತ್ಸಾಹ ಮತ್ತು ಜಯಘೋಷಗಳ ನಡುವೆ ವಿಜೃಂಭಣೆಯಿಂದ ನಡೆಯಿತು.

ಉನ್ನತಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಶಾಸಕ ಎಸ್. ಆರ್.ವಿಶ್ವನಾಥ್, ಸಂತೆ ವೃತ್ತದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಸಂಬಂಧಪಟ್ಟ ಅಧಿಕಾರಿಗಳು ಯಲಹಂಕ ಕ್ಷೇತ್ರದ ಎಲ್ಲಾ ಪವಿತ್ರ ಕಲ್ಯಾಣಿ, ಪುಷ್ಕರಣಿ ಮತ್ತು ಕೆರೆ-ಕುಂಟೆಗಳ ಪವಿತ್ರ ಮೃತ್ತಿಕೆಯನ್ನು ಸಚಿವರು ಮತ್ತು ಶಾಸಕರಿಗೆ ಹಸ್ತಾಂತರಿಸಿದರು.

ನಂತರ ಆಂಜನೇಯಸ್ವಾಮಿ ದೇವಾಲಯದಿಂದ ಆರಂಭವಾದ ಮೆರವಣಿಗೆಯು ಇಲ್ಲಿನ ನಾಲ್ಕೂ ವಾರ್ಡ್‌ಗಳ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಅರಕೆರೆ ಹಾಗೂ ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ರಥವು ಸಂಚರಿಸಿತು.



ಪವಿತ್ರ ಮೃತ್ತಿಕೆ ಸಂಗ್ರಹ ರಥದ ವಾಹನವು ಯಲಹಂಕ ವಿಧಾನಸಭಾ ಕ್ಷೇತ್ರದ ರಾಜಾನುಕುಂಟೆಗೆ ತಲುಪಿದಾಗ ಮಹಿಳೆಯರು ಪೂರ್ಣಕುಂಭಗಳನ್ನು ಹೊತ್ತು ಭವ್ಯ ಸ್ವಾಗತ ನೀಡಿದರು

ಈ ವೇಳೆ ಸಾವಿರಾರು ಮಹಿಳೆಯರು ಪೂರ್ಣ ಕುಂಭಗಳನ್ನು ಹೊತ್ತು, ಪುಷ್ಪಾರ್ಚನೆ ಮಾಡುವ ಮೂಲಕ ರಥದ ವಾಹನಕ್ಕೆ ಅದ್ಧೂರಿ ಸ್ವಾಗತ ನೀಡಿದರು.

ಪ್ರಮುಖ ಸ್ಥಳಗಳಲ್ಲಿ ಗ್ರಾಮದ ಮುಖಂಡರು ಹಾಗೂ ಜನಪ್ರತಿನಿಧಿಗಳು ಪವಿತ್ರ ಮೃತ್ತಿಕೆಯನ್ನು ಹಸ್ತಾಂತರಿಸಿದರು.

ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಟಿ.ಮುನಿರೆಡ್ಡಿ, ಕೆ.ವೀರಣ್ಣ, ಶಶಿಕುಮಾರ್, ಬಿಜೆಪಿ ಮುಖಂಡರಾದ ಎಸ್.ಎನ್.ರಾಜಣ್ಣ, ಎಚ್.ಬಿ.ಹನುಮಯ್ಯ, ಎಂ.ಸತೀಶ್, ಸತೀಶ್ ಕಡತನಮಲೆ, ಸಿ.ವೆಂಕಟೇಶ್, ಮಂಜುನಾಥ ರೆಡ್ಡಿ, ಎಂ.ಮೋಹನ್ ಕುಮಾರ್, ಕಾಂಗ್ರೆಸ್ ಮುಖಂಡ ನರಸಿಂಹ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಪರಿಶಿಷ್ಟರ ಮದುವೆಗೆ ಕಲ್ಯಾಣ ಮಂಟಪ ನೀಡದ ದೇವಾಲಯ ಟ್ರಸ್ಟ್ ಪ್ರಕರಣ

ಗುಡಿಬಂಡೆ: ಹೇಳಿಕೆ ಪಡೆದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಗುಡಿಬಂಡೆ: ಮುಜರಾಯಿ ಇಲಾಖೆ ಅಧೀನದಲ್ಲಿರುವ ಇಲ್ಲಿನ ಲಕ್ಷ್ಮಿವೆಂಕಟರಮಣ ಸ್ವಾಮಿ ದೇವಾಲಯದ ಕಲ್ಯಾಣ ಮಂಟಪವನ್ನು ಪರಿಶಿಷ್ಟರ ಮದುವೆಗೆ ನೀಡಲು ದೇಗುಲದ ಟ್ರಸ್ಟ್ ನಿರಾಕರಿಸಿದ ಪ್ರಕರಣ ವರದಿಯಾದ ಬೆನ್ನಲ್ಲೇ, ಕಂದಾಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಶನಿವಾರ ಎರಡೂ ಕಡೆಯವರಿಂದಲೂ ಹೇಳಿಕೆ ಪಡೆದುಕೊಂಡಿದ್ದಾರೆ.

'ನವೆಂಬರ್ 3ರಂದು ಗುಡಿಬಂಡೆ ತಾಲ್ಲೂಕು ಉಲ್ಲೋಡು ವ್ಯಾಪ್ತಿಯ ಬ್ರಾಹ್ಮಣರಹಳ್ಳಿಯ ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಕ್ಕೆ ಪಟ್ಟಣದ ಲಕ್ಷ್ಮಿವೆಂಕಟರಮಣ ಸ್ವಾಮಿ ದೇವಾಲಯದ ಆವರಣದಲ್ಲಿರುವ ಸಭಾಂಗಣವನ್ನು ಮದುವೆಗೆ ನೀಡಲು ಟ್ರಸ್ಟ್‌ನವರು ನಿರಾಕರಿಸಿದ್ದಾರೆ. ಈ ಮೂಲಕ ಮುಜರಾಯಿ ಇಲಾಖೆಗೆ ಒಳಪಡುವ ದೇವಾಲಯದಲ್ಲಿ ಜಾತಿ ತಾರತಮ್ಯ ಮಾಡಲಾಗಿದೆ' ಎಂದು ವಧುವಿನ ಅಣ್ಣ ಅವುಲಕೊಂಡಪ್ಪ ಅವರು ತಹಸೀಲ್ದಾರ್‌ಗೆ ದೂರು ನೀಡಿದ್ದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರವಿ ಮತ್ತು ಪ್ರಭಾರ ಕಂದಾಯ ನಿರೀಕ್ಷಕ ಲಕ್ಷ್ಮೀನಾರಾಯಣ ಅವರು ದೇವಾಲಯದ ಟ್ರಸ್ಟ್ ಪದಾಧಿಕಾರಿಗಳು ಹಾಗೂ ದೂರದಾರ ಅವುಲಕೊಂಡಪ್ಪ ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಇದನ್ನು ಹಿರಿಯ ಅಧಿಕಾರಿಗಳಿಗೆ ಕಳುಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೂರವಾದ ಸ್ನೇಹಿತ: ಸ್ನಾತಕೋತ್ತರ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ನಗರದ ಕಾಲೇಜೊಂದರಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಯಾಗಿರುವ ಕೇರಳದ ಅಶ್ವಿತಾ (23) ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ನೇಣು ಹಾಕಿಕೊಂಡು ಶುಕ್ರವಾರ ಆತ್ಮಹತ್ಯೆ ಮಾಡಿದ್ದಾರೆ.

ಅಶ್ವಿತಾ ಸಹಪಾಠಿ ಯುವಕನ ಜೊತೆ ಹೆಚ್ಚು ಒಡನಾಟ ಹೊಂದಿದ್ದು, ಅವರಿಬ್ಬರೂ ಒಂದೇ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಕೆಲ ತಿಂಗಳ ಹಿಂದಷ್ಟೇ ಇಬ್ಬರ ನಡುವೆ ಜಗಳವಾಗಿದ್ದು, ಬೇರೆ ಬೇರೆ ಆಗಿದ್ದರು. ಇದರಿಂದ ಮಾನಸಿಕವಾಗಿ ನೊಂದಿದ್ದ ಕಾರಣ ಅಶ್ವಿತಾ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಅನುಮಾನಿಸಲಾಗಿದೆ.

ಹುಳಿಮಾವು ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿಸಿದ್ದಾರೆ.

ಲಂಚ: ಮೂವರು ಪಿಡಿಒ ಅಮಾನತು

ಗುಡಿಬಂಡೆ: ಕೇಬಲ್ ಅಳವಡಿಕೆಗೆ ಅನುಮತಿ ನೀಡಲು ಲಂಚ ಪಡೆದ ಆರೋಪದ ಮೇಲೆ ತಾಲ್ಲೂಕಿನ ಮೂವರು ಪಿಡಿಒಗಳನ್ನು ಜಿಲ್ಲಾ ಪಂಚಾಯಿತಿ ಸಿಇಒ ಪಿ.ಶಿವಶಂಕರ್ ಅಮಾನತುಗೊಳಿಸಿದ್ದಾರೆ. ತಾಲ್ಲೂಕಿನ ಎಲ್ಲೋಡು ಗ್ರಾಮ ಪಂಚಾಯಿತಿ ಪಿಡಿಒ ಡಿ.ಎಸ್. ಮಂಜುನಾಥ್, ಬೀಚಗಾನಹಳ್ಳಿ ಪಿಡಿಒ ಎಂ.ಎನ್.ಬಾಲಕೃಷ್ಣ ಹಾಗೂ ಸೋಮೇನಹಳ್ಳಿ ಪಿಡಿಒ ಎನ್.ವೆಂಕಟಾಚಲಪತಿ ಅಮಾನತುಗೊಂಡವರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

IN THE COURT OF CITY CIVIL JUDGE, BENGALURU (CCH-60)
O.S.No. 9075/2018

BETWEEN:
Smt. Rajinder Kaur Jolly ... Plaintiff

AND
1) Sri. Gurjeet Singh
2) M/s Supermarket Greenery
3) Innovative Retail Concepts Pvt Ltd. ... Defendants

To
4) Abdul Jameel
Aged about 51 years S/o Abdul Jaleel R/o No.219, 3rd Cross, Koramangala, 1st Block, Bengaluru 560034 ... Defendant no. 4

SUMMONS ISSUED TO DEFENDANT NO. 4 UNDER ORDER V RULE 20 OF CPC, 1908

Take notice that an impleading application has been filed for impleading you as Defendant no. 4 in the above matter filed by the abovementioned Plaintiff in the suit for declaration and recover. The above matter came up for hearing before the Learned Civil Court on 15/11/2022 and the Learned Civil Judge was pleased to issue notice through Paper publication returnable on 15/11/2022

You are hereby summoned to be present in the abovementioned Court on 19/10/2022 personally on 15/11/2022 at 11.00 am failing which the matter will be decided in your absence.

Given under the hand and seal of the Registrar, City Civil Court on 30 th day of September 2022

SCHEDULE "A" PROPERTY

All that piece and parcel of property No.7/1 PID No.83-155-7/1, situated at old Madras Road, Nagavara Palya Village, Krishnarajapuram Hobli, Bengaluru East Taluk, Bengaluru, measuring to an extent of 9722.70 Sq.Ft, located in BBMP Ward No.83.
East by: Property No.143/1 belongs to Mr.Hardev Singh **West by:** Property No.143/1 belongs to Late Jaspal Singh **North by:** Private Road **South by:** Property belongs to Mr. Basith.

SCHEDULE "B" PROPERTY

All that piece and parcel of 22% Undivided share in the property bearing Municipal New No.7/1, PID No.83-155-7/1, situated at Nagavar Palya Village, Krishnarajapuram Hobli, Bengaluru East Taluk, Bengaluru, measuring about 97722.70 Sq.Feet,
East by: Property No. 143/1 belongs to Mr.Hardev Singh **West by:** Property No. 143/1 belongs to Late Jaspal Singh **North by:** Private Road **South by:** Property belongs to Mr.Basith.

Advocate for Plaintiff
Address of the Plaintiff Advocate
Kshama Nargund, Nargund Associates No. 247, 53rd Cross, 4th Block, Rajajinagar, Bangalore 560010
nargundassociates@gmail.com
9900112792

**By the order of the Court
Assistant Registrar City Civil Court at Bangalore.**

IN THE COURT OF THE XXXIX ADDITIONAL CITY CIVIL AND SESSIONS JUDGE, AT BENGALURU, (CCH – 40) P & SC NO. 694 OF 2022

BETWEEN:
Mrs. Hemlata Jayant Parmar
Wife of Mr. Jayant Parmar
Aged about 66 years, Residing at: No. 346, Goshen Avenue, Hazle Township, PA-18202, United States of America
Represented by her Power of Attorney:
Mr. Ajay Ushakanth
Son of Late Mr. Ushakanth Jeenabhai
Aged about 53 years, Residing at: Flat No. 005, Embassy Eros, No.7, Ulsoor Road, Bengaluru – 560 042. ... **PETITIONER**

AND

M/s. Canara Bank and Others ... RESPONDENTS

PUBLIC NOTICE BY WAY OF PAPER PUBLICATION UNDER ORDER V RULE 20 OF THE CODE OF CIVIL PROCEDURE, 1908

Whereas, Hemlata J Parmar, has filed an application to obtain a Succession Certificate in respect of the debts and securities mentioned in the Schedule below. The debts and securities mentioned in the Schedule below were held by the Petitioner's late mother, Mrs.Ramanben Gordhandas Khatri, who passed away at Ickenham, United Kingdom, on 12.02.2018.
Interested parties are hereby called upon to appear before this Court in person or by pleader duly instructed, on 07.12.2022 at 11.00 a.m., and show cause against the Petitioner, failing which the Application will be heard *ex-parte.*

SCHEDULE PROPERTY

Foreign Currency Fixed Deposit Accounts having the following Account Numbers and Balances, held with Respondent No.1 (Canara Bank, Infantry Road Branch, Bengaluru) in the jointly in the name of Late Dr. Gordhandas Narandas Khatri and Late Mrs. Ramanben Gordhandas Khatri:

Account Number	Balance
i. 1168-502-000037	GBP 79,571.74/-
ii. 1168-502-000041	GBP 1,110.50/-
iii. 1168-502-000042	GBP 8,593.19/-
iv. 1168-502-000043	GBP 79,660.40/-
v. 1168-501-0000124	USD 19,285.94/-
vi. 1168-501-0000133	USD 1,17,393.62/-
vii. 1168-501-0000134	USD 1,31,146.82/-

And a **Saving Bank Account** held in the name of Late Mrs. Ramanben Gordhandas Khatri bearing Account No. 1168101000381 with Canara Bank, Infantry Road Branch, Bengaluru, having an Account Balance of Rs.17,439.62/-

Given under my hand and the Seal of the Court on this 3rd day of November 2022.

Sd/-,
By Order of the Court, Assistant Registrar, City Civil Judge, Bengaluru.

Address of Advocate:
Rahul Dev, Advocate
22, Kumara Krupa Road, High Grounds, Bengaluru-560 001.

DBL DESAI BROTHERS LTD

ವೃತ್ತಿಜೀವನದ ಸದಾವಕಾಶ

ನವಂಬರ್ 8ರಂದು ನೇರ ಸಂದರ್ಶನ

ಸನ್ 1901ರಿಂದ ವೃತ್ತಿನೈಪುಣ್ಯತೆ ಜೊತೆಗೆ ತ್ವರಿತ ಗತಿಯಲ್ಲಿ ಬೆಳೆಯುತ್ತಿರುವ ದೇಸಾಯಿ ಬ್ರದರ್ಸ್ ಲಿ., ಎಂಬ "ಎಫ್‌ಎಂಸಿಜಿ" ಕಂಪನಿಯು, ಇದೇ ನವಂಬರ್ 8ರಂದು ನೇರ ಸಂದರ್ಶನ ಏರ್ಪಡಿಸುವ ಮೂಲಕ ವೃತ್ತಿಜೀವನಕ್ಕೆ ಸದಾವಕಾಶ ಒದಗಿಸುತ್ತಲಿದೆ.

ಡಿಬಿಎಲ್ ಕಂಪನಿಯು ಕೇವಲ ಎಫ್‌ಎಂಸಿಜಿ ಡಿವಿಜನ್ (ಸ್ನಾಕ್ಸ್) ಅಷ್ಟೆ ಅಲ್ಲದೆ ಹಣಕಾಸು, ಹೊಟೇಲ್ ಉದ್ಯಮ ಹಾಗೂ ಪವನ ಶಕ್ತಿ ಉತ್ಪಾದನೆ ರೀತಿಯ ವಿಭಿನ್ನ ಕ್ಷೇತ್ರಗಳಲ್ಲಿ ಕೂಡ ಕಾರ್ಯನಿರ್ವಹಿಸುತ್ತಿದೆ. ಈಗ ಕಂಪನಿಗೆ ಬೆಂಗಳೂರು ಪ್ರದೇಶದಾದ್ಯಂತ ತಂಬಾಕು ವಿಭಾಗದಲ್ಲಿ ಅತ್ಯುತ್ತಮ ಮಾರಾಟ ಮತ್ತು ಮಾರಾಟಗಳ ನಿರ್ವಹಣಾ ಕೌಶಲ್ಯಗಳನ್ನು ಹೊಂದಿರುವ ಅನುಭವಿ ಮಾರಾಟ ವೃತ್ತಿಪರಿಣಿತರು ಬೇಕಾಗಿದ್ದಾರೆ.

ಏರಿಯಾ ಸೇಲ್ಸ್ ಮ್ಯಾನೇಜರ್

ಬಹು ಬೇಡಿಕೆಯುಳ್ಳ ಮಾರಾಟ ಗುರಿಗಳನ್ನು ಸಾಧಿಸುವ, ಮಾರಾಟ ಪ್ರತಿನಿಧಿಗಳಿಗೆ ತರಬೇತಿ ನೀಡಿ ಮುನ್ನಡೆಸುವ ಜವಾಬ್ದಾರಿ ಇವರದಾಗಿರುತ್ತದೆ. ಕಡ್ಡಾಯವಾಗಿ ತನ್ನ ವಿತರಣಾ ಜಾಲ ಪ್ರದೇಶದ ಬಗ್ಗೆ ಸಂಪೂರ್ಣ ಭೌಗೋಳಿಕ ಸ್ಥಳಗಳ ತಿಳುವಳಿಕೆ ಹೊಂದಿರಬೇಕು **ಜೊತೆಗೆ ಕನ್ನಡ ಭಾಷೆಯಲ್ಲಿ ಹಿಡಿತ ಹೊಂದಿರಬೇಕು.**
ಅಭ್ಯರ್ಥಿಯು ಕಡ್ಡಾಯವಾಗಿ ಪದವಿ ಪಡೆದಿರಬೇಕು ಮತ್ತು ಕನಿಷ್ಠ 4 ರಿಂದ 7 ವರ್ಷ ಎಫ್‌ಎಂಸಿಜಿ ಮಾರಾಟದಲ್ಲಿ ಅನುಭವ ಹೊಂದಿರಬೇಕು.

ಟಿಎಸ್‌ಐ/ಸೇಲ್ಸ್ ಆಫೀಸರ್

ಎಫ್‌ಎಂಸಿಜಿ ಕ್ಷೇತ್ರದಲ್ಲಿ ಕನಿಷ್ಠ 0 ರಿಂದ 3 ವರ್ಷ ಫಂಟ್‌ಲೈನ್ ಸೇಲ್ಸ್ ಮತ್ತು ಡಿಸ್ಟ್ರಿಬ್ಯೂಶನ್ ಅನುಭವ ಹೊಂದಿರಬೇಕು.
ಅತ್ಯುತ್ತಮ ರಿಟೈಲಿಂಗ್ ಮತ್ತು ಸೆಲ್ಲಿಂಗ್ ಸಿಲ್ಕ್ಸ್ ಹೊಂದಿರಬೇಕು, **ಜೊತೆಗೆ ಕನ್ನಡ ಭಾಷೆಯಲ್ಲಿ ಹಿಡಿತ ಹೊಂದಿರಬೇಕು.**

ಹೊಸ ಅಭ್ಯರ್ಥಿಗಳು ಟಿಎಸ್‌ಐ ಲೆವೆಲ್‌ಗೆ ಅರ್ಜಿ ಸಲ್ಲಿಸಬಹುದು.

ಉದ್ಯಮದಲ್ಲಿನ ಅತ್ಯುತ್ತುಮ ಸಂಬಳ ಹಾಗೂ ಅತ್ಯುತ್ತಮ ವೃತ್ತಿಜೀವನ ಬೆಳವಣಿಗೆಗೆ ಅವಕಾಶ ನೀಡುತ್ತೇವೆ.
ಕೇವಲ ಎಫ್‌ಎಂಸಿಜಿ/ಸೇಲ್ಸ್ ಡಿಸ್ಟ್ರಿಬ್ಯೂಷನ್ ಕ್ಷೇತ್ರದಲ್ಲಿ ಮಾರಾಟ ಅನುಭವ ಹೊಂದಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸುವುದು, ತಕ್ಷಣ ಸೇರಿಕೊಳ್ಳುವವರಿಗೆ ಆದ್ಯತೆ ನೀಡಲಾಗುತ್ತದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ಹಾಜರಾಗಿ: **ದೇಸಾಯಿ ಬ್ರದರ್ಸ್ ಲಿ.,** #527, 13ನೇ ಅಡ್ಡರಸ್ತೆ, ಪೆನ್ಸ್ ಫೀಲ್ಡ್ ಗಾರ್ಡನ್, ಟೆಲಿಕಾಮ್ ಲೇಔಟ್, ಶ್ರೀರಾಮಪುರ, ಬೆಂಗಳೂರು–560 064
ಹೆಚ್‌ಆರ್ ವಿಭಾಗಕ್ಕೆ ವಿಳಾಸಕ್ಕೆ ಅರ್ಜಿ (ಸಿ.ವಿ.) ರವಾನಿಸಿ–**hiring@dbl.in** ಅಥವಾ ಸಂಪರ್ಕಿಸಿ/ **9886161858.**

Antrix Corporation Limited
(A Govt. of India Company under Department of Space)
Antariksh Bhavan Campus, New BEL Road, Bengaluru– 560094
Advt. No. ANTRIX/01/2022 dated 03/11/2022

Antrix Corporation Limited (Antrix), a wholly owned Government of India Company under the administrative control of Department of Space invites application for the following post on contract basis:

1. **Company Secretary –** 1 Post; Monthly fixed all-inclusive salary of ₹ 75,000/-; Age Limit: 65 years or below as on 01.10.2022
2. **Hindi Translator-cum-Typist –** 1 Post; Monthly fixed all-inclusive salary of ₹ 40,000/-; Age Limit: 65 years or below as on 01.10.2022

विस्तृत जानकारी और हिन्दी संस्करण के लिए कृपया हमारी वेबसाइट www.antrix.co.in देखें।
For detailed information & Hindi version, please visit our website **www.antrix.co.in**
The last date for receipt of hardcopy of application is 30.11.2022
Corrigendum, if any will be published in our website only.

Sampoorna Group of Institutions, Channapatna Required For BE
Prof, ASP & AP for All Branches, Basic Sciences Physical Director & Non-Teaching Staff. Warden for Boys & Girls
For B.Sc.(Hons.) Agriculture
Dean, Prof, AP, Salary & Qualification as per norms
Mail Resume to sampurnabrundavan@gmail.com before15th Nov. 2022
www.sampoorna institutions.org
Ph: 9148696369

JOB OPPORTUNITIES

Receptionist/ Secretary

WANTED FEMALE FRONT OFFICE EXECUTIVE, NS Fitness Revolution @ ITPL Main Road, Opposite to Brookefield Mall with Basic computer knowledge & good communication skill. Shift time 7am to 2pm & 2pm to 9pm. Contact: 9513668615

Manager

WANTED MARKETING MANAGER for Art/ Paintings Start-up Business. Email: starsilks@gmail.com Phone:09344168305

Marketing & Sales

REQUIRED
MARKETING EXECUTIVES
@ MYSORE, DAVANAGERE GULBARGA, BELLARY, MANGALORE
PACKAGE
Upto 3 Lakhs per annum with Attractive Incentives, Bonus & PF Benefits
Experience
Minimum 1 year & above in Outdoor Advertising Media
Walk in with Resume on 7th, 8th & 9th (11am to 5 pm)
TA & DA actual will be provided to attend an interview (out of Bangalore)
Call: SAI ADVERTISERS
80500 23131
99002 47662
No.74 & 75, Sai Sushma Arcade, 1st Main, 2nd Cross, Patel Kempaiah Layout, Chokkasandra, Peenya, BANGALORE - 560 058.
Sole Advertising Rights on BMTC Volvo AC Buses, Ordinary Buses, KSRTC & KKRTC Buses. West Bengal - WBTC, Kolkata City AC / Non AC Buses, Ferries and Jetty depots.

WANTED SALES Executives & ASM for LPG company, To Create Distributor/ Dealer (Retail & Commercial) segments. Should have good marketing skills. 9035041737.

Accounts & Finance

Sri Aurobindo Complex Trust ®
'Sri Aurobindo Marg', J.P. Nagar I Phase, Bengaluru - 560 078. Ph.No.: 080 - 2244 9882
Wanted qualified & experienced **Senior Accountant** able to handle & maintain independently Trust and Society Accounts along with current working knowledge of Tally, Income Tax, TDS, PF, ESI, GST matters.
Age Limit: 35 to 50 years.
Good Salary for a right candidate. Apply with PP Size Photo within 15 days. Candidates can also come for Walk in Interview: 07-11-2022 to 10-11-2022, 11.00 AM to 3.00 PM.
To: The Administrator, Sri Aurobindo Complex Trust ®
E-mail: sactmsf@gmail.com

JOB OPPORTUNITIES in Bangalore Wanted fulltime Executives and Telecallers For Banking Process fiv (BGV) and Collections. Call: 9986954958

WANTED ACCOUNTANTS with experience in Accounts GST and income tax. Please send your CV's to jobcabrsco@gmail.com or whatsapp to 7259105338.

Engg/ Production Technical

REQUIRED BE/ Diploma Civil Engineer for Drafting, Estimations, site visits and Office Assistant for Office in Malleswaram. Contact: 08095044633, Email: ambas.ecc@gmail.com

EXPERIENCED CIVIL ENGINEERS and MECHANICAL ENGINEERS for a Construction Company. 'CANARA PROJECTS' Peenya 9900240446 uajithnayak@rediffmail.com

EXPERIENCED ENGINEERS- Mechanical (BE/Diploma) and SUPERVISOR required. Walkin Interview. 'VINUMAC' 205A, Peenya 3rd phase Bangalore-58 Phone 080-28391959, 28394512 admin@vinumac.com

REQUIRE ENGINEERS with Electrical, Mechanical OR equivalent with minimum experience, PROJECT ENGINEERS, B.Com Graduates for ACCOUNTS, SENIOR MARKETING-MANAGER, SENIOR QUALITY-MANAGER for our Motor and special pumps Manufacturing Unit at Devarachikkanahalli, Bannergatta Road, Bangalore. Email: flowoilpumps@hotmail.com

REQUIRED EXPERIENCED Civil Engineer for Our Works at Shimoga District Contact Santhosh 919945221773

Multiple Vacancy

Karnataka Leading Media Company Chittara Media Looking for new & Experience Talents for...
1. Receptionist - Female - 2 Nos.
2. Accountants - 2 Nos.
3. Sales Executives-10 Nos
4. Graphic Designer-2 Nos
5. Reporter- 4 Nos
6. Video Editors - 2 Nos
Direct Interview on Monday 10 am to 2 pm. 9845156447 inmedia.img@gmail.com

Part-Time Jobs

RETIRED/ VRS Persons And Age above 45 Years Earn 2nd Income 35K to 40K PM in their life here no Retirement: 9886641282/ 7019215243

Security & Detectives

FORCE 18 ACADEMY & SECURITY SERVICES PVT. LTD. Require SECURITY OFFICER'S (Ex Service Man Preferred) and CCTV OPERATOR (Minimum 3 year Experience) In Age Group of 30-55 Years Bangalore Location: Marathahalli, Bommanahalli, Thanisandra & Yelahanka. Send Resume: service@force18 security.com Contact: 8197502829

General

COUNTER SALESMAN minimum 3 years experience, Ladies/ Boys as Sales Assistant, part time 4 to 8.30 pm weekdays, full time on Saturdays/ Sundays, 10th pass, (below 30 years) required for The Raymond Shop- Jayanagar. Call: 22454458/ 26656934

ಬೇಕಾಗಿದ್ದಾರೆ
ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಗೆ
ಕಾರ್ಯನಿರ್ವಹಣಾಧಿಕಾರಿ
ಹುದ್ದೆಗೆ (Executive Officer) ಪದವಿದರ ವೀರಶೈವ/ ಲಿಂಗಾಯಿತ, **ಆಡಳಿತ ವಿಭಾಗದಲ್ಲಿ** ಅನುಭವವುಳ್ಳ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. ನಿವೃತ್ತ **ಸರಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದವರು** ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಅಭ್ಯರ್ಥಿಗಳನ್ನು ಗುರುತಿಸಿ ಅವರ ವಿವರದೊಂದಿಗೆ ಹಿರಿಯ ವ್ಯಕ್ತಿಗಳು ನಾಮನಿರ್ದೇಶನ ಮಾಡಬಹುದು. ಅರ್ಹತೆ ಮತ್ತು ಅನುಭವಗಳನ್ನು ಆಧರಿಸಿ ವೇತನ ನಿಗಧಿಪಡಿಸಲಾಗುವುದು. ಅರ್ಜಿಗಳನ್ನು, ನಾಮ ನಿರ್ದೇಶನಗಳನ್ನು ದಿನಾಂಕ **15-11-2022** ರೊಳಗಾಗಿ ಕೆಳಗಿನ ವಿಳಾಸಕ್ಕೆ ಸಲ್ಲಿಸುವುದು.
ಕಾರ್ಯದರ್ಶಿಗಳು,
ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ನಂ.88, ಜಿ.ಟಿ.ರಸ್ತೆ, ನಗರ ರೈಲು ನಿಲ್ದಾಣದ ಹತ್ತಿರ, ಬೆಂಗಳೂರು–23
ದೂ: 080-2287 9665
ಮೊ. 98440 45744
ಸಹಿ/-, ಗೌ. ಕಾರ್ಯದರ್ಶಿಗಳು

WANTED: CUSTOMER Relation & MD Assistant, MBA/ any Degree Good Communication Skill & Computer Knowledge is must. Salary: 40k + Incentive, Travelling must, work place: Bangalore, Female only Contact: 9035440657

REQUIRED OFFICE BOYS/ DELIVERY BOYS/ STORE KEEPERS. Residing in and around Hanumanth Nagar Contact: 99807-99996

MORE Classifieds IN SUPPLEMENT

WANTED EXPERIENCED COMPUTER OPERATORS, DRIVERS and OFFICE MANAGERS in Bangalore. Contact Immediately. Call: 9448171416

"WANTED SALES Boys/ Girls, Billing Assistants for Appliances Showroom Jayanagar, Salary 12 -18K, 9845088449 / 9978245139"

Teachers/ Professors

RMS INSTITUTE of Management & Science Requires a Principal of 5 to 10 years experience & Faculties for the Department of Computer Science, Commerce. Email: rmsims2021@gmail.com CALL: 9606798188, 9606416534

SECAB SCHOOL, Kadirenahalli, Require Candidate with fluent English & Kannada as TEACHER, CLERK & OFFICE ASSISTANT. Retired B.Ed TEACHERS can apply. Contact: 99160-87586/ 99869-93656

SRI VENKATESHWARA College, Tavarekere, Madiwala Requires Commerce Faculty with PhD,UGC NET/KSET & PE-Teachers for School. Secretary:- 9886447657 Mail:nagajois@gmail.com

IMPACT COLLEGE OF ENGINEERING
WANTED
LECTURERS
Candidates with first class **BE or M.Tech** in **CS / IT** and interest or experience in teaching.
IMP-22316
Call: 94487 48297
To schedule your interviews

Going to School
Bengaluru, is in search of
WOMEN FOOTBALL COACHES
to teach children football at school.
To apply, send your CV to : remy.fernandes@goingtoschool.com or Call : WhatsApp : 9011270372
WALK-IN INTERVIEW : on 8th to 11th Nov. 2022 Call : 9892880860

HARWARD INTERNATIONAL SCHOOL (CBSE)
Affiliation No.830335
www.harwardinstitutions.com
Dasanapura, Tumkur Road, Bangalore North - 562123
WANTED
Teachers
Primary & High School for ALL SUBJECTS
Administrator (Exp.in educational institutions)
Front Office Receptionist
Marketing Executives
Accountant-(Female) (Exp.in educational institutions with typing skill)
Walk in Interview @ 10:30 am to 3:00 pm
CV to : infoharwardints@gmail.com
Ph:9880112833, 9741337257

WANTED TRAINED/ Untrained Teacher to Handle MATHS/ SCIENCE for 6th and 7th Standard. KIRAN CONVENT. Contact: 9845552214/ 9900608243 (English Medium)

BLOSSOM SCHOOL, Bagalgunte Main Road, Bangalore-73, requires HEAD MISTRESS, State Board, Near by Nagasandra Metro Station. 9886497910, 9886657910

MOOKAMBIKA SCHOOL, N.R. Colony Wanted TEACHER to teach COMPUTER SCIENCE. Email: mookambikaschool.nr@gmail.com . Contact: 74835-54511

WANTED TEACHERS with BA/MA (Eng and SS) with BEd, Salary 14000 to 25000, Contact Sidhartha International School,Peenya, Dasarahalli. Contact No. 9620100046/ 9964670328

Wanted

WANTED
Civil Engineer for Construction Work & Accountant for Vishwa Ganigara Samudaya Charitable Trust, Nelamangala Contact with Resume:
M: 94802 59762 / 94483 59762

WANTED FEMALE executive Language English, hindi, Kannada Salary negotiable Contact :- 9703057999.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WEEKEND CORNER ಕ್ಲಾಸಿಫೈಡ್ಸ್

DH DECCAN HERALD ಪ್ರಜಾವಾಣಿ
JOB CORNER
For More Details Contact:
9731810277 | 9901641752
9845114560 | 9886213331
080- 45557163 | 164
BOOK DOUBLE COLUMN JOB ADS ON WEEKDAY + SUNDAY
Rs. 750/-* pscm
conditions apply*

ಸ್ಪರ್ಧಾಮಿತ್ರ ACADEMY
IAS / KAS
PSI / PDO
PC Police Constable
Classes Starts From 7th Nov.-22
RRB / SSC / BANK-PO
Near Attiguppe Metro Station, opp. Maruti Medicals (338 Pillar) Vijayanagar, Bengaluru - 40.
9535111188 / 9535111199

VIDYA NIKETAN SCHOOL
No.30, Kempapura, Hebbal, Bangalore-560 024.
Application forms to the ISC program at **Vidya Niketan School** for the academic year beginning June 2023 will be available on the school website **[www.vidyaniketanhebbal.org]** from **Monday, 7 November 2022.**
Courses offered:
Science, Commerce and Humanities.

Congratulations



Mr. B. SHIVALINGAPPA
Sr Asst.General Manager, Vysya Bank & served more than 28 years in various parts of India & now supernnuated.

He is the founder Secretary of SVE1 group of institutions Belavadi in Mysore. He is the Vice President of **Vidya Vidyardhaka Sangha Gokulam** in Mysore. He is the founder Chairman of **Shri Yadava Educational and Cultural Trust (Rd)** Madakasira in Sri Satya Sai district in Andra Pradesh Free boarding and lodging facilities are extended to 60-80 of poor & rural students each year from 2013-14 in that area. **Mr B. Shivalingappa** is the founder Managing Trustee of **Sri Lakshmi Narasimha Charitable Trust (Rd) Mysore.** Through this trust lot of Charitable, Social, Educational and Religious activities are undertaken from 2008-09 in Sira, Madhugiri, Hiriyur, and Pavagada taluks and also Madakasira taluk in Andra Pradesh.

In recognition of his social, educational, cultural and religious services the Mysore District administration and the department of Kannada and culture felicitated with 2022th. "**District Kannada Rajyostava Award**' by the District incharge Minister **Shri S.T. Somasekhar** today.

BUSINESS OFFER
Speech and Hearing Clinic
Equipped with
Advanced Audiometry, Voice Clinic,
OAE and **BERA instruments**
is **Ready to Run**
in Magadi Road, Near Vijayanagara,
Interested person may contact
9448118282, 9986118282

RV Institute of Management®
Rashtreeya Sikshana Samithi Trust RV INSTITUTIONS
Autonomous Institution, Affiliated to Bengaluru City University | Approved by AICTE. NAAC 'A+' Accredited
Go, change the world
Autonomous Institution of Excellence
Register for **PGCET/KMAT 2022**
one week intensive coaching for **MBA** now & get admission in your dream institution..
Mode of coaching **Hybrid** (Offline in the Campus & Online platform - Zoom)
Date **14th November to 19th November 2022** (One Week)
Time **9.00am to 2.00pm** (on all days)
Registration fee **Rs.500/-** (Includes certificate & study material)
Scan QR code below to register online & pay the fee
SCAN ME

Summary of Placements 2022	
Total no. of Companies (On / Off Campus)	62
Total No. of Students enrolled	172
Total No. of Students not opted for Placements	5
Total No. of Students opted for Placements	172
Total No. of Students Placed	148
Highest package	12.56 L/A
Median package	6.00 L/A

PGCET Code B252
Top 15 Rankers who join our institution from PGCET (within 100 Rank) will be given a merit scholarship of Rs 50,000/-.
Scholarship of Rs 50,000/- to Top 15 Academic Performers in MBA 1st year (above 7.0 CGPA)
Please call: 90089 60025 / 080 42540300, for more information
E-mail : rvimpgcet@gmail.com Website : www.rvim.edu.in

ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಪೀಠಂ
(ನುಡಿದಂತೆ ನಡೆಯುವುದು)
ಪಂಡಿತ್|| ಅಶೋಕನಾಥ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಸತಿ–ಪತಿ ಕಲಹ, ದಾಂಪತ್ಯ ಸಮಸ್ಯೆ, ಬಿಸಿನೆಸ್, ಮಧುವೆ, ಪ್ರೇಮ ವಿವಾಹ, ಕೌಟುಂಬಿಕ ಕಲಹ, ಧನಪ್ರಾಪ್ತಿ ಯೋಗ, ಕೋರ್ಟ್ ಕೇಸ್, ಹಣಕಾಸು, ರಾಜಕೀಯ ಇನ್ನೂ ಯಾವುದೇ ಸಮಸ್ಯೆಗಳಿಗೆ ಅತೀ ಶೀಘ್ರ ಶಾಶ್ವತ ಪರಿಹಾರಕ್ಕಾಗಿ ಇಂದೇ ಸಂಪರ್ಕಿಸಿ:
ಮನೆ ನಂ:40/ಎ, ಸುಬ್ರಹ್ಮಣ್ಯ ದೇವಸ್ಥಾನದ ಹಿಂಭಾಗ, ಕೃಷ್ಣ ಕಲ್ಯಾಣ ಮಂಟಪ ಹತ್ತಿರ, ಬಸವೇಶ್ವರನಗರ ಬೆಂಗಳೂರು-560079 **9945555282**

BOOK FAIR
Indian & Imported Books **BOOKS BY WEIGHT**
1 KG Rs. 100/- & 200/-
1 KG Rs. 500/-
Exhibition Cum Sale @
Five -O-Gallery
#51, 17th Cross, Near Indra Prastha Hotel Vijayanagar, Bangalore-560040
Contact: **9740017961**
Timings: 10.00 AM to 10.00 PM

ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಗೆ ಬಡ್ತಿ ಕೊಟ್ಟ ಬಿಬಿಎಂಪಿ

ಟಿಡಿಆರ್ ಹಗರಣ: ಕೃಷ್ಣಲಾಲ್‌ಗೆ ಕ್ಲೀನ್‌ಚಿಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ವಂಚನೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಸಹಾಯಕ ಎಂಜಿನಿಯರ್ ಕೃಷ್ಣಲಾಲ್ ಅವರನ್ನು ಬಿಬಿಎಂಪಿ ದೋಷಮುಕ್ತಗೊಳಿಸಿದೆ.

ರಸ್ತೆ ವಿಸ್ತರಣೆಗಾಗಿ ಕೌದೇನಹಳ್ಳಿಯಲ್ಲಿ ವಶಪಡಿಸಿಕೊಳ್ಳಲಾಗಿದ್ದ ಜಮೀನು ಮತ್ತು ಕಟ್ಟಡಗಳಿಗೆ ಪರ್ಯಾಯವಾಗಿ ಕೊಡುವ ಟಿಡಿಆರ್‌ಸಿ ಅನ್ನು ನಿಜವಾದ ಮಾಲೀಕರನ್ನು ಬಿಟ್ಟು ಬೇರೆಯವರಿಗೆ ವಿತರಿಸಿದ ಆರೋಪವನ್ನು ಕೃಷ್ಣಲಾಲ್ ಎದುರಿಸುತ್ತಿದ್ದರು. ಅಲ್ಲದೆ, ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚುವರಿಯಾಗಿ ಟಿಡಿಆರ್‌ಸಿ ನೀಡಿ ಲಾಭಗಳಿಸಿದ ಎಂದೂ ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದೂರಿತ್ತು.



ಟಿಡಿಆರ್ ಪ್ರಕರಣ ದಾಖಲಾದ ಬಳಿಕ ಆರು ತಿಂಗಳು ತಲೆಮರೆಸಿಕೊಂಡಿದ್ದ ಕೃಷ್ಣಲಾಲ್ ಅವರನ್ನು ಕೋರಮಂಗಲದ ಬಳಿ ಬಂಧಿಸಲಾಗಿತ್ತು. ಸಂಪೂರ್ಣ ವಿಚಾರಣೆ ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಕೃಷ್ಣಲಾಲ್ ಮತ್ತು ಇತರ ಕೆಲವು ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸಕ್ಷಮ ಪ್ರಾಧಿಕಾರಕ್ಕೆ ಪತ್ರ ಬರೆದಿತ್ತು.

ಕೃಷ್ಣಲಾಲ್, ಬಿಬಿಎಂಪಿ ಮಹದೇವಪುರ ವಲಯದ ಸಹಾಯಕ ಎಂಜಿನಿಯರ್ ಆಗಿದ್ದಾಗ ಟಿಡಿಆರ್‌ಗೆ ಸಂಬಂಧಿಸಿದ 47 ಕಡತಗಳು ನಾಪತ್ತೆ ಆಗಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಬಿಬಿಎಂಪಿ ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ನಿವೇಶನ ಹಾಗೂ ಕಟ್ಟಡಗಳಿಗೆ ಪರ್ಯಾಯವಾಗಿ ವಿತರಿಸಲಾಗಿರುವ ಅಭಿವೃದ್ಧಿ ಹಕ್ಕು ವರ್ಗಾವಣೆ ವ್ಯವಹಾರದಲ್ಲಿ ಹಲವು ಕೋಟಿ ಕೈಬದಲಾವಣೆ ಆಗಿರುವುದಾಗಿ ಎಸಿಬಿ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದರು. ಹಣ ಅಕ್ರಮ ವರ್ಗಾವಣೆ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ.) ಸಹ ತನಿಖೆ ನಡೆಸಿತ್ತು.

'ಕೆ.ಆರ್.ಪುರದ ಕೌದೇನಹಳ್ಳಿಯಲ್ಲಿ ರಸ್ತೆ ವಿಸ್ತರಣೆಗಾಗಿ ಪಾಲಿಕೆಯಿಂದ ಡಿಆರ್‌ಸಿ ಸಂಖ್ಯೆ 002924, 002958 ಹಾಗೂ 002961 ವಿತರಿಸಲಾಗಿದೆ. ಇದರಲ್ಲಿ ಕೃಷ್ಣಲಾಲ್ ಕರ್ತವ್ಯಲೋಪ ಎಸಗಿದ್ದರು. ಈ ಪ್ರಕರಣದಲ್ಲಿ ಎಸಿಬಿಗೆ ಅಭಿಯೋಜನಾ ಮಂಜೂರಾತಿಯನ್ನು 2020ರ ಜನವರಿ 18ರಂದು ನೀಡಲಾಗಿದೆ. ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ಪಾಲಿಕೆಯಿಂದ 2020ರ ಆಗಸ್ಟ್ 26ರಂದು ದೋಷಾರೋಪಣಾ ಪಟ್ಟಿ ಸಿದ್ಧಪಡಿಸಲಾಗಿದೆ. ಈ ಪ್ರಕರಣದ ಬಗ್ಗೆ ವಿಚಾರಣಾಧಿಕಾರಿಗಳು ಸಮಗ್ರ ತನಿಖೆ ನಡೆಸಿದ್ದು, ಕೃಷ್ಣಲಾಲ್ ಮೇಲಿನ ಆರೋಪ ಸಾಬೀತಾಗಿಲ್ಲ ಎಂದು ವರದಿ ನೀಡಿದ್ದಾರೆ. ಹೀಗಾಗಿ, ಇಲಾಖಾ ವಿಚಾರಣಾ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸಲ್ಲಿಸಿದ ನಡಾವಳಿಯಲ್ಲಿದೆ.

ಜತೆಗೆ, ಅವರಿಗೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಗಿದೆ. ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರ ಪ್ರಭಾವಕ್ಕೆ ಮಣಿದು ಈ ಪ್ರಕ್ರಿಯೆ ನಡೆಸಲಾಗಿದೆ ಎಂಬ ಆರೋಪ ವ್ಯಕ್ತವಾಗಿದೆ. ಎಸಿಬಿಯಲ್ಲಿ ದಾಖಲಾಗಿರುವ ಈ ಪ್ರಕರಣಗಳಲ್ಲಿ ಅಭಿಯೋಜನೆ ಮಂಜೂರಾತಿ ನೀಡಿರುವ ವಿಷಯಕ್ಕೆ ಸಂಬಂಧಪಟ್ಟ ಇಲಾಖಾ ವಿಚಾರಣೆಯನ್ನು ಪಾಲಿಕೆ ಹಂತದಲ್ಲಿ ಮುಕ್ತಾಯಗೊಂಡಿದೆ. ಹೀಗಾಗಿ, ಕೃಷ್ಣಲಾಲ್ ಅವರಿಗೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಗಿದೆ ಎಂದು ಪಾಲಿಕೆ ನಡಾವಳಿಯಲ್ಲಿದೆ.

'ಕೇಶವ ಕೃಪಾ'ದ ಆದೇಶ

ಪಾಲಿಸುವ ಸಿಎಂ–ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿಯಂತ್ರಣದಲ್ಲಿಲ್ಲ. ಅವರು ಆರೆಸ್ಸೆಸ್‌ನ ಕೈಗೊಂಬೆಯಾಗಿದ್ದು, 'ಕೇಶವ ಕೃಪಾ'ದಿಂದ ಬರುವ ಆದೇಶ ಪಾಲನೆ ಮಾಡುತ್ತಿದ್ದಾರೆ' ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ದೂರಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸರ್ಕಾರ, ಸಚಿವ ಸಂಪುಟದ ಮೇಲೆ ಬೊಮ್ಮಾಯಿ ಅವರಿಗೆ ನಿಯಂತ್ರಣ ಇಲ್ಲ. ಸರ್ಕಾರದ ಮೇಲೆ ಮುಖ್ಯಮಂತ್ರಿ ನಿಯಂತ್ರಣ ಹೊಂದಿದ್ದರೆ ಮಾತ್ರ ಯಾವುದೇ ಘಟನೆಗೆ ಸ್ಪಂದಿಸಲು ಸಾಧ್ಯ' ಎಂದರು.

'ತುಮಕೂರಿನಲ್ಲಿ ತಾಯಿ, ಅವಳಿ ಶಿಶುಗಳ ಸಾವಿನ ಪ್ರಕರಣದಲ್ಲಿಯಾದರೂ ಮಾನವೀಯತೆ ಮೆರೆಯಬೇಕಿತ್ತು. ಆದರೆ, ಈ ಸರ್ಕಾರದಲ್ಲಿ ಮಾನವೀಯತೆ ಹಣ ಕೊಟ್ಟವರಿಗೆ ಮಾತ್ರ. ಹಣ ಕೊಟ್ಟವರಿಗೆ ಹುದ್ದೆ ನೀಡಲಾಗುತ್ತದೆ. ಹೀಗಾಗಿ, ಅಧಿಕಾರಿ ಹಾಗೂ ಸಿಬ್ಬಂದಿ ಮಾನವೀಯತೆ ಮರೆತು ಹಣ ಗಳಿಸುವ ಬಗ್ಗೆ ಗಮನಹರಿಸಿದ್ದಾರೆ' ಎಂದರು.

'ತುಮಕೂರಿನಲ್ಲಿ ನಡೆದಿರುವುದು ಸರ್ಕಾರದ ಪ್ರಾಯೋಜಿತ ಹತ್ಯೆ. ಇದಕ್ಕೆ ಕಾರಣ ಯಾರು? ಅಮಾನತುಗೊಳಿಸಿದರೆ ಸಾಕೆ? ಅವರ ಪದವಿಯನ್ನು ರದ್ದು ಮಾಡಬೇಕು. ವೈದ್ಯರು ವೃತ್ತಿ ಆರಂಭಿಸುವಾಗ ಮಾನವೀಯತೆ ಆಧಾರದ ಮೇಲೆ ಪ್ರತಿಜ್ಞೆ ಮಾಡುತ್ತಾರೆ. ಅದನ್ನು ಮರೆತು, ಈ ರೀತಿ ಚಿಕಿತ್ಸೆ ತಿರಸ್ಕರಿಸಿದರೆ, ಜೀವಕ್ಕೆ ಈ ಸರ್ಕಾರ ಎಷ್ಟು ಬೆಲೆ ಕೊಡುತ್ತಿದೆ ಎನ್ನುವುದು ತಿಳಿಯುತ್ತದೆ' ಎಂದರು.

'ವಿಮ್ಸ್ ಪ್ರಕರಣ, ಚಾಮರಾಜನಗರ ಆಕ್ಸಿಜನ್ ಕೊರತೆ ಪ್ರಕರಣ, ಕೋವಿಡ್ ನಿರ್ವಹಣೆ ವೈಫಲ್ಯ ಆದಾಗಲೇ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ರಾಜೀನಾಮೆ ನೀಡಬೇಕಿತ್ತು. ಆಗ ರಾಜೀನಾಮೆ ನೀಡದವರಿಂದ ಈಗ ನಿರೀಕ್ಷೆ ಮಾಡಲು ಸಾಧ್ಯವೇ? ಇದು ಭ್ರಷ್ಟಾಚಾರ ಸೋಂಕಿತ ಸರ್ಕಾರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಮರ್ಶಕ ಡಾ.ಎಚ್.ದಂಡಪ್ಪ ಅಭಿಮತ

ಪ್ರಸ್ತುತ ರಾಜಕಾರಣಕ್ಕೆ 'ತುಘಲಕ್' ಕನ್ನಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರೀಶ್ ಕಾರ್ನಾಡರ 'ತುಘಲಕ್' ನಾಟಕ ಧರ್ಮ ಮತ್ತು ರಾಜಕಾರಣ ಬೆರೆಯುತ್ತಿರುವ ಪ್ರಸ್ತುತ ರಾಜಕೀಯ ಸನ್ನಿವೇಶವನ್ನು ಪುನರ್ ವಿಮರ್ಶೆಗೆ ಒಳಪಡಿಸಲು ಅಗತ್ಯವಾದ ಮಹತ್ವದ ಕೃತಿ ಎಂದು ವಿಮರ್ಶಕ ಡಾ.ಎಚ್.ದಂಡಪ್ಪ ಬಣ್ಣಿಸಿದರು.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಅನ್ನದಾನೇಶ್ ಅವರು ಸಂಪಾದಿಸಿದ ಗಿರೀಶ್ ಕಾರ್ನಾಡರ 'ತುಘಲಕ್' ಹಾಗೂ ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕದ ವಿಮರ್ಶೆಗಳ ಪುಸ್ತಕ ಬಿಡುಗಡೆ ಹಾಗೂ ರಾಜ್ಯೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜಕೀಯದಿಂದ ಧರ್ಮವನ್ನು ಬೇರ್ಪಡಿಸಲು ಶ್ರಮಿಸಿದ್ದ ದೊರೆ ತುಘಲಕ್. ಜನರ ಬಡತನ, ಹಸಿವು, ಬರಗಾಲ ಹೋಗಲಾಡಿಸಲು ಪಣ ತೊಟ್ಟಿದ್ದನು. ಅದಕ್ಕಾಗಿ ಏಳು ವರ್ಷಗಳವರೆಗೆ ಪ್ರಾರ್ಥನೆಯನ್ನೇ ನಿಲ್ಲಿಸಿದ್ದನು. ಅಂತಹ ನಡೆ ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಬೇಕು. ಆಳುವ ದೊರೆ ಜನರ ಬಳಿಗೆ ತೆರಳಿ ಕೆಲಸ ಮಾಡಬೇಕು ಎಂಬ ಸಂದೇಶ ಸಾರಿದ. ಇಂದು ಜನರು ಜನಪ್ರತಿನಿಧಿಗಳನ್ನು ಹುಡುಕುವ ಸ್ಥಿತಿ ಇದೆ. ಅವನ ನೀತಿಗಳು ವಿಫಲವಾಗಿರಬಹುದು. ಆದರೆ, ಜನಪರ ನಿಲುವುಗಳು ಪ್ರಶ್ನಾತೀತ ಎಂದು ವಿಶ್ಲೇಷಿಸಿದರು.



ಬಿ.ಎ. ಅನ್ನದಾನೇಶ್ ಸಂಪಾದಿಸಿದ ಗಿರೀಶ್ ಕಾರ್ನಾಡರ 'ತುಘಲಕ್' ಹಾಗೂ ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕದ ವಿಮರ್ಶೆಗಳು ಪುಸ್ತಕವನ್ನು ಶನಿವಾರ ವಿಮರ್ಶಕ ವಿಜಯಶಂಕರ್ ಬಿಡುಗಡೆ ಮಾಡಿದರು. ಪ್ರವೀಣ್, ಸರಿತಾ ಬಾಯಿ, ನಾಗಲಕ್ಷ್ಮಿ, ಎಚ್. ದಂಡಪ್ಪ, ಎಚ್.ಎಸ್. ಸತ್ಯನಾರಾಯಣ ಇದ್ದರು.

ಕುವೆಂಪು ಅವರು ಶೂದ್ರ ತಪಸ್ವಿ ವಿಮರ್ಶೆ ಕುರಿತು ಮಾತನಾಡಿದ ವಿಮರ್ಶಕ ಎಚ್.ಎಸ್. ಸತ್ಯನಾರಾಯಣ, 'ಕುವೆಂಪು ಶೂದ್ರರ ಶಿಕ್ಷಣದ ಪ್ರಾಮುಖ್ಯ ಸಾರಿದ್ದಾರೆ. ಅನ್ನದಾನೇಶ್ ಸಂಪಾದಿಸಿದ ಕೃತಿ ಮೂರು ತಲೆಮಾರುಗಳ ವಿಮರ್ಶಕರ ವಿಚಾರಧಾರೆ ಒಳಗೊಂಡಿದೆ' ಎಂದರು.

ವಿಮರ್ಶಕ ಎಸ್.ಆರ್. ವಿಜಯಶಂಕರ್, ಪ್ರಾಂಶುಪಾಲರಾದ ನಾಗಲಕ್ಷ್ಮಿ, ಕಾಲೇಜಿನ ಅಧಿಕಾರಿಗಳಾದ ಸರಿತಾ ಬಾಯಿ, ಜ್ಞಾನೇಶ್ವರ್, ಶರ್ಮಿಷ್ಟ ದತ್ತ, ಮಂಜುನಾಥ್ ಕೃತಿ ಸಂಪಾದಕ ಅನ್ನದಾನೇಶ್ ಉಪಸ್ಥಿತರಿದ್ದರು.

'ನಡುಪಂಥ ಎಂದರೆ ಯಥಾಸ್ಥಿತಿವಾದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಡುಪಂಥ ಎಂಬುದು ಇಲ್ಲವೇ ಇಲ್ಲ. ಹಾಗೆ ಹೇಳುವವರನ್ನು ಯಥಾಸ್ಥಿತಿವಾದಿಗಳು ಎನ್ನಬಹುದು' ಎಂದು ಚಿಂತಕ ಬಂಜಗೆರೆ ಜಯಪ್ರಕಾಶ್ ಪ್ರತಿಪಾದಿಸಿದರು.

ಟಿ.ಎಚ್. ಲವಕುಮಾರ್ ಅವರ 'ಸಮಾಧಿಗಳು ಪ್ರತಿಭಟಿಸುವುದಿಲ್ಲ' ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದ ಅವರು, 'ನಡುಪಂಥವೊಂದು ಇರಲು ಸಾಧ್ಯವಿಲ್ಲ. ತಟಸ್ಥವಾದದ ಮತ್ತೊಂದು ಹೆಸರೇ ನಡುಪಂಥ ಎಂದು ಭಾವಿಸಬಹುದು' ಎಂದು ಹೇಳಿದರು.

'ಚಲನಶೀಲ ಸಮಾಜದಲ್ಲಿ ನಾವು ಪ್ರಚಲಿತಕ್ಕೆ ಸ್ಪಂದಿಸಲೇಬೇಕಾಗುತ್ತದೆ. ಹಾಗಾಗಿಯೇ ಕವಿಗಳು ಈಗ ರಸಾನುಭವದ ಕಾಲಘಟ್ಟದಲ್ಲಿ ಇಲ್ಲ. ಅವರಲ್ಲಿ ಕೋಲಾಹಲದ ಹೆಚ್ಚುತ್ತಿದೆ' ಎಂದರು.

'ಈ ಕವನ ಸಂಕಲದ ಕವಿಯ ಮನಸ್ಸು ಕೂಡ ಕೋಲಾಹಲಕ್ಕೆ ಈಡಾಗಿದೆ. ಕವಿ ತನ್ನ ಅಂತರಾಳದ ತೊಳಲಾಟವನ್ನು ಕವಿತೆಯ ರೂಪದಲ್ಲಿ ಮಂಡಿಸುವಲ್ಲಿ ಸಫಲರಾಗಿದ್ದಾರೆ. ವಾಸ್ತವದ ಸಂದರ್ಭಕ್ಕೆ ವಿಷಾದ ಮತ್ತು ವ್ಯಂಗ್ಯದ ರೂಪದಲ್ಲಿ ಉತ್ತರಿಸಿದ್ದಾರೆ' ಎಂದು ಅವರು ಹೇಳಿದರು.



ಪುಸ್ತಕವನ್ನು ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಿದರು. ಸಾಹಿತಿ ಎಚ್.ಎಲ್. ಪುಷ್ಪಾ, ಸಂತ ಜೋಸೆಫರ ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಚಾರ್ಲ್ಸ್ ಲಸ್ರಾಡೋ ಯೇ.ಸ ಮತ್ತು ಕವಿ ಟಿ.ಎಚ್.ಲವಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಮಾತನಾಡಿ, 'ಕವಿತೆಯ ಮೊದಲ ವಿಮರ್ಶಕ ಕವಿಯೇ ಆಗಿರುತ್ತಾನೆ. ಇಲ್ಲಿನ ಬಹುತೇಕ ಕವಿತೆಗಳು ಸಮಾಜಮುಖಿ ಆಗಿವೆ. ಈ ರೀತಿ ಕವಿ ಸಮಾಜದ ವಿಮರ್ಶೆಯನ್ನು ಸೂಕ್ಷ್ಮವಾಗಿ ಮಾಡಿದ್ದಾರೆ' ಎಂದರು.

ಸುಧಾಕರ್ ವಜಾಕ್ಕೆ ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನಿರಾಕರಿಸಿದ್ದರಿಂದ ತಾಯಿ ಮತ್ತು ಅವಳಿ ಶಿಶುಗಳು ಸಾವನ್ನಪ್ಪಿದ ಘಟನೆ ಕುರಿತು ಲಘುವಾಗಿ ಪ್ರತಿಕ್ರಿಯಿಸುತ್ತಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಘಟನೆ ಕುರಿತು ಕುಮಾರಸ್ವಾಮಿ ಶುಕ್ರವಾರ ಟ್ವಿಟರ್‌ನಲ್ಲಿ ಹರಿಹಾಯ್ದಿದ್ದರು. ಸುಧಾಕರ್, ಚಾಮರಾಜನಗರದ ಸುಳವಾಡಿ ದೇವಸ್ಥಾನದ ಪ್ರಸಾದ ಸೇವಿಸಿ ಹಲವರು ಮೃತಪಟ್ಟ ಘಟನೆ ಪ್ರಸ್ತಾಪಿಸಿ ತಿರುಗೇಟು ನೀಡಿದ್ದರು. ಈ ಕುರಿತು ಶನಿವಾರವೂ ಸರಣಿ ಟ್ವೀಟ್ ಮಾಡಿರುವ ಜೆಡಿಎಸ್ ನಾಯಕ, 'ಸುಧಾಕರ್ ಅವರು ರಾಜೀನಾಮೆ ನೀಡಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೈತಿಕತೆ ಇದ್ದರೆ ಸಚಿವರಿಂದ ರಾಜೀನಾಮೆ ಪಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

'ತಾಯಿ ಮತ್ತು ಶಿಶುಗಳ ಪ್ರಕರಣದಲ್ಲಿ ಜನರನ್ನು ದಿಕ್ಕು ತಪ್ಪಿಸಲು ಸಚಿವರು ಯತ್ನಿಸುತ್ತಿದ್ದಾರೆ. ಸಾವಿನ ವಿಷಯದಲ್ಲೂ ಸಂಭ್ರಮಿಸಲು ಹೊರಟಿದ್ದಾರೆ. ಸರ್ಕಾರಿ ಆಸ್ಪತ್ರೆಗಳನ್ನು ಸಾವಿನ ಕೂಪಗಳನ್ನಾಗಿ ಪರಿವರ್ತಿಸಿದ ಕೀರ್ತಿ ಸುಧಾಕರ್ ಅವರದ್ದು. ಮೂವರ ಸಾವಿನ ವಿಷಯದಲ್ಲಿ ಕಡೆಯ ಪಕ್ಷದ ಪಶ್ಚಾತ್ತಾಪ, ಪಾಪಪ್ರಜ್ಞೆ ಬೇಡವೆ' ಎಂದು ಪ್ರಶ್ನಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಬಂದು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಅಭಿಷೇಕ್ (22) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರದ ಅಭಿಷೇಕ್, ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಕೆಲಸ ಮಾಡುತ್ತಿದ್ದ. ಅ. 23ರಂದು ಕೃತ್ಯ ಎಸಗಿದ್ದ. ಮನೆ ಮಾಲೀಕರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ₹ 1.03 ಲಕ್ಷ ಮೌಲ್ಯದ 23 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮನೆಯಲ್ಲಿ ಕ್ಯಾಮೆರಾ ಅಳವಡಿಸಲು ತೀರ್ಮಾನಿಸಿದ್ದ ಮಾಲೀಕರು, ಆರೋಪಿ ಕೆಲಸ ಮಾಡುತ್ತಿದ್ದ ಅಂಗಡಿಯಲ್ಲಿ ಕ್ಯಾಮೆರಾ ಖರೀದಿಸಿದ್ದರು. ಸಹೋದ್ಯೋಗಿ ಜೊತೆ ಮನೆಗೆ ಬಂದಿದ್ದ ಆರೋಪಿ, ಮನೆಯ ಕೊಠಡಿಯಲ್ಲಿ ಕ್ಯಾಮೆರಾ ಅಳವಡಿಸುವ ಕೆಲಸ ಆರಂಭಿಸಿದ್ದ. ಮಾಲೀಕರು ಪ್ರಾರ್ಥನೆಗೆಂದು ಮಸೀದಿಗೆ ಹೋಗಿದ್ದರು.'

'ಮಾಲೀಕರು ಇಲ್ಲದ ಸಮಯದಲ್ಲಿ ಮನೆಯಲ್ಲಿ ಹುಡುಕಾಡಿದ್ದ ಅಭಿಷೇಕ್, ಡ್ರಾಯರ್‌ನಲ್ಲಿಟ್ಟಿದ್ದ ಚಿನ್ನದ ಬಳೆ ಹಾಗೂ ಉಂಗುರಗಳನ್ನು ಕದ್ದಿಟ್ಟು ಕೊಂಡಿದ್ದ. ಈ ಸಂಗತಿ ಸಹೋದ್ಯೋಗಿಗೂ ಗೊತ್ತಾಗಿರಲಿಲ್ಲ' ಎಂದರು.



ರಾಜರಾಜೇಶ್ವರಿನಗರದ ಪ್ರೆಸ್ಟೀಜ್ ಬಾಗ್ಮನೆ ಟೆಂಪಲ್ ಬೆಲ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು





1.ನಗರದ ಜಿಕೆವಿಕೆಯಲ್ಲಿ ಶನಿವಾರ ನಡೆದ ಕೃಷಿ ಮೇಳದಲ್ಲಿ ಯುವತಿ ಆಲಂಕಾರಿಕ ಪಕ್ಷಿಗಳನ್ನು ಖರೀದಿಸಿದರು 2. ವಿದ್ಯಾರ್ಥಿಗಳು ಮಳಿಗೆಗಳನ್ನು ನೋಡಲು ಸಾಲಾಗಿ ನಿಂತಿರುವುದು 3.ಜನರು ಕೃಷಿ ಯಂತ್ರವನ್ನು ವೀಕ್ಷಿಸಿದರು —ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

'ಕೃಷಿ ಮೇಳ'ದಲ್ಲಿ ಜನರಿಗೆ ಕುತೂಹಲ ಮೂಡಿಸಿದ ಅಪರೂಪದ ಸಸಿಗಳು

ಔಷಧ ವನ: ಆರೋಗ್ಯಕ್ಕೆ ವರದಾನ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು ಕೃಷಿ ವಿವಿಯ ತಜ್ಞರು ಅಭಿವೃದ್ಧಿ ಪಡಿಸಿರುವ ಔಷಧೀಯ ಸಸ್ಯಗಳೂ ಸೇರಿ ಪಶ್ಚಿಮಘಟ್ಟ, ಮಲೆನಾಡು ಹಾಗೂ ಬಯಲು ಸೀಮೆಯಲ್ಲಿ ಅಪರೂಪವಾಗಿ ಲಭಿಸುವ ಔಷಧೀಯ ಸಸ್ಯಗಳು ಕೃಷಿ ಮೇಳದಲ್ಲಿ ಗಮನ ಸೆಳೆಯುತ್ತಿವೆ.

ಮೇಳದ ವೀಕ್ಷಣೆಗೆ ಬರುವ ವಿದ್ಯಾರ್ಥಿಗಳು, ರೈತರು ಹಾಗೂ ವಯಸ್ಕರರು ಈ ವನವನ್ನು ಅತ್ಯಂತ ಕುತೂಹಲದಿಂದ ವೀಕ್ಷಿಸುತ್ತಿದ್ದಾರೆ.

ವನದಲ್ಲಿ 150 ಔಷಧ ಸಸ್ಯಗಳು ಹಾಗೂ 100 ಸುಗಂದ ದ್ರವ್ಯ ಸಸ್ಯಗಳು ಸುವಾಸನೆ ಬೀರುತ್ತಿವೆ. ಹಲವು ಔಷಧೀಯ ಸಸ್ಯಗಳು ರೋಗಕ್ಕೆ ರಾಮಬಾಣ ಎನಿಸಿವೆ. ಅವುಗಳು ಒಂದೇ ಸೂರಿನಡಿ ಕಣ್ತುಂಬಿಕೊಳ್ಳಬಹುದಾಗಿದೆ.

ಮನೆಯ ಎದುರು ಅಥವಾ ಚಾವಣಿಯಲ್ಲಿ ಹೂವಿನ ಕುಂಡಗಳಲ್ಲಿಯೇ ಔಷಧೀಯ ಸಸ್ಯ ಬೆಳೆಸಬಹುದು. ಪ್ರತಿನಿತ್ಯ ಇವುಗಳ ಎಲೆ ಸೇವಿಸಿದರೆ ಆರೋಗ್ಯವಾಗಿ ಇರಲು ಸಾಧ್ಯ. ರೋಗ ನಿರೋಧಕ ಶಕ್ತಿ ಹೆಚ್ಚಲಿದೆ ಎಂದು ತಜ್ಞರು ಹೇಳಿದರು.

ಸಕ್ಕರೆ ಕಾಯಿಲೆ ನಿಯಂತ್ರಿಸುವ, ರಕ್ತಸ್ರಾವ, ಜ್ವರ ನಿವಾರಕ, ಭೇದಿ ನಿಯಂತ್ರಣ, ಸೊಳ್ಳೆ ನಿರೋಧಕ, ಮೂತ್ರಕೋಶದ ಕಲ್ಲು, ಮೂಲವ್ಯಾಧಿ, ಮಲಬದ್ಧತೆ, ಹೊಟ್ಟೆ ನೋವು, ರಕ್ತದ ಒತ್ತಡ ನಿಯಂತ್ರಣ, ನಿದ್ರಾಹೀನತೆ, ನಿಶ್ಯಕ್ತಿ, ನಪುಂಸಕತೆ, ಜ್ವರ, ಜಂತುನಾಶಕ, ಕೆಮ್ಮು... ಹೀಗೆ ಹಲವು ಕಾಯಿಲೆ ನಿಯಂತ್ರಿಸುವ ಸಾಮರ್ಥ್ಯದ ಔಷಧದ ಗಿಡಗಳಿವೆ.

'ಎರಡು ವರ್ಷಗಳ ಹಿಂದೆ ಸಕ್ಕರೆ ಗಿಡದ ಮತ್ತೊಂದು ತಳಿಯನ್ನು ಕೃಷಿ ವಿವಿ ತಜ್ಞರೇ ಅಭಿವೃದ್ಧಿ ಪಡಿಸಿದ್ದರು. ಮಧುಮೇಹ ರೋಗಗಳಿಗೆ ಇದು ವರದಾನ. ಇದರ ಎಲೆ ಅಥವಾ ಪುಡಿ ಸೇವಿಸಬಹುದು. ಈ ಎಲೆಯಲ್ಲಿ ಸಕ್ಕರೆಯಂತೆಯೇ ಸಿಹಿ ಅಂಶವಿದೆ.



ಮನೆಯ ಎದುರಿನ ಪುಟ್ಟ ಜಾಗದಲ್ಲಿಯೇ ಈ ಸಸಿ ಬೆಳೆಸಿಕೊಳ್ಳಬಹುದು. ಕೆಲವು ಔಷಧ ಸಸಿಗಳನ್ನು ವಾಣಿಜ್ಯ ಬೆಳೆಯಾಗಿಯೂ ರೈತರು ಬೆಳೆದರೆ ಲಾಭವಿದೆ.

ಡಾ.ಶ್ರೀನಿವಾಸಪ್ಪ, ತಜ್ಞ, ಕೃಷಿ ವಿ.ವಿ

ಅಡ್ಡ ಪರಿಣಾಮ ಇಲ್ಲ. ಮಧುಮೇಹ ರೋಗಿಗಳಿಗೆ ಸಿಹಿ ಬೇಕು ಎನಿಸಿದಾಗ ಈ ಎಲೆ ಸೇವಿಸಿದರೆ ಸಾಕು. ಸಕ್ಕರೆ ಸೇವಿಸಿದ ಸಂತೃಪ್ತಿ ಸಿಗಲಿದೆ' ಎಂದು ಕೃಷಿ ವಿ.ವಿಯ ತೋಟಗಾರಿಕೆ ವಿಭಾಗದ ತಜ್ಞ ಡಾ.ಕೆ.ಎನ್. ಶ್ರೀನಿವಾಸಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಸಕ್ಕರೆ ಗಿಡದ ಎಲೆ ಸೇವಿಸಿದರೆ ಸಕ್ಕರೆ ಕಾಯಿಲೆ, ಜೀರ್ಣಕ್ರಿಯೆ, ಚರ್ಮ ಆರೈಕೆ, ಬಾಯಿಹುಣ್ಣು ನಿಯಂತ್ರಿಸಬಹುದು. ದೊಡ್ಡಪತ್ರೆಯಿಂದ ಅಜೀರ್ಣ, ಕಾಲರಾ ಹಾಗೂ ಅಸ್ತಮಾ, ಹಿರೇಮದ್ದಿನ ಗಿಡದಿಂದ ನಿಶ್ಯಕ್ತಿ, ನಿದ್ರಾಹೀನತೆ, ಬಿಳಿಚಿತ್ರಮೂಲದ ಎಲೆ ಸೇವನೆಯಿಂದ ಚರ್ಮರೋಗ, ಅತಿಸಾರ ನಿಯಂತ್ರಣ ಸಾಧ್ಯ ಆಗಲಿದೆ. ಪೊದೆ ಕಾಳುಮೆಣಸನ್ನು ಅಡುಗೆಯಲ್ಲಿ ಬಳಸಬಹುದು. ಇದರಿಂದ ಕೆಮ್ಮು, ಜ್ವರ ನಿಯಂತ್ರಣಕ್ಕೆ ಬರುತ್ತದೆ. ರಂಗುಮಾಲೆ, ಚಿನ್ನಿಮರ, ಆಟಿ ಸೊಪ್ಪು, ನೀಲಿಗಿಡ... ಹೀಗೆ ನಾನಾ ರೀತಿಯ ಗಿಡಗಳಿವೆ.

ಸುಗಂಧ ದ್ರವ್ಯದ ಸಸ್ಯಗಳು: 'ಥೈಮ್'ನಿಂದ ಆಹಾರದಲ್ಲಿ ಪರಿಮಳ, 'ಸೇಜ್ ಸಸಿ'ಯಿಂದ ಸಲಾಡ್, ಆಹಾರ ಪದಾರ್ಥಗಳು, ಸುಗಂಧ ದ್ರವ್ಯ, ಕಾಂತಿವರ್ಧಕ, 'ಪನ್ನೀರು ಸೊಪ್ಪಿ'ನಿಂದ ಸೋಪು, 'ರೋಸ್ ಮೇರಿ'ಯನ್ನು ಖಾದ್ಯ ಪದಾರ್ಥಗಳ ತಯಾರಿಕೆಯಲ್ಲಿ ಬಳಸುತ್ತಿದ್ದು, ಮೇಳದಲ್ಲಿ ನೋಡಗರ ಕುತೂಹಲ ಹೆಚ್ಚಿಸುತ್ತಿವೆ. ಸಿಟ್ರೊನೆಲ್ಲಾ, ಪಾಮರೋಸಾ, ಸ್ಪ್ಯಾನಿಷ್ ಪುದೀನ, ಬರ್ಗಾಮಾಟ್ ಪುದೀನ ವನದಲ್ಲಿ ಕಂಪು ಬೀರುತ್ತಿವೆ.



ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಪ್ರಾತ್ಯಕ್ಷಿಕೆಗೆ ಇರಿಸಿರುವ ಔಷಧೀಯ ಸಸ್ಯಗಳನ್ನು ಜನರು ವೀಕ್ಷಿಸಿದರು |— ಪ್ರಜಾವಾಣಿ ಚಿತ್ರ / ಕೃಷ್ಣಕುಮಾರ್ ಪಿ.ಎಸ್.

ಮಕ್ಕಳ ಬೈಕ್ ಆವಿಷ್ಕಾರ

ಕೃಷಿ ಮೇಳದಲ್ಲಿ ಪುಟ್ಟ ಬೈಕ್ ಎಲ್ಲರ ಗಮನ ಸೆಳೆಯುತ್ತಿದೆ. ಈ ಬೈಕ್ ಅನ್ನು 8 ವರ್ಷದ ಬಾಲಕನೊಬ್ಬ ಓಡಿಸುತ್ತಿದ್ದರೆ, ಎಲ್ಲರೂ ಅದರತ್ತ ದೃಷ್ಟಿ ನೆಟ್ಟಿದ್ದರು. ಅದನ್ನು ಆವಿಷ್ಕರಿಸಿದ್ದು ಕೋಲಾರ ಜಿಲ್ಲೆ ಕೆಜಿಎಫ್‌ನ ಐವರಹಳ್ಳಿಯ ಸುಕುಮಾರ್.



ಮಕ್ಕಳು ಓಡಿಸುವ ಬೈಕ್

ಇವರು ಬಿ.ಇ ಪದವೀಧರರರು. 2012ರಲ್ಲಿ ಎಂಜಿನಿಯರ್ ವೃತ್ತಿಗೆ ವಿದಾಯ ಹೇಳಿ ಯಂತ್ರಗಳ ಆವಿಷ್ಕಾರಕ್ಕೆ ಮುಂದಾದರು. ಕೆಜಿಎಫ್‌ನಲ್ಲಿ ಸಾಯಿ ಅಗ್ರೋಟೆಕ್ ಹೆಸರಿನ ಯಂತ್ರೋಪಕರಣ ಅಂಗಡಿ ನಡೆಸುತ್ತಿದ್ದಾರೆ. ತಾವೇ ಆವಿಷ್ಕರಿಸಿದ ಕೃಷಿ ಯಂತ್ರೋಪಕರಣ ಮಾರಾಟ ಮಾಡುತ್ತಾರೆ. ಕೃಷಿಮೇಳಕ್ಕೂ ಅವರು ಯಂತ್ರೋಕರಣ ತಂದಿದ್ದರು.

'ಪುಟ್ಟ ಬೈಕ್‌ಗೆ ಮರ ಕತ್ತರಿಸುವ ಯಂತ್ರಕ್ಕೆ ಬಳಸುವ ಚೈನ್ ಸಾ ಮೋಟರ್ ಅಳವಡಿಸಲಾಗಿದೆ. ಥೈವಾನ್‌ನಿಂದ ಬಿಡಿಭಾಗ ತರಿಸಲಾಗಿತ್ತು. ಬೈಕ್‌ಗೆ ₹ 27 ಸಾವಿರ ಬೆಲೆಯಿದೆ. ರಸ್ತೆಗಳಲ್ಲಿ ಓಡಿಸಲು ಅನುಮತಿ ಇಲ್ಲ. ಮನೆಯ ಎದುರು ಹಾಗೂ ಸ್ವಂತ ಜಮೀನಿನಲ್ಲಿ ಮಕ್ಕಳು ಈ ಬೈಕ್ ಬಳಸಬಹುದು' ಎಂದು ಸುಕುಮಾರ್ ಹೇಳಿದರು.

ಸದ್ಯಕ್ಕೆ ಎರಡು ಬೈಕ್ ಮಾತ್ರ ತಯಾರಿಸಿದ್ದು, ಬೇಕಾದವರು ತಿಳಿಸಿದರೆ ಬೈಕ್ ಅನ್ನು ತಯಾರಿಸಿ ಕೊಡಲಾಗುವುದು ಎಂದು ಹೇಳಿದರು.

ಸಬ್ಸಿಡಿ ಘೋಷಿಸದ ಸರ್ಕಾರ: ಯಂತ್ರೋಪಕರಣ ಖರೀದಿಗೆ ಹಿಂದೇಟು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕೃಷಿ ಯಂತ್ರೋಪಕರಣ ಖರೀದಿ ಮೇಲೆ ಸಬ್ಸಿಡಿ ಘೋಷಿಸಲು ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದ್ದು, ಇದರಿಂದಾಗಿ 'ಕೃಷಿ ಮೇಳ'ದಲ್ಲಿ ದುಬಾರಿಗೆ ಬೆಲೆಗೆ ಯಂತ್ರೋಪಕರಣ ಖರೀದಿಸಲು ರೈತರು ಹಿಂದೇಟು ಹಾಕುತ್ತಿದ್ದಾರೆ. ಸಬ್ಸಿಡಿ ಘೋಷಿಸದ ಸರ್ಕಾರದ ವರ್ತನೆಗೂ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕೃಷಿ ಮೇಳದಲ್ಲಿ ಯಂತ್ರೋಪಕರಣ ಪ್ರದರ್ಶನಕ್ಕೆಂದು ಪ್ರತ್ಯೇಕ ಮಳಿಗೆಗಳನ್ನು ತೆರೆಯಲಾಗಿದೆ. ಜಮೀನು ಹದಗೊಳಿಸುವ, ಕಳೆ ಹಾಗೂ ಮೇವು ಕತ್ತರಿಸುವ, ಬೆಳೆ ಕಟಾವು, ಔಷಧ ಸಿಂಪಡಣೆ, ಹಾಲು ಕರೆಯುವ, ಕೃಷಿ ಹೊಂಡ, ಮೀನು ಸಾಕಾಣಿಕೆ ಸೇರಿದಂತೆ ಹಲವು ಕೆಲಸಗಳಿಗಾಗಿ ಯಂತ್ರೋಪಕರಣ ಮೇಳದಲ್ಲಿ ಲಭ್ಯವಿವೆ. ಬೆಂಗಳೂರು, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳ ಕಂಪನಿಗಳು ಯಂತ್ರೋಪಕರಣ ಪ್ರದರ್ಶನಕ್ಕೆ ಇರಿಸಿವೆ.ಆದರೆ, ಖರೀದಿ ಮೇಲೆ ಸರ್ಕಾರದ ಸಬ್ಸಿಡಿ ಇಲ್ಲದಿದ್ದರಿಂದ ಯಂತ್ರಗಳ ಮಾರಾಟ ಪ್ರಮಾಣ ಕುಸಿದಿದೆ. ಯಂತ್ರೋಪಕರಣ ನೋಡುವುದಕ್ಕಷ್ಟೇ ಮೇಳ ಸೀಮಿತವಾದಂತಾಗಿದೆ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದರು.

'ಐದು ಎಕರೆ ಬೇಸಾಯ ಮಾಡುತ್ತಿದ್ದೇನೆ. ನನಗೆ ಕಲ್ಟಿವೇಟರ್ ಬೇಕಾಗಿತ್ತು. ಅದನ್ನು ತೆಗೆದುಕೊಳ್ಳಲು ಮೇಳಕ್ಕೆ ಬಂದಿದ್ದೇನೆ. ಆದರೆ, ಬೆಲೆ ದುಬಾರಿ. ಸರ್ಕಾರದ ಸಬ್ಸಿಡಿ ಸಹ ಇಲ್ಲ. ಹೀಗಾಗಿ, ಯಂತ್ರ ಖರೀದಿಸುತ್ತಿಲ್ಲ' ಎಂದು ರಾಮನಗರದ ರೈತ ಮುನಿಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.



ಯಂತ್ರೋಪಕರಣ ತಯಾರಿಕಾ ಕಂಪನಿ ಸಿಬ್ಬಂದಿ ತಮ್ಮ ಯಂತ್ರದ ಬಗ್ಗೆ ಕೃಷಿ ಮೇಳದಲ್ಲಿ ಪ್ರಾತ್ಯಕ್ಷಿಕೆ ನೀಡಿದರು — ಪ್ರಜಾವಾಣಿ ಚಿತ್ರ

'ತಯಾರಿಕೆ ಕಂಪನಿಗಳಿಂದ ಅರ್ಜಿ ಆಹ್ವಾನ'

'ಯಾವ ಯಂತ್ರೋಪಕರಣಗಳಿಗೆ ಎಷ್ಟು ಸಬ್ಸಿಡಿ ನೀಡಬೇಕು ಎಂಬುದರ ಪಟ್ಟಿ ಸಿದ್ಧಪಡಿಸುವ ಕೆಲಸ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿದೆ. ಯಂತ್ರೋಪಕರಣ ತಯಾರಿಕಾ ಕಂಪನಿಗಳಿಂದಲೂ ನೋಂದಣಿಗಾಗಿ ಅರ್ಜಿ ಆಹ್ವಾನಿಸಿ ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಹೆಸರು ಹೇಳಲು ಇಚ್ಛಿಸದ ಕೃಷಿ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

'ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣ ಬಳಸಿ, ಲಾಭ ಹೆಚ್ಚಿಸಿಕೊಳ್ಳಿ' ಎಂದು ಸರ್ಕಾರದ ಹೇಳುತ್ತದೆ. ಆದರೆ, ಯಾವುದೇ ಸಬ್ಸಿಡಿ ನೀಡುತ್ತಿಲ್ಲ. ಸರ್ಕಾರದ ಈ ನಡೆ ರೈತ ವಿರೋಧಿಯಾಗಿದೆ. ಮುಖ್ಯಮಂತ್ರಿ ಹಾಗೂ ಕೃಷಿ ಸಚಿವರು ಸಬ್ಸಿಡಿ ಬಗ್ಗೆ ತುರ್ತಾಗಿ ಗಮನಹರಿಸಬೇಕು' ಎಂದೂ ಅವರು ಆಗ್ರಹಿಸಿದರು.

ಚಿಕ್ಕಬಳ್ಳಾಪುರದ ರೈತ ಬಿ. ರಂಗಪ್ಪ, 'ಕೃಷಿಯಲ್ಲಿ ಕಾರ್ಮಿಕರ ಕೊರತೆ ಸಾಕಷ್ಟಿದೆ. ಹೀಗಾಗಿ, ಯಂತ್ರ ಖರೀದಿಸಲು ಮೇಳಕ್ಕೆ ಬಂದಿದ್ದೆ. ಸಬ್ಸಿಡಿ ಇಲ್ಲವೆಂದು ಮಳಿಗೆಯವರು ಹೇಳುತ್ತಿದ್ದಾರೆ. ದುಬಾರಿ ಹಣವಾಗಿದ್ದರಿಂದ ಯಂತ್ರ ಖರೀದಿಸಿಲ್ಲ' ಎಂದರು.

ಲಾಕ್‌ಡೌನ್ ವೇಳೆ ಸಬ್ಸಿಡಿ ರದ್ದು: 'ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಕೃಷಿ ಯಂತ್ರೋಪಕರಣ ಖರೀದಿ ಮೇಲಿನ ಸಬ್ಸಿಡಿಯನ್ನು ಸರ್ಕಾರ ರದ್ದುಪಡಿಸಿದೆ. ಲಾಕ್‌ಡೌನ್ ಮುಗಿದ ನಂತರ ಯಾವುದೇ ಸಬ್ಸಿಡಿಯನ್ನೂ ಸರ್ಕಾರ ಘೋಷಿಸಿಲ್ಲ' ಎಂದು ಯಂತ್ರೋಪಕರಣ ತಯಾರಿಕೆ ಕಂಪನಿಯೊಂದರ ವ್ಯವಸ್ಥಾಪಕ ರಮೇಶ್ ಹೇಳಿದರು.

ಮೂಡಿಗೆರೆ ಬಸವೇಶ್ವರ ಎಂಜಿನಿಯರ್ಸ್‌ನ ಸ್ಥಾಪಕ ವಿ. ಶ್ರೀನಿವಾಸ್, 'ತೆಂಗಿನಕಾಯಿ ಹಾಗೂ ಅಡಿಕೆ ಸುಲಿಯುವ ಯಂತ್ರ ಪ್ರದರ್ಶನಕ್ಕೆ ಇರಿಸಿದ್ದೇವೆ. ಯಂತ್ರಗಳನ್ನು ಖರೀದಿಸುವ ರೈತರಿಗೆ ಶೇ 20ರಿಂದ ಶೇ 25ರಷ್ಟು ಸಬ್ಸಿಡಿ ಇರುತ್ತಿತ್ತು. ಆದರೆ, ಈಗ ಸಬ್ಸಿಡಿ ಇಲ್ಲ. ಹೀಗಾಗಿ, ಯಂತ್ರಗಳ ಖರೀದಿಗೆ ರೈತರು ಹಿಂದೇಟು ಹಾಕುತ್ತಿದ್ದಾರೆ' ಎಂದರು.

ಒಂದೇ ದಿನ 7.16 ಲಕ್ಷ ಜನ: ಕೃಷಿ ಮೇಳಗಳಲ್ಲೇ ದಾಖಲೆ

ಬೆಂಗಳೂರು: ಕೃಷಿ ಮೇಳದ ನಡೆದ ಜಿಕೆವಿಕೆ ಆವರಣಕ್ಕೆ ಶನಿವಾರ ಜನಸಾಗರವೇ ಹರಿದುಬಂದಿತ್ತು. ಇದೇ ಮೊದಲ ಬಾರಿಗೆ ಕೃಷಿ ಮೇಳವು ದಾಖಲೆ ಬರೆಯಿತು.

ಶನಿವಾರ 7.16 ಲಕ್ಷ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೃಷಿ ಮೇಳ ವೀಕ್ಷಿಸಿದರು. ಕೃಷಿ ಮೇಳದ ಇತಿಹಾಸದಲ್ಲಿ ಇಷ್ಟು ಸಂಖ್ಯೆಯ ರೈತರು ಒಂದೇ ದಿನ ಭಾಗವಹಿಸಿದ್ದು ಇದೇ ಮೊದಲು ಎಂದು ವಿವಿ ತಿಳಿಸಿದೆ.

12,500 ಜನರು ಕೃಷಿ ವಿಶ್ವವಿದ್ಯಾಲಯದ ರಿಯಾಯಿತಿ ದರದಲ್ಲಿ ಊಟ ಸವಿದರು. ಮೇಳದಲ್ಲಿ ₹ 2.85 ಕೋಟಿಯ ವಹಿವಾಟು ನಡೆದಿದೆ. 684 ರೈತರು ಸಲಹಾ ಕೇಂದ್ರದಿಂದ ಮಾಹಿತಿಯನ್ನು ಪಡೆದುಕೊಂಡರು ಎಂದು ಮಾಹಿತಿ ನೀಡಿದ್ದಾರೆ.

ಮಸೀದಿ ದರ್ಶನ: ಭಾವೈಕ್ಯದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಹಾರ್ದ, ಸಾಮರಸ್ಯ, ಸಹಬಾಳ್ವೆಯನ್ನು ಗಟ್ಟಿಗೊಳಿಸಲು ಹಾಗೂ ಪರಸ್ಪರ ಅರಿತುಕೊಳ್ಳುವ ಮೂಲಕ ಅಪನಂಬಿಕೆ, ಪೂರ್ವಾಗ್ರಹಗಳನ್ನು ದೂರ ಮಾಡುವ ಪ್ರಯತ್ನವನ್ನು ಇಲ್ಲಿನ ಮಸಜೀದ್–ಎ–ಖಾದ್ರಿಯಾ ಕೈಗೊಂಡಿದೆ.

'ಮಸೀದಿ ದರ್ಶನ, ಮಸೀದಿಯ ಒಳಗೊಂದು ಸುತ್ತು' ಎಂಬ ಕಾರ್ಯಕ್ರಮದಲ್ಲಿ ಇಸ್ಲಾಂ ಧರ್ಮದ ಉಗಮ, ಪ್ರವಾದಿ ಮಹಮ್ಮದ್ ಅವರ ಜೀವನ ದರ್ಶನ ಸೇರಿ ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟ ವಸ್ತು ಪ್ರದರ್ಶನ, ನಮಾಜ್ ಮಾಡುವ ವಿಧಿ–ವಿಧಾನಗಳ ವೀಕ್ಷಣೆ ಮತ್ತು ಪ್ರಶ್ನೋತ್ತರ–ಸಂವಾದ ಕಾರ್ಯಕ್ರಮದಲ್ಲಿ ಎಲ್ಲ ಧರ್ಮೀಯರು ಪಾಲ್ಗೊಂಡಿದ್ದರು. ಇದು ಭಾವೈಕ್ಯಕ್ಕೆ ಸಾಕ್ಷಿಯಾಯಿತು.

ಬೆನ್ಸನ್ ಟೌನ್‌ನ ಮಿಲ್ಲರ್ ರಸ್ತೆಯಲ್ಲಿರುವ ಮಸೀದಿಯು ಮುಸ್ಲಿಮೇತರರಿಗೂ ಬಾಗಿಲು ತೆರೆದಿಡುವ ಮೂಲಕ ಮಸೀದಿಯೊಳಗೆ ಏನಿದೆ, ಆಜಾನ್ ಏಕೆ, ನಮಾಜ್ ಏಕೆ ಎನ್ನುವ ನೂರಾರು ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಹಲವು ಅನುಮಾನಗಳನ್ನು ಪರಿಹರಿಸಿದೆ.

ಶನಿವಾರ ಆಯೋಜಿಸಿದ್ದ 'ಮಸೀದಿ ದರ್ಶನ' ಕಾರ್ಯಕ್ರಮದಲ್ಲಿ ಮಹಿಳೆಯರೂ ಸೇರಿ 500ಕ್ಕೂ ಹೆಚ್ಚು ಮುಸ್ಲಿಮೇತರರು ಭಾಗವಹಿಸಿದ್ದರು. ನಮಾಜ್ ಮಾಡುವ ಜಾಗವನ್ನೂ ಒಳಗೊಂಡಂತೆ ಮಸೀದಿಯ ಪೂರ್ಣ ಆವರಣದಲ್ಲಿ ಸುತ್ತಾಡಿ, ಹಲವು ವಿಷಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಮಹಿಳೆಯರು ಸಹ ಮಸೀದಿಯಲ್ಲಿ ನಮಾಜ್ ಮಾಡಿದರು.

'ಭಾರತ ವಿವಿಧ ಧರ್ಮ, ಸಂಸ್ಕೃತಿ, ಪಂಥಗಳ ದೇಶ. ಇಲ್ಲಿ ಎಲ್ಲ ಧರ್ಮೀಯರು ಪರಸ್ಪರ ಅರಿತುಕೊಂಡು ಜೀವನ ನಡೆಸುತ್ತಿದ್ದಾರೆ. ಆದರೆ ಕ್ಷುಲ್ಲಕ ವಿಚಾರಗಳಿಂದ ನಮ್ಮಲ್ಲಿ ಅಪನಂಬಿಕೆ, ತಪ್ಪು ಕಲ್ಪನೆಗಳು ಉಂಟಾಗುತ್ತಿವೆ. ವಾಸ್ತವದಲ್ಲಿ ಧರ್ಮಗಳು ಜನರನ್ನು ವಿಭಜಿಸುವುದಿಲ್ಲ, ಎಲ್ಲರನ್ನೂ ಒಗ್ಗೂಡಿಸುತ್ತವೆ' ಎಂದು ಕಮಿಟಿಯ ಸದಸ್ಯ ಮಹಮ್ಮದ ನವಾಜ್ ತಿಳಿಸಿದರು.

'ಪರಸ್ಪರರನ್ನು ಅರಿಯುವ ಮೂಲಕ ಮನಸ್ಸುಗಳನ್ನು ಬೆಸೆಯುವುದೇ ಇದರ ಮುಖ್ಯ ಉದ್ದೇಶ. ಎಲ್ಲ ಮಸೀದಿಗಳನ್ನು ನೋಡುವುದರ ಮೂಲಕ ಜನರಲ್ಲಿರುವ ತಪ್ಪು ಕಲ್ಪನೆಗಳನ್ನು ದೂರ ಮಾಡುವುದು, ಸೌಹಾರ್ದಯುತ ಸಮಾಜ ನಿರ್ಮಾಣ ಮಾಡುವುದರಲ್ಲಿ ಇದು ನಮ್ಮ ಪ್ರಥಮ ಹೆಜ್ಜೆ' ಎಂದು ಮಸೀದಿಯ ಕಾರ್ಯದರ್ಶಿ ಉಸ್ಮಾನ್ ಶರೀಫ್ ಹೇಳಿದರು.

'ಹಿಂದೂಗಳನ್ನು ಮಸೀದಿಗೆ ಏಕೆ ಕರೆಯಬೇಕು ಎನ್ನುವ ಅಭಿಪ್ರಾಯಗಳನ್ನು ನಮ್ಮಲ್ಲೂ ಹಲವರು ವ್ಯಕ್ತಪಡಿಸಿದ್ದಾರೆ. ಅಂತಹವರಿಗೂ ನಾವು ಮನದಟ್ಟು ಮಾಡುತ್ತಿದ್ದೇವೆ. ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ನೋಡಲಿ' ಎಂದರು.

'ಎಲ್ಲಾ ಮಸೀದಿಗಳಲ್ಲಿ ಮಹಿಳೆಯರಿಗೂ ಪ್ರವೇಶ ಇದೆ. ಶುಕ್ರವಾರದ ಪ್ರವಚನಕ್ಕೆ ಹೋಗುತ್ತಿದ್ದಾರೆ. ಮಸೀದಿಯೊಳಗೆ ಹೆಣ್ಣುಮಕ್ಕಳು ಬರಲೇಬಾರದು ಎಂಬುದಿಲ್ಲ. ಇಲ್ಲಿ ಎಲ್ಲಾ ಧರ್ಮೀಯರಿಗೆ ಪ್ರವೇಶವಿದೆ' ಎಂದು ಬೆನ್ಸನ್ ಟೌನ್ ನಿವಾಸಿ ತಸ್ಲೀಮಾ ಹೇಳಿದರು.

'ಮಸೀದಿ ದರ್ಶನವೆಂಬುದು ಒಳ್ಳೆಯ ಕಾರ್ಯಕ್ರಮ. ಇಲ್ಲಿ ಶಾಂತಿ, ನೆಮ್ಮದಿ ದೊರೆಯಿತು. ತಪ್ಪು ಕಲ್ಪನೆಗಳು ದೂರವಾಗಿವೆ' ' ಎಂದು ಬೆನ್ಸನ್ ಟೌನ್ ನಿವಾಸಿ ತುಶಿತಾ ಪಟೇಲ್ ಹೇಳಿದರು.



ಮಸಜೀದ್–ಎ–ಖಾದ್ರಿಯಾ ಶನಿವಾರ ಆಯೋಜಿಸಿದ್ದ ಮಸೀದಿ ದರ್ಶನ ಕಾರ್ಯಕ್ರಮದಲ್ಲಿ ವ್ಯಾಟಿಕನ್ ಸಿಟಿಯ ಕಾರ್ಡಿನಲ್ ಮಾರಿಯೋ ಗ್ರೇಚ್ ಇದ್ದರು —ಪ್ರಜಾವಾಣಿ ಚಿತ್ರಗಳು/ಕಿಶೋರ್ ಕುಮಾರ್ ಬೋಳಾರ್

'ಶಾಂತಿ ನೆಲೆಸಲು ಎಲ್ಲರೂ ಒಂದುಗೂಡಿ'

'ಜಗತ್ತಿನಲ್ಲಿ ಶಾಂತಿ ನೆಲೆಸಲು ಎಲ್ಲರೂ ಒಂದುಗೂಡಿ ಸಾಮರಸ್ಯ–ಏಕತೆಯಿಂದ ಕೆಲಸ ಮಾಡಬೇಕಿದೆ. ಎಲ್ಲ ಧರ್ಮಗಳ ಮೂಲತತ್ವ ಪ್ರೀತಿ. ಎಲ್ಲಿ ಪ್ರೀತಿ ಇದೆಯೊ ಅಲ್ಲಿ ದೇವರಿದ್ದಾನೆ. ಕುರಾನ್, ಬೈಬಲ್ ಮತ್ತು ಭಗವದ್ಗೀತೆಗಳಲ್ಲಿರುವ ಮೌಲ್ಯಗಳನ್ನು ಮುಂದಿನ ಜನಾಂಗಕ್ಕೆ ಕಲಿಸಬೇಕು' ಎಂದು ವ್ಯಾಟಿಕನ್ ಸಿಟಿಯ ಕಾರ್ಡಿನಲ್ ಮಾರಿಯೋ ಗ್ರೇಚ್ ಅಭಿಪ್ರಾಯ ವ್ಯಕ್ತಪಡಿಸಿದರು.

'ಜಗತ್ತಿನಲ್ಲಿ ಎಲ್ಲ ಧರ್ಮಗಳು ಶಾಂತಿ, ಸೌಹಾರ್ದ ಬಯಸುತ್ತವೆ. ದೇವರೊಬ್ಬ ನಾಮ ಹಲವು ('ಸಬ್ ಕಾ ಮಾಲೀಕ್ ಏಕ್ ಹೈ') ಎಂಬುದನ್ನು ಮುಂದಿನ ಜನಾಂಗ ಅರ್ಥ ಮಾಡಿಕೊಳ್ಳಬೇಕು' ಎಂದು ಆರ್ಚ್ ಬಿಷಪ್ ಪಿಟರ್ ಮಚಾಡೋ ತಿಳಿಸಿದರು.

ವೃದ್ಧೆ ಮನೆಯಲ್ಲಿ ಸುಲಿಗೆ: ಉಪನ್ಯಾಸಕನ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವೃದ್ಧೆ ಮನೆಗೆ ನುಗ್ಗಿ ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪದಡಿ ಸಂತೋಷ್ ಪಾಟೀಲ (35) ಎಂಬುವವರನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

'ದಾವಣಗೆರೆಯ ಸಂತೋಷ್, ಹಲವು ವರ್ಷಗಳಿಂದ ನಗರದಲ್ಲಿ ನೆಲೆಸಿದ್ದರು. ಹೆಬ್ಬಾಳ ಬಳಿಯ ಎಂಬಿಎ ಕಾಲೇಜೊಂದರಲ್ಲಿ ಸಹಾಯಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಶಿಕ್ಷಣ ಸಂಸ್ಥೆಯ ಹಣ ದುರ್ಬಳಕೆ ಮಾಡಿಕೊಂಡು ದುರ್ನಡತೆ ತೋರಿದ್ದ ಆರೋಪದಡಿ ಅವರನ್ನು ಕೆಲಸದಿಂದ ವಜಾ ಮಾಡಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗಂಟೆವಾರು ಸಂಬಳ ಪಡೆದು ಕೆಲ ಕಾಲೇಜುಗಳಲ್ಲಿ ಸಂತೋಷ್ ಪಾಠ ಮಾಡಲಾರಂಭಿಸಿದ್ದರು. ಇದರ ಜೊತೆಗೇ ಕ್ರಿಕೆಟ್ ಬೆಟ್ಟಿಂಗ್ ಆಡುತ್ತಿದ್ದರು. ಬೆಟ್ಟಿಂಗ್‌ನಿಂದಾಗಿ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದರು. ಜೊತೆಗೆ ಹಲವರ ಬಳಿ ಸಾಲವನ್ನೂ ಮಾಡಿದ್ದರು' ಎಂದು ತಿಳಿಸಿವೆ.

'ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಸಂತೋಷ್, ಕಳ್ಳತನ ಹಾಗೂ ಸುಲಿಗೆಗೆ ಇಳಿದಿದ್ದರು. ಸಂಜಯನಗರದಲ್ಲಿರುವ ವೃದ್ಧೆಯೊಬ್ಬರ ಮನೆಗೆ ಅ. 31ರಂದು ಹೆಲ್ಮೆಟ್ ಧರಿಸಿ ಆರೋಪಿ ನುಗ್ಗಿದ್ದ. ಚಾಕುವಿನಿಂದ ವೃದ್ಧೆಯ ಮುಖ ಹಾಗೂ ಕೈಗೆ ಇರಿದು ಚಿನ್ನಾಭರಣ ಕಸಿದುಕೊಂಡು ಪರಾರಿಯಾಗಿದ್ದ.'

'ಸುಲಿಗೆ ಬಗ್ಗೆ ವೃದ್ಧೆ ದೂರು ನೀಡಿದ್ದರು. ಮನೆ ಸುತ್ತಮುತ್ತಲಿನ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ₹ 2.50 ಲಕ್ಷ ಮೌಲ್ಯದ 43 ಗ್ರಾಂ ಚಿನ್ನಾಭರಣ ಹಾಗೂ ಚಾಕು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಜೈಲಿಗೂ ಹೋಗಿ ಬಂದಿದ್ದ ಆರೋಪಿ: 'ಬಂಧಿತ ಸಂತೋಷ್, ಕೆಲಸ ಮಾಡುತ್ತಿದ್ದ ಶಿಕ್ಷಣ ಸಂಸ್ಥೆಯ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದ. ಈ ಪ್ರಕರಣದಲ್ಲಿ ಈತನನ್ನು ಬಂಧಿಸಿದ್ದ ಪೊಲೀಸರು ಜೈಲಿಗೆ ಕಳುಹಿಸಿದ್ದರು. ಜಾಮೀನು ಪಡೆದು ಹೊರಗೆ ಬಂದಿದ್ದ ಆರೋಪಿ, ಸಾಲ ಮರುಪಾವತಿಸಲು ಅಗತ್ಯವಾದ ಹಣಕ್ಕಾಗಿ ಅಪರಾಧ ಕೃತ್ಯಗಳನ್ನು ಮುಂದುವರಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜಾಲಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಕದ್ದಿದ್ದ ಆರೋಪಿ, ಅದೇ ಬೈಕ್‌ನಲ್ಲಿ ವೃದ್ಧೆ ಮನೆಗೆ ಹೋಗಿ ಸುಲಿಗೆ ಮಾಡಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ನಗರದಲ್ಲಿ ಇಂದು

ಕಾರ್ತಿಕ ಸಂಗೀತೋತ್ಸವದ ಉದ್ಘಾಟನೆ: ಬಿ.ಕೆ.ಅನಂತರಾಮ್, ಗಾಯನ: ನಾಗಚೇತನ, ಪಿಟೀಲು: ಎಂ.ಡಿ. ಅರ್ಜುನ್, ಮೃದಂಗ: ಬಿ.ಆರ್. ಶ್ರೀನಿವಾಸ್, ಮೋರ್ಸಿಂಗ್: ಎ.ಶ್ರೀನಿವಾಸ, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ವಂಶಿಕಾ ಸದನ, ಆದರ್ಶನಗರ, ಅರಶಿನಕುಂಟೆ, ಬೆಳಿಗ್ಗೆ 9

ರಾಜ್ಯ ಮಟ್ಟದ ದೀಪಾವಳಿ ಉತ್ಸವ, ಬಂಜಾರ ಸಾಂಸ್ಕೃತಿಕ ಮೇರಾ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ: ಅತಿಥಿಗಳು: ಎ.ಆರ್. ಗೋವಿಂದಸ್ವಾಮಿ, ದೇನಾ ನಾಯ್ಕ್, ಎ.ಆರ್.ಹನುಮಂತ ನಾಯ್ಕ್, ಆಯೋಜನೆ: ಬಂಜಾರ (ಲಂಬಾಣಿ) ಜನ ಸೇವಾ ಸಂಘ, ಸ್ಥಳ: ಬಂಜಾರ ಭವನ, ವಸಂತನಗರ, ಬೆಳಿಗ್ಗೆ 9.30

ದಯಾ ಗಂಗನಘಟ್ಟ ಅವರ 'ಉಪ್ಪುಚ್ಚಿ ಮುಳ್ಳು' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಎಂ.ಎಸ್.ಆಶಾದೇವಿ, ಕೃತಿ ಬಿಡುಗಡೆ: ಹಾಡ್ಲಹಳ್ಳಿ ನಾಗರಾಜ್, ಕಥಾ ಸ್ಪಂದನೆ: ಕೇಶವ ಮಳಗಿ, ಬೇಲೂರು ರಘುನಂದನ್, ಉಪಸ್ಥಿತಿ: ದಾಕ್ಷಾಯಿಣಿ ಗಂಗನಘಟ್ಟ, ಚಲಂ ಹಾಡ್ಲಹಳ್ಳಿ, ಆಯೋಜನೆ: ಹಾಡ್ಲಹಳ್ಳಿ ಪ್ರಕಾಶನ, ಸ್ಥಳ: ಚಿತ್ರಕಲಾ ಪರಿಷತ್ ಆವರಣ, ಬೆಳಿಗ್ಗೆ 10

ಎಂ.ಎ.ಜಯರಾಮ್ ರಾವ್ ಅವರ ಗದಾಯುದ್ಧಂ ಕೃತಿ ಬಿಡುಗಡೆ: ಅರಳು ಮಲ್ಲಿಗೆ ಪಾರ್ಥಸಾರಥಿ, ಕೃತಿ ಪರಿಚಯ: ಎನ್.ಎಸ್.ಕೃಷ್ಣಮೂರ್ತಿ, ಅತಿಥಿಗಳು: ಎ.ವಿ.ಪ್ರಸನ್ನ, ಎಂ.ಎ.ಜಯರಾಮ್ ರಾವ್, ಡಿ.ಎಸ್.ಶ್ರೀನಿವಾಸ್, ಪ್ರಾಸ್ತಾವಿಕ: ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಕನ್ನಡ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ ಮನು ಬಳಿಗಾರ್, ಪ್ರಾಸ್ತಾವಿಕ: ರಫಾಯಲ್ ರಾಜ್, ಅಧ್ಯಕ್ಷತೆ: ವಿಜಯಕುಮಾರ್, ಅತಿಥಿಗಳು: ಎ.ತೋಮಾಸ್, ರಿಚರ್ಡ್ ಕಡಿವಾಲ, ಆಯೋಜನೆ: ಅಖಿಲ ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ: ಸಂತ ಅಂತೋಣಿ ದೇವಾಲಯ, ಗಂಗೊಂಡನಹಳ್ಳಿ, ನಾಯಂಡನಹಳ್ಳಿ, ಬೆಳಿಗ್ಗೆ 10.15

ಕನ್ನಡ ರಾಜ್ಯೋತ್ಸವ ಸಂಭ್ರಮ: ಅತಿಥಿಗಳು: ಜಿ.ವೈ.ಪದ್ಮ ನಾಗರಾಜ್, ನಾಗರತ್ನ, ಉಪಸ್ಥಿತಿ: ಎಚ್.ಎಸ್.ಮಂಡ್ಯ ಬಾಲಸುಬ್ರಹ್ಮಣ್ಯಂ, ಕೆ.ವಿ.ಲಕ್ಷ್ಮಣಮೂರ್ತಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30



ಊರ್ಮಿಕಾ ನೃತ್ಯೋತ್ಸವ

ಊರ್ಮಿಕಾ ಶಾಸ್ತ್ರೀಯ ನೃತ್ಯೋತ್ಸವ: ಅತಿಥಿಗಳು: ಶುಭಾ ಧನಂಜಯ್, ಮಾಯಾ ಧನಂಜಯ್, ಭರತನಾಟ್ಯ: ನೃತ್ಯ ಕಾರ್ತಿಕ್, ಒಡಿಸ್ಸಿ: ಧಾತ್ರಿ ಎಚ್., ಕೂಚಿಪುಡಿ: ಐಶ್ವರ್ಯ ಪಿ.ಬಿ., ಸಮೂಹ ನೃತ್ಯ: ಧರಣಿ ಟಿ. ಕಶ್ಯಪ್ ಮತ್ತು ಶಿಷ್ಯರು, ಆಯೋಜನೆ: ಊರ್ಮಿಕಾ, ಸ್ಥಳ: ನಯನ ರಂಗಮಂದಿರ, ಸಂಜೆ 6.10

ಡಾ.ಬಿ.ಆರ್ ಅಂಬೇಡ್ಕರ್ ಭವನದ ಉದ್ಘಾಟನಾ ಸಮಾರಂಭ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಕೋಟಾ ಶ್ರೀನಿವಾಸ ಪೂಜಾರಿ, ಅಧ್ಯಕ್ಷತೆ: ಆರ್. ಮಂಜುನಾಥ್, ಸ್ಥಳ: ಕಾನ್ಶಿರಾಮ್‌ನಗರ, ಬೆಳಿಗ್ಗೆ 11

ವಿಸ್ತಾರ ನ್ಯೂಸ್ ಚಾನೆಲ್ ಅನಾವರಣ, ಕಾಯಕಯೋಗಿ ಪುರಸ್ಕಾರ ಸಮಾರಂಭ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ, ಸುಬುಧೇಂದ್ರ ತೀರ್ಥ ಸ್ವಾಮೀಜಿ, ಅತಿಥಿಗಳು: ಎಚ್. ಡಿ.ದೇವೇಗೌಡ, ಎಸ್.ಎಂ.ಕೃಷ್ಣ, ಬಿ.ಎಸ್. ಯಡಿಯೂರಪ್ಪ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ ಮತ್ತು ಸ್ಥಳ: ವಿಸ್ತಾರ ಮೀಡಿಯಾ, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11.30

ಪೌರಕಾರ್ಮಿಕರ ರಾಜ್ಯ ಮಟ್ಟದ ಹಕ್ಕೊತ್ತಾಯ ಸಮಾವೇಶ: ಆಯೋಜನೆ: ಎಐಟಿಯುಸಿ, ಸ್ಥಳ: ಡಾ ಅಂಬೇಡ್ಕರ್ ಭವನ, ವಸಂತನಗರ, ಮಧ್ಯಾಹ್ನ 12.30

ಕಾರ್ಮಿಕರ ಸಮಾವೇಶ–2022 ಮತ್ತು ಯು.ಕೆ ಜನಸೇವಾ ಸಂಘದ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಅರಬೈಲ್ ಶಿವರಾಮ್ ಹೆಬ್ಬಾರ್, ಅಧ್ಯಕ್ಷತೆ: ಎಸ್.ಸುರೇಶ್ ಕುಮಾರ್, ಅತಿಥಿಗಳು: ಅಕ್ರಮ್ ಪಾಷ, ಗುರು ಪ್ರಸಾದ, ಆಯೋಜನೆ: ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾರ್ಮಿಕರ ಟ್ರೇಡ್ ಯೂನಿಯನ್, ಸ್ಥಳ: ಸಿದ್ಧಗಂಗಾ ಕಲ್ಯಾಣ ಮಂಟಪ, ಶಿವನಗರ, ರಾಜಾಜಿನಗರ, ಪುಷ್ಪಾಂಜಲಿ ಟಾಕೀಸ್ ಹತ್ತಿರ, ಮಧ್ಯಾಹ್ನ 3

ವಚನ ನಿನಾದ: ವಚನ ವ್ಯಾಖ್ಯಾನ: ಎಸ್.ಪಿನಾಕಪಾಣಿ, ವಚನ ಗಾಯನ: ಮೀನಾಕ್ಷಿ ಮೇಟಿ, ಟಿ.ಎಂ.ಜಾನಕಿ, ದಿಶಾ ಉಮೇಶ್, ಸುರಭಿ ಹಣ್ಣೆ, ಶ್ರಾವಣಿ ಹಣ್ಣೆ, ಸಾತ್ವಿಕ್ ಬಾಚಲಾಪುರ್, ಸಮೂಹ ಗಾಯನ: ವಚನ ಕಲಿಕಾ ವಿದ್ಯಾರ್ಥಿಗಳು, ಕಲ್ಯಾಣ ಮಂಟಪ, ಅಧ್ಯಕ್ಷತೆ: ಸುಧೀಂದ್ರಕುಮಾರ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಗಾಯತ್ರಿ ಮಂದಿರ, ಬ್ರಾಹ್ಮಣ ಸಭಾ, ಕೆಂಗೇರಿ ಉಪನಗರ, ಸಂಜೆ 6

ಕೆ.ಕೆ. ಮೂರ್ತಿ ಅವರ ಸ್ಮಾರಕ ಸಂಗೀತೋತ್ಸವ: ಸಂಗೀತ ನಮನ: ಹಾರ್ಮೋನಿಯಂ: ರವೀಂದ್ರ ಗುರುರಾಜ್ ಕಟೋಟಿ, ತಬಲಾ: ರವೀಂದ್ರ ಯಾವಗಲ್, ತೇಜಸ್ ಕಟೊಟಿ, ಗಾಯನ: ವಿನಾಯಕ್ ತುರವಿ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಸಂಜೆ 6.30

ಶಾ ಬಾಲುರಾವ್ ಅವರ 'ಬೆಕ್ಕು ಬಾವಿ' ನಾಟಕ ಪ್ರದರ್ಶನ: ನಿರ್ದೇಶನ: ಆಕಾಶ್ ನಾಗ್, ಗಿರೀಶ್ ಅಲಾಜೆ, ಆಯೋಜನೆ: ದಾಟು ಥಿಯೇಟರ್, ಸ್ಥಳ: ಕೆ.ಎಚ್.ಕಲಾಸೌಧ ಹನುಮಂತನಗರ, ಬಸವನಗುಡಿ, ಸಂಜೆ 7



ಗೆಜ್ಜೆನಾದ ನೃತ್ಯ ತಂಡ

ಗೆಜ್ಜೆನಾದ ವಾರ್ಷಿಕ ನೃತ್ಯ ಸಮಾರಂಭ: ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಮುಕ್ತಾ ಬಿ ಕಾಗಲಿ, ಆಯೋಜನೆ: ಶಾಂಭವಿ ಸ್ಕೂಲ್ ಆಫ್ ಡ್ಯಾನ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4.30

ಟೆಂಡರ್, ಗುತ್ತಿಗೆ ಕರಾರಿನಲ್ಲಿರುವ ಐಆರ್‌ಸಿ ನಿಯಮಗಳು ಅನುಷ್ಠಾನಗೊಳ್ಳುತ್ತಿಲ್ಲ: ದೂರು

ಮಾನದಂಡಗಳ ಉಲ್ಲಂಘನೆ: ರಸ್ತೆಗಳ ದುಃಸ್ಥಿತಿ

• ಆರ್. ಮಂಜುನಾಥ್

ಬೆಂಗಳೂರು: ರಸ್ತೆ ನಿರ್ಮಾಣ, ಅಭಿವೃದ್ಧಿ ಸಂದರ್ಭದಲ್ಲಿ ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಮಾನದಂಡಗಳನ್ನು ಉಲ್ಲಂಘಿಸಿರುವುದರಿಂದ ಹತ್ತಾರು ವರ್ಷ ಸದೃಢವಾಗಿರಬೇಕಾದ ರಸ್ತೆಗಳು ಒಂದು ಮಳೆಗೇ ಹಾಳಾಗುತ್ತಿವೆ. ನಗರದ ರಸ್ತೆಗಳ ಇಂದಿನ ದುಃಸ್ಥಿತಿಗೆ ಅನುಷ್ಠಾನದಲ್ಲಿನ ಲೋಪವೇ ಕಾರಣವಾಗಿದೆ.



ರಸ್ತೆಗುಂಡಿಯಿಂದ ತುಂಬಿರುವ ರಸ್ತೆ (ಸಾಂದರ್ಭಿಕ ಚಿತ್ರ)

ಪ್ರಜಾವಾಣಿ ವಿಶೇಷ

ಐಆರ್‌ಸಿ ನಿಯಮಗಳಂತೆಯೇ ರಸ್ತೆ ನಿರ್ಮಾಣ ಮಾಡಬೇಕು ಎಂದು ಟೆಂಡರ್‌ನಲ್ಲಿ ನಮೂದಿಸಲಾಗಿರುತ್ತದೆ. ಅದರಂತೆ ನಿರ್ಮಾಣ ಮಾಡಲಾಗಿದೆ ಎಂದೂ ಪ್ರಮಾಣಿಸಲಾಗಿರುತ್ತದೆ. ಆದರೆ ವಾಸ್ತವದಲ್ಲಿ ಅಂತಿಮ ಹಾಗೂ ಅತ್ಯಂತ ಪ್ರಮುಖ ಘಟ್ಟದಲ್ಲಿ ಮಾರ್ಗಸೂಚಿ ಪಾಲನೆ ಆಗಿರುವುದಿಲ್ಲ. ಇದಕ್ಕೆ ಕಾಮಗಾರಿಯ ಉಸ್ತುವಾರಿ ವಹಿಸಿಕೊಂಡಿರುವ ಸಂಸ್ಥೆ ಹಾಗೂ ಮೇಲ್ವಿಚಾರಣೆ ಮಾಡಬೇಕಾದ ಎಂಜಿನಿಯರ್‌ಗಳೇ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ವರ್ಷ ಒಂದು ಸಾವಿರಕ್ಕೂ ಹೆಚ್ಚು ಕೋಟಿ ಹಣ ರಸ್ತೆಗಳಿಗೆ ವೆಚ್ಚವಾಗುತ್ತಿದೆ. ಐದರಿಂದ ಹತ್ತು ವರ್ಷ ಸದೃಢವಾಗಬೇಕಿರುವ ರಸ್ತೆಗಳು ಒಂದು ಮಳೆಗೇ ಹದಗೆಡುತ್ತಿವೆ. ಇದಕ್ಕೆ ಕಾರಣ ಮಾನದಂಡ ಪಾಲಿಸದಿರುವುದು.

'ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಗ್ರೇಡ್ 80/100 ಬಿಟಮಿನ್ ಬಳಸಬೇಕು. ತಂಪು ವಾತಾವರಣದಲ್ಲಿ ಗ್ರೇಡ್ 30/40 ಬಿಟಮಿನ್ ಬಳಸಬೇಕು. ಇವೆಲ್ಲವೂ ಎಲ್ಲರಿಗೂ ಗೊತ್ತಿದೆ. ಎಲ್ಲವನ್ನೂ ದಾಖಲೆಗಳಲ್ಲಿ ದಾಖಲಿಸಿರುತ್ತಾರೆ. ಆದರೆ, ಅದು ಅನುಷ್ಠಾನವಾಗುವ ಸಂದರ್ಭದಲ್ಲಿ ವಿಫಲವಾಗುತ್ತಿದೆ. ಹಲವು ಪದರಗಳಲ್ಲಿರಬೇಕಾದ ನಿರ್ದಿಷ್ಟ ಮಿಶ್ರಣವನ್ನು ಬಳಸುತ್ತಿಲ್ಲ. ಉಷ್ಣಾಂಶವನ್ನು ಕಾಪಾಡಿಕೊಳ್ಳುತ್ತಿಲ್ಲ. ಹಾಕಬೇಕಾದ ಅಂಟಿನ ಮಿಶ್ರಣ ಸರಿಯಾಗಿ ಬಳಸುತ್ತಿಲ್ಲ. ರಾತ್ರಿ ವೇಳೆ ನಡೆಯುವ ಡಾಂಬರು ಕಾಮಗಾರಿಯಲ್ಲಿ ಕೆಲಸಗಾರರು ಮಾಡಿದ ಮಿಶ್ರಣವನ್ನು ಯಾರೂ ಪರೀಕ್ಷಿಲ್ಲದಿರುವುದೇ ಈ ಎಲ್ಲ ಅವಾಂತರಗಳಿಗೆ ಕಾರಣ' ಎಂದು ತಾಂತ್ರಿಕ ತಜ್ಞ ಶ್ರೀಹರಿ ವಿವರ ನೀಡಿದರು.

'ರಸ್ತೆ ಗುಂಡಿ ಮುಚ್ಚುವ ಸಂದರ್ಭದಲ್ಲಿ ಗುಂಡಿಗಿಂತ ಹೆಚ್ಚಿನ ಜಾಗವನ್ನು ತೆಗೆಯಬೇಕು. ಮೊದಲು ಟ್ಯಾಕ್ ಕೋಟ್ ಹಾಕಬೇಕು. ಇದು ಹಳೆ ಹಾಗೂ ಹೊಸ ಮಿಶ್ರಣವನ್ನು ಹಿಡಿದಿಟ್ಟುಕೊಳ್ಳುವ ಸಾಧನ. ಇದಾದ ಮೇಲೆ ಎರಡು ಪದರ ಬಿಟಮಿನ್ ಹಾಕಿ, ಚೆನ್ನಾಗಿ ರೋಲ್ ಮಾಡಬೇಕು. ನಂತರ 3ನೇ ಪದರವಾಗಿ ಸೀಲ್ ಕೋಟ್ ಹಾಕಬೇಕು. ಇಷ್ಟೆಲ್ಲ ಮಾಡಿ ಗುಂಡಿ ಮುಚ್ಚಿದರೆ ಮೂರು ವರ್ಷ ಅದು ಬಾಳಿಕೆ ಬರುತ್ತದೆ. ಆದರೆ, ತುರ್ತಾಗಿ ನಡೆಯುವ ಗುಂಡಿ ಮುಚ್ಚುವ ಕಾರ್ಯದಲ್ಲಿ ಇದನ್ನು ಅನುಸರಿಸುವುದಿಲ್ಲ' ಎಂದು ಮಾಹಿತಿ ನೀಡಿದರು.

'ರಸ್ತೆ ಗುಂಡಿ ಮುಚ್ಚುವುದು ರಾಕೆಟ್ ಸೈನ್ಸ್ ಅಲ್ಲ. ಮಾನದಂಡಗಳನ್ನು ಪಾಲಿಸಿದರೆ ಸಾಕು' ಎಂದರು.

ನೀರು ನಿಲ್ಲಬಾರದು: 'ರಸ್ತೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಹಣ ನೀಡುತ್ತದೆ. ಬದಿ ಚರಂಡಿ, ಶೋಲ್ಡರ್ ಡ್ರೈನ್, ವಿಭಜಕಗಳನ್ನು ಸರಿಪಡಿಸಿ ಡಾಂಬರು ಹಾಕಬೇಕು. ಆದರೆ ಇವರು ರಸ್ತೆ ಅಭಿವೃದ್ಧಿ ಎಂದರೆ ಡಾಂಬರು ಮಾತ್ರ ಹಾಕಿ ಮುಗಿಸುತ್ತಿದ್ದಾರೆ. ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಮಧ್ಯದಲ್ಲಿ ಎಲ್ಲೂ ನೀರು ನಿಲ್ಲದಬಾರದು. ಅದರಂತೆಯೇ ವಿನ್ಯಾಸ ಮಾಡಬೇಕು. ಇದನ್ನು ಮಾಡದೆ ವಿಭಜಕಗಳಲ್ಲಿ ಮಳೆನೀರು ನಿಲ್ಲುತ್ತದೆ. ಇದರಿಂದ ರಸ್ತೆ ಹಾಳಾಗುತ್ತಿದೆ' ಎಂದು ಬಿಬಿಎಂಪಿಯ ಎಂಜಿನಿಯರ್‌ಗಳೇ ಹೇಳುತ್ತಾರೆ.

ಬಿಟುಮಿನ್ 140 ಡಿಗ್ರಿ ಬಿಸಿ ಇರಬೇಕು!

ರಸ್ತೆ ನಿರ್ಮಾಣ, ಅಭಿವೃದ್ಧಿ ಹಾಗೂ ಗುಂಡಿಗಳನ್ನು ಮುಚ್ಚುವ ಸಂದರ್ಭದಲ್ಲಿ ಬಳಸಲಾಗುವ ಬಿಟುಮಿನ್ (ಜಲ್ಲಿಕಲ್ಲಿನಂತೆ ಕಪ್ಪುಗಿರುವ ಸಾಮಗ್ರಿ) 140 ಡಿಗ್ರಿಯಿಂದ 165 ಡಿಗ್ರಿ ಉಷ್ಣಾಂಶ ಹೊಂದಿರಬೇಕು. ಆದರೆ, ಘಟಕದಿಂದ ಸ್ಥಳಕ್ಕೆ ಟ್ರಕ್‌ನಲ್ಲಿ ಬರುವ ವೇಳೆಗೆ ಅದರ ಉಷ್ಣಾಂಶ ಕಡಿಮೆಯಾಗಿರುತ್ತದೆ ಇದರಿಂದ ನಿರ್ಮಾಣ ಅಥವಾ ದುರಸ್ತಿ ಕಾರ್ಯ ನಿರೀಕ್ಷಿತ ಗುಣಮಟ್ಟದಲ್ಲಿ ಇರುವುದಿಲ್ಲ.

'ರಸ್ತೆಯಲ್ಲಿ ಬಿಟಮಿನ್ ಬಳಸುವಾಗ 140 ಡಿಗ್ರಿಗೂ ಹೆಚ್ಚಿನ ಉಷ್ಣಾಂಶದಲ್ಲಿ ಇರಬೇಕೆಂಬ ಮಾರ್ಗಸೂಚಿ ಇದೆ. ಆದರೆ, ಇದನ್ನು ವಾಸ್ತವದಲ್ಲಿ ಅನುಸರಿಯುತ್ತಿಲ್ಲ. ಉಷ್ಣಾಂಶವನ್ನು ಅಳೆಯುವ ಮಾಪಕವೇ ಸ್ಥಳದಲ್ಲಿ ಇರುವುದಿಲ್ಲ. ಇದನ್ನು ಮೇಲ್ವಿಚಾರಣೆ ಮಾಡುವ ಎಂಜಿನಿಯರ್ ಸ್ಥಳದಲ್ಲಿ ಇರುವುದೇ ಇಲ್ಲ. ಹೀಗಾಗಿ ಐದಾರು ವರ್ಷ ಸದೃಢವಾಗಿರಬೇಕಾದ ರಸ್ತೆಗಳು ಒಂದೆರಡು ವರ್ಷಕ್ಕೇ ಹಾಳಾಗುತ್ತಿವೆ' ಎಂದು ತಾಂತ್ರಿಕ ತಜ್ಞ ಶ್ರೀಹರಿ ಅವರು ತಿಳಿಸಿದರು.

ಯಾರು ಬೇಕಾದರೂ ಪರಿಶೀಲಿಸಲಿ...

'ನಾವು ರಸ್ತೆಯನ್ನು ನಿರ್ಮಿಸುತ್ತಿಲ್ಲ. ಮೇಲ್ಮೈ ಅನ್ನು ಮಾತ್ರ ಅಭಿವೃದ್ಧಿ ಮಾಡುತ್ತಿದ್ದೇವೆ. ಇದು ಒಂದರಿಂದ ಎರಡು ವರ್ಷ ಮಾತ್ರ ಬಾಳಿಕೆ ಬರುತ್ತದೆ. ನಾವು ಎಲ್ಲ ರೀತಿಯ ಮಾನದಂಡಗಳನ್ನೂ ಅನುಷ್ಠಾನ ಮಾಡಿದ್ದೇವೆ. ನಾವೂ ಎಂಜಿನಿಯರ್‌ಗಳೇ. ಉಷ್ಣಾಂಶ ಎಲ್ಲ ಗೊತ್ತು. ಯಾರು ಬೇಕಾದರೂ ಪರಿಶೀಲಿಸಲಿ. ನಮ್ಮ ಬಳಿ ಕೋಲ್ಡ್ ಮಿಕ್ಸ್ ಇದ್ದರೂ ಹಾಟ್ ಮಿಕ್ಸ್ ತಯಾರಿಸಲು ಸಾಧ್ಯವಿಲ್ಲದ್ದರಿಂದ ಗುಂಡಿ ಮುಚ್ಚಲು ಈ ಮಳೆಗಾಲದಲ್ಲಿ ಸಾಧ್ಯವಾಗುತ್ತಿಲ್ಲ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದರು.

'ಹಲವು ಒತ್ತಡ'ದಿಂದ ಗುಣಮಟ್ಟಕ್ಕೆ ಕಂಟಕ...

'ನಾವು ಎಂಜಿನಿಯರಿಂಗ್ ಓದಿಕೊಂಡೇ ಬಂದಿರುತ್ತೇವೆ. ಐಆರ್‌ಸಿ ಸೇರಿದಂತೆ ಎಲ್ಲ ನಿಯಮ, ಅನುಷ್ಠಾನದ ಮಾನದಂಡಗಳಲ್ಲವೂ ಗೊತ್ತು. ದಾಖಲೆಯಲ್ಲಿ ಎಲ್ಲವನ್ನೂ ನಮೂದಿಸಿಯೇ ಇರುತ್ತೇವೆ. ಆದರೆ, ಇವೆಲ್ಲವನ್ನೂ ಅನುಷ್ಠಾನ ಮಾಡುವ ಹಂತದಲ್ಲಿ 'ಹಲವು ಒತ್ತಡ'ಗಳಿಂದ ನಾವು ಹಿಂದೆ ಸರಿಯಬೇಕಾಗುತ್ತದೆ. ಒಂದು ರಾತ್ರಿಯಲ್ಲಿ ನಾಲ್ಕಾರು ರಸ್ತೆಗೆ ಡಾಂಬರು ಮಾಡುವ 'ಒತ್ತಡ' ಹಾಕಲಾಗುತ್ತದೆ. ನಾವು ಸ್ಥಳದಲ್ಲಿ ಇಲ್ಲದಿದ್ದರೂ, ನಮ್ಮ ಗಮನಕ್ಕೆ ಬಾರದೆಯೂ ಡಾಂಬರು ಹಾಕಲಾಗಿರುತ್ತದೆ. ಗುತ್ತಿಗೆದಾರರೇ ಅಂತಿಮವಾಗುತ್ತಾರೆ. ಮೇಲ್ವಿಚಾರಣೆ, ಪರಿಶೀಲನೆ ಎಲ್ಲವೂ ನಡೆಯುತ್ತದೆ. ಯಾವ ಲೋಪವೂ ಎಲ್ಲಿಯೂ ನಮೂದಾಗುವುದಿಲ್ಲ' ಎಂದು ಬಿಬಿಎಂಪಿಯ ಮಾಜಿ ಹಾಗೂ ಹಾಲಿ ಎಂಜಿನಿಯರ್‌ಗಳು ತಮ್ಮ ಅಳಲು ತೋಡಿಕೊಂಡರು.



ಹೆಣ್ಣೂರು ಜಂಕ್ಷನ್‌ನಲ್ಲಿ ಶನಿವಾರ ರಸ್ತೆ ಗುಂಡಿ ಮುಚ್ಚಲಾಯಿತು

ರಸ್ತೆ ಗುಂಡಿ ಯುದ್ಧೋಪಾದಿ ಕಾಮಗಾರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚುವ ಕೆಲಸಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳುವಂತೆ ಪಾಲಿಕೆ ಆಡಳಿತಾಧಿಕಾರಿ ರಾಕೇಶ್‌ಸಿಂಗ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಧಿಕಾರಿಗಳ ಜತೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, 'ನಾಗರಿಕರೊಂದಿಗೆ ಸಮನ್ವಯ ಸಾಧಿಸಿ ಕೆಲಸ ಮಾಡಬೇಕು. ಪಾಲಿಕೆಯ ಬಗ್ಗೆ ಉತ್ತಮ ಅಭಿಪ್ರಾಯ ಮೂಡಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಸ್ಥಳೀಯವಾಗಿ ಸಮಸ್ಯೆಗಳಿದ್ದರೆ ಬಗೆಹರಿಸಿಕೊಂಡು ಕಾರ್ಯನಿರ್ವಹಿಸಬೇಕು. ಸ್ಥಳೀಯ ಪ್ರತಿನಿಧಿಗಳೊಂದಿಗೂ ಸಮನ್ವಯ ಸಾಧಿಸಿ ರಸ್ತೆ ಗುಂಡಿಗಳನ್ನು ನಿಗದಿತ ಅವಧಿಯೊಳಗೆ ಮುಚ್ಚಬೇಕು' ಎಂದು ತಾಕೀತು ಮಾಡಿದರು.

ಮುಖ್ಯರಸ್ತೆ, ಉಪ ಮುಖ್ಯರಸ್ತೆ ಮತ್ತು ವಾರ್ಡ್ ರಸ್ತೆಗಳನ್ನು ಗುರುತಿಸಿಕೊಂಡು ಯೋಜನೆ ರೂಪಿಸಬೇಕು. ಅದಕ್ಕೆ ಅನುಸಾರವಾಗಿಯೇ ಕೆಲಸ ಮಾಡಬೇಕು. ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ಖುದ್ದು ಪರಿಶೀಲನೆ ನಡೆಸಬೇಕು. ಗುಂಡಿ ಮುಚ್ಚುವ ಕೆಲಸದ ಬಗ್ಗೆ ನಿತ್ಯ ವರದಿ ಪಡೆದುಕೊಳ್ಳಬೇಕು ಎಂದು ಸೂಚನೆ ನೀಡಿದರು.

8 ವಲಯಗಳ ಡಾಂಬರ್ ಮಿಶ್ರಣ ಮಾಡಲು 5 ಏಜೆನ್ಸಿಗಳನ್ನು ನಿಯೋಜನೆ ಮಾಡಲಾಗಿದೆ. ರಾತ್ರಿ ವೇಳೆ ಸಂಚಾರ ದಟ್ಟಣೆ ಕಡಿಮೆ ಇರುವ ಸಂದರ್ಭದಲ್ಲಿ ಹೆಚ್ಚಿನ ತಂಡಗಳನ್ನು ನಿಯೋಜಿಸಿ ಗುಂಡಿ ಮುಚ್ಚಬೇಕು ಎಂದು ತಿಳಿಸಿದರು.

ರಸ್ತೆ ಗುಂಡಿ ಮುಚ್ಚುವ ಜತೆಗೆ ಪಾದಚಾರಿ ಮಾರ್ಗಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಅವಶ್ಯಕತೆಯೂ ಇದೆ. ರಾಜಕಾಲುವೆಗಳ ಅಭಿವೃದ್ಧಿ, ಕಸದ ಸಮಸ್ಯೆ ನಿವಾರಣೆ, ಪಾದಚಾರಿ ಕೆಳಸೇತುವೆ, ಸಾರ್ವಜನಿಕರ ಶೌಚಾಲಯಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಜೈಲಿನಿಂದ ಹೊರಬಂದು ಡ್ರಗ್ಸ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಯೊಬ್ಬರನ್ನು ಸಿಸಿಬಿ ಪೊಲೀಸರು ಶನಿವಾರ ಬಂಧಿಸಿದ್ದು, ₹ 20 ಲಕ್ಷ ಮೌಲ್ಯದ 230 ಗ್ರಾಂ ಎಂಡಿಎಂಎ ಜಪ್ತಿ ಮಾಡಿದ್ದಾರೆ.

ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಆಫ್ರಿಕಾ ಪ್ರಜೆಗಳ ಜೊತೆ ಸೇರಿ ಡ್ರಗ್ಸ್ ಮಾರಲಾರಂಭಿಸಿದ್ದ. ಕೆ.ಜಿ.ಹಳ್ಳಿ ಠಾಣೆ ಪೊಲೀಸರು ಈತನನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಆರೋಪಿ ಪುನಃ ಡ್ರಗ್ಸ್ ಮಾರಲಾರಂಭಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಜಮೇದಾರ್ ಹನಿಟ್ರ್ಯಾಪ್: ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ

ಮಹಿಳೆ ಸೇರಿ 10 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನ್ಯಾಯಾಲಯವೊಂದರ ಜಮೇದಾರ್‌ರೊಬ್ಬರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿ ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರು ಮಹಿಳೆಯರು ಸೇರಿದಂತೆ 10 ಮಂದಿಯನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಗೊಲ್ಲರಹಟ್ಟಿ ಪೈಪ್‌ಲೈನ್ ರಸ್ತೆಯ ಎಂ. ಅನುರಾಧಾ (25), ದೊಡ್ಡಬಿದರಕಲ್ಲು ಶಿವಗಂಗಾ ಲೇಔಟ್‌ನ ಸಿದ್ದೇಶ್ (26), ಕಾಮಾಕ್ಷಿಪಾಳ್ಯ ರಂಗನಾಥಪುರದ ಗುಣ (23), ಇಂದಿರಾನಗರ ನೆಲಗದರನಹಳ್ಳಿಯ ಚೇತನ್ (19), ಗಂಗೋನಹಳ್ಳಿ ಮುಖ್ಯರಸ್ತೆಯ ಎಂ. ರವಿಕುಮಾರ್ (25), ಕಾಮಾಕ್ಷಿಪಾಳ್ಯ ಶ್ರೀರಾಮನಗರ ಪ್ರಶಾಂತ್‌ಕುಮಾರ್ (19), ಎಂ. ಕಾರ್ತಿಕ್‌ಕುಮಾರ್ (22), ಎಸ್. ಉಮಾಶಂಕರ್ (24), ಸೂರ್ಯರಾಜ್ ಅರಸ್ (20) ಹಾಗೂ ಮಲ್ಲತ್ತಹಳ್ಳಿ ಕೆಂಗುಂಟೆ ವೃತ್ತದ ವಿ. ವಿದ್ಯಾ ಅಲಿಯಾಸ್ ಕಾವ್ಯ (35) ಬಂಧಿತರು. ಇವರಿಂದ ₹ 1,500 ನಗದು ಹಾಗೂ ಮೊಬೈಲ್‌ಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ಯಶವಂತಪುರ ನಿವಾಸಿಯಾಗಿರುವ 55 ವರ್ಷದ ದೂರುದಾರ, ನ್ಯಾಯಾಲಯದಲ್ಲಿ ಜಮೇದಾರ್ ಕೆಲಸ ಮಾಡುತ್ತಿದ್ದಾರೆ. ಪ್ರಕರಣವೊಂದರ ವಿಚಾರಣೆಗೆಂದು ಎರಡು ವರ್ಷಗಳ ಹಿಂದೆ ನ್ಯಾಯಾಲಯಕ್ಕೆ ಬಂದಿದ್ದ ಆರೋಪಿ ಅನುರಾಧಾ, ದೂರುದಾರರಿಗೆ ಪರಿಚಯವಾಗಿದ್ದರು. ಕಷ್ಟವಿರುವುದಾಗಿ ಹೇಳಿದ್ದ ಆರೋಪಿ, ₹ 10,000 ಸಾಲ ಪಡೆದಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ ಹಾಗೂ ದೂರುದಾರರ ನಡುವೆ ಹೆಚ್ಚು ಒಡನಾಟ ಬೆಳೆದಿತ್ತು. ಇತ್ತೀಚೆಗೆ ಪುನಃ ಹಣ ಕೇಳಿದ್ದ ಅನುರಾಧಾ, ದೂರುದಾರರನ್ನು ತಮ್ಮ ವಿಳಾಸಕ್ಕೆ ಕರೆಸಿಕೊಂಡಿದ್ದರು. ಇದೇ ಸಂದರ್ಭದಲ್ಲೇ ಸ್ಥಳಕ್ಕೆ ಬಂದಿದ್ದ ಇತರೆ ಆರೋಪಿಗಳು, ದೂರುದಾರರನ್ನು ಅಕ್ರಮ ಬಂಧನದಲ್ಲಿರಿಸಿ ಬೆದರಿಸಿದ್ದರು. 'ನೀನು ಅತ್ಯಾಚಾರ ಮಾಡಲು ಬಂದಿದ್ದೀಯ. ಈ ಸಂಗತಿಯನ್ನು ನಿನ್ನ ಮನೆಯವರಿಗೆ ಹೇಳುತ್ತೇವೆ. ಮಾಧ್ಯಮದವರಿಗೂ ತಿಳಿಸಿ, ಮಾನ ಹರಾಜು ಹಾಕುತ್ತೇವೆ. ಈ ರೀತಿ ಮಾಡಬಾರದೆಂದರೆ, ₹ 2 ಲಕ್ಷ ಕೊಡು' ಎಂದು ಬ್ಲ್ಯಾಕ್‌ಮೇಲ್ ಮಾಡಿದ್ದರು.'

'ಹಣವಿಲ್ಲವೆಂದು ದೂರುದಾರ ಹೇಳಿದ್ದರಿಂದ ಅವರ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರು. ₹ 5 ಸಾವಿರ ಕಿತ್ತುಕೊಂಡು ಬಿಟ್ಟು ಕಳುಹಿಸಿದ್ದರು. ಬಳಿಕ ದೂರುದಾರ, ಠಾಣೆಗೆ ಬಂದು ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ವ್ಯವಸ್ಥಿತ ಸಂಚು: 'ಬಂಧಿತ ಆರೋಪಿ ಸಿದ್ದೇಶ್ ಅಪರಾಧ ಹಿನ್ನೆಲೆಯುಳ್ಳವ. ಈತನ ವಿರುದ್ಧ ಬಾಗಲಗುಂಟೆ, ಮಾದನಾಯಕನಹಳ್ಳಿ ಹಾಗೂ ತುಮಕೂರಿನ ಕ್ಯಾತ್ಸಂದ್ರ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಆರೋಪಿ ಅನುರಾಧಾ, ಸಿದ್ದೇಶ್ ಹಾಗೂ ಇತರರು ವ್ಯವಸ್ಥಿತ ಸಂಚು ರೂಪಿಸಿ ಜಮೇದಾರ್ ಅವರನ್ನು ಹನಿಟ್ರ್ಯಾಪ್ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಗುಂಡಿ ತಪ್ಪಿಸಲು ಹೋಗಿ ಉರುಳಿಬಿದ್ದ ಬೈಕ್: ಸವಾರನಿಗೆ ಗಾಯ

ಬೆಂಗಳೂರು: ಜಾಲಹಳ್ಳಿಯ ಗಂಗಮ್ಮನಗುಡಿ ವೃತ್ತದ ರಸ್ತೆಯಲ್ಲಿ ಗುಂಡಿ ತಪ್ಪಿಸಲು ಹೋಗಿ ಬೈಕ್ ಉರುಳಿಬಿದ್ದು ಸವಾರ ಸಂದೀಪ್ ತೀವ್ರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ರಾತ್ರಿ ಸಂಭವಿಸಿದೆ.

ವಿದ್ಯಾರಣ್ಯಪುರ ನಿವಾಸಿ ಸಂದೀಪ್ ಸ್ನೇಹಿತರ ಜೊತೆ ಕ್ರಿಕೆಟ್ ಆಡಿ ರಾತ್ರಿ 9.30ರ ಸುಮಾರಿಗೆ ಬೈಕ್‌ನಲ್ಲಿ ಮನೆಗೆ ಹಿಂತಿರುಗುತ್ತಿದ್ದಾಗ ರಸ್ತೆಯಲ್ಲಿದ್ದ ಗುಂಡಿ ತಪ್ಪಿಸಲು ಹೋಗಿ ಆಯ ತಪ್ಪಿ ಬಿದ್ದಿದ್ದರು. ಇದರಿಂದ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ನಗರದ ಬಹುತೇಕ ರಸ್ತೆಗಳಲ್ಲಿ ಗುಂಡಿಗಳಿದ್ದು, ಜನರು ಭಯದಲ್ಲೇ ಸಂಚರಿಸುತ್ತಿದ್ದಾರೆ. ಗುಂಡಿ ಮುಚ್ಚಲು ಬಿಬಿಎಂಪಿ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದಾಗಿಯೇ ಇಂದು ಸಂದೀಪ್ ಆಸ್ಪತ್ರೆ ಸೇರುವಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ. ಜಾಲಹಳ್ಳಿ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿಸಿದ್ದಾರೆ.

ಯುವತಿ ಅಪಹರಣ ಕರೆ: ದಿನವಿಡೀ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವತಿಯೊಬ್ಬರನ್ನು ಅಪಹರಣ ಮಾಡಲಾಗಿದೆ' ಎಂದು ಠಾಣೆಗೆ ಬಂದ ಕರೆ ಆಧರಿಸಿ ದಿನವಿಡೀ ಹುಡುಕಾಟ ನಡೆಸಿದ ಪೊಲೀಸರು, ಇದೊಂದು ಆರೋಗ್ಯ ಸಮಸ್ಯೆ ಪ್ರಕರಣವೆಂದು ಘೋಷಿಸಿ ನಿಟ್ಟುಸಿರು ಬಿಟ್ಟಿದ್ದಾರೆ.

'ನಗರದ ಬಾಣಸವಾಡಿ ಠಾಣೆಗೆ ಶುಕ್ರವಾರ ಬೆಳಿಗ್ಗೆ 4.15ರ ಸುಮಾರಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬರು, 'ಸುಬ್ಬಯ್ಯನಪಾಳ್ಯ ರಸ್ತೆಯಲ್ಲಿ ಯುವತಿಯೊಬ್ಬರನ್ನು ಬಲವಂತವಾಗಿ ಎತ್ತಿಕೊಂಡು ಕಾರಿನಲ್ಲಿ ಕೂರಿಸಿ ಯುವಕರ ತಂಡ ಅಪಹರಣ ಮಾಡಿದೆ' ಎಂದಿದ್ದ ವಿಷಯ ತಿಳಿದ ಠಾಣೆ ಸಿಬ್ಬಂದಿ, ನಿಯಂತ್ರಣ ಕೊಠಡಿಗೆ ಮಾಹಿತಿ ತಲುಪಿಸಿದ್ದರು' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ಹೇಳಿದರು.

'ರಾತ್ರಿ ಗಸ್ತಿನಲ್ಲಿದ್ದ ಇನ್‌ಸ್ಪೆಕ್ಟರ್, ಪಿಎಸ್‌ಐಗಳು ಹಾಗೂ ಸಿಬ್ಬಂದಿಯ ವಿಶೇಷ ತಂಡ ರಚಿಸಿ ಯುವತಿ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಲಾಗಿತ್ತು. ಘಟನೆ ನಡೆದಿದೆ ಎನ್ನಲಾದ ಸ್ಥಳದಲ್ಲಿ ಶಿವಮೊಗ್ಗ ಆರ್‌ಟಿಒ ನೋಂದಣಿಯ ದ್ವಿಚಕ್ರ ವಾಹನವೊಂದು ಪತ್ತೆಯಾಗಿತ್ತು. ಜಪ್ತಿ ಮಾಡಿ ಠಾಣೆ ಬಳಿ ಇರಿಸಲಾಗಿತ್ತು. ಶಿವಮೊಗ್ಗದ ವಿಳಾಸದಲ್ಲಿ ಪರಿಶೀಲನೆ ನಡೆಸಿ, ಯುವತಿಯೊಬ್ಬರ ಬಗ್ಗೆ ಮಾಹಿತಿ ಕಲೆ ಹಾಕಲಾಯಿತು. ಬೆಂಗಳೂರಿನಲ್ಲೂ 150 ಮನೆಗಳಲ್ಲಿ ವಿಚಾರಿಸಲಾಯಿತು. 200ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಯಿತು.'

'2 ವರ್ಷದ ಹಿಂದೆ ಮನೆಯಲ್ಲಿದ್ದ ಯುವತಿ, ಬೆಂಗಳೂರಿಗೆ ಬಂದಿದ್ದು ಗೊತ್ತಾಯಿತು. ಅವರ ಮೊಬೈಲ್ ಲೋಕೇಶನ್ ಕಲೆಹಾಕಿದಾಗ, ಅಪಹರಣವಾದ ಸ್ಥಳದ ಬಳಿಯೇ ಯುವತಿ ಇರುವುದು ತಿಳಿಯಿತು. ಶುಕ್ರವಾರ ಸಂಜೆ ಯುವತಿಯನ್ನು ಪತ್ತೆ ಮಾಡಿದಾಗ, ಇದೊಂದು ಆರೋಗ್ಯ ಸಮಸ್ಯೆ ಪ್ರಕರಣವೆಂದು ತಿಳಿಯಿತು. ದ್ವಿಚಕ್ರ ವಾಹನವನ್ನು ವಾಪಸ್ ನೀಡಲಾಗಿದೆ' ಎಂದು ಡಿಸಿಪಿ ತಿಳಿಸಿದರು.

ತಲೆಸುತ್ತಿ ಬಿದ್ದಿದ್ದ ಯುವತಿ: 'ಖಾಸಗಿ ಕಂಪನಿ ಉದ್ಯೋಗಿಯಾದ ಯುವತಿ, ಬೆಳಿಗ್ಗೆ ಕೆಲಸಕ್ಕೆ ಹೊರಟಿದ್ದರು. ಮನೆ ಬಳಿಯೇ ಕ್ಯಾಬ್ ಬಂದು ನಿಂತಿತ್ತು. ಮನೆಯ ಮೆಟ್ಟಿಲಿನಿಂದ ಇಳಿಯುವಾಗ ಯುವತಿ, ಕಡಿಮೆ ರಕ್ತದೊತ್ತಡದಿಂದ ತಲೆಸುತ್ತಿ ಬಿದ್ದಿದ್ದರು. ಅದನ್ನು ನೋಡಿದ್ದ ಸ್ನೇಹಿತರೊಬ್ಬರು, ಯುವತಿಯನ್ನು ಎತ್ತಿಕೊಂಡು ಕಾರಿನಲ್ಲಿ ಕೂರಿಸಿಕೊಂಡು ಚಿಕಿತ್ಸೆಗೆಂದು ಕರೆದೊಯ್ದಿದ್ದರು' ಎಂದು ಡಿಸಿಪಿ ಗುಳೇದ ಹೇಳಿದರು.

'ಯುವತಿಯನ್ನು ಎತ್ತಿಕೊಂಡು ಹೋಗಿ ಕಾರಿನಲ್ಲಿ ಕೂರಿಸಿದ್ದನ್ನೇ ಅಪಹರಣವೆಂದು ತಿಳಿದಿದ್ದ ವ್ಯಕ್ತಿ, ಯುವತಿಯನ್ನು ಕಾಪಾಡುವುದಕ್ಕಾಗಿ ಠಾಣೆಗೆ ಮಾಹಿತಿ ನೀಡಿದ್ದ. ಆತನ ಸಮಯಪ್ರಜ್ಞೆಯನ್ನೂ ನಾವು ಶ್ಲಾಘಿಸುತ್ತೇವೆ' ಎಂದು ತಿಳಿಸಿದರು.



ಸಂಚಾರಿ ಆಸ್ಪತ್ರೆ

ಇನ್ಫೊಸಿಸ್ ಸಹಯೋಗದಲ್ಲಿ ರಾಮಕೃಷ್ಣ ಸೇವಾಶ್ರಮದ ವತಿಯಿಂದ ಶಾರದಾದೇವಿ ಸಂಚಾರಿ ಕಣ್ಣಿನ ಆಸ್ಪತ್ರೆಯನ್ನು ಶನಿವಾರ ಲೋಕಾರ್ಪಣೆಗೊಳಿಸಲಾಯಿತು. ಜಪಾನಂದ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ವೆಂಕಟಾಚಲಯ್ಯ, ರತ್ನಕಲಾ, ವೂಡೇ ಪಿ. ಕೃಷ್ಣ, ಡಾ.ಭುಜಂಗ ಶೆಟ್ಟಿ, ಮಯ್ಯ, ವಿಶ್ವನಾಥ್, ಸುಬ್ಬರಾಮಶೆಟ್ಟಿ, ನಾಗಣ್ಣ, ಆರ್ ಪಿ ಎಸ್ ರೆಡ್ಡಿ ಇದ್ದರು.

ರಸ್ತೆ ಅಪಘಾತ: ಇಬ್ಬರ ಸಾವು

ಬೆಂಗಳೂರು: ನಗರದ ಎರಡು ಕಡೆ ಶನಿವಾರ ಅಪಘಾತ ಸಂಭವಿಸಿದ್ದು, ಬಿಬಿಎಂಪಿ ನೌಕರ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಅಪಘಾತ ಸಂಬಂಧ ಕೆಎಸ್‌ಆರ್‌ಟಿಸಿ ಬಸ್‌ಗಳ ಇಬ್ಬರು ಚಾಲಕರನ್ನು ಪೊಲೀಸರು ಬಂಧಿಸಿದ್ದಾರೆ.

'ಮುನಿಯಪ್ಪ ಗಾರ್ಡನ್ ನಿವಾಸಿ ಶ್ರೀಧರ್ (52) ಹಾಗೂ ರಮೇಶ್ (30) ಮೃತರು. ಇವರಿಬ್ಬರು ಪ್ರತ್ಯೇಕವಾಗಿ ದ್ವಿಚಕ್ರ ವಾಹನಗಳಲ್ಲಿ ಹೊರಟಿದ್ದರು. ಇದೇ ವೇಳೆಯೇ ಕೆಎಸ್‌ಆರ್‌ಟಿಸಿ ಬಸ್‌ಗಳು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಹಲಸೂರು ಗೇಟ್ ಹಾಗೂ ರಾಜಾಜಿನಗರ ಸಂಚಾರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಚಾಲಕರಿಬ್ಬರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ತಲೆಗೆ ಪೆಟ್ಟು ಬಿದ್ದು ಸಾವು: 'ಬಿಬಿಎಂಪಿ ನೌಕರ ಶ್ರೀಧರ್, ರಾಜಾಜಿನಗರ ಭಾಷ್ಯಂ ವೃತ್ತದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಹಲಸೂರು ಗೇಟ್ ಸಂಚಾರ ಪೊಲೀಸರು ಹೇಳಿದರು.

'ಶ್ರೀಧರ್ ಅವರು ಶನಿವಾರ ಬೆಳಿಗ್ಗೆ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದ್ದರು. ಕೆಲಸ ಮುಗಿಸಿಕೊಂಡು ಮಧ್ಯಾಹ್ನ ದ್ವಿಚಕ್ರ ವಾಹನದಲ್ಲಿ ಕೆ.ಜಿ.ರಸ್ತೆ ಮೂಲಕ ವಾಪಸು ಹೊರಟಿದ್ದರು. ತಿರುಪತಿಯಿಂದ ಬೆಂಗಳೂರಿಗೆ ಬಂದಿದ್ದ ಕೆಎಸ್‌ಆರ್‌ಟಿಸಿ ಬಸ್ ಇದೇ ಮಾರ್ಗದಲ್ಲಿ ತೆರಳುತ್ತಿತ್ತು. ಚಾಲಕನ ನಿರ್ಲಕ್ಷ್ಯದ ಚಾಲನೆಯಿಂದ ಬಸ್, ದ್ವಿಚಕ್ರ ವಾಹನಕ್ಕೆ ಗುದ್ದಿತ್ತು.'

'ವಾಹನ ಸಮೇತ ರಸ್ತೆಯಲ್ಲಿ ಬಿದ್ದಿದ್ದ ಶ್ರೀಧರ್ ಅವರ ತಲೆಗೆ ಪೆಟ್ಟಾಗಿತ್ತು. ಅವರನ್ನು ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಅಸುನೀಗಿದರು' ಎಂದು ಪೊಲೀಸರು ತಿಳಿಸಿದರು.

ಖಾಸಗಿ ಕಂಪನಿ ಉದ್ಯೋಗಿ: ಇನ್ನೊಂದು ಪ್ರಕರಣದಲ್ಲಿ ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಅಪಘಾತ ಸಂಭವಿಸಿದ್ದು, ಸ್ಥಳೀಯ ನಿವಾಸಿ ರಮೇಶ್ ಮೃತಪಟ್ಟಿದ್ದಾರೆ.

'ಖಾಸಗಿ ಕಂಪನಿ ಉದ್ಯೋಗಿ ರಮೇಶ್, ರಾತ್ರಿ ಪಾಳಿಯ ಕೆಲಸ ಮುಗಿಸಿಕೊಂಡು ಶನಿವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದರು. ನವರಂಗ್ ಚಿತ್ರಮಂದಿರ ಸಮೀಪದಲ್ಲಿ ಅವರ ವಾಹನಕ್ಕೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿತ್ತು. ಗಾಯಗೊಂಡಿದ್ದ ರಮೇಶ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದರು' ಎಂದು ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

ಶಾಸಕನ ಸೋಗಿನಲ್ಲಿ ಕರೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ



ಪುನೀತ್

ಬೆಂಗಳೂರು: ಮೈಸೂರು ಶಾಸಕ ಎಲ್. ನಾಗೇಂದ್ರ ಸೋಗಿನಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು ಕುಮಾರ್ ಅವರಿಗೆ ಕರೆ ಮಾಡಿ ಸಿಬ್ಬಂದಿಯೊಬ್ಬರ ವರ್ಗಾವಣೆಗೆ ಒತ್ತಾಯಿಸಿದ ಆರೋಪದಡಿ ಪುನೀತ್ ಎಂಬಾತನನ್ನು ವಿಲ್ಸನ್ ಗಾರ್ಡನ್ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮಳವಳ್ಳಿ ತಾಲ್ಲೂಕಿನ ಅಗಸನಪುರದ ಪುನೀತ್, ತನ್ನ ಮೊಬೈಲ್‌ನಿಂದ ವ್ಯವಸ್ಥಾಪಕ ನಿರ್ದೇಶಕರ ಮೊಬೈಲ್‌ಗೆ ಅ.28ರಂದು ಕರೆ ಮಾಡಿ, ಮಂಡ್ಯ ಘಟಕದಲ್ಲಿ ಕೆಲಸ ಮಾಡುತ್ತಿರುವ ಚಾಲಕ-ನಿರ್ವಾಹಕ ಬಾಲರಾಜ್ ಅವರನ್ನು ಮಳವಳ್ಳಿ ಘಟಕಕ್ಕೆ ವರ್ಗಾವಣೆ ಮಾಡುವಂತೆ ಒತ್ತಾಯಿಸಿದ್ದ. ಕರೆ ಬಗ್ಗೆ ಅನುಮಾನಗೊಂಡಿದ್ದ ಅಧಿಕಾರಿಗಳು, ಶಾಸಕ ನಾಗೇಂದ್ರ ಅವರನ್ನು ವಿಚಾರಿಸಿದ್ದರು. ಯಾವುದೇ ಕರೆ ಮಾಡಿಲ್ಲವೆಂದು ನಾಗೇಂದ್ರ ಹೇಳಿದ್ದರಿಂದ ಕೆಎಸ್‌ಆರ್‌ಟಿಸಿ ಭದ್ರತೆ ಹಾಗೂ ವಿಚಕ್ಷಣಾ ದಳದ ಅಧಿಕಾರಿ ಎಚ್.ಬಿ.ಶಿವಪ್ರಕಾಶ್ ಪೊಲೀಸರಿಗೆ ದೂರು ನೀಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವರ್ಗಾವಣೆ ಹೆಸರಿನಲ್ಲಿ ಹಣ ವಸೂಲಿ: ಬಂಧಿತ ಆರೋಪಿ ಪುನೀತ್, ಶಾಸಕರ ಸೋಗಿನಲ್ಲಿ ಹಲವು ಬಾರಿ ಕರೆ ಮಾಡಿ ಮಾತನಾಡಿದ್ದಾರೆ. ವರ್ಗಾವಣೆ ಮಾಡಿಸುವುದಾಗಿ ಹೇಳಿ ಸಿಬ್ಬಂದಿಯಿಂದ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಲಿಮಾರ್ ರೈಲಿನಲ್ಲಿ ಬೆಂಕಿ: ಪ್ರಯಾಣಿಕರು ಪಾರು

ನಾಸಿಕ್ (ಪಿಟಿಐ): ಪಶ್ಚಿಮ ಬಂಗಾಳದಿಂದ ಮುಂಬೈಗೆ ಬರುತ್ತಿದ್ದ ಶಾಲಿಮಾರ್ ಎಕ್ಸ್‌ಪ್ರೆಸ್ ರೈಲಿನ ಲಗೇಜ್ ಬೋಗಿಯಲ್ಲಿ ಶನಿವಾರ ಇಲ್ಲಿಗೆ ಸಮೀಪ ಬೆಳಿಗ್ಗೆ ಬೆಂಕಿ ಕಾಣಿಸಿಕೊಂಡಿದ್ದು, ಯಾರಿಗೂ ಗಾಯಗಳಾಗಿಲ್ಲ.

ಬೆಳಗ್ಗೆ 8.40ರ ಸುಮಾರಿಗೆ ನಾಸಿಕ್ ಸಮೀಪ ಬೆಂಕಿ ಕಾಣಿಸಿಕೊಂಡಿತು. ಕೂಡಲೇ ಭದ್ರತಾ ಸಿಬ್ಬಂದಿ ರೈಲು ನಿಲ್ಲಿಸಿ ಬೆಂಕಿ ನಂದಿಸಿದರು ಎಂದು ಕೇಂದ್ರ ರೈಲ್ವೆ ತಿಳಿಸಿದೆ.

ಕಳ್ಳತನ: ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದು, ಅವರಿಂದ ₹ 5.98 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

'ಬಂಧಿತ ಮಹಿಳೆ, ಏಜೆನ್ಸಿಯೊಂದರ ಮೂಲಕ ಕೆಲಸಕ್ಕೆ ನೇಮಕಗೊಂಡಿದ್ದರು. ಕಳ್ಳತನ ಆರೋಪದಡಿ ಅವರನ್ನು ಬಂಧಿಸಲಾಗಿದೆ. ತನಿಖೆ ದೃಷ್ಟಿಯಿಂದ ಸದ್ಯಕ್ಕೆ ಆರೋಪಿ ಹೆಸರು ಬಹಿರಂಗಪಡಿಸಲಾಗದು' ಎಂದು ಪೊಲೀಸರು ಹೇಳಿದರು.

'ಮಲ್ಲೇಶ್ವರ ನಿವಾಸಿಯಾಗಿರುವ ದೂರುದಾರ ಮಹಿಳೆ, ತಮ್ಮ ವೃದ್ಧ ತಾಯಿಯನ್ನು ನೋಡಿಕೊಳ್ಳಲು ಆರೋಪಿಯನ್ನು ನಿಯೋಜಿಸಿಕೊಂಡಿದ್ದರು. ಮನೆಯಲ್ಲಿ ವಾಸವಿದ್ದ ಆರೋಪಿ, ವೃದ್ಧೆಯ ಆರೈಕೆ ಮಾಡುತ್ತಿದ್ದರು. ವೃದ್ಧೆಯ ಚಿನ್ನಾಭರಣಗಳನ್ನು ಬೀರುವಿನಲ್ಲಿ ಪ್ರತ್ಯೇಕವಾಗಿ ಇರಿಸಲಾಗಿತ್ತು' ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ದೇವೇಶ್‌ಕುಮಾರ್



ಬೆಂಗಳೂರು: ಭಾರತ್ ಸಂಚಾರ್ ನಿಗಮ್ ಲಿಮಿಟೆಡ್‌ನ (ಬಿಎಸ್‌ಎನ್‌ಎಲ್) ಕರ್ನಾಟಕ ವೃತ್ತದ ಪ್ರಧಾನ ವ್ಯವಸ್ಥಾಪಕ ದೇವೇಶ್‌ಕುಮಾರ್ (57) ಅವರು ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ.

ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಪದವೀಧರರಾಗಿದ್ದ ದೇವೇಶ್ ಕುಮಾರ್, ಉತ್ತರ ಪ್ರದೇಶದವರು. 1987ರಲ್ಲಿ ದೂರಸಂಪರ್ಕ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ವೃತ್ತಿ ಆರಂಭಿಸಿದ್ದರು. 2020ರಿಂದ ಕರ್ನಾಟಕ ವೃತ್ತದ ಪ್ರಧಾನ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು.

ಪುಣೆ ರೇಸ್

ಮೊಜಿಲೊ ಗೆಲ್ಲುವ ನಿರೀಕ್ಷೆ

ಜನರಲ್ ರಾಜೇಂದ್ರಸಿಂಗ್‌ಜೀ ಮಿಲಿಯನ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೊಜಿಲೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮೊಜಿಲ್ 2, ಬರ್ಕ್ಲಿ 9, ಅಗಸ್ಟಿನೊ ಕರಾಷಿ 12
2ನೇ ರೇಸ್: ಅನೌಷ್ಕ 1, ಕ್ಯಾಂಪೇನ್ 2, ಟರ್ಮರಿಕ್ ಟವರ್ 7
3ನೇ ರೇಸ್: ಏಂಜೆಲ್ಸ್ ಟ್ರಂಪೆಟ್ 1, ಮಲ್ಟಿಕ್ರಿಪ್ಟೆಡ್ 2, ಪವರ್ ಆಫ್ ಥೋರ್ 5
4ನೇ ರೇಸ್: ಟೆರೆಸಿಟಾ 5, ಪ್ರೈಡ್ಸ್ ಏಂಜೆಲ್ 3, ಪ್ಯೂರ್ 10
5ನೇ ರೇಸ್: ಲಾರ್ಡ್ ಫೆನಿಸಿಯಾ 4, ಹೌಸ್ ಆಫ್ ಲಾರ್ಡ್ಸ್ 3, ಲಿಬರೇಷನ್ 10
6ನೇ ರೇಸ್: ಕರೀನ 9, ಅಡಮಾಸ್ 1, ಇನಾಮೊರ್ಟಾನೊ 8
7ನೇ ರೇಸ್: ಮೊಜಿಲೊ 1, ಕೊಯರ್ ಡೆ ಲಯನ್ 2
8ನೇ ರೇಸ್: ರಿದ್ಮ್ ಆಫ್ ನೇಚರ್ 1, ರೆಡ್ ಡಸ್ಟ್ 9, ಆರ್ಬಿಟ್ರೇಜ್ 6
9ನೇ ರೇಸ್: ಅರ್ಕಾನ 1, ಸ್ಕೈ ಹಾಕ್ 5, ಹಿಲ್ಟಾಕ್ಲಿಂಟ್ 3

ಉತ್ತಮ ಬೆಟ್: ರಿದ್ಮ್ ಆಫ್ ನೇಚರ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್
2,3,4,5,6	5,6,7,8,9	3,4,5

2ನೇ ಟ್ರಿಬಲ್ 6,7,8 | 3ನೇ ಟ್ರಿಬಲ್ 7,8,9

ವಕೀಲರ ಭವನದ ಮಹಡಿಗಳ ಉದ್ಘಾಟನೆ • ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಬ್ದುಲ್ ನಜೀರ್

'ವ್ಯಾಜ್ಯಗಳು ಸಮಾಜಕ್ಕೆ ಕ್ಯಾನ್ಸರ್ ಇದ್ದಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವ್ಯಾಜ್ಯ ಪ್ರಕರಣಗಳು ಸಮಾಜಕ್ಕೆ ಕ್ಯಾನ್ಸರ್ ಇದ್ದಂತೆ. ಹೀಗಾಗಿ, ವ್ಯಾಜ್ಯ ಮುಕ್ತಗೊಳಿಸಲು ನ್ಯಾಯಾಂಗ ವ್ಯವಸ್ಥೆಯನ್ನು ಬೆಂಬಲಿಸಬೇಕಿದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅಭಿಪ್ರಾಯಪಟ್ಟರು.

ವಕೀಲರ ಸಂಘ, ಲೋಕೋಪಯೋಗಿ ಇಲಾಖೆ ಮತ್ತು ಕಟ್ಟಡ ಸಮಿತಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ವಕೀಲರ ಭವನದ 5, 6 ಮತ್ತು 7ನೇ ಮಹಡಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ 3 ಕೋಟಿಗೂ ಹೆಚ್ಚು ವ್ಯಾಜ್ಯಗಳು ಇತ್ಯರ್ಥಕ್ಕೆ ಬಾಕಿ ಇವೆ. ಹೀಗಿರುವಾಗ ಸಮಾಜ ಮತ್ತು ದೇಶದಲ್ಲಿ ಶಾಂತಿ ಕಾಪಾಡಲು ಹೇಗೆ ಸಾಧ್ಯ' ಎಂದರು.

'ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಬಸವಣ್ಣನವರ 7 ಬೇಡಗಳನ್ನು ಅಳವಡಿಸಿಕೊಳ್ಳಬೇಕಿದೆ. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ' ಇದನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಶಾಂತಿ ನೆಲಸಲಿದೆ' ಎಂದರು.



ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿರುವ ವಕೀಲ ಭವನದ 5, 6 ಮತ್ತು 7ನೇ ಮಹಡಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ವಕೀಲರ ಸಂಘದ ಖಜಾಂಚಿ ಹರೀಶ ಎಂ.ಟಿ., ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಬ್ದುಲ್ ನಜೀರ್, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಇದ್ದರು. ಪ್ರಜಾವಾಣಿ ಚಿತ್ರ

'ದೆಹಲಿ ಸೇರಿ ದೇಶದ ಇತರೆಡೆ ವಕೀಲರ ಭವನದ ಜತೆಗೆ 'ಲಾ ಚೇಂಬರ್ಸ್' ಇದೆ. ಬೆಂಗಳೂರಿನಲ್ಲಿಯೂ ವಕೀಲರ ಭವನದ ಆಸುಪಾಸಿನಲ್ಲಿಯೇ 'ಲಾ ಚೇಂಬರ್ಸ್' ನಿರ್ಮಾಣ ಮಾಡಿದರೆ ವಕೀಲರಿಗೆ ಅನುಕೂಲ ಆಗಲಿದೆ' ಎಂದು ಸಲಹೆ ನೀಡಿದರು.

> ಕಾನೂನು ಸೇವೆಯಲ್ಲಿ ಗುಣಮಟ್ಟ ಕಾಪಾಡುವುದು ವಕೀಲರ ಕೈಯಲ್ಲಿದೆ. ಸಮಾಜದಲ್ಲಿ ಶಾಂತಿ ಸ್ಥಾಪನೆ ಮಾಡುವುದನ್ನು ಕಾನೂನು ನಿರೀಕ್ಷೆ ಮಾಡುತ್ತದೆ
> **ಪಿ.ಬಿ.ವರಾಳೆ**
> ಮುಖ್ಯ ನ್ಯಾಯಮೂರ್ತಿ, ರಾಜ್ಯ ಹೈಕೋರ್ಟ್

'ವ್ಯಾಜ್ಯಗಳ ಶೀಘ್ರ ಪರಿಹಾರಕ್ಕಾಗಿ ಮಧ್ಯಸ್ಥಿಕೆ ಕೇಂದ್ರ ಸ್ಥಾಪನೆ ಸೇರಿದಂತೆ ಪೂರಕ ವ್ಯವಸ್ಥೆಗಳನ್ನು ಒದಗಿಸಲು ಸರ್ಕಾರ ಸಿದ್ಧವಿದೆ. ನ್ಯಾಯಾಧೀಶರ ಹುದ್ದೆಗಳನ್ನು ಶೀಘ್ರದಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುವುದು. ಬೆಂಗಳೂರಿಗೆ ಲಾಯರ್ಸ್ ಚೇಂಬರ್ಸ್ ಮಾಡಲು ಮುಂದಿನ ಬಜೆಟ್‌ನಲ್ಲಿ ಅನುದಾನ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅರವಿಂದಕುಮಾರ್ ಮಾತನಾಡಿ, 'ವ್ಯಾಜ್ಯ ಪ್ರಕರಣಗಳನ್ನು ಮುಂದೂಡುವಂತೆ ಕೇಳುವ ಬದಲು ಪ್ರಕರಣಗಳನ್ನು ಇತ್ಯರ್ಥಪಡಿಸುವತ್ತ ವಕೀಲರು ಚಿಂತನೆ ನಡೆಸಬೇಕು' ಎಂದರು.

'ಬಿಡಿಎ ಫ್ಲ್ಯಾಟ್: ವಕೀಲರಿಗೆ ಶೇ 10 ರಿಯಾಯಿತಿ'

'ಬೆಂಗಳೂರಿನಲ್ಲಿ ಬಿಡಿಎ ಫ್ಲ್ಯಾಟ್‌ಗಳನ್ನು ಖರೀದಿಸಲು ವಕೀಲರಿಗೆ ಶೇ 10ರಷ್ಟು ರಿಯಾಯಿತಿ ನೀಡಲಾಗುವುದು. ಬೆಂಗಳೂರು ವಕೀಲರ ಗ್ರಂಥಾಲಯವನ್ನು ಡಿಜಿಟಲೀಕರಣ ಮಾಡಲು ಕೂಡ ಸರ್ಕಾರ ನೆರವು ನೀಡಲಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ವಕೀಲರ ವಿಮೆ ಯೋಜನೆಯಡಿ ವಕೀಲರ ಹಿತದೃಷ್ಟಿಯಿಂದ ನೀಡಲಾಗಿರುವ ಅನುದಾನ ಸದುಪಯೋಗವಾಗಲು ಬೆಂಗಳೂರು ವಕೀಲ ಸಂಘ ಗಮನಹರಿಸಬೇಕು. ಡಿಸೆಂಬರ್‌ನಲ್ಲಿ ಬೆಳಗಾವಿ ನಡೆಯಲಿರುವ ಅಧಿವೇಶನದಲ್ಲಿ ಕಾನೂನು ರಕ್ಷಣಾ ಕಾಯ್ದೆಗೆ ಮಸೂದೆ ಮಂಡಿಸಲಾಗುವುದು ಎಂದರು.

ಲೆಕ್ಕಕ್ಕೇ ಸಿಗದ ಅಕ್ರಮ

ಒಂದನೇ ಪುಟದಿಂದ...

ಆಯ್ಕೆ ಹಂತದಿಂದಲೇ ಅಕ್ರಮ: ಯೋಜನೆಯಡಿ ಫಲಾನುಭವಿಗಳ ಆಯ್ಕೆ ಹಂತದಿಂದಲೇ ಅಕ್ರಮಗಳು ಆರಂಭವಾಗುತ್ತವೆ. ತಾಲ್ಲೂಕು ಮಟ್ಟದಲ್ಲಿ ಸಚಿವರ ಮತ್ತು ನಿಗಮದ ಪದಾಧಿಕಾರಿಗಳಿಗೆ ವಿವೇಚನಾ ಕೋಟಾದಡಿ ಶೇ 20ರಷ್ಟನ್ನು ಕೊಳವೆ ಬಾವಿ ಹಂಚಿಕೆ ನಿಗದಿಪಡಿಸಲಾಗಿದೆ. ಆದರೆ, ಅವುಗಳ ಹಂಚಿಕೆಗೆ ಅನುಸರಿಸಬೇಕಾದ ಮಾನದಂಡಗಳನ್ನು ನಿಗದಿಪಡಿಸಲಾಗಿಲ್ಲ. ಹೀಗಾಗಿ, ಈ ಕೋಟಾದಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಮಧ್ಯವರ್ತಿಗಳದ್ದೇ ದರ್ಬಾರು.

'ಸಫಲ' ಕೊಳವೆಬಾವಿಗಳೆಂದು ಪರಿಗಣಿಸಿ ಹಣ ಪಾವತಿಸಿದ ಹಲವು ಕೊಳವೆಬಾವಿಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರು (1,000 ಜಿಪಿಎಚ್–ಗ್ಯಾಲನ್ ಪರ್ ಅವರ್) ಚಿಮ್ಮುತ್ತಿಲ್ಲ. ಮೂರನೇ ವ್ಯಕ್ತಿ ಪರಿಶೀಲನಾ ಸಂಸ್ಥೆಯವರು ಅಥವಾ ಸಂಬಂಧಪಟ್ಟ ಅಧಿಕಾರಿ ನೀರಿನ ಲಭ್ಯತೆ ಪ್ರಮಾಣ ಖುದ್ದು ಪರಿಶೀಲಿಸಿ ದೃಢೀಕರಿಸಿದ ಬಳಿಕ ಗುತ್ತಿಗೆದಾರರಿಗೆ ಹಣ ಪಾವತಿಸಬೇಕೆನ್ನುವುದು ನಿಯಮ. ಆದರೆ, ಇಲ್ಲಿ ಗುತ್ತಿಗೆದಾರರೇ ನೇಮಿಸಿದ ಭೂ ವಿಜ್ಞಾನಿಗಳು (ಜಿಯಾಲಜಿಸ್ಟ್) ದೃಢೀಕರಿಸಿದ ಆಧಾರದಲ್ಲಿ ಬಿಲ್ ಪಾವತಿಸಲಾಗಿದೆ. ಆ ಮೂಲಕ, 'ನೋ ವಾಟರ್, ನೋ ಮನಿ' ದಾಖಲೆಗಷ್ಟೇ ಸೀಮಿತವಾಗಿದೆ.

ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆ ಹೊತ್ತಿದ್ದ ವಿವಿಧ ನಿಗಮಗಳು ಪ್ರಮಾಣಿತ ಕಾರ್ಯವಿಧಾನ ಅನುಸರಿಸಿಲ್ಲ. ಪ್ರತಿ ಪ್ಯಾಕೇಜ್ ಕಾಮಗಾರಿ ಗುತ್ತಿಗೆ, ಮೂರನೇ ವ್ಯಕ್ತಿ ಪರಿಶೀಲನಾ ಸಂಸ್ಥೆಗಳ ಸೇವೆ ಪಡೆಯುವ ಬಗ್ಗೆ ವಿವರವಾದ ಅಂದಾಜು ಪಟ್ಟಿ ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿಲ್ಲ. ಅನುಮೋದಿತ ಅಂದಾಜು ಪಟ್ಟಿಯೇ ಇಲ್ಲದಿರುವುದರಿಂದ ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಗೆ ಒದಗಿಸಲು ಸಾಧ್ಯವಾಗಿಲ್ಲ. ಟೆಂಡರ್ ಪ್ರಕ್ರಿಯೆ ಹಂತದಲ್ಲಿಯೂ ನಿಯಮಪಾಲನೆ ಆಗಿಲ್ಲ. ಜೊತೆಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆಟಿಪಿಪಿ) ಕಾಯ್ದೆಯೂ ಉಲ್ಲಂಘನೆಯಾಗಿದೆ. ಪರಿಣಾಮ, ಕಾಮಗಾರಿಗಳು ಅರ್ಹ ಗುತ್ತಿಗೆದಾರರು ಅವಕಾಶವಂಚಿತರಾಗಿ, ಅಸಮರ್ಥರ ಪಾಲಾಗಿವೆ. ಕೆಲವು ಗುತ್ತಿಗೆದಾರರರಿಗೆ ಅನುಕೂಲ ಆಗುವಂತೆ ಟೆಂಡರ್ ಪ್ರಕ್ರಿಯೆ ನಿರ್ವಹಿಸಿದ ನಿದರ್ಶನಗಳೂ ಇವೆ. ಯೋಜನೆಯಲ್ಲಿ ನೇಮಿಸಿದ ಭೂ ವಿಜ್ಞಾನಿಗಳು ಕೊಳವೆಬಾವಿ ಕೊರೆಯುವ ಸ್ಥಳವನ್ನು ಗುರುತಿಸಿ, ಲಭ್ಯ ನೀರಿನ ಪ್ರಮಾಣವನ್ನು ದೃಢೀಕರಿಸಿದ್ದಾರೆ. ಎಲ್ಲ ಕೊಳವೆಬಾವಿಗಳು 'ಸಫಲ'ವೆಂದು ದೃಢೀಕರಿಸಿ ಹಣ ಪಾವತಿಸಿರುವುದಕ್ಕೆ ನಿಗಮಗಳಲ್ಲಿರುವ ದಾಖಲೆಗಳೇ ಸಾಕ್ಷ್ಯ ನೀಡುತ್ತವೆ!

ಗುತ್ತಿಗೆ ಕರಾರಿನ ಉಲ್ಲಂಘನೆ: ಯೋಜನೆಯ ಅನುಷ್ಠಾನದ ಕಾರ್ಯಾದೇಶ ಪಡೆದ ಹಲವು ಗುತ್ತಿಗೆದಾರರು, ಏಜೆನ್ಸಿಗಳು ಕರಾರಿನ ಅನ್ವಯ ಕಾರ್ಯನಿರ್ವಹಿಸಿಲ್ಲ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕೊಳವೆ ಬಾವಿ ಕೊರೆಯುವ ಗುತ್ತಿಗೆ ಪಡೆದು 2016ರಲ್ಲಿಯೇ ಒಪ್ಪಂದ ಮಾಡಿಕೊಂಡಿದ್ದ ಜಿಯೋ ಕನ್ಸಲ್ಟೆನ್ಸಿ ಸರ್ವಿಸ್ ಕಂಪನಿಯವರು ಇದುವರೆಗೂ ಯಾವುದೇ ಕೊಳವೆ ಬಾವಿ ಕೊರೆದಿಲ್ಲ. ಮಾಲೂರು ತಾಲ್ಲೂಕಿನಲ್ಲಿ 2015–16ನೇ ಸಾಲಿನಿಂದ ಸುಮಾರು 600 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಈ ಪೈಕಿ, 300ಕ್ಕೆ ಪಂಪ್‌ಸೆಟ್ ಅಳವಡಿಸಿಲ್ಲ. 2010ರಲ್ಲಿ ಮಂಜೂರಾದ ಕೊಳವೆ ಬಾವಿಯನ್ನು 2012ರಲ್ಲಿ ಕೊರೆದು, 10 ವರ್ಷ ಕಳೆದರೂ ಪಂಪ್‌ಸೆಟ್ ಅಳವಡಿಸದ ಪ್ರಕರಣವನ್ನು ವಿಶೇಷ ಸದನ ಸಮಿತಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

₹130 ಕೋಟಿಗೂ ಹೆಚ್ಚು ಅವ್ಯವಹಾರ: 'ಗಂಗಾ ಕಲ್ಯಾಣ ಯೋಜನೆಯಲ್ಲಿ ₹130 ಕೋಟಿಗೂ ಹೆಚ್ಚು ಮೊತ್ತದ ಅವ್ಯವಹಾರ ನಡೆದಿದೆ. ನಕಲಿ ದಾಖಲಾತಿ ಸಲ್ಲಿಸಿರುವ ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದೆ. ಇದರಿಂದ ದರಗಳನ್ನು ನಿಗದಿಪಡಿಸುವುದರಲ್ಲಿ ಬಿಡ್ ಮೊತ್ತವನ್ನು ವಹಿವಾಟಿಗಿಂತ ನಾಲ್ಕು ಪಟ್ಟು ಹೆಚ್ಚಿಸಲಾಗಿದೆ. ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರ ಜೊತೆ ಶಾಮೀಲಾದ ಪರಿಣಾಮ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆದಿರುವುದು ಕಂಡುಬರುತ್ತಿದೆ. ಈ ಕುರಿತು ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು' ಎಂದು ದಾಖಲೆಗಳ ಸಹಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಳೆದ ಮಾರ್ಚ್‌ನಲ್ಲೇ ಪತ್ರ ಬರೆದಿದ್ದಾರೆ.



'ಇನ್ನು ಡಿಬಿಟಿ ವ್ಯವಸ್ಥೆ'



'ವಿಶೇಷ ಸದನ ಸಮಿತಿಯ ವರದಿ ಇನ್ನೂ ನನ್ನ ಕೈ ಸೇರಿಲ್ಲ. ಆದರೆ, ಟೆಂಡರ್ ಪ್ರಕ್ರಿಯೆಯೂ ಸೇರಿದಂತೆ ಒಟ್ಟು ಯೋಜನೆಯ ಅನುಷ್ಠಾನದಲ್ಲಿ ದಾಖಲೆಗಳನ್ನು ಕೊಟ್ಟಿಲ್ಲ, ಗುತ್ತಿಗೆ ಅನರ್ಹರ ಪಾಲಾಗಿದೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಮೂಲಕ ತನಿಖೆ ನಡೆಸಲಾಗಿದೆ. ಗುತ್ತಿಗೆದಾರರು ಸಮರ್ಪಕವಾದ ದಾಖಲೆಗಳನ್ನು ಸಲ್ಲಿಸಿಲ್ಲ ಸೇರಿದಂತೆ ಸಣ್ಣಪುಟ್ಟ ಲೋಪಗಳನ್ನು ಗಂಭೀರವಾಗಿ ಪರಿಗಣಿಸಿ, ಇನ್ನು ಮುಂದೆ ಇಂಥ ಲೋಪಗಳಿಗೆ ಅವಕಾಶ ನೀಡಬಾರದೆಂದು 2022–23ನೇ ಸಾಲಿನಿಂದ ಖಾತೆಗೆ ನೇರವಾಗಿ ಹಣ ವರ್ಗಾವಣೆ (ಡಿಬಿಟಿ) ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

'ಯೋಜನೆಯ ಅನುಷ್ಠಾನದಲ್ಲಿನ ಲೋಪಗಳ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪ ಆದಾಗ, ವಿರೋಧ ಪಕ್ಷಗಳ ಸದಸ್ಯರ ಆಗ್ರಹಕ್ಕೆ ಒತ್ತು ನೀಡಿದ್ದ ಮುಖ್ಯಮಂತ್ರಿ, ಈ ಬಗ್ಗೆ ವಿಶೇಷ ಸಭೆ ಕರೆಯುವುದಾಗಿ ಮಾತು ಕೊಟ್ಟಿದ್ದಾರೆ. ಅವರು ಆ ಸಭೆಗೆ ಇನ್ನೂ ಸಮಯ ಕೊಟ್ಟಿಲ್ಲ. ಆದಷ್ಟು ಶೀಘ್ರ ಮುಖ್ಯಮಂತ್ರಿ ಸಭೆ ಕರೆಯಬಹುದು' ಎಂದೂ ಹೇಳಿದರು.

ಅಕ್ರಮದ ನಾನಾ ಮುಖಗಳು

- ಯಾರದ್ದೊ ಸರ್ವೆ ನಂಬರ್, ಇನ್ಯಾರದ್ದೋ ಸರ್ವೆ ನಂಬರ್‌ನ ಜಾಗದಲ್ಲಿ ಕೊಳವೆ ಬಾವಿ.
- ಕೊಳೆವೆ ಬಾವಿಯ ಆಳ ಮತ್ತು ಗುತ್ತಿಗೆದಾರರಿಗೆ ಬಿಲ್ ಮಾಡಿರುವ ಆಳ, ಅಳವಡಿಸಿದ ಕೇಸಿಂಗ್ ಹಾಗೂ ದಾಖಲೆಗಳಲ್ಲಿರುವ ಕೇಸಿಂಗ್ ಅಳತೆಗೆ ಹೊಂದಿಕೆಯೇ ಇಲ್ಲ.
- ಕೊಳವೆ ಬಾವಿಯಲ್ಲಿ ನೀರಿನ ಲಭ್ಯತೆ 1,000 ಜಿಪಿಎಚ್ (ಗ್ಯಾಲನ್ ಪರ್ ಅವರ್) ಕಡಿಮೆ ಇದ್ದರೂ 'ಸಫಲ' ಕೊಳವೆ ಬಾವಿ ಎಂದು ನಮೂದಿಸಿ, ಹೆಚ್ಚಿನ ನೀರು ಇದೆ ಎಂದು ಬಿಲ್ ಪಾವತಿಸಲಾಗಿದೆ.
- ಕೊಳವೆ ಬಾವಿ ಕೊರೆಯದೇ ಬಿಲ್ ಪಾವತಿ.
- ಹಲವು ಕಡೆಗಳಲ್ಲಿ ಕೊಳವೆ ಬಾವಿ ಕೊರೆದು ವರ್ಷಗಳೇ ಕಳೆದಿದೆ. ಆದರೆ, ಪಂಪ್ ಸೆಟ್ ಅಳವಡಿಸಿಲ್ಲ. ಪಂಪ್ ಸೆಟ್ ಅಳವಡಿಸಿದ ಕಡೆಗಳಲ್ಲಿ ವಿದ್ಯುತ್ ಸಂಪರ್ಕ ನೀಡಿಲ್ಲ.
- ಪಂಪ್ ಸೆಟ್‌ಗಳಿಗೆ 'ಸ್ಟಾರ್ ರೇಟಿಂಗ್' ಇಲ್ಲ. ಅಳವಡಿಸಿದ ಪಂಪ್ ಸೆಟ್‌ಗಳಲ್ಲಿ ಕೆಲವು ಅತಿ ಕಡಿಮೆ ಸಮಯದಲ್ಲಿ ದುರಸ್ತಿಗೆ ಬಂದಿದ್ದರೆ, ಇನ್ನೂ ಕೆಲವು ಸಂಪೂರ್ಣ ಕೆಟ್ಟು ಹೋಗಿವೆ.
- ಬಿಲ್ ಪಾವತಿಗೂ ಮೊದಲು ನಿಗಮದ ಅಧಿಕಾರಿಗಳು ಕಾಮಗಾರಿ ಪರಿಶೀಲಿಸುವುದು ಕಡ್ಡಾಯ. ಆದರೆ, ಪರಿಶೀಲಿಸದೆ ಗುತ್ತಿಗೆದಾರರಿಗೆ ಬಿಲ್ ಪಾವತಿಸಲಾಗಿದೆ.
- ಕೊಳವೆ ಬಾವಿಗೆ ಪಂಪ್ ಸೆಟ್ ಸರಬರಾಜು ಮಾಡಿ ಅಳವಡಿಸಿರುವ ಗುತ್ತಿಗೆದಾರರು ವಿವಿಧ ಕಾರಣಗಳನ್ನು ಮುಂದಿಟ್ಟು ಫಲಾನುಭವಿಗಳಿಂದ ₹ 10 ಸಾವಿರದಿಂದ ₹ 25 ಸಾವಿರವರೆಗೆ ಹೆಚ್ಚುವರಿ ಹಣ ವಸೂಲು ಮಾಡಿದ್ದಾರೆ.
- ಕೋಲಾರ ಜಿಲ್ಲೆಯಲ್ಲಿ ಕೊಳವೆ ಬಾವಿ ಕೊರೆಯುವ ಮೊದಲೇ ಗುತ್ತಿಗೆದಾರರು, ಫಲಾನುಭವಿಗಳಿಂದ ₹ 25 ಸಾವಿರ ಪಡೆದಿದ್ದಾರೆ.
- ಹಿಂದೆ ಕೊರೆದ ಕೊಳವೆ ಬಾವಿಗಳನ್ನೇ 'ಗಂಗಾ ಕಲ್ಯಾಣ' ಯೋಜನೆಯಡಿ ಕೊರೆದ ಕೊಳವೆ ಬಾವಿ ಎಂದು ಬಿಂಬಿಸಿ ಹಣ ಲೂಟಿ.

ಶಾಸಕರ ಆಪ್ತರಿಗೇ 'ಕಲ್ಯಾಣ'

ಹಲವು ಕಡೆ ಕೊರೆಸಿದ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಅಳವಡಿಸದೇ ಹಾಗೆ ಬಿಟ್ಟಿದ್ದು, ಯಾರ ಉಪಯೋಗಕ್ಕೂ ಬಾರದಂತಾಗಿವೆ. ಸೂಕ್ತ ಸಮಯಕ್ಕೆ ಪಂಪ್‌ಸೆಟ್ ಪೂರೈಸದೇ ಹಲವು ಕೊಳವೆಬಾವಿಗಳು ಬತ್ತುವ ಹಂತಕ್ಕೆ ತಲುಪಿವೆ. ಸುಮಾರು ಒಂದೂವರೆ ವರ್ಷದಿಂದ ವಿದ್ಯುತ್ ಸಂಪರ್ಕ ಮತ್ತು ಪಂಪ್‌ಸೆಟ್ ಅಳವಡಿಕೆಗಾಗಿ ರೈತರು ಕಾಯುತ್ತಿದ್ದಾರೆ. ವಿತರಿಸಿದ ಪಂಪ್‌ಸೆಟ್ ಗುಣಮಟ್ಟದಿಂದ ಕೂಡಿಲ್ಲ ಎಂಬುದೂ ಫಲಾನುಭವಿಗಳ ಆರೋಪ. 2018ರಲ್ಲಿ ಕೊರೆದ ಕೊಳವೆ ಬಾವಿಗೆ ಈಗ ಪಂಪ್‌ಸೆಟ್ ಕೊಡಲಾಗುತ್ತಿದೆ. ಹಲವು ಜಮೀನುಗಳಲ್ಲಿ ಕೊಳವೆ ಬಾವಿ ವಿಫಲವಾಗಿದ್ದರೂ ಬಿಲ್ ಪಾವತಿಸಲಾಗಿದೆ. ಪರಿಶಿಷ್ಟರ ಜಮೀನಿಗೆ ಹಾಕಬೇಕಾದ ಕೊಳವೆ ಬಾವಿಯನ್ನು ಸಾಮಾನ್ಯ ವರ್ಗದವರ ಜಮೀನಿನಲ್ಲೂ ಕೊರೆಸಲಾಗಿದೆ ಎಂಬ ಆರೋಪಗಳೂ ಕೇಳಿಬಂದಿವೆ.

'ಆರು ತಿಂಗಳು ಕಳೆದರೂ ಪಂಪ್‌ಸೆಟ್ ನೀಡಿಲ್ಲ'



ಆರು ತಿಂಗಳ ಹಿಂದೆ ಕೊಳವೆಬಾವಿ ಕೊರೆಸಿದ್ದು, ಇದುವರೆಗೆ ಪಂಪ್‌ಸೆಟ್ ವಿತರಿಸಿಲ್ಲ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಚೇರಿಗೆ ಅಲೆದಾಡಿ ಸಾಕಾಗಿದೆ. ಕೃಷಿ ಕಾರ್ಯಗಳಿಗೆ ನೆರವಾಗಬಹುದು ಎಂಬ ಉದ್ದೇಶದಿಂದ ಸರ್ಕಾರದ ಸೌಲಭ್ಯ ಪಡೆಯಲಾಗುತ್ತಿದೆ. ಆದರೆ, ಅದು ಸರಿಯಾದ ಸಮಯಕ್ಕೆ ದೊರೆತರೆ ಉತ್ತಮ. ಆದಷ್ಟು ಬೇಗ ಕೊಡಬೇಕು.

ತಿಮ್ಮಯ್ಯ, ಅಮ್ಮನಘಟ್ಟ, ಗುಬ್ಬಿ ತಾಲ್ಲೂಕು

'ಗುಣಮಟ್ಟದ ಪಂಪ್‌ಸೆಟ್ ನೀಡಿ'



ಆರೇಳು ವರ್ಷಗಳ ಹಿಂದೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಸಲಾಗಿತ್ತು. ಈ ಹಿಂದೆಯೇ ಮೋಟರ್ ಪಂಪ್ ನೀಡಲಾಗಿದೆ. ಕಡಿಮೆ ಸಾಮರ್ಥ್ಯ ಇರುವ ಸಾಧನ ಸಲಕರಣೆಗಳನ್ನು ನೀಡಿದರೂ, ಗುಣಮಟ್ಟದ, ಬಾಳಿಕೆ ಬರುವಂಥವುಗಳನ್ನು ವಿತರಿಸಬೇಕು. ಕೆಲವೇ ವರ್ಷಗಳಲ್ಲಿ ಮೋಟರ್ ರಿಪೇರಿಗೆ ಬರುವುದರಿಂದ ರೈತರು ಗುಜರಿ ಅಂಗಡಿಗಳಿಗೆ ಅಲೆಯುವ ಕೆಲಸ ಮಾಡುತ್ತಿದ್ದಾರೆ.

ಬೋರಯ್ಯ, ಚೌಕೇನಹಳ್ಳಿ, ಗುಬ್ಬಿ ತಾಲ್ಲೂಕು

'ಮುಖಂಡರ ಜಮೀನಿಗೆ ಯೋಜನೆ'



ಶಾಸಕರೇ ಆಯ್ಕೆ ಸಮಿತಿ ಅಧ್ಯಕ್ಷರಾಗಿರುವುದರಿಂದ ಯೋಜನೆ ಹಳ್ಳ ಹಿಡಿದಿದೆ. ಪಕ್ಷದ ಪ್ರಮುಖ ಮುಖಂಡರ ಜಮೀನಿಗೆ ಮಾತ್ರ ಈ ಯೋಜನೆ ಎನ್ನುವಂತಾಗಿದೆ

ಗುರಣ್ಣ ಬಡಿಗೇರ, ಐನಾಪುರ, ಕಲಬುರಗಿ ಜಿಲ್ಲೆ

'ಸಹಿ ಹಾಕಿಸಿಕೊಂಡಿದ್ದಾರೆ'



ನನ್ನ ಜಮೀನಿನಲ್ಲಿ ಕೊಳವೆಬಾವಿ ಕೊರೆದು ವರ್ಷ ಕಳೆದಿದೆ. ವಿದ್ಯುತ್ ಸಂಪರ್ಕಕ್ಕಾಗಿ ಕಂಬಗಳನ್ನು ಹಾಕಿ ತಂತಿ ಬಿಗಿದಿದ್ದಾರೆ. ಆದರೆ, ಕೊಳವೆಬಾವಿಗೆ ಮೋಟರ್ ಅಳವಡಿಸಿಲ್ಲ. ವಿಚಿತ್ರ ಎಂದರೆ 300 ಅಡಿವರೆಗೆ ಕೊಳವೆ ಬಾವಿ ಕೊರೆದಿದ್ದು, ಹನಿನೀರೂ ಬಂದಿಲ್ಲ. ಕೊಳವೆ ಬಾವಿ ಕೊರೆಸಿದವರು ಸಹಿ ಮಾಡಿಸಿಕೊಂಡಿದ್ದಾರೆ. ಆದರೆ, ನೀರಾವರಿಯ ಕನಸು ಈಡೇರಿಲ್ಲ

ನಾಗೇಂದ್ರಪ್ಪ ಕಟ್ಟೊಳ್ಳಿ, ನೀಮಾಹೊಸಳ್ಳಿ

'ವಿದ್ಯುತ್ ಸಂಪರ್ಕ ಕಲ್ಪಿಸಬೇಕು'



ನಮ್ಮ ಹೊಲದಲ್ಲಿ ಕೊಳವೆ ಬಾವಿ ಕೊರೆದು ಎರಡು ವರ್ಷಗಳಾದವು. ಆದರೆ ದೀರ್ಘ ಕಾಲದಿಂದ ವಿದ್ಯುತ್ ಸಂಪರ್ಕ ಕಲ್ಪಿಸಿರಲಿಲ್ಲ. ನಾನು ಸ್ವಂತ ಹಣದಿಂದ, ತೆಲಂಗಾಣದ ತಾಂಡೂರಿನಲ್ಲಿರುವ ಪರಿಚಯಸ್ಥರ ಜಮೀನಿನಲ್ಲಿದ್ದ ವಿದ್ಯುತ್ ಕಂಬದಿಂದ 600 ಅಡಿ ದೂರದ ನನ್ನ ಜಮೀನಿಗೆ ವೈರ್ ಎಳೆದುಕೊಂಡೆ. ಆ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿದ್ದೇನೆ. ಕೊಳವೆಬಾವಿಯಿಂದ ಅನುಕೂಲವಾಗಿದೆ. ಆದರೆ ವಿದ್ಯುತ್ ಸಂಪರ್ಕವನ್ನು ಸರ್ಕಾರವೇ ಕಲ್ಪಿಸಬೇಕಿತ್ತು

ದೇವಲಿಬಾಯಿ ದೇವಜಿ, ಕಲಭಾವಿ ತಾಂಡಾ, ಕಲಬುರಗಿ ಜಿಲ್ಲೆ

'ಮಂಜೂರಾಗಿದೆ, ಕೊರೆದಿಲ್ಲ'



2020–21ನೇ ಸಾಲಿನಲ್ಲಿ ಕೊಳವೆ ಬಾವಿಗೆ ಆಯ್ಕೆಯಾಗಿದ್ದು, ಇಲ್ಲಿಯವರೆಗೆ ಕೊರೆಸಿಲ್ಲ. ಏನಾಗಿದೆ ಎಂಬುವುದು ಅಧಿಕಾರಿಗಳು ನಮ್ಮ ಗಮನಕ್ಕೆ ತಂದಿಲ್ಲ

ಶಾಂತಬಾಯಿ ಹಂಗರಗಾ, ಕಲಬುರಗಿ

ಇಂಧನ ಕ್ಷೇತ್ರಕ್ಕೆ ಶೇ 71ಹೂಡಿಕೆ: ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಣಗೊಳಿಸಬಹುದಾದ ಇಂಧನ ಮತ್ತು ಹಸಿರು ಜಲಜನಕ ಉತ್ಪಾದನೆ ಸೇರಿದಂತೆ ಇಂಧನ ಕ್ಷೇತ್ರಕ್ಕೆ ಜಾಗತಿಕ ಹೂಡಿಕೆದಾರರ ಸಮ್ಮೇಳನದಲ್ಲಿ ಶೇ 71ರಷ್ಟು ಹೂಡಿಕೆ ಹರಿದು ಬಂದಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ನವೀಕರಿಸಬಹುದಾದ ಇಂಧನ ಕ್ಷೇತ್ರಕ್ಕೆ ಶೇಕಡ 38ರಷ್ಟು ಹೂಡಿಕೆ, ಹಸಿರು ಜಲಜನಕ ಉತ್ಪಾದನೆಗೆ ಶೇ 33ರಷ್ಟು ಹೂಡಿಕೆ ಒಪ್ಪಂದಗಳಾಗಿವೆ. ವಿದ್ಯುತ್ ಚಾಲಿತ ವಾಹನಗಳು ಸೇರಿದಂತೆ ಉತ್ಪಾದನಾ ವಲಯ, ಮೂಲಸೌಕರ್ಯ ಮತ್ತು ಕೈಗಾರಿಕಾ ಪಾರ್ಕ್, ಸಾರಿಗೆ ಮೂಲಸೌಕರ್ಯ ಕ್ಷೇತ್ರಕ್ಕೆ ತಲಾ ಶೇ 9ರಷ್ಟು ಹೂಡಿಕೆ ಪ್ರಸ್ತಾವಗಳು ಬಂದಿವೆ' ಎಂದು ವಿವರಿಸಿದರು.

ಸಮ್ಮೇಳನಕ್ಕೂ ಮೊದಲೇ ₹2.83 ಲಕ್ಷ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವಗಳಿಗೆ ಏಕಗವಾಕ್ಷಿ ಹಾಗೂ ರಾಜ್ಯಉನ್ನತ ಮಟ್ಟದ ಸಮಿತಿಯಿಂದ ಒಪ್ಪಿಗೆ ನೀಡಲಾಗಿತ್ತು. ₹5.41 ಲಕ್ಷ ಕೋಟಿ ಮೊತ್ತದ ಹೂಡಿಕೆ ಒಪ್ಪಂದಗಳಿಗೆ ಜಿಮ್‌ನಲ್ಲಿ ಸಹಿ ಹಾಕಲಾಗಿದೆ. ₹1.57 ಲಕ್ಷ ಕೋಟಿ ಮೊತ್ತದ ಹೂಡಿಕೆ ಘೋಷಣೆಗಳು ಪ್ರಕಟವಾಗಿವೆ. ಒಟ್ಟಾರೆ 667 ಪ್ರಸ್ತಾವಗಳ ಮೂಲಕ ₹9.81 ಲಕ್ಷ ಕೋಟಿ ಹೂಡಿಕೆ ಬಂದಿದೆ ಎಂದರು.

90 ದಿನಗಡುವು: ಬಾಕಿ ಇರುವ ಹೂಡಿಕೆ ಪ್ರಸ್ತಾವಗಳಿಗೆ ಏಕ ಗವಾಕ್ಷಿ ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ ಒಪ್ಪಿಗೆ ನೀಡಲು 90 ದಿನ ಗಡುವು ನೀಡಲಾಗುವುದು. ಹೂಡಿಕೆ ಒಪ್ಪಂದಗಳ ಕಾರ್ಯಗತಗೊಳಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುವುದು ಎಂದರು.

ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಸಮನ್ವಯ ಸಮಿತಿಗಳನ್ನೂ ರಚಿಸಲಾಗುವುದು. ಹೂಡಿಕೆದಾರರು ತ್ವರಿತವಾಗಿ ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೇಕಿರುವ ಅನುಮತಿಗಳನ್ನು ತ್ವರಿತವಾಗಿ ಕೊಡಿಸಲು ಈ ಸಮಿತಿಗಳು ನೆರವಾಗಲಿವೆ ಎಂದು ಹೇಳಿದರು.

ಈ ಉದ್ದಿಮೆಗಳಿಗಾಗಿ 50 ಸಾವಿರ ಎಕರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ಬೆಂಗಳೂರು ಮತ್ತು ಸುತ್ತಮುತ್ತ 20 ಸಾವಿರ ಎಕರೆ ಹಾಗೂ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ 30ಸಾವಿರ ಎಕರೆ ಜಮೀನು ಸ್ವಾಧೀನಕ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು. ಹೂಡಿಕೆ ಪ್ರಸ್ತಾವಗಳ ಕುರಿತು ಬ್ಯಾಂಕ್‌ಗಳ ಜತೆಗೂ ಮಾಹಿತಿ ಹಂಚಿಕೊಳ್ಳಲಾಗುವುದು ಎಂದರು.

ವಲಯವಾರು ಹೂಡಿಕೆ ಒಪ್ಪಂದಗಳ ವಿವರ

ವಲಯ	ಒಪ್ಪಂದಗಳ ಸಂಖ್ಯೆ	ಹೂಡಿಕೆ ಮೊತ್ತ (₹ ಕೋಟಿಗಳಲ್ಲಿ)
ನವೀಕರಿಸಬಹುದಾದ ಇಂಧನ	96	3,28,449
ಹಸಿರು ಜಲಜನಕ	9	2,86,034
ಎಲೆಕ್ಟ್ರಾನಿಕ್ ಉತ್ಪಾದನಾ ವಲಯ	53	74,284
ಮೂಲಸೌಕರ್ಯ, ಕೈಗಾರಿಕಾ ಪಾರ್ಕ್, ಸಾರಿಗೆ	69	72,184
ಪ್ರಮುಖ ಉತ್ಪಾದನಾ ವಲಯ	26	36,276
ಸಾಮಾನ್ಯ ಉತ್ಪಾದನಾ ವಲಯ	412	27,558
ಜಿಮ್‌ನಲ್ಲಿ ಘೋಷಣೆಗಳು	2	1,57,000
ಒಟ್ಟು	667	9,81,784

ಚಲನಚಿತ್ರ ಅಕಾಡೆಮಿ: ಅಧ್ಯಕ್ಷರಾಗಿ ಅಶೋಕ ಕಶ್ಯಪ್ ನೇಮಕ



ಅಶೋಕ್ ಕಶ್ಯಪ್

ಬೆಂಗಳೂರು: ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾಗಿ ಅಶೋಕ ಕಶ್ಯಪ್ ಅವರನ್ನು ನೇಮಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆಯ ಮೇರೆಗೆ ಸರ್ಕಾರದ ಮುಖ್ಯಕಾರ್ಯದರ್ಶಿಯವರು ವಿವಿಧ ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳಿಗೆ ಸೇರಿದ 52 ಅಧ್ಯಕ್ಷರ ನಾಮನಿರ್ದೇಶನ ಇತ್ತೀಚೆಗೆ ರದ್ದುಪಡಿಸಿ ಆದೇಶ ಹೊರಡಿಸಿದ್ದರು. ಆಗ, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸುನೀಲ್ ಪುರಾಣಿಕ್ ಕೂಡಾ ಹುದ್ದೆ ಕಳೆದುಕೊಂಡಿದ್ದರು.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ (ಕಿಯೋನಿಕ್ಸ್) ಹರಿಕೃಷ್ಣ ಬಂಟ್ವಾಳ ಅವರನ್ನು ಮರು ನೇಮಕ ಮಾಡಲಾಗಿದೆ. ನಾಮನಿರ್ದೇಶನ ರದ್ದುಪಡಿಸಿದವರ ಪಟ್ಟಿಯಲ್ಲಿ ಹರಿಕೃಷ್ಣ ಬಂಟ್ವಾಳ ಅವರ ಹೆಸರೂ ಇತ್ತು.

ದೆಹಲಿ: ಮತ್ತಷ್ಟು ಬಿಗಡಾಯಿಸಿದ ಗಾಳಿ ಗುಣಮಟ್ಟ

ನವದೆಹಲಿ (ಪಿಟಿಐ): 'ದೆಹಲಿಯ ಆಗಸದಲ್ಲಿ ಶನಿವಾರವೂ ದಟ್ಟ ಹೊಗೆ ಆವರಿಸಿದ್ದು, ಗಾಳಿಯ ಗುಣಮಟ್ಟ ಮತ್ತಷ್ಟು ಹದಗೆಟ್ಟಿದೆ' ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ತಿಳಿಸಿದೆ.

'ಕೆಲ ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟ ಕೊಂಚ ಸುಧಾರಿಸಿದೆ. ಆನಂದ ವಿಹಾರ್, ಮಥುರಾ ರಸ್ತೆ, ದಿಲ್ಶಾದ್ ಗಾರ್ಡನ್, ಐಟಿಒ, ಲೋಧಿ ರಸ್ತೆ, ಪಂಜಾಬಿ ಬಾಗ್ ಮತ್ತು ಪುಶಾ ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 400ಕ್ಕಿಂತ ಕಡಿಮೆ ಇದೆ' ಎಂದು ಸಿಪಿಸಿಬಿ ಹೇಳಿದೆ.

'ಅಲಿಪುರ (434), ಅಶೋಕ್ ವಿಹಾರ್ (425), ಬವಾನ (450), ಜಹಾಂಗೀರ್‌ಪುರಿ (444), ಮುಂಡಕಾ (434), ನರೇಲಾ (452), ನೆಹರೂ ನಗರ (422), ರೋಹಿಣಿ (437), ಸೋನಿಯಾ ವಿಹಾರ್ (446), ವಿವೇಕ್ ವಿಹಾರ್ (426) ಮತ್ತು ವಾಜೀರ್‌ಪುರ್ (432) ಪ್ರದೇಶಗಳಲ್ಲಿ ಗುಣಮಟ್ಟ ಬಿಗಡಾಯಿಸಿದೆ. ಇದರಿಂದ ಇಲ್ಲಿನ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ' ಎಂದೂ ತಿಳಿಸಿದೆ.

'ಮಕ್ಕಳ ಆರೋಗ್ಯದ ದೃಷ್ಟಿಯಿಂದ ಶನಿವಾರದಿಂದ ಪ್ರಾಥಮಿಕ ಶಾಲೆಗಳಿಗೆ ರಜೆ ಘೋಷಿಸಲಾಗಿದೆ' ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಕುಟುಂಬಗಳಿಗೆ ಕಾಡುತ್ತಿರುವ ಕಾಯಿಲೆ: 'ಹಿಂದಿನ ಐದು ವಾರಗಳಲ್ಲಿ ದೆಹಲಿ–ಎನ್‌ಸಿಆರ್‌ನಲ್ಲಿ ವಾಸಿಸುತ್ತಿರುವ ಪ್ರತಿ 5 ಕುಟುಂಬಗಳ ಪೈಕಿ 4 ಕುಟುಂಬಗಳು ವಾಯು ಮಾಲಿನ್ಯ ಸಂಬಂಧಿತ ಕಾಯಿಲೆಗಳಿಗೆ ಗುರಿಯಾಗಿವೆ' ಎಂದು ಸಮೀಕ್ಷೆಯೊಂದು ತಿಳಿಸಿದೆ.

'ಲೋಕಲ್ ಸರ್ಕಲ್ಸ್' ಎಂಬ ಸಂಸ್ಥೆಯು ಒಟ್ಟು 19 ಸಾವಿರ ಮಂದಿಯನ್ನು ಸಮೀಕ್ಷೆಗೆ ಒಳಪಡಿಸಿತ್ತು. ಈ ಪೈಕಿ ಶೇ 18ರಷ್ಟು ಮಂದಿ ಚಿಕಿತ್ಸೆಗಾಗಿ ವೈದ್ಯರನ್ನು ಭೇಟಿಯಾಗಿದ್ದಾಗಿ ಹೇಳಿಕೊಂಡಿದ್ದಾರೆ. ಸಮೀಕ್ಷೆಗೆ ಒಳಪಟ್ಟ ಶೇ 80ರಷ್ಟು ಕುಟುಂಬಗಳಲ್ಲಿ ಕನಿಷ್ಠ ಒಬ್ಬರು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿರುವುದು ಸಮೀಕ್ಷೆಯಿಂದ ಗೊತ್ತಾಗಿದೆ.

'ವಾಯು ಮಾಲಿನ್ಯದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಇರುವುದರಿಂದ ದೆಹಲಿ ನಿವಾಸಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು' ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವಿಯಾ ಮನವಿ ಮಾಡಿದ್ದಾರೆ.



ದೆಹಲಿಯಲ್ಲಿ ಶನಿವಾರ ಬೆಳಿಗ್ಗೆ ಆವರಿಸಿದ್ದ ದಟ್ಟ ಹೊಂಜಿನಲ್ಲಿ ವಾಹನಗಳು ಸಂಚರಿಸಿದವು —ಪಿಟಿಐ ಚಿತ್ರ

ವಾಯು ಗುಣಮಟ್ಟ: ಮತ್ತೆ ಹತ್ತು ಕಾಮಗಾರಿ

ಒಂದನೇ ಪುಟದಿಂದ...

ವಾಯುಮಾಲಿನ್ಯವನ್ನು ತಗ್ಗಿಸಲು ಅನುದಾನ ಲಭ್ಯವಾಗುತ್ತಿದ್ದರೂ, ಯೋಜನೆಗಳ ಅನುಷ್ಠಾನದಲ್ಲಿ ಪ್ರಗತಿ ಹೊಂದಿಲ್ಲ. ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆ ನಡೆಸದಿರುವುದು, ಅನಗತ್ಯ ಕಾಮಗಾರಿಗಳ ಆಯ್ಕೆಯ ಸುತ್ತ ವಿವಾದಗಳು ಏರ್ಪಡುತ್ತಿರುವುದರಿಂದ 2020-21ರಲ್ಲಿ ಮಂಜೂರಾಗಿದ್ದ ₹279 ಕೋಟಿ ಬಳಕೆಯಾಗದೆ ಉಳಿದುಕೊಂಡಿದೆ.

ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರ, ಶಬ್ದದ ಪ್ರಮಾಣ ಅಳೆಯುವ ಮೀಟರ್ ಖರೀದಿ, ಹೊಗೆ ತಪಾಸಣೆಗೆ ಸೆನ್ಸರ್, ಕಸ ಗುಡಿಸುವ ಯಂತ್ರಗಳ ಖರೀದಿ... ಈ ಪ್ರಕ್ರಿಯೆಗಳು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿರುವ ಹೊಸ ಪಟ್ಟಿಯಲ್ಲಿಯೂ ಸೇರ್ಪಡೆಯಾಗಿವೆ.

ವಾಯುಮಾಲಿನ್ಯವನ್ನು ತಪ್ಪಿಸಲು ಇರುವ ಮಾನದಂಡಗಳನ್ನು ಪಾಲಿಸದೆ ಅನುದಾನ ಘೋಷಣೆಯಿಂದ ಪ್ರಯೋಜನ ಆಗುವುದಿಲ್ಲ ಎಂದು ತಜ್ಞರು ಹೇಳುತ್ತಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 6-11-1997

● ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ: ರಂಗ ನಿರ್ಧಾರ

ನವದೆಹಲಿ, ನವೆಂಬರ್ 5– ಉತ್ತರಪ್ರದೇಶ ವಿದ್ಯಮಾನದಂಥ 'ಕೀಳು ರಾಜಕೀಯ ತಂತ್ರ'ಕ್ಕೆ ಕಡಿವಾಣ ಹಾಕುವ ಸಲುವಾಗಿ ಪಕ್ಷಾಂತರ ನಿಷೇಧ ಮಸೂದೆಗೆ ತಿದ್ದುಪಡಿ ತರಲು ಸಂಯುಕ್ತ ರಂಗ ಸರ್ಕಾರ ನಿರ್ಧರಿಸಿದೆ.

ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲೇ ಮಂಡಿಸಲಾಗುವುದು ಎಂದು ರಂಗದ ವಕ್ತಾರ ಜೈಪಾಲ್ ರೆಡ್ಡಿ ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 6-11-1972

● ಕಾಶ್ಮೀರ: ಹತೋಟಿ ರೇಖೆ ಗುರುತಿಸಿದ ನಂತರವೇ ಭಾರತ ಸೇನೆ ವಾಪಸು

ನವದೆಹಲಿ, ನವೆಂಬರ್ 5– ಭಾರತ ಹಾಗೂ ಪಾಕಿಸ್ತಾನಗಳ ಹಿರಿಯ ಕಮ್ಯಾಂಡರುಗಳು ಪರಸ್ಪರ ಒಪ್ಪಿ ಸೂಚಿಸಿರುವ 19 ಭೂಪಟಗಳ ಆಧಾರದ ಮೇಲೆ ಜಮ್ಮು ಮತ್ತು ಕಾಶ್ಮೀರದ ಹತೋಟಿ ರೇಖೆ ಗುರುತಿಸುವ ಕಾರ್ಯ ಮುಗಿಸಿದ ಮೇಲೆ ಶೀಘ್ರವೇ ಭಾರತೀಯ ಪಡೆಗಳನ್ನು ಅಂತರರಾಷ್ಟ್ರೀಯ ಗಡಿ ರೇಖೆಗೆ ಹಿಂತೆಗೆದುಕೊಳ್ಳಲು ಸಿದ್ಧವಾಗಿರುವುದಾಗಿ ಭಾರತದ ಪ್ರಧಾನ ದಂಡನಾಯಕ ಜನರಲ್ ಮಣೇಕ್ ಷಾ ಅವರು ಪಾಕಿಸ್ತಾನದ ಜನರಲ್ ಟಿಕ್ಕಾಖಾನ್ ಅವರಿಗೆ ಇಂದು ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ನವೆಂಬರ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ತ್ರಯೋದಶಿ ಗಂ. 16-29 ನಕ್ಷತ್ರ: ರೇವತಿ ಗಂ. 24-04 ಯೋಗ: ವಜ್ರ ಗಂ. 23-49, ಕರಣ: ತೈತಿಲ ಗಂ. 16-29, ತುಲಾ ಮಾಸದ 19 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-30 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 10 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 4, 5

ಮೇಷ: ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳುವುದರಿಂದ ವೈಯಕ್ತಿಕ ಜೀವನದಲ್ಲಿ ವಿಷಾದ, ದುಃಖ ಆವರಿಸುವ ಲಕ್ಷಣ ಗೋಚರಿಸುತ್ತಿರುವುದನ್ನು ಸರಿಪಡಿಸಿಕೊಳ್ಳಬಹುದು. ತರಕಾರಿ ಮತ್ತು ಹಣ್ಣು ವ್ಯಾಪಾರಿಗಳಿಗೆ ಜೋರಿನ ವ್ಯಾಪಾರ.

ವೃಷಭ: ಅಭಿವೃದ್ಧಿಯ ಅಥವಾ ಕ್ರೋಢೀಕರಣದ ಬಗ್ಗೆ ಪ್ರಮುಖ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸರಿಯಾದ ಸಮಯ. ಬೇರೆಯವರ ಸಹಾಯ ಅಪೇಕ್ಷಿಸದೆ ವಿಶ್ವಾಸದಿಂದ ಕಾರ್ಯೋನ್ಮುಖರಾಗಿ. ಜಯ ನಿಮಗೆ ಒದಗುತ್ತದೆ.

ಮಿಥುನ: ವಾಸ ಮಾಡುವ ಜಾಗದ ಬದಲಾವಣೆ ಅನಿವಾರ್ಯವಾಗಲಿದೆ. ಸಂದರ್ಭಗಳನ್ನು ಬಳಸಿಕೊಳ್ಳುವ ಜಾಣತನವನ್ನು ಅಭ್ಯಸಿಸಿಕೊಳ್ಳಿರಿ. ನಿಮ್ಮ ಪರವಾಗಿರುವ ಪರಿಸ್ಥಿತಿಯ ಲಾಭ ಪಡೆಯಲು ವಿಫಲರಾಗಬೇಡಿ.

ಕರ್ಕಾಟಕ: ಸಾಕಷ್ಟು ಸಮಸ್ಯೆಗಳು ನಿಮ್ಮ ಆತ್ಮವಿಶ್ವಾಸಕ್ಕೆ ಅಡ್ಡಿ ಉಂಟು ಮಾಡಲಿವೆ. ಸಹವರ್ತಿಗಳು, ಸಂಬಂಧಿಗಳನ್ನು ಪ್ರೀತಿ ವಿಶ್ವಾಸದಿಂದ ಕಂಡಲ್ಲಿ ಒಳಿತಾಗುವುದು. ಲೆಕ್ಕ ಪತ್ರಗಳ ಪರಿಶೀಲನೆಯಲ್ಲಿ ದಿನ ಕಳೆದಂತಾಗಲಿದೆ.

ಸಿಂಹ: ಜಮೀನಿನ ಕೆಲಸ ಕಾರ್ಯಗಳು ನಿಮ್ಮ ಮನಸ್ಸಿನಲ್ಲಿ ತೀರ್ಮಾನಿಸಿದಂತೆ ನಡೆಯುವುದು ಕಷ್ಟವಾಗಲಿವೆ. ಗೆಳೆಯನ ಅನಿರೀಕ್ಷಿತ ಆಗಮನ ಸಮಯವನ್ನು ವ್ಯರ್ಥ ಮಾಡಿಸಿದರೂ ಮನಸ್ಸಿಗೆ ಸಂತೋಷ ಉಂಟಾಗುವುದು.

ಕನ್ಯಾ: ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು. ಪರಿಣಿತರ ಸಲಹೆ, ಸೂಚನೆಗಳೊಂದಿಗೆ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ. ಚಿನ್ನಾಭರಣ ಖರೀದಿಯ ಯೋಗ.

ತುಲಾ: ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇ ಬೇಕಾದ ಪರಿಸ್ಥಿತಿ ತೋರಲಿದೆ. ಯಾವುದೇ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದಾಗ ಭವಿಷ್ಯದ ದೃಷ್ಟಿ ಇರಲಿ. ಮಗಳ ಶಿಕ್ಷಣವನ್ನು ಮುಂದುವರೆಸುವ ಬಗ್ಗೆ ತೀರ್ಮಾನಿಸಿ.

ವೃಶ್ಚಿಕ: ಸಮಸ್ಯೆಗಳಿಗೆ ಕಾರಣವಾಗಿರುವ ಜನ, ಪರಿಸ್ಥಿತಿ ಬಗ್ಗೆ ನಿಮಗೆ ಮಾಹಿತಿ ಇಲ್ಲದಿದ್ದರೆ ತೊಂದರೆ ಉಲ್ಬಣಿಸುವ ಸಾಧ್ಯತೆಗಳಿವೆ. ಸಮಸ್ಯೆಗೆ ಮೂಲ ಏನೆಂಬುದನ್ನು ಕಂಡುಕೊಂಡರೆ ಪರಿಸ್ಥಿತಿ ಸುಧಾರಿಸುವುದು.

ಧನು: ವೈವಾಹಿಕ ಸಂಬಂಧಿ ಮಾತುಕತೆಗಳು ಫಲ ನೀಡಲಿವೆ. ನಿಮ್ಮ ಮಿತ್ರ ವೃಂದದಲ್ಲಿ ಹಣಕಾಸಿನ ವಿಚಾರವಾಗಿ ಸಣ್ಣ-ಪುಟ್ಟ ಮಾತುಗಳು ಬರುವುದು ಅಥವಾ ಸಂಬಂಧಕ್ಕೆ ಧಕ್ಕೆ ಉಂಟಾಗಬಹುದು. ಆರೋಗ್ಯ ಸುಧಾರಿಸುತ್ತದೆ.

ಮಕರ: ನಿಮ್ಮ ಕಲ್ಪನಾಶಕ್ತಿ ಇಂದು ಚುರುಕಾಗಿ ಕೆಲಸ ಮಾಡಲಿದೆ. ನೀವಿಂದು ಮಾಡುವ ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಕುಂಭ: ಇಂದು ದೈನಂದಿನ ಚಟುವಟಿಕೆಗಳನ್ನು ಹೊರತು ಪಡಿಸಿ ವಿಭಿನ್ನವಾದ ಪ್ರಯೋಗಗಳಲ್ಲಿ ತೊಡಗಿಸಿಕೊಳ್ಳಿ. ಸಕಾರಾತ್ಮಕ ಮನೋಭಾವದಿಂದ ಎಲ್ಲರ ಮನಸ್ಸನ್ನೂ ಗೆಲ್ಲುವಿರಿ. ದೂರ ಪ್ರಯಾಣ ಸಂಭವವಿದೆ.


ಮೀನ: ತಂದೆಗೆ ಕೊಟ್ಟಿರುವ ಮಾತು ಉಳಿಸಿಕೊಳ್ಳುವ ಬಗ್ಗೆ ಗಮನವಿರಲಿ. ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಯೊಂದಿಗೆ ಮಾತುಕತೆ ನಡೆಸಿ. ನಿಮ್ಮ ಸಂತೋಷ ಹಂಚಿಕೊಳ್ಳಲು ಇದು ಒಳ್ಳೆಯ ಸಮಯ.

ಪದಬಂಧ 5130

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅನಿರೀಕ್ಷಿತ ಘಟನೆಯಿದು (4)
3. ನೀರು ಧುಮ್ಮಿಕ್ಕುವ ಸ್ಥಳ (4)
5. ದಾಯಾದಿಯ ಬೀಳ್ಕೊಡುವಿಕೆ! (3)
7. ಗಾರುಡಿಗ ಎರಚಿದ ಕೆಸರು (2)
8. ಆದರ ತೋರಿಸಿ ಹೇಳಿದ ಬೆಲೆ! (2)
10. ಬಣವೆ ಹಾಕುವಾಗ ಪಟ್ಟಿರುವ ತೊಂದರೆ (3)
11. ಪಥದಲ್ಲಿ ಸಾಗುವಾಗ ಮಾಡಿದ ಪ್ರತಿಜ್ಞೆ (3)
13. ಪುಢಾರಿ ಜೊತೆಯಲ್ಲಿರುವ ಶತ್ರು (2)
15. ಈತ ಸ್ನೇಹಿತ (2)
16. ಆನೆಯನ್ನು ಹತೋಟಿಯಲ್ಲಿಡಲು ಬಳಸುವಸಾಧನ (3)
18. ಗಳಿಕೆ ಕೊನೆಗಿದ್ದರೂ ಸಿಕ್ಕಿರುವ ನಿಂದೆ! (4)
19. ಈತ ಸೂರ್ಯನ ಮಗ (4)

ಮೇಲಿಂದ ಕೆಳಕ್ಕೆ
1. ಭಾರತೀಯ ವೈದ್ಯಶಾಸ್ತ್ರ (4)
2. ಕವಿತೆ ಬರೆಯುವವನು (2)
3. ಯಜಮಾನನಿಗೆ ದೊರೆತಿರುವ ಗೆಲುವು (2)
4. ವಸ್ತುಗಳನ್ನು ತೂಗುವ ಸಾಧನ (3)
6. ದಾನ ಕೊಡುತ್ತಿರುವ ಅಸುರ (3)
7. ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
9. ಪುಸ್ತಕದ ಮೇಲು ಹೊದಿಕೆ (4)
12. ತಪರಾಕು ಸಿಕ್ಕ ಮೇಲೆ ಈ ಹೊಗಳಿಕೆಯೇ? (3)
14. ಪುರಕ್ಕೆ ಬಂದಿರುವವನು ಗೌರವಿಸಲ್ಪಟ್ಟ ವ್ಯಕ್ತಿ (4)
15. ಶಿವನ ಕುದುರೆ ಇಲ್ಲಿಗೆ ಬಂದಿದೆ (3)
16. ಶಂಕೆಯುಳ್ಳವ ಹಾಕಿದ ಕಡಿವಾಣ (2)
17. ಶರಧಿಯಲ್ಲಿ ಬಿದ್ದಿರುವ ಬಾಣ (2)



5129ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅಸ್ತಿಭಾರ 3. ಅಭಿಜಾತ
6. ಹೆಸರು 8. ಪಲ್ಲವಿ
10. ಮರುಕ 11. ಲೋಕಕಲ್ಯಾಣ
12. ಗುಲಾಮ 13. ಕಡಸು
15. ಪಣತಿ 18. ಹಿತಶತ್ರು
19. ಅನುಲೇಪ

ಮೇಲಿಂದ ಕೆಳಕ್ಕೆ:
1. ಅಪರೂಪ 2. ಭಾವ
4. ಭಿಡೆ 5. ತಲೆಹೋಕ
7. ಸಮೀಕರಣ 9. ವಿಲೋಮ
10. ಮಣಕ 12. ಗುಣಾಗ್ರಹಿ
14. ಸುರಚಾಪ 16. ಪಾಶ
17. ಹೇನು

ಸುಡೊಕು 5516

1				2			8	4
		7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5515 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಲೋಕೋಪಯೋಗಿ ಇಲಾಖೆಯ 660 ಹುದ್ದೆಗಳಿಗೆ ನೇಮಕ: ಸಂದರ್ಶಕ ಮಂಡಳಿ ರಚನೆ

‘ಶೇ 40ಕ್ಕಿಂತ ಕಡಿಮೆ ಅಂಕಕ್ಕೆ ಕಾರಣ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿ (ಪಿಡಬ್ಲ್ಯುಡಿ) ಸಹಾಯಕ ಎಂಜಿನಿಯರ್ (ಗ್ರೇಡ್-1) 660 ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ನಡೆಸಲಿರುವ ಸಂದರ್ಶನದಲ್ಲಿ (ವ್ಯಕ್ತಿತ್ವ ಪರೀಕ್ಷೆ) ಭಾರಿ ಅಕ್ರಮ ನಡೆಯುವ ಸಾಧ್ಯತೆ ಇದೆ ಎಂದು ಅಭ್ಯರ್ಥಿಗಳು ಆರೋಪಿಸಿದ ಬೆನ್ನಲ್ಲೆ, 50 ಅಂಕಗಳಿಗೆ ನಡೆಯಲಿರುವ ಸಂದರ್ಶನದಲ್ಲಿ ಶೇ 80ಕ್ಕಿಂತ ಹೆಚ್ಚು (40 ಅಂಕ) ಅಥವಾ ಶೇ 40ಕ್ಕಿಂತ ಕಡಿಮೆ (20 ಅಂಕ) ಅಂಕ ನೀಡಿದರೆ, ಅದಕ್ಕೆ ಸಂದರ್ಶಕ ಮಂಡಳಿಯು ಕಾರಣವನ್ನು ದಾಖಲಿಸಬೇಕು ಎಂದು ರಾಜ್ಯ ಸರ್ಕಾರ ಸೂಚಿಸಿದೆ.

ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ 1:3 ಅನುಪಾತದಲ್ಲಿ ಸಂದರ್ಶನಕ್ಕೆ 1972 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದು, ಇದೇ 7ರಿಂದ ಸಂದರ್ಶನ ನಡೆಯಲಿದೆ.

‘ಸಂದರ್ಶನದಲ್ಲಿ ಅಂಕಗಳನ್ನು ನೀಡುವಾಗ ಅಕ್ರಮ ನಡೆಯುವ ಸಾಧ್ಯತೆ ಇದೆ. ಹೀಗಾಗಿ, 40 ಅಂಕಗಳಿಗಿಂತ ಹೆಚ್ಚು, 20 ಅಂಕಗಳಿಗಿಂತ ಕಡಿಮೆ ಅಂಕ ನೀಡಿದರೆ ಕಾರಣ ದಾಖಲಿಸಬೇಕು’ ಎಂದು ಆಗ್ರಹಿಸಿ ಕೆಪಿಎಸ್‌ಸಿ ಕಾರ್ಯದರ್ಶಿಗೆ ಹಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ, ಸಂದರ್ಶನ ನಡೆಸುವ ಪ್ರಕ್ರಿಯೆಯ ಬಗ್ಗೆ ಸ್ಪಷ್ಟನೆ ಕೇಳಿ ಸರ್ಕಾರಕ್ಕೆ ಕೆಪಿಎಸ್‌ಸಿ ಕಾರ್ಯದರ್ಶಿ ಪತ್ರ ಬರೆದಿದ್ದರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿ ಹೇಮಲತಾ ಅವರು ಸಂದರ್ಶನ ಪ್ರಕ್ರಿಯೆಯನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಶನಿವಾರ ಸ್ಪಷ್ಟೀಕರಣ ನೀಡಿದ್ದಾರೆ.

‘ಇಡೀ ಪ್ರಕ್ರಿಯೆಯನ್ನು ಪಾರ ದರ್ಶಕತೆ ಮತ್ತು ನ್ಯಾಯೋ ಚಿತವಾಗಿ ನಡೆಸಲು ಮತ್ತು ನೈಸರ್ಗಿಕ ನ್ಯಾಯ ಒದಗಿಸುವ ಉದ್ದೇಶದಿಂದ ಆಯ್ಕೆ ಪ್ರಾಧಿಕಾರದ ಅಧ್ಯಕ್ಷರು (ಕೆಪಿಎಸ್‌ಸಿ) ನಾಲ್ಕು ಜನರನ್ನು ಒಳಗೊಂಡ ಸಂದರ್ಶಕ ಮಂಡಳಿಯನ್ನು ರಚಿಸಬೇಕು. ಈ ಮಂಡಳಿಯಲ್ಲಿ ಕೆಪಿಎಸ್‌ಸಿಯ ಇಬ್ಬರಿಗಿಂತ ಹೆಚ್ಚು ಸದಸ್ಯರು ಇರಬಾರದು. ಅತ್ಯಂತ ಹಿರಿಯ ಸದಸ್ಯರು ಮಂಡಳಿಯ ಅಧ್ಯಕ್ಷತೆ ವಹಿಸಬೇಕು. ಇತರ ಸದಸ್ಯರು ರಾಜ್ಯ ಸರ್ಕಾರದ ನಿವೃತ್ತ ಗ್ರೂಪ್ ‘ಎ’ ಅಧಿಕಾರಿಗಳು, ರಾಜ್ಯದ ವಿಶ್ವವಿದ್ಯಾಲಯಗಳ ನಿವೃತ್ತ ಉಪ ಕುಲಪತಿಗಳು ಅಥವಾ ಸಂಬಂಧಪಟ್ಟ ಕ್ಷೇತ್ರದಲ್ಲಿನ ರಾಜ್ಯದ ವಿಶ್ವವಿದ್ಯಾಲಯಗಳ ನಿವೃತ್ತ ಪ್ರೊಫೆಸರುಗಳು ಆಗಿರಬೇಕು. ಸಂದರ್ಶಕ ಮಂಡಳಿಯ ಎಲ್ಲ ನಾಲ್ವರು ಸದಸ್ಯರು ನೀಡುವ ಅಂಕಗಳ ಸರಾಸರಿಯನ್ನು ಸಂದರ್ಶನದಲ್ಲಿ ಅಭ್ಯರ್ಥಿ ಗಳಿಸಿದ ಒಟ್ಟು ಅಂಕವೆಂದು ಪರಿಗಣಿಸಬೇಕು’ ಎಂದು ಅವರು ತಿಳಿಸಿದ್ದಾರೆ.

ತನಿಖಾ ಪ್ರಕ್ರಿಯೆ ಡಿಜಿಟಲೀಕರಣಕ್ಕೆ ಆದೇಶ

ಒಂದನೇ ಪುಟದಿಂದ...

ಡಿಜಿಟಲೀಕರಣ ಮಾಡಲು ಪೊಲೀಸ್ ಇಲಾಖೆಯ ಮಾಹಿತಿ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರು, ಇ–ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಪ್ರತಿನಿಧಿ ಹಾಗೂ ಕ್ರೈಂ ಅಂಡ್ ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ಸ್ ಅಂಡ್ ಸಿಸ್ಟಮ್ಸ್ (ಸಿಸಿಟಿಎನ್‌ಎಸ್) ನಿರ್ದೇಶಕರ ಪ್ರತಿನಿಧಿ ಒಳಗೊಂಡ ಕಾರ್ಯಪಡೆ ರಚಿಸಲು ನ್ಯಾಯಪೀಠ ನಿರ್ದೇಶಿಸಿದೆ.

‘ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ಪ್ರಥಮ ಮಾಹಿತಿ ವರದಿ (ಎಫ್‌ಐಆರ್), ಅಪರಾಧ ವಿವರಗಳ ನಮೂನೆಗಳು, ಬಂಧನ ಮೆಮೊ, ಶೋಧ ಮತ್ತು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಪಟ್ಟಿಗಳು, ಮಹಜರು ವರದಿಗಳು, ಹೇಳಿಕೆಗಳು, ತನಿಖೆಯ ಅವಧಿಯಲ್ಲಿ ಆಸ್ಪತ್ರೆಗಳು ಮತ್ತು ಸಾರಿಗೆ ಇಲಾಖೆಯಿಂದ ಪಡೆದ ದಾಖಲೆಗಳು, ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ, ಆರೋಪಪಟ್ಟಿ, ತನಿಖೆಯನ್ನು ಮುಕ್ತಾಯಗೊಳಿಸುವ ‘ಬಿ’ ವರದಿ, ‘ಸಿ’ ವರದಿ ಸೇರಿದಂತೆ ಎಲ್ಲ ದಾಖಲೆಗಳನ್ನೂ ಡಿಜಿಟಲೀಕರಿಸಿ ಸಂಗ್ರಹಿಸಿಡಬೇಕು. ಡಿಜಿಟಲ್ ಸಹಿಯೊಂದಿಗೆ ಈ ದಾಖಲೆಗಳನ್ನು ಜಾಮೀನು ಅರ್ಜಿ ವಿಚಾರಣೆ, ಪ್ರಕರಣದ ವಿಚಾರಣೆ, ಮೇಲ್ಮನವಿ ಹಾಗೂ ಮರು ಮೇಲ್ಮನವಿಗಳ ವಿಚಾರಣೆ ವೇಳೆ ನ್ಯಾಯಾಲಯಗಳೊಂದಿಗೆ ಹಂಚಿಕೊಳ್ಳಬೇಕು’ ಎಂದು ನ್ಯಾಯಪೀಠ ಹೇಳಿದೆ.

ಡಿಜಿಟಲೀಕರಣ ಕುರಿತು ಡಿಜಿಪಿ ಮಾರ್ಗಸೂಚಿಗಳನ್ನು ಹೊರಡಿಸಬೇಕು. ಅದನ್ನು ಪಾಲಿಸದ ತನಿಖಾಧಿಕಾರಿಗಳಿಗೆ ದಂಡ ವಿಧಿಸುವ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿರುವ ನ್ಯಾಯಪೀಠ, ಡಿ. 5ರೊಳಗೆ ಅನುಪಾಲನಾ ವರದಿ ಸಲ್ಲಿಸುವಂತೆ ಸೂಚಿಸಿದೆ.

ಮಹಿಳೆಯೊಬ್ಬರ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ, ಬಾಗಲಕೋಟೆ ಜಿಲ್ಲೆಯ ಮುಧೋಳದ ವ್ಯಕ್ತಿಯೊಬ್ಬರಿಗೆ ಜೀವಾವಧಿ ಶಿಕ್ಷೆ ಮತ್ತು ಅವರ ತಾಯಿಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿ 2016ರ ಸೆಪ್ಟೆಂಬರ್‌ನಲ್ಲಿ ಆದೇಶಿಸಿತ್ತು. ತನಿಖೆ ಹಾಗೂ ತನಿಖಾ ದಾಖಲೆಗಳಲ್ಲಿನ ಲೋಪದ ಕಾರಣಕ್ಕಾಗಿ ಶಿಕ್ಷೆ ರದ್ದುಪಡಿಸಿರುವ ಹೈಕೋರ್ಟ್ ವಿಭಾಗೀಯ ಪೀಠ, ದಾಖಲೆಗಳ ಡಿಜಿಟಲೀಕರಣಕ್ಕೆ ಆದೇಶಿಸಿತು.

ಭರವಸೆ ಅನುಷ್ಠಾನ: ಸುತ್ತೋಲೆ

ಬೆಂಗಳೂರು: ವಿಧಾನಮಂಡಲ ಅಧಿವೇಶನದಲ್ಲಿ ಸಚಿವರು ನೀಡುವ ಭರವಸೆಗಳನ್ನು ತುರ್ತು ಅನುಷ್ಠಾನಕ್ಕೆ ತರಲು ತ್ವರಿತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಶುಕ್ರವಾರ ಸುತ್ತೋಲೆ ಹೊರಡಿಸಿದ್ದಾರೆ.

‘ಸಚಿವರು ವಿಧಾನಮಂಡಲದಲ್ಲಿ ನೀಡುವ ಭರವಸೆಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಲು ಎಲ್ಲ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ನೀಡಬೇಕು. ಆ ಮೂಲಕ ಈ ವಿಷಯಗಳು ವಿಧಾನ ಪರಿಷತ್‌ನ ಸರ್ಕಾರಿ ಭರವಸೆಗಳ ಸಮಿತಿ ಎದುರು ಪದೇ ಪದೇ ಚರ್ಚೆಗೆ ಬರುವುದನ್ನು ತಪ್ಪಿಸಬೇಕು’ ಎಂದು ಸಮಿತಿಯ ಅಧ್ಯಕ್ಷ ಬಿ.ಎಂ. ಫಾರೂಕ್ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ.

ಈ ಬಗ್ಗೆ ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಮುಖ್ಯ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದಾರೆ.

ಡಿ.ಸಿಗೆ ವರದಿ ಕೇಳಿದ ಸರ್ಕಾರ

ಚಿತ್ರದುರ್ಗ: ಮುರುಘಾ ಮಠದ ಆಡಳಿತ ಹಾಗೂ ಅದರ ಅಧೀನದಲ್ಲಿರುವ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ಬಗ್ಗೆ ರಾಜ್ಯ ಸರ್ಕಾರ ವರದಿ ಕೇಳಿದ್ದು, ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜಿ ಅವರು ಶನಿವಾರ ಅಗತ್ಯ ಮಾಹಿತಿ ಕಲೆಹಾಕಿದ್ದಾರೆ.

ಚಿನ್ಮುಲಾದ್ರಿ ಶ್ರೀಜಗದ್ಗುರು ಮುರುಘರಾಜೇಂದ್ರ ಟ್ರಸ್ಟ್ ಹಾಗೂ ಎಸ್‌ಜೆಎಂ ವಿದ್ಯಾಪೀಠದ ಆಡಳಿತಾತ್ಮಕ ವಿಚಾರಕ್ಕೆ ಸಂಬಂಧಿಸಿದಂತೆ ವರದಿ ನೀಡುವಂತೆ ಕಂದಾಯ ಇಲಾಖೆಯು ಜಿಲ್ಲಾಧಿಕಾರಿಗೆ ಸೂಚನೆ ನೀಡಿದೆ. ಈ ಸೂಚನೆಯ ಪತ್ರ ಶುಕ್ರವಾರವಷ್ಟೇ ಜಿಲ್ಲಾಧಿಕಾರಿ ಕೈಸೇರಿತ್ತು.

ದಿವ್ಯ ಪ್ರಭು ಅವರು ಶನಿವಾರ ಮುರುಘಾ ಮಠಕ್ಕೆ ಭೇಟಿ ನೀಡಿ ಟ್ರಸ್ಟ್‌ಗೆ ಸಂಬಂಧಿಸಿದ ಅಗತ್ಯ ದಾಖಲೆ ಹಾಗೂ ಮಾಹಿತಿ ಕೇಳಿದ್ದಾರೆ. ಎಸ್‌ಜೆಎಂ ವಿದ್ಯಾಪೀಠದ ಅಧೀನದಲ್ಲಿರುವ ಚಂದ್ರವಳ್ಳಿ ಪದವಿ ಕಾಲೇಜಿಗೆ ತೆರಳಿ ಕಾರ್ಯವೈಖರಿ, ವೇತನ, ನೇಮಕಾತಿ ಕುರಿತಾದ ಮಾಹಿತಿ ಕಲೆಹಾಕಿದ್ದಾರೆ.

ಪ್ರೌಢಶಾಲೆ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಪೊಲೀಸರು ಬಂಧಿಸಿದ ಬಳಿಕ ಪೀಠತ್ಯಾಗಕ್ಕೆ ಒತ್ತಡ ಸೃಷ್ಟಿಯಾಗಿದೆ. ಮಾಜಿ ಸಚಿವ ಎಚ್.ಏಕಾಂತಯ್ಯ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರ ನಿಯೋಗ ಈಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಸರ್ಕಾರದ ಮಧ್ಯಪ್ರವೇಶಕ್ಕೆ ಮನವಿ ಮಾಡಿತ್ತು.

ಮುರುಘಾ ಮಠದಲ್ಲಿ ಸ್ಥಳ ಮಹಜರು

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದ 2ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಮೂರ್ತಿ ಮುರುಘಾ ಶರಣರನ್ನು ಪೊಲೀಸರು ಶನಿವಾರ ಮುರುಘಾ ಮಠಕ್ಕೆ ಕರೆ ತಂದು ಸ್ಥಳ ಮಹಜರು ನಡೆಸಿದರು.

ಬೆಳಿಗ್ಗೆ ಡಿವೈಎಸ್‌ಪಿ ಕಚೇರಿಯಿಂದ ಪೊಲೀಸ್ ವಾಹನದಲ್ಲಿ ಅವರನ್ನು ಮಠಕ್ಕೆ ಕರೆತರಲಾಯಿತು.

ಸತತ ಎರಡು ಗಂಟೆಗಳ ಕಾಲ ಸಿಪಿಐ ಬಾಲಚಂದ್ರ ನಾಯ್ಕ್ ನೇತೃತ್ವದಲ್ಲಿ ಕೃತ್ಯ ನಡೆದ ಸ್ಥಳದ ಮಹಜರು ನಡೆಸಲಾಯಿತು. ಈ ವೇಳೆ 2 ಬ್ಯಾಗ್‌ಗಳಲ್ಲಿ ಸಾಕ್ಷ್ಯಕ್ಕೆ ಸಂಬಂಧಿತ ವಸ್ತುಗಳು, ಶರಣರ ಬಟ್ಟೆ ಮತ್ತಿತರೆ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದರು.

ಬಳಿಕ ಜಿಲ್ಲಾ ಆಸ್ಪತ್ರೆಗೆ ಕರೆ ತಂದು ಆರೋಗ್ಯ ತಪಾಸಣೆ ನಡೆಸಿ ಪುನಃ ಡಿವೈಎಸ್ಪಿ ಕಚೇರಿಗೆ ಕರೆದುಕೊಂಡು ಹೋದರು. ಮೂರು ದಿನಗಳ ಪೊಲೀಸ್ ವಿಚಾರಣೆ ಶನಿವಾರ ಮುಗಿದ ಕಾರಣಕ್ಕೆ ಮಧ್ಯಾಹ್ನ 4 ಗಂಟೆಗೆ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ.8ರವರೆಗೆ ನ್ಯಾಯಾಂಗ ಬಂಧನ ವಿಧಿಸಿದ್ದರಿಂದ ಅವರನ್ನು ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಯಿತು.

ಸಹಾಯಕ ಪ್ರಾಧ್ಯಾಪಕ ಹುದ್ದೆ: ನ. 9ರಿಂದ ದಾಖಲಾತಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು 1:3 ಅನುಪಾತದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಡುಗಡೆ ಮಾಡಿದೆ.

ಪರೀಕ್ಷೆಯ ಅಂಕಗಳ ಆಧಾರದಲ್ಲಿ 26 ವಿಷಯಗಳ ಅಭ್ಯರ್ಥಿಗಳ ಪ್ರತ್ಯೇಕ ಪಟ್ಟಿಯನ್ನು ಮೀಸಲಾತಿಗೆ ಅನುಗುಣವಾಗಿ ಪ್ರಕಟಿಸಲಾಗಿದೆ. ನವೆಂಬರ್ 9ರಿಂದ ದಾಖಲೆಗಳ ಪರಿಶೀಲನೆ ಆರಂಭವಾಗುತ್ತದೆ.

ಈ ಪ್ರಕ್ರಿಯೆಯು 21ರ ವರೆಗೂ ಮುಂದುವರಿಯಲಿದೆ. ಆಯಾ ಅಭ್ಯರ್ಥಿಗಳು ನಿಗದಿತ ದಿನಾಂಕಗಳಂದು ಪ್ರಾಧಿಕಾರದ ಕಚೇರಿಗೆ ಪರಿಶೀಲನೆಗೆ ಹಾಜರಾಗಬೇಕು ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ವಾಂತಿ– ಭೇದಿ: ಮತ್ತೊಬ್ಬರ ಸಾವು



ವಿಠ್ಠಲ ಹನುಮಂತ ಗುಡಿಹಿಂದ

ರಾಮದುರ್ಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮದೇನೂರ ಗ್ರಾಮದಲ್ಲಿ ವಾಂತಿ– ಭೇದಿಯ ಕಾರಣ ಶನಿವಾರ ಮತ್ತೊಬ್ಬರು ಮೃತಪಟ್ಟಿದ್ದಾರೆ.

ಇವರೊಂದಿಗೆ ಕಲುಷಿತ ನೀರು ಸೇವನೆಯಿಂದ ಮೃತಪಟ್ಟವರ ಸಂಖ್ಯೆ ಮೂರಕ್ಕೆ ಏರಿದೆ.

ಮುದೇನೂರ ನಿವಾಸಿ ವಿಠ್ಠಲ ಹನುಮಂತ ಗುಡಿಹಿಂದ (ಮಾದರ) (40) ಮೃತಪಟ್ಟವರು. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಜಂಬಗಿ ಮೂಲದವರಾದ ಅವರು ಕಳೆದ 20 ವರ್ಷಗಳಿಂದ ಮುದೇನೂರಿಗೆ ಬಂದು ಜೀವನ ಕಟ್ಟಿಕೊಂಡಿದ್ದರು.

ಭೂಮಂಜೂರಾತಿಯಲ್ಲಿ ನಿಯಮ ಉಲ್ಲಂಘನೆ

ಒಂದನೇ ಪುಟದಿಂದ

‘ಹಿಂದಿನ ಬಗರ್‌ಹುಕುಂ ಸಮಿತಿಯಿಂದ ತಿರಸ್ಕೃತಗೊಂಡ ಅರ್ಜಿಗಳಿಗೂ ಭೂಮಿ ಮಂಜೂರು ಮಾಡಲಾಗಿದೆ. ಒಬ್ಬರಿಗೆ ಮಂಜೂರಾದ ಭೂಮಿಯ ಮೇಲೆ, ಮತ್ತೊಬ್ಬರ ಮಂಜೂರಾತಿ ನಕ್ಷೆ ತಯಾರು ಮಾಡಲಾಗಿದೆ’ ಎಂಬುದು ವರದಿಯಲ್ಲಿದೆ.

ತಾಲ್ಲೂಕಿನಲ್ಲಿ ಬಗರ್ ಹುಕುಂ ಸಕ್ರಮ ಸಮಿತಿಯಲ್ಲಿ 2016ರಿಂದ 2020ರವರೆಗೆ ಮಂಜೂರಾಗಿರುವ ಪ್ರಕರಣಗಳಲ್ಲಿ ನ್ಯೂನತೆಗಳು ಕಂಡುಬಂದಿದ್ದು, ಈ ಬಗ್ಗೆ ಸೂಕ್ತ ನಿರ್ದೇಶನ ಕೋರಿ, ಪರಿಶೀಲಿಸುವಂತೆ 2020ರಲ್ಲಿ ಅಂದಿನ ತಹಶೀಲ್ದಾರ್ ಎನ್.ವಿ.ನಟೇಶ್ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು.

ಈ ಬಗ್ಗೆ ತನಿಖೆ ನಡೆಸಲು ಹೆಚ್ಚುವರಿ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಸಕಲೇಶಪುರ ಉಪ ವಿಭಾಗಾಧಿಕಾರಿಗೆ 2020ರಲ್ಲೇ ಸೂಚಿಸಿದ್ದರು. ಪ್ರತೀಕ್ ಭಾಯಲ್ 2016ರಿಂದ 2022ರವರೆಗೆ ಮಂಜೂರಾದ 1,430 ಕಡತಗಳನ್ನು ಪರಿಶೀಲಿಸಿದ್ದು, ನ್ಯೂನತೆಗಳ ಬಗ್ಗೆ ವರದಿಯಲ್ಲಿ ತಿಳಿಸಿದ್ದಾರೆ.

ಹಳ್ಳಿಗಳ ಅಂತಃಸತ್ವ ಜಾಗೃತಗೊಳಿಸುವ ಗುರಿ: ಉದ್ಯೋಗ ಸೃಷ್ಟಿಯ ಉದ್ದೇಶ

ಗ್ರಾಮ ಸ್ವರಾಜ್ಯಕ್ಕೆ 'ಸ್ವಗ್ರಾಮ ಫೆಲೋಶಿಪ್'

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಗ್ರಾಮಗಳಲ್ಲಿ ನಿರಂತರ ಹಾಗೂ ಸುಸ್ಥಿರ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶದೊಂದಿಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ರೂಪಿಸಿರುವ 'ಸ್ವಗ್ರಾಮ ಫೆಲೋಶಿಪ್'ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಸ್ಥಳೀಯರ ಜತೆಗೆ ಅನಿವಾಸಿ ವ್ಯಕ್ತಿಗಳ ಸ್ವಗ್ರಾಮ ಅಭಿವೃದ್ಧಿಯ ತುಡಿತಕ್ಕೆ ಈ ಯೋಜನೆ ವೇದಿಕೆ ಒದಗಿಸಲಿದೆ.

ಪ್ರತಿಯೊಂದು ಗ್ರಾಮಕ್ಕೂ ಒಂದು ಸ್ವಭಾವ, ಸಂಸ್ಕೃತಿ ಇರುತ್ತದೆ. ಹಳ್ಳಿಯಿಂದ ಹಳ್ಳಿಗೆ ಅದು ಭಿನ್ನವಾಗಿರುತ್ತದೆ. ಗ್ರಾಮದ ಅಂತಃಸತ್ವವನ್ನು ಜಾಗೃತಗೊಳಿಸದೇ ಬರೀ ಕಟ್ಟಡಗಳ ನಿರ್ಮಾಣದಿಂದ ಗ್ರಾಮೀಣಾಭಿವೃದ್ಧಿ ಸಾಧ್ಯವಿಲ್ಲ. ಒಂದು ಗ್ರಾಮದ ಸ್ವಭಾವಕ್ಕೆ ತಕ್ಕಂತೆ ಅಲ್ಲಿನ ಜನರ ಸಹಭಾಗಿತ್ವದೊಂದಿಗೆ ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದೇ ಸ್ವಗ್ರಾಮ ಫೆಲೋಶಿಪ್‌ನ ಉದ್ದೇಶವಾಗಿದೆ.

'ವಿಶ್ವವಿದ್ಯಾಲಯದ ಮೂಲ ಉದ್ದೇಶವೇ ಗ್ರಾಮೀಣಾಭಿವೃದ್ಧಿಯಾಗಿದ್ದು, ಅದಕ್ಕೆ ಪೂರಕವಾಗಿ ಸ್ವಗ್ರಾಮ ಫೆಲೋಶಿಪ್ ಅನ್ನು ದೇಶದಲ್ಲಿ ಮೊದಲ ಬಾರಿಗೆ ಪರಿಚಯಿಸಲಾಗಿದೆ. ಈ ಯೋಜನೆಯಲ್ಲಿ ಮೊದಲಿಗೆ ಗ್ರಾಮಗಳು, ನಂತರ ಫೆಲೋ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಇಬ್ಬರು ಸ್ಥಳೀಯ ವ್ಯಕ್ತಿಗಳ ಜತೆಗೆ ಶಿಕ್ಷಣ, ಉದ್ಯೋಗದ ನಿಮಿತ್ತ ಬೇರೆ ಸ್ಥಳದಲ್ಲಿರುವ ಹಾಗೂ ಊರಿನ ಅಭಿವೃದ್ಧಿ ಬಗ್ಗೆ ಕಾಳಜಿ ಹೊಂದಿರುವ ವ್ಯಕ್ತಿಯೊಬ್ಬನನ್ನು ಇವರೊಂದಿಗೆ ಜೋಡಿಸಲಾಗುವುದು. ಒಂದೇ ಗ್ರಾಮದ ಮೂವರ ಗುಂಪಿನಿಂದ ಹಳ್ಳಿಗಳನ್ನು ಅಭಿವೃದ್ಧಿಪಡಿಸುವುದು ಯೋಜನೆಯ ಗುರಿಯಾಗಿದೆ' ಎನ್ನುತ್ತಾರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ.

'ಒಂದು ಗ್ರಾಮದಲ್ಲಿ ಹಲವು ಕಾರ್ಯಕ್ರಮಗಳು ನಡೆಯುತ್ತವೆ. ಅದರಲ್ಲಿ ಎಲ್ಲರೂ ಭಾಗವಹಿಸುವುದಿಲ್ಲ. ಆದರೆ, ಜಾತ್ರೆಗಳು ಊರಿನವರೆನ್ನೆಲ್ಲಾ ಒಂದೆಡೆ ಸೇರಿಸುತ್ತವೆ. ಶಿಕ್ಷಣ, ಉದ್ಯೋಗ, ಆರೋಗ್ಯ ಈ ಮೂರು ಉದ್ದೇಶಗಳಿಗಾಗಿಯೇ ಅನೇಕರು ಊರು ತೊರೆಯುತ್ತಾರೆ. ಈ ಮೂರೂ ಊರಿನಲ್ಲೇ ಸಿಗುವಂತಾದರೆ ಯಾರೂ ವಲಸೆ ಹೋಗುವುದಿಲ್ಲ. ಈ ಫೆಲೋಶಿಪ್ ಅವಧಿ ಮೂರು ವರ್ಷಗಳದ್ದಾಗಿದ್ದು, ಮೊದಲ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಸಿದ್ಧತೆಗಳು, ಆಯ್ಕೆಯಾದ ಗುಂಪುಗಳಿಗೆ ಸಂಪನ್ಮೂಲ ವ್ಯಕ್ತಿಗಳು ತರಬೇತಿ, ಮಾರ್ಗದರ್ಶನ ನೀಡಲಿದ್ದಾರೆ. ನಂತರ ಕ್ರಿಯಾಯೋಜನೆಗಳು ರೂಪುಗೊಳ್ಳಲಿವೆ. ಸ್ವಗ್ರಾಮ ಫೆಲೋಶಿಪ್ ರಾಜ್ಯದಲ್ಲಿ ಯಶಸ್ವಿಯಾದರೆ ಅದನ್ನು ರಾಷ್ಟ್ರಮಟ್ಟದಲ್ಲಿ ವಿಸ್ತರಿಸುವ ಆಶಯ ಹೊಂದಲಾಗಿದೆ' ಎನ್ನುತ್ತಾರೆ ಅವರು.

75 ಗ್ರೂಪ್‌ಗೆ ಫೆಲೋಶಿಪ್ ನೀಡುವ ಯೋಚನೆ: ವಿಷ್ಣುಕಾಂತ ಎಸ್.ಚಟಪಲ್ಲಿ



'ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸ್ವಗ್ರಾಮ ಫೆಲೋಶಿಪ್‌ಗೆ 75 ಗುಂಪುಗಳನ್ನು ರಚಿಸುವ ಯೋಚನೆ ಇದೆ. ಆಸಕ್ತರ ಸಂಖ್ಯೆ ಜಾಸ್ತಿಯಾದರೆ ಹೆಚ್ಚಿನ ಗುಂಪುಗಳನ್ನು ರಚಿಸಲಾಗುವುದು' ಎನ್ನುತ್ತಾರೆ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ.

ಫೆಲೋಶಿಪ್‌ಗೆ ಆಯ್ಕೆಯಾದ ವ್ಯಕ್ತಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸುತ್ತಾನೆಯೇ ಹೊರತು, ಅವನೇ ಬದಲಾವಣೆಯ ಹರಿಕಾರನಲ್ಲ. ಸ್ವಂತ ಉದ್ಯೋಗದ ಜತೆಗೆ ಬಿಡುವಿನ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿಗೆ ನಿರಂತರವಾಗಿ ತೊಡಗಿಸಿಕೊಳ್ಳುವ ಫೆಲೋಗೆ ಪ್ರತಿ ತಿಂಗಳು ₹5 ಸಾವಿರ ನೀಡಲಾಗುವುದು. ಗ್ರಾಮದ ವಿಕಾಸಕ್ಕೆ ಪೂರಕವಾಗಿ ಹಮ್ಮಿಕೊಳ್ಳುವ ಚಟುವಟಿಕೆ ಕೈಗೊಳ್ಳಲು ಮೊದಲ ವರ್ಷ ₹50 ಸಾವಿರದವರೆಗೆ ಮೂಲಧನ ನೀಡಲಾಗುವುದು. ಎರಡು ಮತ್ತು ಮೂರನೇ ವರ್ಷದಲ್ಲಿ ಚಟುವಟಿಕೆ ಕೈಗೊಳ್ಳಲು ಬೇಕಿರುವ ಹಣ ಕ್ರೋಡೀಕರಿಸಲು ಫೆಲೋಗಳಿಗೆ ತರಬೇತಿ ನೀಡಲಾಗುವುದು. ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಲು ಡಿ. 15 ಕೊನೆ ದಿನವಾಗಿದ್ದು, ಮಾಹಿತಿಗೆ: 98444 56208 ಸಂಪರ್ಕಿಸುವಂತೆ ಅವರು ಕೋರಿದ್ದಾರೆ.

'ದಾರಿ ತಪ್ಪಿಸುತ್ತಿರುವ ಪೊಲೀಸರು'

ರೇಣುಕಾಚಾರ್ಯ ಕುಟುಂಬ ಆರೋಪ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನಾಲೆಯಲ್ಲಿ ಬಿದ್ದಿದ್ದ ಚಂದ್ರಶೇಖರ್ ಅವರ ಕಾರನ್ನು ಪೊಲೀಸರು ಪತ್ತೆ ಹಚ್ಚಿಲ್ಲ. ಊರ ಜನರು ಪತ್ತೆ ಮಾಡಿದ್ದಾರೆ. ಕಾರು ವೇಗವಾಗಿ ಬಂದು ಅಪಘಾತವಾಗಿದೆ ಎಂದು ಈಗ ಹೇಳುವ ಮೂಲಕ ಪೊಲೀಸರು ತನಿಖೆಯ ದಾರಿ ತಪ್ಪಿಸುತ್ತಿದ್ದಾರೆ' ಎಂದು ಶಾಸಕ ಎಂ.ಪಿ.ರೇಣುಕಾಚಾರ್ಯ ಹಾಗೂ ಅವರ ತಮ್ಮ ಎಂ.ಪಿ. ರಮೇಶ್ ಆರೋಪಿಸಿದ್ದಾರೆ.

ಹೊನ್ನಾಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಎಂ.ಪಿ. ರಮೇಶ್, 'ಪೊಲೀಸರು ಶುದ್ಧ ಸುಳ್ಳು ಹೇಳುತ್ತಿದ್ದಾರೆ. ಚಂದ್ರಶೇಖರ್ ಮನೆಯಿಂದ ಹೋಗುವಾಗ ಒಳಉಡುಪು (ಚಡ್ಡಿ) ಇತ್ತು. ಆದರೆ, ಶವ ಸಂಸ್ಕಾರ ಮಾಡುವಾಗ ಒಳಉಡುಪು ಇರಲಿಲ್ಲ. ನನ್ನ ಮಗನಿಗೆ ಚಿತ್ರಹಿಂಸೆ ಕೊಟ್ಟು ಕೊಲೆ ಮಾಡಿದ್ದಾರೆ. ಕಾರಿನ ಹಿಂಭಾಗದ ಇಂಡಿಕೇಟರ್ ಸಹ ಒಡೆದಿದೆ. ಕೈ ಕಟ್ಟಿದ ಸ್ಥಿತಿಯಲ್ಲಿತ್ತು' ಎಂದು ದೂರಿದರು.

> **ಪ್ರಕರಣದ ತನಿಖೆಗಾಗಿ ಮೂರು ತಂಡಗಳನ್ನು ರಚಿಸಿದ್ದೇವೆ. ಸತ್ಯಶೋಧನೆ ಮಾಡಬೇಕಾಗಿದ್ದು, ಎಲ್ಲಾ ಕೋನಗಳಿಂದಲೂ ತನಿಖೆ ನಡೆಯುತ್ತಿದೆ**
>
> **ರಾಮಗೊಂಡ ಬಸರಗಿ**
> ಎಎಸ್‌ಪಿ, ದಾವಣಗೆರೆ

'ಸೂರ್ಯಚಂದ್ರ ಇರುವುದು ಎಷ್ಟು ಸತ್ಯವೋ ಚಂದ್ರು ಕೊಲೆ ನಡೆದಿರುವುದೂ ಅಷ್ಟೇ ಸತ್ಯ. ನನ್ನ ಸರ್ಕಾರದ ವಿರುದ್ಧ ನಾನೇ ಧ್ವನಿ ಎತ್ತುವುದು ಸರಿಯಲ್ಲ ಎಂದು ಇದುವರೆಗೂ ಸುಮ್ಮನಿದ್ದೆ. ಆದರೆ, ಹೊನ್ನಾಳಿಗೆ ಶುಕ್ರವಾರ ಭೇಟಿ ನೀಡಿದ್ದ ಎಡಿಜಿಪಿ ಅಲೋಕ್ ಕುಮಾರ್ ಅವರು ಅತಿವೇಗದ ಅಪಘಾತದಿಂದ ಚಂದ್ರಶೇಖರ್ ಮೃತಪಟ್ಟಿದ್ದಾರೆ ಎಂದು ಅವಸರದ ಹೇಳಿಕೆ ನೀಡಿದ್ದಾರೆ. ಇದು ಅಪಘಾತದಿಂದ ಆದ ಸಾವಲ್ಲ. ಇದೊಂದು ಕೊಲೆ ಪ್ರಕರಣ' ಎಂದು ರೇಣುಕಾಚಾರ್ಯ ಪ್ರತಿಪಾದಿಸಿದರು.

ಪೊಲೀಸರಿಗೆ ತರಾಟೆ: ಶಾಸಕ ರೇಣುಕಾಚಾರ್ಯ ಅವರು ಬಿಜೆಪಿ ಕಾರ್ಯಕರ್ತರೊಂದಿಗೆ ಹೊನ್ನಾಳಿ ಠಾಣೆಗೆ ಹೋಗಿ ಪೊಲೀಸರನ್ನು ತರಾಟೆಗೆ ತೆಗೆದುಕೊಂಡರು. ಅಪಘಾತಕ್ಕೀಡಾಗಿದ್ದ ಕಾರನ್ನು ಠಾಣೆಯ ಆವರಣದಲ್ಲಿ ಮುಚ್ಚಿಟ್ಟಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಕಾರಿನ ವಿಡಿಯೊ ಮಾಡಿಕೊಳ್ಳುವ ವಿಚಾರಕ್ಕೆ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು.

ನಾಳೆ ವರದಿ ಬರುವ ನಿರೀಕ್ಷೆ: 'ಐದು ದಿನಗಳ ಕಾಲ ದೇಹ ನೀರಿನಲ್ಲಿ ಇದ್ದುದರಿಂದ ಸಾವಿನ ಕಾರಣವನ್ನು ಸುಲಭವಾಗಿ ಗುರುತಿಸುವುದು ಕಷ್ಟ. ಮರಣೋತ್ತರ ಪರೀಕ್ಷೆಯ ವರದಿಯು ಸೋಮವಾರ ಸಿಗಲಿದ್ದು, ಆ ಬಳಿಕವೇ ಸಾವಿನ ಕಾರಣ ಗೊತ್ತಾಗಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಟಿಪ್ಪು ನಿಜ ಕನಸುಗಳು': 20ರಿಂದ ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ




ಮೈಸೂರು: 'ಸತ್ಯ ಚರಿತ್ರೆಯ ಅನಾವರಣಕ್ಕಾಗಿ ರಚಿಸಿರುವ 'ಟಿಪ್ಪುವಿನ ನಿಜ ಕನಸುಗಳು' ನಾಟಕ ಕೃತಿಯನ್ನು ವನರಂಗದಲ್ಲಿ ಡಾ.ಎಸ್.ಎಲ್. ಭೈರಪ್ಪ ನ.13ರಂದು ಬಿಡುಗಡೆ ಮಾಡಲಿದ್ದಾರೆ. ನ.20ರಿಂದ ಭೂಮಿಗೀತದಲ್ಲಿ ರಂಗಪ್ರಸ್ತುತಿ ನಡೆಯಲಿದೆ' ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

'ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಸದ ಪ್ರತಾಪಸಿಂಹ, ಸಾಮಾಜಿಕ ಕಾರ್ಯಕರ್ತ ವಾದಿರಾಜ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಲೇಖಕ ರೋಹಿತ್ ಚಕ್ರತೀರ್ಥ ಕೃತಿ ಕುರಿತು ಮಾತನಾಡಲಿದ್ದಾರೆ. ರಾಜ್ಯದಾದ್ಯಂತ 100 ಪ್ರದರ್ಶನ ನೀಡುವ ಉದ್ದೇಶವಿದೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

> **ಟಿಪ್ಪು ನಿಜ ಕನಸುಗಳೇನು ಎನ್ನುವುದನ್ನು ನಾಟಕದಲ್ಲಿ ತಿಳಿದುಕೊಳ್ಳಬಹುದು. ದಾಖಲೆಗಳಿಲ್ಲದೆ ಏನನ್ನೂ ಬರೆದಿಲ್ಲ.**
>
> **ಅಡ್ಡಂಡ ಸಿ.ಕಾರ್ಯಪ್ಪ,**
> ನಿರ್ದೇಶಕ, ರಂಗಾಯಣ

'ರಂಗಾಯಣದಿಂದ ಈ ಬಾರಿಯ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ವನ್ನು ಡಿ.8ರಿಂದ 15ರವರೆಗೆ ನಡೆಸಲು ನಿರ್ಧರಿಸಲಾಗಿದ್ದು, 'ಭಾರತೀಯತೆ' ವಸ್ತುವಿಷಯದ ಮೇಲೆ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ' ಎಂದು ಹೇಳಿದರು.

'ಇ.ಡಿಯಿಂದ ಆಪ್ತ ಸಹಾಯಕನ ಬಂಧನ'



ಮನೀಶ್ ಸಿಸೋಡಿಯಾ

ನವದೆಹಲಿ (ಪಿಟಿಐ): 'ತಮ್ಮ ಆಪ್ತ ಸಹಾಯಕ ದೇವೇಂದ್ರ ಶರ್ಮಾ ಅವರ ಮನೆಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ನಡೆಸಿದ್ದು, ಅಲ್ಲಿ ಏನೂ ಸಿಗದ ಕಾರಣ ಅವರನ್ನು ಬಂಧಿಸಿದ್ದಾರೆ' ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಶನಿವಾರ ಹೇಳಿದ್ದಾರೆ.

ಈ ಬೆಳವಣಿಗೆಯ ಹಿಂದೆ ಬಿಜೆಪಿಯ ಕೈವಾಡ ಇದೆ ಎಂದೂ ಅವರು ಆರೋಪಿಸಿದ್ದಾರೆ.

'ಇ.ಡಿ ಅಧಿಕಾರಿಗಳು ಸುಳ್ಳು ಮೊಕದ್ದಮೆ ದಾಖಲಿಸಿಕೊಂಡು ನನ್ನ ಮನೆಯಲ್ಲಿ ಶೋಧ ನಡೆಸಿದ್ದರು ಮತ್ತು ಬ್ಯಾಂಕ್ ಲಾಕರ್ ಕೂಡ ಪರಿಶೀಲಿಸಿದ್ದರು. ಆದರೆ ಅವರಿಗೆ ಏನೂ ಸಿಕ್ಕಿರಲಿಲ್ಲ. ಶನಿವಾರ ನನ್ನ ಆಪ್ತ ಸಹಾಯಕನ ಮನೆಯಲ್ಲೂ ಶೋಧ ಕಾರ್ಯ ನಡೆಸಿ, ಏನೂ ಸಿಗದ ಕಾರಣ ಅವರನ್ನು ಬಂಧಿಸಿದ್ದಾರೆ' ಎಂದು ಸಿಸೋಡಿಯಾ ಟ್ವೀಟ್ ಮಾಡಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ದೇವೇಂದ್ರ ಶರ್ಮಾ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ದೇವೇಂದ್ರ ಶರ್ಮಾ ಅವರನ್ನು ವಿಚಾರಣೆಗೆ ಒಳಪಡಿಸಿ, ಅವರಿಂದ ಹೇಳಿಕೆ ದಾಖಲಿಸಿಕೊಂಡಿದ್ದೇವೆ ಎಂದೂ ವಿವರಿಸಿದ್ದಾರೆ.

ಸುಧೀರ್ ಸೂರಿ ಹತ್ಯೆ ಪ್ರಕರಣ: ಆರೋಪಿ ಏಳು ದಿನ ಪೊಲೀಸ್ ಕಸ್ಟಡಿಗೆ

ಅಮೃತಸರ (ಪಿಟಿಐ): ಶಿವಸೇನಾ ನಾಯಕ ಸುಧೀರ್ ಸೂರಿ ಹತ್ಯೆ ಪ್ರಕರಣದ ಮುಖ್ಯ ಆರೋಪಿ ಸಂದೀಪ್ ಸಿಂಗ್ ಎಂಬಾತನನ್ನು ಇಲ್ಲಿ ನ್ಯಾಯಾಲಯವೊಂದು ಶನಿವಾರ ಏಳು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಅಮೃತಸರದ ಜನದಟ್ಟಣೆಯ ಪ್ರದೇಶವಾದ ಗೋಪಾಲಸ್ವಾಮಿ ಮಂದಿರದ ಎದುರು ಶುಕ್ರವಾರ ದೇವಾಸ್ಥಾನದ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದ ಸಂದರ್ಭದಲ್ಲಿ ಸುಧೀರ್ ಸೂರಿ ಅವರ ಮೇಲೆ ಆರೋಪಿ ಗುಂಡಿನ ದಾಳಿ ನಡೆಸಿ ಹತ್ಯೆ ಮಾಡಿದ್ದ.

ಕೂಡಲೇ ಆರೋಪಿಯನ್ನು ಬಂಧಿಸಿದ ಪೊಲೀಸರು ಅವನ ಬಳಿಯಿದ್ದ ಬಂದೂಕನ್ನು ವಶಪಡಿಸಿಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು.

ತಮಿಳುನಾಡು: ಮಳೆಗೆ ಮತ್ತೆ 3 ಸಾವು

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಕಳೆದ 24 ಗಂಟೆಗಳಲ್ಲಿ ಮೂವರು ಮೃತಪಟ್ಟಿದ್ದಾರೆ. ಈ ಮೂಲಕ ಒಟ್ಟು ಸಾವಿನ ಸಂಖ್ಯೆ 26ಕ್ಕೆ ಏರಿದೆ ಎಂದು ರಾಜ್ಯ ಸರ್ಕಾರ ಶನಿವಾರ ತಿಳಿಸಿದೆ.

ಚೆನ್ನೈನಲ್ಲಿ ಇಬ್ಬರು ಮತ್ತು ತಿರುವಳ್ಳೂರು ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ. ಮೃತರ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ನಾಗಪಟ್ಟಿನಂ ಜಿಲ್ಲೆಯ ಕೊಡಿಯಕಾರೈನಲ್ಲಿ ಅತಿ ಹೆಚ್ಚು ಅಂದರೆ, 9 ಸೆಂ.ಮೀ ಮಳೆಯಾಗಿದೆ. ರಾಮೇಶ್ವರಂನಲ್ಲಿ 8 ಸೆಂ.ಮೀ ಮಳೆ ಸುರಿದಿದೆ.

'ಸಾಲ ಮರುಪಾವತಿಗೆ ಸಾಲಗಾರ ಹೆಚ್ಚುವರಿ ಕಾಲಾವಕಾಶ ಪಡೆಯುವಂತಿಲ್ಲ'

ನವದೆಹಲಿ (ಪಿಟಿಐ): 'ಒಂದು ಬಾರಿಯ ಇತ್ಯರ್ಥ (ಒಟಿಎಸ್) ಯೋಜನೆಯಡಿ ಸಾಲ ಮರುಪಾವತಿ ಮಾಡಲು ಸಾಲಗಾರ ಹೆಚ್ಚುವರಿ ಕಾಲಾವಕಾಶ ಪಡೆಯುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ವರ್ಷದ ಮಾರ್ಚ್‌ನಲ್ಲಿ ಅರ್ಜಿಯೊಂದರ ವಿಚಾರಣೆ ನಡೆಸಿದ್ದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ (ಎಸ್‌ಬಿಐ) ಸಾಲ ಪಡೆದಿದ್ದ ಕಂಪನಿಯೊಂದಕ್ಕೆ ಬಡ್ಡಿ ಸಮೇತ ಬಾಕಿ ಹಣ ಪಾವತಿಸಲು ಹೆಚ್ಚುವರಿಯಾಗಿ ಆರು ವಾರಗಳ ಕಾಲಾವಕಾಶ ಮಂಜೂರು ಮಾಡಿತ್ತು.

ಈ ತೀರ್ಪನ್ನು ಪ್ರಶ್ನಿಸಿ ಎಸ್‌ಬಿಐ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಕೃಷ್ಣ ಮುರಾರಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ತೀರ್ಪನ್ನು ರದ್ದುಪಡಿಸಿದೆ.

'ನ್ಯಾಯಾಲಯ ಹೆಚ್ಚುವರಿ ಕಾಲಾವಕಾಶ ಮಂಜೂರು ಮಾಡಿರುವುದರಿಂದ ಒಪ್ಪಂದ ನವೀಕರಿಸಬೇಕಾಗುತ್ತದೆ. ಇದಕ್ಕೆ ಸಂವಿಧಾನದ 226ನೇ ವಿಧಿಯಲ್ಲಿ ಅವಕಾಶವಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಮೂವರು ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ರಾಮನಗರ: ಕಂಚುಗಲ್ ಬಂಡೆಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಪ್ರಕರಣದ ಆರೋಪಿಗಳನ್ನು ನ್ಯಾಯಾಲಯವು ಇದೇ 15ರವರೆಗೆ ನ್ಯಾಯಾಂಗದ ವಶಕ್ಕೆ ನೀಡಿತು.

ಪ್ರಕರಣದ ಆರೋಪಿಗಳಾದ ಕಣ್ಣೂರು ಮಕ್ಕಳದೇವರ ಮಠದ ಮೃತ್ಯುಂಜಯ ಸ್ವಾಮೀಜಿ, ನೀಲಾಂಬಿಕಾ ಹಾಗೂ ಮಹದೇವಯ್ಯ ಅವರ ಪೊಲೀಸ್ ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಶನಿವಾರ ಅವರನ್ನು ಮಾಗಡಿಯ ಒಂದನೇ ಹೆಚ್ಚುವರಿ ಜೆಎಂಎಫ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಧೀಶೆ ಎಂ. ಧನಲಕ್ಷ್ಮಿ ಅವರು ಆರೋಪಿಗಳಿಗೆ 15ರವರೆಗೆ ನ್ಯಾಯಾಂಗ ಬಂಧನ ವಿಧಿಸಿದರು.

ಮೃತ್ಯುಂಜಯ ಸ್ವಾಮೀಜಿ ಹಾಗೂ ವಕೀಲ ಮಹದೇವಯ್ಯ ಅವರನ್ನು ರಾಮನಗರ ಜಿಲ್ಲಾ ಕಾರಾಗೃಹಕ್ಕೆ ಹಾಗೂ ನೀಲಾಂಬಿಕೆಯನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ಕರೆದೊಯ್ಯಲಾಯಿತು.

ತಾಲ್ಲೂಕು ವಿಸ್ತರಣಾಧಿಕಾರಿ ಆತ್ಮಹತ್ಯೆ

ಕಲಬುರಗಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ವಿಸ್ತರಣಾಧಿಕಾರಿಯಾಗಿದ್ದ, ಆಳಂದ ತಾಲ್ಲೂಕಿನ ಖಂಡಾಳ ಗ್ರಾಮದ ಶರಣಬಸಪ್ಪ ಪಾಟೀಲ (32) ಗುರುವಾರ ರಾತ್ರಿ ಕೆಎಚ್‌ಬಿ ಗ್ರೀನ್ ಪಾರ್ಕ್‌ನ ತಮ್ಮ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಶರಣಬಸಪ್ಪ ಅವರ ಸಾವಿಗೆ ಇಲಾಖೆಯ ಜಿಲ್ಲಾ ಅಧಿಕಾರಿಯಾಗಿದ್ದ ಮೆಹಮೂದ್ ಅವರ ಕಿರುಕುಳವೇ ಕಾರಣ. ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿದ್ದ ಅವರು ಈಚೆಗೆ ತಾಲ್ಲೂಕು ವಿಸ್ತೀರ್ಣಾಧಿಕಾರಿ ಆಗಿದ್ದರು. ಡಿಸೆಂಬರ್ 2ರಂದು ಅವರ ಮದುವೆ ನಿಶ್ಚಯವಾಗಿತ್ತು' ಎಂದು ಶರಣಬಸಪ್ಪ ಅವರ ಸಹೋದರ ಪಂಡಿತರಾವ್ ಪಾಟೀಲ ಪೊಲೀಸರಿಗೆ ದೂರು ನೀಡಿದ್ದಾರೆ.

'ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ (ಪ್ರಸ್ತುತ ಬಿಸಿಎಂ ಇಲಾಖೆ ಜಿಲ್ಲಾ ಅಧಿಕಾರಿ) ಮೆಹಮೂದ್ ಅವರು ಹುಡುಗರನ್ನು ಕಳುಹಿಸಿ ಜೀವ ಬೆದರಿಕೆ ಹಾಕಿದ್ದರ ಬಗ್ಗೆ ಮನೆಯಲ್ಲಿ ತಿಳಿಸಿದ್ದರು. ವೈಯಕ್ತಿಕ ದ್ವೇಷ ಸಾಧಿಸಿದ ಅಧಿಕಾರಿ ಬಡ್ತಿಯನ್ನು ತಡೆ ಹಿಡಿದು, ಒಂದು ವರ್ಷದ ಸಂಬಳ ಬಿಡುಗಡೆ ಮಾಡಿರಲಿಲ್ಲ' ಎಂದು ಅವರು ಆರೋಪಿಸಿದ್ದಾರೆ.

'ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವರ್ಗಾವಣೆಯಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಬಂದು ಐದು ತಿಂಗಳಾಗಿವೆ. ಈಗ ಕಿರುಕುಳ ಆರೋಪ ಮಾಡಿದ್ದು ಅಚ್ಚರಿಯಾಗಿದೆ. ಇಲಾಖೆಯಲ್ಲಿದ್ದಾಗ ನಾನು ಯಾವುದೇ ಕಿರುಕುಳ ನೀಡಿಲ್ಲ' ಎಂದು ಇಲಾಖೆಯ ಅಧಿಕಾರಿ ಮೆಹಮೂದ್ ತಿಳಿಸಿದ್ದಾರೆ.

ನಾಳೆಯಿಂದ ಸೇನಾಧಿಕಾರಿಗಳ ಸಮಾವೇಶ

ನವದೆಹಲಿ (ಪಿಟಿಐ): ಭಾರತೀಯ ಸೇನೆಯ ಉನ್ನತ ಮಟ್ಟದ ಅಧಿಕಾರಿಗಳ ಸಮಾಲೋಚನಾ ಸಮಾವೇಶ ಸೋಮವಾರದಿಂದ ಇಲ್ಲಿ ಆರಂಭವಾಗಲಿದ್ದು, ಚೀನಾ ಮತ್ತು ಪಾಕಿಸ್ತಾನದೊಂದಿಗೆ ಗಡಿ ಹಂಚಿಕೊಂಡಿರುವ ಪ್ರದೇಶದಲ್ಲಿ ಭಾರತ ಎದುರಿಸುತ್ತಿರುವ ಭದ್ರತಾ ಸವಾಲುಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

13 ಲಕ್ಷ ಸೈನಿಕರನ್ನು ಒಳಗೊಂಡಿರುವ ಬಲಿಷ್ಠ ಸೇನೆಯ ಸಾಮರ್ಥ್ಯ ಹೆಚ್ಚಳ, ಪ್ರಾದೇಶಿಕ ಭದ್ರತಾ ಸ್ಥಿತಿಗತಿ ಮತ್ತು ರಷ್ಯಾ–ಉಕ್ರೇನ್ ಯುದ್ಧದಿಂದ ಉಂಟಾಗುವ ಭೌಗೋಳಿಕ ರಾಜಕೀಯ ಪರಿಣಾಮಗಳ ಬಗ್ಗೆ ಸಮಾವೇಶದಲ್ಲಿ ಚರ್ಚಿಸಲಿದ್ದಾರೆ.

'ಸಮಾವೇಶದಲ್ಲಿ ಉನ್ನತ ಅಧಿಕಾರಿಗಳು ಭಾರತ–ಚೀನಾ ಗಡಿಯಲ್ಲಿ ಭಾರತೀಯ ಸೇನೆ ಕೈಗೊಂಡಿರುವ ಸಿದ್ಧತೆ ಮತ್ತು ಜಮ್ಮು–ಕಾಶ್ಮೀರದಲ್ಲಿನ ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆಗಳ ಬಗ್ಗೆ ಸಮಗ್ರವಾದ ಚರ್ಚೆ ನಡೆಸಲಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ 11ರ ವರೆಗೆ ಹಲಿಯಲ್ಲಿ ಸಮಾವೇಶ ನಡೆಯಲಿದೆ. 10ರಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕಮಾಂಡರ್‌ಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಹಿಂದೂ ಸಮಾಜ ದಲಿತರನ್ನು ಗುಲಾಮರಂತೆ ಕಂಡಿದೆ: ಮಾಂಝಿ

ಪಟ್ನಾ (ಪಿಟಿಐ): 'ಹಿಂದೂ ಸಮಾಜವು ದಲಿತರನ್ನು 'ಗುಲಾಮ'ರಂತೆ ನಡೆಸಿಕೊಂಡಿದೆ. ಅದರಲ್ಲೂ ವಿಶೇಷವಾಗಿ ಪುರೋಹಿತಶಾಹಿ ವರ್ಗವು ಅವರನ್ನು ಅಸ್ಪೃಶ್ಯರನ್ನಾಗಿ ಪರಿಗಣಿಸಿದೆ' ಎಂದು ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್ ರಾಂ ಮಾಂಝಿ ಅವರು ಶನಿವಾರ ಹೇಳಿಕೆ ನೀಡಿದ್ದಾರೆ.

ಮಾಂಝಿ ಅವರು ಆಡಳಿತಾರೂಢ 'ಮಹಾಘಟಬಂಧನ್'ನ ಭಾಗವಾಗಿರುವ ಹಿಂದೂಸ್ತಾನಿ ಅವಾಮ್ ಮೋರ್ಚಾದ ಮುಖ್ಯಸ್ಥರಾಗಿದ್ದು, ಮೊಕಾಮಾ ಮತ್ತು ಗೋಪಾಲ್‌ಗಂಜ್ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ದಲಿತರ ಮತಗಳನ್ನು ಪಡೆಯುವಲ್ಲಿ ಸಫಲವಾಗಿದೆಯೇ ಎಂದು ಕೇಳಿದಾಗ ಈ ರೀತಿ ಪ್ರತಿಕ್ರಿಯಿಸಿದರು. 'ನಿಮ್ಮನ್ನು (ದಲಿತರು) ನೀವು ಹಿಂದೂಗಳೆಂದು ಭಾವಿಸುತ್ತೀರಿ. ಆದರೆ, ಕಳೆದ 75 ವರ್ಷಗಳಿಂದ ನಿಮ್ಮನ್ನು ಗುಲಾಮರಂತೆ ನಡೆಸಿಕೊಳ್ಳಲಾಗಿದೆ ಎಂದು ದಲಿತರಿಗೆ ಹೇಳುತ್ತೇನೆ ಎಂದರು.

'ಧ್ಯಾನದಿಂದ ಮಕ್ಕಳು ಕುಗ್ಗಿ ಹೋಗುತ್ತಾರೆ ಎನ್ನುವುದು ಹಾಸ್ಯಾಸ್ಪದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಶೋಧಕರು, ವೈದ್ಯರು, ವಿಜ್ಞಾನಿಗಳ ಪ್ರಕಾರ, ಯೋಗ ಮತ್ತು ಧ್ಯಾನ ಮಾಡುವುದು ದೈಹಿಕ, ಮಾನಸಿಕ ಆರೋಗ್ಯಕ್ಕೆ ಅತ್ಯಂತ ಉಪಯುಕ್ತ. ಆದರೆ, ನೀವು ಮಾತ್ರ ಧ್ಯಾನ, ಯೋಗ ಮಾಡಿದರೆ ಮಕ್ಕಳು 'ಕುಗ್ಗಿ ಹೋಗುತ್ತಾರೆ' ಎನ್ನುತ್ತಿರುವುದು ಹಾಸ್ಯಾಸ್ಪದ' ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದಾರೆ.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿ ಸರಣಿ ಟ್ವೀಟ್ ಮಾಡಿರುವ ಅವರು, 'ಮಾನಸಿಕ, ದೈಹಿಕ ಆರೋಗ್ಯ, ಏಕಾಗ್ರತೆ, ವ್ಯಕ್ತಿತ್ವ ವಿಕಸನಕ್ಕಾಗಿ ಶಾಲಾ ಮಕ್ಕಳು 10 ನಿಮಿಷ ಧ್ಯಾನ ಮಾಡುವ ಉತ್ತಮ ಆಲೋಚನೆಯಲ್ಲೂ ನಿಮ್ಮಂತವರು ಗೊಂದಲ ಸೃಷ್ಟಿಸಲು ಯತ್ನಿಸುತ್ತಿರುವುದು ದುರದೃಷ್ಟಕರ. ಮಕ್ಕಳು ಧ್ಯಾನ ಮಾಡುವುದು ಗಿಮಿಕ್ ಹೇಗೆ ಆಗುತ್ತದೆ ಎಂಬುದನ್ನು ವಿವರಿಸುವಿರಾ' ಎಂದೂ ಪ್ರಶ್ನಿಸಿದ್ದಾರೆ.

'ಕೋವಿಡ್‌ನಿಂದ ಎರಡು ವರ್ಷ ಭೌತಿಕ ತರಗತಿಗಳಿಲ್ಲದೆ ಮಕ್ಕಳ ಕಲಿಕೆಯಲ್ಲಿ ಉಂಟಾದ ಹಿನ್ನಡೆ ಸರಿದೂಗಿಸಲು 'ಕಲಿಕಾ ಚೇತರಿಕೆ' ಕಾರ್ಯಕ್ರಮವನ್ನು ಇಡೀ ದೇಶಕ್ಕೆ ಮಾದರಿಯಾಗಿ ಅನುಷ್ಠಾನಗೊಳಿಸಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ದಾಖಲೆಯ 15 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ದೈಹಿಕ ಶಿಕ್ಷಕರು ಸೇರಿದಂತೆ 2,500 ಪ್ರೌಢಶಾಲಾ ಶಿಕ್ಷಕರು ಮತ್ತು 778 ಪಿಯು ಕಾಲೇಜು ಉಪನ್ಯಾಸಕರ ನೇಮಕ ಪ್ರಕ್ರಿಯೆಯನ್ನು ಮುಂಬರುವ ದಿನಗಳಲ್ಲಿ ಆರಂಭಿಸಲಾಗುತ್ತಿದೆ. ಶಾಲೆಗಳಲ್ಲಿ ಮೂಲಸೌಕರ್ಯ ಕೊರತೆ ನೀಗಿಸಲು 8,100 ಕೊಠಡಿ ನಿರ್ಮಿಸಲಾಗುತ್ತಿದೆ' ಎಂದೂ ಅವರು ವಿವರಿಸಿದ್ದಾರೆ.

'ಶಿಕ್ಷಣದ ಗುಣಮಟ್ಟ ಕಾಪಾಡಿಕೊಳ್ಳಲು ಶೈಕ್ಷಣಿಕ ವರ್ಷದ ಆರಂಭದಲ್ಲೇ 30 ಸಾವಿರಕ್ಕೂ ಹೆಚ್ಚು ಅತಿಥಿ ಶಿಕ್ಷಕರು, ಉಪನ್ಯಾಸಕರ ಸೇವೆ ಪಡೆಯಲಾಗಿದೆ. ಅರ್ಜಿ ಹಾಕದವರು, ಪರೀಕ್ಷೆ ಬರೆಯದವರನ್ನು ಶಿಕ್ಷಕರಾಗಿ ನೇಮಿಸಿ ಶೈಕ್ಷಣಿಕ ವ್ಯವಸ್ಥೆಗೆ ಧಕ್ಕೆ ತರಲು ಯತ್ನಿಸಿದ ಅಪ'ಕೀರ್ತಿ' ನಿಮ್ಮ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲಬೇಕಲ್ಲವೇ? ಭ್ರಷ್ಟಾಚಾರ, ಸಾಲು, ಸಾಲು ಹಗರಣಗಳಲ್ಲಿ ಮಿಂದೆದ್ದಿರುವುದು ಯಾರೆಂದು ರಾಜ್ಯದ ಜನತೆಗೆ ತಿಳಿದಿದೆ' ಎಂದೂ ಕೆಣಕಿದ್ದಾರೆ.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ದಮನಿತರ ದನಿಯಾದ 'ಪ್ರಜಾವಾಣಿ'



ಲೇಖಕನಾಗಿ ನನ್ನ ಮತ್ತು 'ಪ್ರಜಾವಾಣಿ'ಯ ಬಾಂಧವ್ಯ ನಲವತ್ತು ವರ್ಷಗಳಷ್ಟು ಹಳೆಯದು. ಆಗಿನಿಂದಲೂ ತನ್ನದೇ ಆದ ಪ್ರಬುದ್ಧ ವಿಚಾರ ಪ್ರಕಟಿಸುವಲ್ಲಿ ಮೇಲುಗೈ ಸಾಧಿಸುತ್ತಾ 'ಪ್ರಜೆಗಳ ವಾಣಿ'ಯಾಗಿಯೇ ಪತ್ರಿಕೆ ಉಳಿದಿದ್ದೊಂದು ವಿಶೇಷ. ಯಾವುದೇ ಪಕ್ಷದ ಮುಖವಾಣಿಯಾಗದೆ, ನಿರ್ದಾಕ್ಷಿಣ್ಯವಾಗಿ ಸಂಪಾದಕೀಯ ಬರೆದು, ಆಳುವ ಪಕ್ಷವನ್ನು ಎಚ್ಚರಿಸುವ, ಅಭಿಮತದಲ್ಲಿ ನಿಷ್ಪಕ್ಷಪಾತವಾದ ಲೇಖನಗಳಿಗೆ ಆದ್ಯತೆ ನೀಡಿ ವಿರೋಧಪಕ್ಷದಂತೆ ವರ್ತಿಸುತ್ತಾ ಬಂದಿದೆ. ಸಾಮಾಜಿಕ ನ್ಯಾಯ, ದಮನಿತರ ದನಿಯಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ರಕ್ಷಿಸುವಲ್ಲಿ ತೊಡಗಿಸಿ ಕೊಂಡಿರುವುದೊಂದು ಹೆಗ್ಗಳಿಕೆ.

ನನ್ನ ಕಥೆ, ಕಾದಂಬರಿಗಳನ್ನು ಸತತವಾಗಿ ಪ್ರಕಟಿಸುತ್ತಾ ನನ್ನನ್ನೂ ಪತ್ರಿಕೆ ಬೆಳೆಸಿದೆ. 'ಪ್ರಜಾವಾಣಿ'ಯ ಪ್ರತಿಷ್ಠಿತ ದೀಪಾವಳಿ ಕಥಾಸ್ಪರ್ಧೆಯಲ್ಲಿ ನನ್ನ ಕಥೆಯೊಂದು ಪ್ರಥಮ ಬಹುಮಾನ ಗಳಿಸಿದಾಗ, 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾದ ಐತಿಹಾಸಿಕ ಕೃತಿ 'ಕಲ್ಲರಳಿ ಹೂವಾಗಿ' ಚಲನಚಿತ್ರವಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದಾಗ ಬದುಕು ಸಾರ್ಥಕತೆ ಪಡೆದ ಧನ್ಯತೆ. ನನ್ನ ಮತ್ತು 'ಪ್ರಜಾವಾಣಿ' ಬಳಗದ ಬಾಂಧವ್ಯ ಇವತ್ತಿಗೂ ಹಾಗೆ ಮುಂದುವರಿದಿದೆ. 'ಪ್ರಜಾವಾಣಿ' ಶತಾಯುಷಿಯಾಗಿ ಶತಮಾನಗಳನ್ನು ಕಾಣಲಿ ಎಂದು ಆಶಿಸುವೆ.

ಬಿ.ಎಲ್.ವೇಣು, ಕಾದಂಬರಿಕಾರ, ಚಿತ್ರದುರ್ಗ


'ಪ್ರಜಾವಾಣಿ ಓದಿದರೇ ಸಮಾಧಾನ'

ನನ್ನ ತಂದೆ ಎಸ್.ಕೆ.ಸಂಜೀವಪ್ಪ ಅವರು ಕಾಮರಾಜ್ ನಾಡಾರ್ ತದ್ರೂಪ. ಅವರ ಎಡಕಂಕುಳಲ್ಲಿ ಸದಾ ಪ್ರಜಾವಾಣಿ, ಬಲದ ಕೈಲಿ ಛತ್ರಿ. ಇದ್ದಷ್ಟು ದಿನವೂ ಸದಾ ಪ್ರಜಾವಾಣಿ ಓದು. ಅವರಿಂದ ನನಗೆ ಬಂದ ಬಳುವಳಿ ಈ ಪತ್ರಿಕೆಯ ಓದು.

ನನ್ನ ಪತ್ನಿ ಮಂಗಳಗೌರಮ್ಮ ಅಪಘಾತದಲ್ಲಿ ಮೃತಪಟ್ಟು ನಾಲ್ಕು ವರ್ಷಗಳಾಗಿವೆ. ಅವಳು ಹೇಳುತ್ತಿದ್ದ ಮಾತು– 'ನಿಮಗೆ ಪೇಪರೇ ಮೊದಲ ಹೆಂಡತಿ. ನಂತರ ನಾನು'. ಈಗಲೂ ಪತ್ರಿಕೆ ಓದುವಾಗ ನೆನಪಿಗೆ ಬರುತ್ತದೆ. 'ಪ್ರಜಾವಾಣಿ' ಓದಿ ಮುಗಿಸಿದರೇ ಸಮಾಧಾನ, ತೃಪ್ತಿ.

ಎಸ್.ಕೆ.ಶ್ರೀಮಂತಪ್ಪ, ತಾಷ್ಕೆಂಟ್ ನಗರ, ಭದ್ರಾವತಿ ತಾ.


'ಪತ್ರಿಕಾಧರ್ಮದ ಪಾಲನೆ'



ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ ಎಂಬ ಟ್ಯಾಗ್‌ಲೈನ್ 'ಪ್ರಜಾವಾಣಿ'ಯ ಬದ್ಧತೆಗೆ ಸಾಕ್ಷಿಯಾಗಿದೆ. ಐದಾರು ದಶಕಗಳಿಂದ ಪತ್ರಿಕೆಯ ಅಭಿಮಾನಿ ನಾನು. ಪತ್ರಿಕಾಧರ್ಮವನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿರುವ ಪತ್ರಿಕೆಯಿದು. ವೈಯಕ್ತಿಕವಾಗಿ ಹೇಳುವುದಾದರೆ, ಪತ್ರಿಕೆಯ 'ವಾಚಕರ ವಾಣಿ' ಅಂಕಣದ ನಂಟು ನನಗೆ ಗಾಢವಾಗಿದೆ. ಜನಾಭಿಪ್ರಾಯಕ್ಕೆ ಮನ್ನಣೆ ನೀಡುವ ಮೂಲಕ ಪತ್ರಿಕೋದ್ಯಮಕ್ಕೆ ಈ ಪತ್ರಿಕೆಯು ಮೆರುಗು ತಂದಿದೆ. ಅಮೃತ ಮಹೋತ್ಸವದ ಆಚರಣೆ ಸಂದರ್ಭದಲ್ಲಿ ಪತ್ರಿಕೆಗೆ ಶುಭ ಹಾರೈಸುತ್ತೇನೆ.

ಬಿ.ಎಸ್.ತಿಮ್ಮೋಲಿ, ಶಿವಮೊಗ್ಗ


'ನಿಜ ಅರ್ಥದಲ್ಲಿ 'ಪ್ರಜೆಗಳ ವಾಣಿ'



ಸ್ವಾತಂತ್ರ್ಯ ಬಂದ ಮರುವರ್ಷವೇ ಆರಂಭವಾದ 'ಪ್ರಜಾವಾಣಿ' ದಿನಪತ್ರಿಕೆಯನ್ನು ನಾನು ವಿದ್ಯಾರ್ಥಿ ದೆಸೆಯಿಂದಲೂ ಓದಿಕೊಂಡು ಬಂದಿದ್ದೇನೆ. ನಮ್ಮ ಊರಿಗೆ ಪತ್ರಿಕೆ ಆಗ ತಡವಾಗಿ ಬರುತ್ತಿದ್ದರೂ ಭಾನುವಾರದ ಸಾಪ್ತಾಹಿಕ ಪುರವಣಿ ಓದಲು ಕಾತುರದಿಂದ ಕಾಯುತ್ತಿದ್ದೆ. ಮುಂದೆ ಅದೇ ಪತ್ರಿಕೆಯಲ್ಲಿ ಅಂಕಣ ಬರೆಯಬಹುದು ಎಂದು ನನ್ನ ಕನಸಿನಲ್ಲಿಯೂ ಇರಲಿಲ್ಲ. 'ಪ್ರಜಾವಾಣಿ'ಯ ವಿಶೇಷ ಎಂದರೆ ಅದು ಎಲ್ಲ ಪ್ರದೇಶಗಳ, ಎಲ್ಲ ಸಮುದಾಯಗಳ ಲೇಖಕರನ್ನು ಬೆಳೆಸಿದೆ. ನನ್ನ ಕಥೆ, ಕವಿತೆ, ಲೇಖನ ಪ್ರಜಾವಾಣಿಯಲ್ಲಿ ಪ್ರಕಟವಾದಾಗ ನನ್ನ ಸಂಭ್ರಮಕ್ಕೆ ಮೇರೆ ಇರಲಿಲ್ಲ. ನಿಜವಾದ ಅರ್ಥದಲ್ಲಿ ಪ್ರಜೆಗಳ ವಾಣಿಯಾಗಿ, ನಿಷ್ಠುರ ಪತ್ರಿಕೋದ್ಯಮಕ್ಕೆ ಹೆಸರಾಗಿರುವ ನನ್ನ ಪ್ರೀತಿಯ ಈ ಪತ್ರಿಕೆ ನೂರ್ಕಾಲ ಬಾಳಲಿ, ಜನರ ಕಷ್ಟಗಳಿಗೆ ದನಿಯಾಗಲಿ ಎಂದು ಹಾರೈಸುತ್ತೇನೆ.

ಡಾ.ಮನು ಬಳಿಗಾರ್, ನಿಕಟ ಪೂರ್ವ ಅಧ್ಯಕ್ಷ, ಕ.ಸಾ.ಪ

'ಸಮೂಹದ ಎಲ್ಲ ಪ್ರಕಟಣೆಗಳೂ ವಿಶಿಷ್ಟ'



1965ರಿಂದಲೂ 'ಪ್ರಜಾವಾಣಿ' ಮತ್ತು ಸಮೂಹದ ಎಲ್ಲ ಪ್ರಕಟಣೆಗಳೂ ಓದುಗನಾಗಿ ನನ್ನ ಮನಸ್ಸನ್ನು ಗೆದ್ದಿವೆ. ಓದುಗನಾದ ನಾನೂ ಕೆಲವು ಅಂಕಣಗಳಿಗೆ ಚಿತ್ರ–ಲೇಖನಗಳನ್ನು ಕಳುಹಿಸಿದಾಗ ಪ್ರಕಟಿಸಿ ಪ್ರೋತ್ಸಾಹ ನೀಡಿದ ಮೊದಲ ಪತ್ರಿಕೆ 'ಪ್ರಜಾವಾಣಿ' ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ. 'ಸುಧಾ', 'ಮಯೂರ'ದಲ್ಲೂ ಚಿತ್ರಗಳು, ನುಡಿಚಿತ್ರಗಳು ಪ್ರಕಟವಾಗಿವೆ. ಆದರೆ, 'ನಾಡು- ನಾಡಿ'ಯಂತಹ ಅಂಕಣ ನಿಂತು ಹೋದ ಬಗ್ಗೆ ನನಗೆ ವಿಷಾದವಿದೆ. ಸಾಧ್ಯವಾದರೆ 'ನಾಡು–ನಾಡಿ'ಯನ್ನು ಮತ್ತೆ ಪ್ರಾರಂಭಿಸಬೇಕು ಎನ್ನುವುದು ನನ್ನ ಮನವಿಯಾಗಿದೆ.

ಕೊ.ಸು.ನರಸಿಂಹಮೂರ್ತಿ, ಮೈಸೂರು

'ಕೃಷಿ ಮೇಳ'ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

ಕೃಷಿಕರ ಜಮೀನಿನಲ್ಲಿ ಹೊಸ ಪ್ರಯೋಗ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಜಿಕೆವಿಕೆಯಲ್ಲಿ ಶನಿವಾರ ನಡೆದ ಕೃಷಿ ಮೇಳದಲ್ಲಿ ಹಾಸನ ಜಿಲ್ಲೆಯ (ಕುಳಿತವರು ಎಡದಿಂದ) ಎಂ.ಕವಿತಾ, ಲಕ್ಷ್ಮಿ ಮತ್ತು ಆರ್.ಅರುಣ, ಮಂಜೇಗೌಡ, ತಿಮ್ಮೇಗೌಡ ಮತ್ತು ಶಿವಕುಮಾರ ಸ್ವಾಮಿ ಅವರಿಗೆ ಅತ್ಯುತ್ತಮ ರೈತ ಮಹಿಳೆ ಮತ್ತು ರೈತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಸಂಸದ ಸದಾನಂದಗೌಡ, ಶಾಸಕ ಕೃಷ್ಣ ಬೈರೇಗೌಡ, ಕೃಷಿ ಸಚಿವ ಬಿ.ಸಿ.ಪಾಟೀಲ್, ಕೃಷಿ ವಿಶ್ವವಿದ್ಯಾಲಯ ಕುಲಪತಿ ಎಸ್.ವಿ.ಸುರೇಶ್ ಇದ್ದಾರೆ

–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು: 'ಕೃಷಿ ವಿಶ್ವವಿದ್ಯಾಲಯಗಳ ತಜ್ಞರು, ಪ್ರಾಧ್ಯಾಪಕರು ಹಾಗೂ ವಿಸ್ತರಣಾ ನಿರ್ದೇಶಕರು ಕ್ಯಾಂಪಸ್ ಬಿಟ್ಟು ಕೃಷಿಕರ ಜಮೀನುಗಳಲ್ಲಿಯೇ ಪ್ರಯೋಗ ನಡೆಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಶನಿವಾರ ಪ್ರಗತಿಪರ ಕೃಷಿಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕ್ಯಾಂಪಸ್‌ನಲ್ಲಿ ಎಲ್ಲ ವ್ಯವಸ್ಥೆ ಇರುತ್ತದೆ. ಅಲ್ಲಿ ಹೊಸ ತಳಿ ಪ್ರಯೋಗ ನಡೆಸುವುದು ಹೆಚ್ಚುಗಾರಿಕೆ ಅಲ್ಲ. ಆಯಾ ಭಾಗದ ಭೂಮಿಯ ಫಲವತ್ತತೆ ಅರಿತು ಅಲ್ಲಿಯೇ ಪ್ರಯೋಗಗಳು ನಡೆಯಬೇಕು. 10 ಕೃಷಿ ವಲಯದ ವ್ಯಾಪ್ತಿಯಲ್ಲಿ ಇದು ಅನುಷ್ಠಾನಕ್ಕೆ ತರಬೇಕು ಎಂದು ಸೂಚನೆ ನೀಡಿದರು.

ಕೃಷಿ ಕ್ಷೇತ್ರದಲ್ಲಿ ಬದಲಾವಣೆಗಳು ನಡೆದರೆ ಆದಾಯ ವೃದ್ಧಿ ಆಗಲಿದೆ. 130 ಕೋಟಿ ಜನರಿಗೆ ಆಹಾರ ಉತ್ಪಾದನೆ ಮಾಡಬೇಕಿದೆ. ಭಾರತ ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದ್ದು ಅದಕ್ಕೆ ರೈತರ ಪರಿಶ್ರಮವೇ ಕಾರಣ. ಪ್ರಸ್ತುತ ಕೃಷಿ ಕ್ಷೇತ್ರವು ಬೆಳೆದಿದೆ. ಆದರೆ, ರೈತರು ಬೆಳೆದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

'ಹವಾಮಾನ ವೈಪರೀತ್ಯವು ಕೃಷಿ ಕ್ಷೇತ್ರದ ಮೇಲೆ ಗಂಭೀರ ಪರಿಣಾಮ ಬೀರಿದೆ. ಉತ್ತಮ ಮಳೆಯಾದರೆ ಮಾತ್ರ ಆಹಾರದ ಉತ್ಪಾದನೆ ಹೆಚ್ಚಲಿದೆ. ಕೃಷಿ ಹಾಗೂ ರೈತರ ವಿಚಾರದಲ್ಲಿ ಯಾರೂ ರಾಜಕೀಯ ಬೆರೆಸಬಾರದು' ಎಂದು ನುಡಿದರು.

'ಅಭಿವೃದ್ಧಿ ಸೇರಿದಂತೆ ನಾನಾ ಕಾರಣಕ್ಕೆ ಕೃಷಿ ಜಮೀನು ಕಡಿಮೆ ಆಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಕಂದಾಯ ಸಚಿವ ಆರ್.ಅಶೋಕ ಮಾತನಾಡಿ, ರಾಜ್ಯದಲ್ಲಿ 11 ಲಕ್ಷ ಹೆಕ್ಟೇರ್ ಜಮೀನು ಪಾಳು ಬಿದ್ದಿದೆ. ಅದು ಕೃಷಿಗೆ ಬಳಕೆ ಆಗಬೇಕು. ಚಿಕ್ಕಮಗಳೂರು, ಕೊಡಗು ಹಾಗೂ ಹಾಸನದಲ್ಲಿ ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡಿದವರಿಗೆ ಅದೇ ಜಮೀನು ಗುತ್ತಿಗೆ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ' ಎಂದರು.

ಕೃಷಿ ಸಚಿವ ಬಿ.ಸಿ.ಪಾಟೀಲ ಮಾತನಾಡಿ, 'ರಾಜ್ಯದಲ್ಲಿ ಶೇ 10 ಹಾಗೂ ದೇಶದಲ್ಲಿ ಶೇ 3ರಷ್ಟು ಆಹಾರೋತ್ಪಾದನೆ ಹೆಚ್ಚಳವಾಗಿದೆ. ರೈತಶಕ್ತಿ ಯೋಜನೆ ಅಡಿ 10 ಲೀಟರ್ ತನಕ ಡೀಸೆಲ್ ಮೇಲೆ ಸಿಬ್ಬಿಡಿ ನೀಡಲಾಗುತ್ತಿದೆ. ಸಮಗ್ರ ಕೃಷಿಯಿಂದ ಅಧಿಕ ಲಾಭ ಗಳಿಸಬಹುದು' ಎಂದು ಹೇಳಿದರು.

ಸಂಸದ ಡಿ.ವಿ.ಸದಾನಂದಗೌಡ ಅವರು, 'ಕೃಷಿ ಮೇಳವು ಮೈಸೂರು ದಸರಾದಂತೆ ಭಾಸವಾಗುತ್ತಿದೆ. ಕೋವಿಡ್ ಸಂಕಷ್ಟದಲ್ಲಿ ಎಲ್ಲ ಕ್ಷೇತ್ರದ ಜಿಡಿಪಿ ಕುಸಿದಿದ್ದರೂ ಕೃಷಿ ಕ್ಷೇತ್ರ ಜಿಡಿಪಿ ಶೇ 3.5ರಷ್ಟು ಹೆಚ್ಚಳವಾಗಿತ್ತು. ಅದಕ್ಕೆ ರೈತರ ಪರಿಶ್ರಮವೇ ಕಾರಣ' ಎಂದರು.

ಕೃಷಿ ವಿವಿಯ ಕುಲಪತಿ ಡಾ.ಎಸ್.ವಿ.ಸುರೇಶ್ ಹಾಜರಿದ್ದರು.

ಅಗತ್ಯಕ್ಕೆ ತಕ್ಕಂತೆ ಸಂಶೋಧನೆ

ರೈತರ ಅನುಕೂಲಕ್ಕೆ ತಕ್ಕಂತೆ ಸಂಶೋಧನೆಗಳು ನಡೆಯಬೇಕು ಎಂದು ಶಾಸಕ ಕೃಷ್ಣ ಬೈರೇಗೌಡ ಅವರು ಸಲಹೆ ನೀಡಿದರು.

ಕೃಷಿಕರ ಆದಾಯ ಕುಸಿಯುತ್ತಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಇದರಿಂದ ರೈತರು ಖರ್ಚು ಕಡಿಮೆ ಮಾಡುವ ಸ್ಥಿತಿಯಿದೆ. ಹೀಗಾಗಿ, ರೈತರ ಅನುಕೂಲಕ್ಕೆ ಬರುವ ಪ್ರಯೋಗಗಳು ನಡೆಯಬೇಕು. ಅವುಗಳು ಕೃಷಿಕರ ಜಮೀನಿಗೂ ತಲುಪಬೇಕು ಎಂದು ಸಲಹೆ ನೀಡಿದರು.

ಹಿಮಾಚಲ ಪ್ರದೇಶ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ • ನವೋದ್ಯಮ ನಿಧಿ ಸ್ಥಾಪನೆ ಭರವಸೆ

1 ಲಕ್ಷ ಉದ್ಯೋಗ, ಉಚಿತ ವಿದ್ಯುತ್

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಬಿಡುಗಡೆಯಾಗಿದ್ದು, 1 ಲಕ್ಷ ಉದ್ಯೋಗ ಸೃಷ್ಟಿ, ಮನೆಗಳಿಗೆ 300 ಯೂನಿಟ್‌ವರೆಗೆ ಉಚಿತ ವಿದ್ಯುತ್, ಹಳೆಯ ಪಿಂಚಣಿ ಯೋಜನೆ ಮರು ಜಾರಿಯಂತಹ ನಿರ್ಧಾರಗಳನ್ನು ಪ್ರಕಟಿಸಿದೆ.

₹680 ಕೋಟಿ ಮೊತ್ತದ ನವೋದ್ಯಮ ನಿಧಿ ಸ್ಥಾಪನೆ, 18ರಿಂದ 60 ವರ್ಷದೊಳಗಿನ ಮಹಿಳೆಯರಿಗೆ ₹1,500 ಸಹಾಯಧನ ನೀಡುವ ಪ್ರಮುಖ ಅಂಶಗಳನ್ನು ಪ್ರಣಾಳಿಕೆ ಒಳಗೊಂಡಿದೆ. ರಾಜ್ಯದಲ್ಲಿ ಸೇಬು ಬೆಳೆಯ ಬೆಲೆ ನಿರ್ಧರಿಸಲು ಸೇಬು ಬೆಳೆಗಾರರನ್ನೊಳಗೊಂಡ ಸಮಿತಿ ರಚಿಸಲಾಗುವುದು ಎಂದು ಪ್ರಣಾಳಿಕೆ ಭರವಸೆ ನೀಡಿದೆ.

ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಸಮ್ಮುಖದಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಲಾಯಿತು. ಹಿಮಾಚಲ ಪ್ರದೇಶದ ಎಐಸಿಸಿ ಉಸ್ತುವಾರಿ ರಾಜೀವ್ ಶುಕ್ಲಾ, ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸುಖ್‌ವಿಂದರ್ ಸಿಂಗ್ ಶುಖು, ಎಐಸಿಸಿ ಕಾರ್ಯದರ್ಶಿಗಳಾದ ತೇಜಿಂದರ್ ಪಾಲ್ ಬಿಟ್ಟು ಮತ್ತು ಮನೀಶ್ ಚತ್ರನ್ ಅವರು ಈ ವೇಳೆ ಉಪಸ್ಥಿತರಿದ್ದರು.

ನ.12ರಂದು ನಡೆಯಲಿರುವ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಪಕ್ಷ ಎದುರಿಸಲಿದ್ದು, ಚುನಾಯಿತ ಶಾಸಕರು ಹಾಗೂ ವರಿಷ್ಠರ ಜೊತೆ ಚರ್ಚಿಸಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು ಎಂದು ಕಾಂಗ್ರೆಸ್ ತಿಳಿಸಿದೆ.

ಹಳೆಯ ಪಿಂಚಣಿ ಯೋಜನೆ ಅನುಷ್ಠಾನ ಮಾಡುವಂತೆ ರಾಜಸ್ಥಾನ, ಛತ್ತೀಸಗಡ ರಾಜ್ಯಗಳು ಮಾಡಿದ್ದ ಮನವಿಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ ಎಂದು ಬಘೇಲ್ ಹೇಳಿದರು. ಮತ್ತೆ ಕೇಂದ್ರಕ್ಕೆ ಪತ್ರ ಬರೆಯಲು ನಿರ್ಧರಿಸಿದ್ದು, ಯೋಜನೆ ಜಾರಿಗೆ ಕಾನೂನು ಸಲಹೆ ಪಡೆಯಲಾಗುವುದು ಎಂದು ಅವರು ತಿಳಿಸಿದರು.

5 ವರ್ಷಗಳಲ್ಲಿ ಬಿಜೆಪಿ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ ಎಂದು ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಮುಖ್ಯಸ್ಥ ಧಣಿರಾಮ್ ಶಾಂಡಿಲ್ ಅವರು ಆರೋಪಿಸಿದ್ದಾರೆ. 'ಇದು ಕೇವಲ ಪ್ರಣಾಳಿಕೆಯಲ್ಲ. ಹಿಮಾಚಲ ಪ್ರದೇಶದ ಜನರ ಅಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಸಿದ್ಧಪಡಿಸಿರುವ ಮುನ್ನೋಟ' ಎಂದು ಅವರು ಹೇಳಿದ್ದಾರೆ.

ಸಮಾಜದ ಎಲ್ಲ ವರ್ಗದ ಜನರನ್ನು ಸಂಪರ್ಕಿಸಿ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ ಎಂದು ಶುಕ್ಲಾ ಅವರು ಹೇಳಿದರು. ರಾಜ್ಯದಲ್ಲಿ ಮಾದಕವಸ್ತು ಹಾವಳಿ ತಡೆಯಲು ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಮಾದಕವಸ್ತು ನಿಗ್ರಹ ಕಾರ್ಯಪಡೆ ರಚಿಸುವ ಭರವಸೆ ನೀಡಲಾಗಿದೆ ಎಂದರು.



ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಸಿದ್ಧಪಡಿಸಿರುವ ಪ್ರಣಾಳಿಕೆಯನ್ನು ಛತ್ತೀಸ್‌ಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಎಐಸಿಸಿ ಉಸ್ತುವಾರಿ ರಾಜೀವ್ ಶುಕ್ಲಾ, ರಾಜ್ಯ ಘಟಕದ ಮುಖ್ಯಸ್ಥೆ ಪ್ರತಿಭಾ ಸಿಂಗ್ ಹಾಗೂ ಇತರರು ಶಿಮ್ಲಾದಲ್ಲಿ ಶನಿವಾರ ಬಿಡುಗಡೆ ಮಾಡಿದರು–ಪಿಟಿಐ ಚಿತ್ರ

ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ: ಅನುರಾಗ್

ಶಿಮ್ಲಾ: ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಟೀಕಿಸಿದ್ದಾರೆ. ಸ್ವತಃ ಯಾವುದೇ ಖಾತರಿ ಇಲ್ಲದ ಪಕ್ಷವೊಂದು ನೀಡಿರುವ ಭರವಸೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದು ಅವರು ವ್ಯಂಗ್ಯ ಮಾಡಿದ್ದಾರೆ.

'ಮನೆಗೊಂದು ಉದ್ಯೋಗ ನೀಡುವುದಾಗಿ 2003ರಲ್ಲಿ ಕಾಂಗ್ರೆಸ್ ಹೇಳಿತ್ತು. ಕೆಲಸ ಸಿಕ್ಕಿತಾ? ಇಲ್ಲ. ಮತ್ತೆ 2012ರಲ್ಲಿ ನಿರುದ್ಯೋಗ ಭತ್ಯೆ ನೀಡುವುದಾಗಿ ಹೇಳಿತ್ತು. ಆದರೆ ಆ ಭರವಸೆ ಈಡೇರಿಸಲಿಲ್ಲ. ಅವರು ಕೆಲಸವನ್ನೂ ನೀಡಲಿಲ್ಲ, ಭತ್ಯೆಯನ್ನೂ ನೀಡಲಿಲ್ಲ' ಎಂದು ಚಿಂತಪುರನಿ ಎಂಬಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಠಾಕೂರ್ ಆರೋಪಿಸಿದರು.

ಪ್ರಣಾಳಿಕೆಯ ಇತರ ಅಂಶಗಳು

- ಟ್ಯಾಕ್ಸಿ ಚಾಲಕರಿಗೆ ಅಲ್ಪ ಬಡ್ಡಿದರದಲ್ಲಿ ಸಾಲ; ವಾಹನ ಪರ್ಮಿಟ್ ಅವಧಿ 15 ವರ್ಷಕ್ಕೆ ವಿಸ್ತರಣೆ
- ಅಧಿಕಾರಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸರ್ಕಾರ ಮಾಡಿದ್ದ ಎಲ್ಲ ವರ್ಗಾವಣೆ ರದ್ದು
- ಪತ್ರಕರ್ತರಿಗೆ ಪಿಂಚಣಿ ಯೋಜನೆ ಜಾರಿ
- ಬಂದೂಕು ಪರವಾನಗಿ ಶುಲ್ಕ ಇಳಿಕೆ
- ರಾಜ್ಯ ಸರ್ಕಾರದ ಸಾಲದ ಹೊರೆ ತಗ್ಗಿಸುವುದು

ನುಡಿ–ಕಿಡಿ

ಗುಜರಾತ್ ಚುನಾವಣೆಯಲ್ಲಿ ಬಿಜೆಪಿ ಜೊತೆ ಎಎಪಿ ಒಪ್ಪಂದ ಮಾಡಿಕೊಂಡಿದೆ. ಎಎಪಿ ಅಭ್ಯರ್ಥಿಗಳು ಯಾರಾಗಬೇಕು ಎಂದು ಬಿಜೆಪಿ ನಿರ್ಧರಿಸುತ್ತಿದೆ. ಗೆಲ್ಲುವ ಸಾಮರ್ಥ್ಯವಿದ್ದ 15 ಅಭ್ಯರ್ಥಿಗಳು ಟಿಕೆಟ್ ನೀಡುವಂತೆ ಕೇಳಿದ್ದರೂ, ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ನೆರವಾಗುವಂತಹ ಅಭ್ಯರ್ಥಿಗಳಿಗೆ ಎಎಪಿ ಟಿಕೆಟ್ ನೀಡಿದೆ

ಇಂದ್ರಾಣಿ ರಾಜ್‌ಗುರು, ಮಾಜಿ ಶಾಸಕ (ಇವರು ಎಎಪಿ ತೊರೆದು ಶುಕ್ರವಾರ ಕಾಂಗ್ರೆಸ್ ಸೇರಿದ್ದಾರೆ)

ರಾಜ್‌ಗುರು ಅವರು ಎಎಪಿ ವರ್ತನೆಯಿಂದ ಭ್ರಮನಿರಸನಗೊಂಡು ಕಾಂಗ್ರೆಸ್ ಸೇರಿದ್ದಾರೆ. ನಾವು ಎಎಪಿಯನ್ನು ಬಿಜೆಪಿಯ 'ಬಿ–ಟೀಮ್' ಎಂದು ಕರೆಯುತ್ತಿದ್ದೆವು. ಇದಕ್ಕೆ ಎಎಪಿಯವರು ಬೇಸರ ಮಾಡಿಕೊಳ್ಳುವುದು ಏಕೆ? ರಾಜ್‌ಗುರು ಮಾಡಿರುವ ಆರೋಪಗಳು ಗಂಭೀರವಾಗಿದ್ದು, ಎಎಪಿ, ಬಿಜೆಪಿ ಹಾಗೂ ಅದರ ಮುಖ್ಯಸ್ಥರು ಉತ್ತರಿಸಬೇಕಿದೆ.

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ಉಪಚುನಾವಣೆ: ಮುನುಗೋಡ್ ಸೇರಿ 7 ಕ್ಷೇತ್ರಗಳ ಮತಎಣಿಕೆ ಇಂದು

ನವದೆಹಲಿ (ಪಿಟಿಐ): ಆರು ರಾಜ್ಯಗಳ ಏಳು ವಿಧಾನಸಭಾ ಕ್ಷೇತ್ರಗಳಿಗೆ ನಡೆದಿದ್ದ ಉಪಚುನಾವಣೆಯ ಫಲಿತಾಂಶ ಭಾನುವಾರ ಪ್ರಕಟವಾಗಲಿದೆ. ಈ ಏಳೂ ಕ್ಷೇತ್ರಗಳಲ್ಲಿ ಬಿಜೆಪಿಗೆ ಪ್ರಾದೇಶಿಕ ಪಕ್ಷಗಳು ಸವಾಲೊಡ್ಡಿವೆ. ಭಾರಿ ಕುತೂಹಲ ಕೆರಳಿಸಿರುವ ತೆಲಂಗಾಣದ ಮುನುಗೋಡ್ ಕ್ಷೇತ್ರವೂ ಇದರಲ್ಲಿ ಸೇರಿದೆ.

ಹರಿಯಾಣದ ಮಾಜಿ ಮುಖ್ಯಮಂತ್ರಿ ಭಜನ್‌ಲಾಲ್ ಅವರ ಕುಟುಂಬದ ಭದ್ರನೆಲೆ ಆದಂಪುರದ ಫಲಿತಾಂಶವೂ ಪ್ರಕಟವಾಗಲಿದೆ. ಭಜನ್‌ಲಾಲ್ ಅವರ ಮೊಮ್ಮಗ ಭವ್ಯ ಬಿಷ್ಣೋಯಿ ಅವರು ಬಿಜೆಪಿ ಟಿಕೆಟ್‌ನಿಂದ ಇಲ್ಲಿ ಸ್ಪರ್ಧಿಸಿದ್ದಾರೆ.

ಬಿಹಾರದ ಮೊಕಾಮಾ ಕ್ಷೇತ್ರದಲ್ಲಿ ಅನಂತ್ ಸಿಂಗ್ ಅವರ ಅನರ್ಹತೆಯಿಂದ ತೆರವಾಗಿದ್ದ ಕ್ಷೇತ್ರದಲ್ಲಿ ಅವರ ಪತ್ನಿ ಆರ್‌ಜೆಡಿಯ ನೀಲಂ ದೇವಿ ಕಣಕ್ಕಿಳಿದಿದ್ದರು. ಬಿಹಾರದ ಗೋಪಾಲಗಂಜ್, ಮಹಾರಾಷ್ಟ್ರದ ಅಂಧೇರಿ ಪೂರ್ವ, ಉತ್ತರ ಪ್ರದೇಶದ ಗೋಲ ಗೋಕರ್ಣನಾಥ, ಒಡಿಶಾದ ಧಾಮ್‌ನಗರ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶವೂ ಹೊರಬೀಳಲಿದೆ.

ಗುಜರಾತ್: ಬಿಜೆಪಿ ಮುಖಂಡ ವ್ಯಾಸ್ ರಾಜೀನಾಮೆ

ಅಹಮದಾಬಾದ್ (ಪಿಟಿಐ): ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ಜಯನಾರಾಯಣ ವ್ಯಾಸ್ ಅವರು ವೈಯಕ್ತಿಕ ಕಾರಣ ನೀಡಿ ಪಕ್ಷಕ್ಕೆ ಶನಿವಾರ ರಾಜೀನಾಮೆ ನೀಡಿದ್ದಾರೆ. ಅವರು ಕಾಂಗ್ರೆಸ್ ಸೇರುವ ಸಾಧ್ಯತೆಯಿದೆ ಎಂದು ಗುಜರಾತ್‌ನ ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ್ದಾರೆ.

ವ್ಯಾಸ್ ಅವರು ಈ ಬಗ್ಗೆ ಗುಟ್ಟು ಬಿಟ್ಟುಕೊಟ್ಟಿಲ್ಲ. ಆದರೆ ಅವರು ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಗುಜರಾತ್‌ನ ಕಾಂಗ್ರೆಸ್ ವೀಕ್ಷಕ ಅಶೋಕ್ ಗೆಹಲೋತ್, ಗುಜರಾತ್ ಕಾಂಗ್ರೆಸ್ ಘಟಕದ ಮುಖ್ಯಸ್ಥ ರಘು ಶರ್ಮಾ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ್ದರು ಎಂದು ಮುಖಂಡರು ಹೇಳಿದ್ದಾರೆ.ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವ್ಯಾಸ್ ಅವರು ಸಚಿವರಾಗಿ ಕೆಲಸ ಮಾಡಿದ್ದರು. ಅವರು ಸಿಧ್‌ಪುರ ಕ್ಷೇತ್ರದಿಂದ 2012 ಮತ್ತು 2017ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರು. ರಾಜ್ಯದಲ್ಲಿ ಪಕ್ಷ ಕಟ್ಟಲು ನೆರವಾಗಿದ್ದ ವ್ಯಾಸ್ ಅವರನ್ನು ಬಿಜೆಪಿ ನಿರ್ಲಕ್ಷಿಸಿತ್ತು ಎಂದು ಕಾಂಗ್ರೆಸ್ ಮುಖಂಡ ಜಗದೀಶ್ ಠಾಕೂರ್ ಹೇಳಿದ್ದಾರೆ.

'ಸತತ ಸೋಲು ಕಾಣುತ್ತಿದ್ದರೂ ಪಕ್ಷ ಅವರಿಗೆ ಹಲವು ಅವಕಾಶ ನೀಡಿತ್ತು. ಪಕ್ಷದಲ್ಲಿ 75 ವರ್ಷ ಮೀರಿದವರಿಗೆ ಟಿಕೆಟ್ ನೀಡಬಾರದು ಎಂಬ ನಿಯಮವಿದ್ದು, ಟಿಕೆಟ್ ಸಿಗುವುದಿಲ್ಲ ಎಂಬ ಕಾರಣಕ್ಕೆ ಅವರು ರಾಜೀನಾಮೆ ನೀಡಿರಬಹುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಪ್ರತಿಕ್ರಿಯಿಸಿದ್ದಾರೆ.

ಡಿ.5ರಂದು ಉಪಚುನಾವಣೆ

ನವದೆಹಲಿ (ಪಿಟಿಐ): ಎಸ್‌ಪಿ ವರಿಷ್ಠ ಮುಲಾಯಂ ಸಿಂಗ್ ನಿಧನದಿಂದ ತೆರವಾಗಿರುವ ಮೈನ್‌ಪುರಿ ಲೋಕಸಭಾ ಕ್ಷೇತ್ರಕ್ಕೆ ಡಿ.5ರಂದು ಉಪಚುನಾವಣೆ ನಡೆಯಲಿದೆ. ಜೊತೆಗೆ ವಿವಿಧ ರಾಜ್ಯಗಳ 5 ವಿಧಾನಸಭಾ ಕ್ಷೇತ್ರಗಳಿಗೂ ಆಯೋಗ ಚುನಾವಣೆ ಘೋಷಿಸಿದೆ.

ಉತ್ತರ ಪ್ರದೇಶದ ರಾಂಪುರ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಲಿದೆ. ದ್ವೇಷಭಾಷಣ ಆರೋಪದಲ್ಲಿ ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದ ಎಸ್‌ಪಿ ಮುಖಂಡ ಆಜಂ ಖಾನ್ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಕಾಂಗ್ರೆಸ್ ಶಾಸಕ ಬನ್ವಾರ್ ಲಾಲ್ ಶರ್ಮಾ ಅವರ ನಿಧನದಿಂದ ತೆರವಾಗಿರುವ ರಾಜಸ್ಥಾನದ ಸರದಾರಶಹರ್ ಹಾಗೂ ಒಡಿಶಾದ ಪದಮಪುರ, ಬಿಹಾರದ ಕುಂಡನಿ, ಛತ್ತೀಸಗಡದ ಭಾನುಪ್ರತಾಪಪುರ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಡಿ.8ರಂದು ಮತ ಎಣಿಕೆ ನಡೆಯಲಿದೆ.

ಹಿಮಾಚಲ ಪ್ರದೇಶದಲ್ಲಿ ಪ್ರಧಾನಿ ಚುನಾವಣಾ ಪ್ರಚಾರ; ಕಾಂಗ್ರೆಸ್, ಆಮ್ ಆದ್ಮಿ ಪಕ್ಷಕ್ಕೆ ತರಾಟೆ

ಸ್ಥಿರ ಸರ್ಕಾರ ಅಗತ್ಯ: ಮೋದಿ ಪ್ರತಿಪಾದನೆ

ಸುಂದರ್‌ನಗರ, ಸೋಲನ್ (ಹಿಮಾಚಲ ಪ್ರದೇಶ) (ಪಿಟಿಐ): ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರವನ್ನೇ ಉಳಿಸಿಕೊಳ್ಳಬೇಕು ಎಂದು ಹಿಮಾಚಲ ಪ್ರದೇಶದ ಜನರು ಮನಸ್ಸಿನಲ್ಲಿ ನಿರ್ಧರಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಹೇಳಿದ್ದಾರೆ.

ಮಂಡಿ ಜಿಲ್ಲೆಯ ಸುಂದರ್‌ನಗರದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಕ್ಷಿಪ್ರಗತಿಯ ಅಭಿವೃದ್ಧಿ ಹಾಗೂ ಸ್ಥಿರ ಸರ್ಕಾರ ರಾಜ್ಯದ ಇಂದಿನ ಅಗತ್ಯ ಎಂದರು.

'ಈ ಬಾರಿಯ ರಾಜ್ಯ ವಿಧಾನಸಭಾ ಚುನಾವಣೆ ವಿಶಿಷ್ಟವಾದುದು. 12ರಂದು ಜನರು ಚಲಾಯಿಸುವ ಮತ ಮುಂದಿನ ಐದು ವರ್ಷಗಳ ಅವಧಿಯ ಸರ್ಕಾರವನ್ನಷ್ಟೇ ಆರಿಸುವುದಿಲ್ಲ. ಜನರು ಚಲಾಯಿಸುವ ಒಂದೊಂದು ಮತವೂ ರಾಜ್ಯದ ಮುಂದಿನ 25 ವರ್ಷಗಳ ಪ್ರಗತಿಯ ಹಾದಿಯನ್ನು ನಿರ್ಧರಿಸಲಿದೆ' ಎಂದು ಪ್ರಧಾನಿ ಹೇಳಿದರು.

'ನಿಮ್ಮ ಒಂದೊಂದು ಮತವನ್ನೂ ಕಮಲಕ್ಕೆ ನೀಡಬೇಕು. ಇದೇ ನೀವು ನನಗೆ ಮಾಡುವ ಆಶೀರ್ವಾದ' ಎಂದರು. 'ಭಾರತವು 100ನೇ ಸ್ವಾತಂತ್ರ್ಯೋತ್ಸವ ಆಚರಿಸಿಕೊಳ್ಳುವ ಹೊತ್ತಿಗೆ ಹಿಮಾಚಲ ಪ್ರದೇಶ ರಾಜ್ಯ ರಚನೆಯಾಗಿ 100 ವರ್ಷಗಳು ತುಂಬಲಿವೆ. ಹೀಗಾಗಿ ಮುಂದಿನ 25 ವರ್ಷಗಳು ಅತ್ಯಂತ ನಿರ್ಣಾಯಕ' ಎಂದು ಮೋದಿ ಹೇಳಿದರು. 'ಬಿಜೆಪಿಯು ಸ್ಥಿರತೆ, ಸೇವಾಭಾವ, ಸಮಚಿತ್ತಕ್ಕೆ ಹೆಸರಾಗಿದ್ದು, ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಈ ಎಲ್ಲ ಕಾರಣಗಳಿಂದ ಹಿಮಾಚಲ ಪ್ರದೇಶದ ಜನರು ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಆರಿಸಬೇಕು' ಎಂದು ಅವರು ಕರೆ ನೀಡಿದರು.

ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷಗಳ (ಎಎಪಿ) ವಿರುದ್ಧ ಅವರು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಭ್ರಷ್ಟಾಚಾರ ಹಾಗೂ ವಂಶಾಡಳಿತದ ಪಕ್ಷ ಹಾಗೂ ಎಎಪಿ ಅತ್ಯಂತ ಭ್ರಷ್ಟ ಪಕ್ಷ ಎಂದು ಆರೋಪಿಸಿದರು.

'ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಸ್ವಾರ್ಥ ಜನರು ಹಾಗೂ ಪಟ್ಟಭದ್ರ ಹಿತಾಸಕ್ತಿ ಗುಂಪಿನವರ ಸಂಖ್ಯೆ ಹೆಚ್ಚಳವಾಗಿತ್ತು. ಹಿಮಾಚಲ ಪ್ರದೇಶ ಸೇರಿದಂತೆ ದೇಶದಲ್ಲಿ ಅಸ್ಥಿರತೆ ಉಂಟು ಮಾಡುವುದು ಅವರ ಉದ್ದೇಶವಾಗಿತ್ತು' ಎಂದು ಆರೋಪಿಸಿದರು.

ಗೋವಾ ಹಾಗೂ ಉತ್ತರಾಖಂಡ ಚುನಾವಣೆಗಳನ್ನು ಉಲ್ಲೇಖಿಸಿದ ಅವರು, 'ಸಣ್ಣ ರಾಜ್ಯಗಳು ಅಸ್ಥಿರತೆಯಿಂದ ನಲುಗುತ್ತಿದ್ದವು. ಆದರೆ, ಎರಡೂ ರಾಜ್ಯ ಸರ್ಕಾರಗಳ ಕೆಲಸಗಳನ್ನು ನೋಡಿ ಮತದಾರರು ಮತ್ತೊಂದು ಅವಧಿಗೆ ಆಯ್ಕೆ ಮಾಡಿದ್ದಾರೆ. ಹಿಮಾಚಲ ಪ್ರದೇಶದಲ್ಲೂ ಸ್ಥಿರ ಸರ್ಕಾರಕ್ಕಾಗಿ ಬಿಜೆಪಿಯನ್ನು ಆಯ್ಕೆ ಮಾಡಿ' ಎಂದು ಮನವಿ ಮಾಡಿದರು.

'ಕಡಿಮೆ ಪ್ರಾತಿನಿಧ್ಯದ ಕಾರಣಕ್ಕೆ ರಾಜ್ಯ ನಿರ್ಲಕ್ಷ್ಯ': ಲೋಕಸಭೆಯಲ್ಲಿ ಕಡಿಮೆ ಸಂಖ್ಯೆಯ ಸಂಸದರ ಪ್ರಾತಿನಿಧ್ಯ ಹೊಂದಿದೆ ಎಂಬ ಕಾರಣಕ್ಕೆ ಹಿಮಾಚಲ ಪ್ರದೇಶವನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆರೋಪಿಸಿದರು. 'ಚಿಕ್ಕ ರಾಜ್ಯ ಎಂಬ ಕಾರಣಕ್ಕೆ ಹಿಮಾಚಲವು ಅವಗಣನೆಗೆ ಒಳಗಾಗಿದೆ. ಮೂರರಿಂದ ನಾಲ್ವರು ಸಂಸದರನ್ನು ಲೋಕಸಭೆಗೆ ಕಳುಹಿಸುವುದು ಅಷ್ಟೇನೂ ಮಹತ್ವದ್ದಾಗಿ ಕಾಂಗ್ರೆಸ್‌ಗೆ ಕಾಣುತ್ತಿಲ್ಲ' ಎಂದು ಅವರು ಆರೋಪಿಸಿದರು.


ಹಿಮಾಚಲ ಪ್ರದೇಶದ ಸುಂದರ್ ನಗರದಲ್ಲಿ ಬಿಜೆಪಿ ಶನಿವಾರ ಆಯೋಜಿಸಿದ್ದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನ –ಪಿಟಿಐ ಚಿತ್ರ

'ಸತ್ಯವಂತರ' ಬಗ್ಗೆ ಎಚ್ಚರ: ಪ್ರಧಾನಿ

ತಮ್ಮನ್ನು ಅಪ್ಪಟ ಸತ್ಯವಂತ (ಕಟ್ಟರ್ ಇಮಾಂದಾರ್) ಎಂದು ಬಿಂಬಿಸಿಕೊಳ್ಳುವವರು ಅತ್ಯಂತ ಭ್ರಷ್ಟರೂ, ಸಮಾಜವನ್ನು ಒಡೆಯುವ ಸಂಚು ರೂಪಿಸುವವರೂ ಆಗಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು. ಹಿಮಾಚಲ ಪ್ರದೇಶದ ಸೋಲನ್‌ನಲ್ಲಿ ಶನಿವಾರ ಆಯೋಜಿಸಿದ್ದ ಬಿಜೆಪಿ ಸಮಾವೇಶದಲ್ಲಿ ಆಮ್ ಆದ್ಮಿ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಈ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು ಎಂದರು.

'ಖರೀದಿಯಲ್ಲಿ ಕಮಿಷನ್'

ಸ್ವಾತಂತ್ರ್ಯ ಬಂದ ಬಳಿಕ ಕಾಂಗ್ರೆಸ್ ಪಕ್ಷವು ರಕ್ಷಣಾ ಕ್ಷೇತ್ರದಲ್ಲಿ ಮೊದಲ ಹಗರಣ ನಡೆಸಿತು. ರಕ್ಷಣಾ ಖರೀದಿಗಳಲ್ಲಿ ಕಾಂಗ್ರೆಸ್ ಪಕ್ಷವು ಸದಾ ಕಮಿಷನ್ ಪಡೆದಿದೆ. ಆ ಪಕ್ಷವು ಸಾವಿರಾರು ಕೋಟಿ ಮೊತ್ತದ ಹಗರಣ ನಡೆಸಿದೆ ಎಂದು ಮೋದಿ ಆರೋಪಿಸಿದ್ದಾರೆ.

ರಕ್ಷಣಾ ಸಲಕರಣೆಗಳಲ್ಲಿ ದೇಶವು ಸ್ವಾವಲಂಬನೆ ಸಾಧಿಸುವುದು ಕಾಂಗ್ರೆಸ್‌ಗೆ ಬೇಕಿರಲಿಲ್ಲ. ಆ ಪಕ್ಷಕ್ಕೆ ಸದಾ ಕಮಿಷನ್ ಬೇಕಿತ್ತು. ಆ ಪಕ್ಷದ ನಾಯಕರ ಬೊಕ್ಕಸ ತುಂಬಿಸಬೇಕಿತ್ತು. ಹಾಗಾಗಿಯೇ ಆಯುಧಗಳ ಖರೀದಿಯಲ್ಲಿ ವಿಳಂಬ ಆಗುತ್ತಿತ್ತು ಎಂದು ಮೋದಿ ಆಪಾದಿಸಿದ್ದಾರೆ. ರಕ್ಷಣಾ ಖರೀದಿಯಲ್ಲಿ ಕಮಿಷನ್ ಪಡೆಯುವ ಮೂಲಕ ಹಲವು ಜೀವಗಳ ಜತೆಗೆ ಕಾಂಗ್ರೆಸ್ ಚೆಲ್ಲಾಟವಾಡಿದೆ ಎಂದೂ ಅವರು ಹೇಳಿದ್ದಾರೆ.

ಪಿಂಚಣಿ: ₹15 ಸಾವಿರದ ಗರಿಷ್ಠ ಮಿತಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಂಚಣಿ ನಿಧಿಗೆ ಉದ್ಯೋಗಿ ಗಳು ತಮ್ಮ ಪೂರ್ಣ ವೇತನದ ಶೇ 8.33ರಷ್ಟನ್ನು ಪಾವತಿಸಲು ಸುಪ್ರೀ ಕೋರ್ಟ್ ಅವಕಾಶ ಕೊಟ್ಟಿದೆ. ತಿದ್ದುಪತಿ ಕಾಯ್ದೆಯನ್ನು ಎತ್ತಿ ಹಿಡಿದಿದೆ

ಕೋರ್ಟ್ ಹೇಳಿದ್ದೇನು?: ಉದ್ಯೋಗಿಗಳ ಪಿಂಚಣಿ ಯೋಜನೆಗೆ (ಇಪಿಎಸ್) 2014ರಲ್ಲಿ ಮಾಡಿದ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಇಪಿಎಸ್ ಆಯ್ಕೆ ಮಾಡಿಕೊಂಡಿರುವ ಉದ್ಯೋಗಿಗಳ ಭವಿಷ್ಯ ನಿಧಿ ಸಂಘದ ಸದಸ್ಯರು ತಮ್ಮ ಠೇವಣಿಯನ್ನು ಹೆಚ್ಚಿಸುವ ಅವಕಾಶವನ್ನು ನೀಡಲಾಗಿದೆ. ಈ ಆಯ್ಕೆಯನ್ನು ಪಡೆದುಕೊಳ್ಳಲು ನಾಲ್ಕು ತಿಂಗಳ ಕಾಲಾವಕಾಶ ನೀಡಲಾಗಿದೆ.

2014ರ ಸೆಪ್ಟೆಂಬರ್ 1 ಅಥವಾ ಅದಕ್ಕೂ ಮೊದಲಿನಿಂದಲೇ ಇಪಿಎಸ್‌ನ ಸದಸ್ಯರಾಗಿರುವವರು ತಮ್ಮ ಪೂರ್ಣ ವೇತನದ ಶೇ 8.33ರಷ್ಟನ್ನು ವಂತಿಗೆಯಾಗಿ ಪಾವತಿಸಬಹುದು. ಈವರೆಗೆ ಗರಿಷ್ಠ 15,000 ವೇತನಕ್ಕೆ ಮಾತ್ರ ಶೇ 8.33ರಷ್ಟು ವಂತಿಗೆ ಪಾವತಿಸಲು ಅವಕಾಶ ಇತ್ತು.

ತಿಂಗಳಿಗೆ ₹15,000ಕ್ಕಿಂತ ಹೆಚ್ಚಿನ ವೇತನಕ್ಕೆ ಹೆಚ್ಚುವರಿಯಾಗಿ ಶೇ 1.16ರಷ್ಟು ವಂತಿಗೆ ಪಾವತಿಸಬೇಕು ಎಂಬುದು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಇತರ ಅವಕಾಶಗಳ ಕಾಯ್ದೆ –1952ರ ಉಲ್ಲಂಘನೆಯಾಗುತ್ತದೆ ಎಂದಿದೆ. ಹಾಗಾಗಿ ಈ ಅವಕಾಶವನ್ನು ರದ್ದುಪಡಿಸಲಾಗಿದೆ.

2014ರ ತಿದ್ದುಪಡಿ ಏನು ಹೇಳುತ್ತದೆ?: ಇಪಿಎಸ್‌ಗೆ 2014ರ ಆಗಸ್ಟ್‌ನಲ್ಲಿ ತಿದ್ದುಪಡಿ ಮಾಡಲಾಯಿತು. ಪಿಂಚಣಿಯ ಗರಿಷ್ಠ ವೇತನವನ್ನು ತಿಂಗಳಿಗೆ ₹15,000ಕ್ಕೆ ಏರಿಸಿತು. ಇಪಿಎಸ್‌ನ ಸದಸ್ಯರು ಮತ್ತು ಉದ್ಯೋಗದಾತರು ಇಪಿಎಸ್‌ಗಾಗಿ ತಿಂಗಳ ವೇತನದ ಶೇ 8.33ರಷ್ಟನ್ನು ವಂತಿಗೆ ನೀಡಲು ಅವಕಾಶ ಇದೆ. ಆದರೆ, ತಿಂಗಳಿಗೆ ₹15,000ಕ್ಕಿಂತ ಹೆಚ್ಚಿನ ವೇತನ ಪಡೆಯುವವರು ಹೆಚ್ಚುವರಿ ವೇತನದ ಶೇ 1.16ರಷ್ಟನ್ನು ವಂತಿಗೆ ರೂಪದಲ್ಲಿ ನೀಡಬೇಕು.

ಮೊದಲ ಮತದಾರ ನೇಗಿ ನಿಧನ


ಶ್ಯಾಮ್ ಶರಣ್

ಶಿಮ್ಲಾ (ಪಿಟಿಐ): ಭಾರತದ ಮೊದಲ ಮತದಾರ ಶ್ಯಾಮ್ ಶರಣ್ ನೇಗಿ (106) ಅವರು ಶನಿವಾರ ಬೆಳಿಗ್ಗೆ ಹಿಮಾಚಲ ಪ್ರದೇಶದ ಕಿನ್ನೌರ್‌ನಲ್ಲಿರುವ ತಮ್ಮ ನಿವಾಸದಲ್ಲಿ ವಯೋಸಹಜ ಕಾರಣಗಳಿಂದ ನಿಧನರಾದರು.

ನೇಗಿ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಚುನಾವಣಾ ಆಯೋಗ, ಇವರು ಸ್ವತಂತ್ರ ಭಾರತದ ಮೊದಲ ಮತದಾರ ಮಾತ್ರವಲ್ಲ, ಪ್ರಜಾಪ್ರಭುತ್ವದಲ್ಲಿ ಅಸಾಧಾರಣ ನಂಬಿಕೆ ಇರಿಸಿಕೊಂಡಿದ್ದ ವ್ಯಕ್ತಿಎಂದು ಸ್ಮರಿಸಿದೆ.

ನಿರುದ್ಯೋಗ ಸಮಸ್ಯೆ: ಕೇಂದ್ರದ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಟೀಕೆ

ಪ್ರಧಾನಿಯಿಂದ ಕೆಲವೇ ಸಾವಿರ ನೇಮಕಾತಿ ಪತ್ರ

ನವದೆಹಲಿ (ಪಿಟಿಐ): 'ಲಕ್ಷಾಂತರ ಯುವಕರು ಉದ್ಯೋಗದ ನಿರೀಕ್ಷೆಯಲ್ಲಿರುವಾಗ, ಪ್ರಧಾನಿ ಕೆಲವು ಸಾವಿರ ನೇಮಕಾತಿ ಪತ್ರಗಳನ್ನು ಮಾತ್ರ ಹಸ್ತಾಂತರಿಸುತ್ತಿದ್ದಾರೆ' ಎಂದು ಟೀಕಿಸುವ ಮೂಲಕ ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಶನಿವಾರ ಸರಣಿ ಟ್ವೀಟ್ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಯುವ ಸಮುದಾಯಕ್ಕೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ' ಎಂದು ದೂರಿದ್ದಾರೆ.

'ಅಧಿಕಾರ ನೀಡಿದರೆ ಪ್ರತಿ ವರ್ಷ ಹೊಸದಾಗಿ ಎರಡು ಕೋಟಿ ಜನರಿಗೆ ಉದ್ಯೋಗಾವಕಾಶ ಒದಗಿಸುವುದಾಗಿ ಮೋದಿ ಭರವಸೆ ನೀಡಿದ್ದರು. ಅದನ್ನು ಮರೆತಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದು ಎಂಟು ವರ್ಷಗಳಾಗಿವೆ. ಆದರೆ ಈಗ ಕೇಂದ್ರ ಸರ್ಕಾರದ 10 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲು ಚಿಂತಿಸಿದೆ' ಎಂದು ಖರ್ಗೆ ಟೀಕಿಸಿದ್ದಾರೆ.

ದೇಶದ ಗ್ರಾಮೀಣ ಭಾಗದಲ್ಲಿ ನಿರುದ್ಯೋಗ ಸಮಸ್ಯೆ ತೀವ್ರವಾಗಿದೆ ಎಂದಿರುವ ಖರ್ಗೆ, ಬಿಜೆಪಿಯ ಹುಸಿ ಭರವಸೆಗಳಿಂದಾಗಿ ದೇಶದ ಯುವ ಸಮುದಾಯ ಉದ್ಯೋಗಕ್ಕಾಗಿ ವರ್ಷಗಟ್ಟಲೆ ಕಾಯಬೇಕಾದ ಸ್ಥಿತಿ ಬಂದೆರಗಿದೆ ಎಂದು ಕಿಡಿಕಾರಿದ್ದಾರೆ.

'ಅಗ್ನಿಪಥ' ಯೋಜನೆಯಡಿ 40 ಸಾವಿರ ಹುದ್ದೆಗಳಿಗೆ 35 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಉತ್ತರ ಪ್ರದೇಶದಲ್ಲಿ ಕೆಲವು ಸಾವಿರ ಹುದ್ದೆಗಳಿಗೆ 37 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಸ್ನಾತಕೋತ್ತರ ಪದವೀಧರರು, ಪಿಎಚ್.ಡಿ ಪದವೀಧರರು ತಮ್ಮ ವಿದ್ಯಾರ್ಹತೆಗಿಂತ ಕಡಿಮೆ ಅರ್ಹತೆ ಅಗತ್ಯವಿರುವ ಉದ್ಯೋಗಗಳಿಗೆ ಅರ್ಜಿ ಸಲ್ಲಿಸುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ

ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಅವುಗಳ ಭರ್ತಿಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿರುವುದಾಗಿ ಬಿಜೆಪಿ ಕೊಚ್ಚಿಕೊಳ್ಳುತ್ತಿದೆ. ಆದರೆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಆಸಕ್ತಿ ತೋರುತ್ತಿಲ್ಲ ಎಂದು ಅವರು ಟೀಕಿಸಿದ್ದಾರೆ.

ಕಳೆದ ಎಂಟು ವರ್ಷಗಳಲ್ಲಿ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ 'ರೆಗ್ಯುಲರ್' ಉದ್ಯೋಗಿಗಳ ಪಾಲು ಸತತವಾಗಿ ಕಡಿಮೆಯಾಗುತ್ತಿದೆ. ಇದು 2011-12ರಲ್ಲಿ 14 ಲಕ್ಷದಿಂದ 2019-20ರಲ್ಲಿ 9 ಲಕ್ಷಕ್ಕೆ ಕುಸಿದಿದೆ. ಮತ್ತೊಂದೆಡೆ ಗುತ್ತಿಗೆ ನೌಕರರ ಪಾಲು 2011-12ರಲ್ಲಿ 2.6 ಲಕ್ಷದಿಂದ 2019-20ರಲ್ಲಿ 5.16 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಅವರು ಅಂಕಿ ಅಂಶಗಳನ್ನು ನೀಡಿದ್ದಾರೆ.

'ಯುವ ಸಮುದಾಯಕ್ಕೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ. ಮೇಕ್ ಇನ್ ಇಂಡಿಯಾ, ಸ್ಕಿಲ್ ಇಂಡಿಯಾ ಕಾರ್ಯಕ್ರಮಗಳು, ಘೋಷಣೆಗಳು ಏನಾದವು? ನೀವು ಭರವಸೆ ನೀಡಿದ್ದ 16 ಕೋಟಿ ಉದ್ಯೋಗಗಳು ಎಲ್ಲಿವೆ? ಈ ಕುರಿತು ಏಕೆ ಮೌನವಾಗಿದ್ದೀರಿ' ಎಂದು ಖರ್ಗೆ ಅವರು ಪ್ರಶ್ನಿಸಿದ್ದಾರೆ.

ಸುಪ್ರೀಂ ಕೋರ್ಟ್ ಕೊಲಿಜಿಯಂ ಪದ್ಧತಿ ವಿರುದ್ಧ ಸಚಿವ ಕಿರಣ್ ರಿಜಿಜು ಕಿಡಿ

'ಸಮರ್ಥರು ನ್ಯಾಯಮೂರ್ತಿಗಳಾಗಬೇಕು'

ಮುಂಬೈ (ಪಿಟಿಐ): 'ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ತನಗೆ ಗೊತ್ತಿರುವವರನ್ನು ನ್ಯಾಯಮೂರ್ತಿಗಳನ್ನಾಗಿ ನೇಮಿಸುತ್ತಿದೆ. ಇದು ಬದಲಾಗಬೇಕು. ಅತ್ಯಂತ ಸಮರ್ಥರಾದವರನ್ನು ಈ ಹುದ್ದೆಗೆ ನೇಮಿಸುವಂತಾಗಬೇಕು' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ಇಲ್ಲಿ ಆಯೋಜನೆಗೊಂಡಿದ್ದ ಸಮ್ಮೇಳನವೊಂದರಲ್ಲಿ 'ನ್ಯಾಯಾಂಗದ ಸುಧಾರಣೆ' ಕುರಿತು ಶುಕ್ರವಾರ ಮಾತನಾಡಿದ ಅವರು, 'ನ್ಯಾಯಮೂರ್ತಿಗಳ ನೇಮಕಕ್ಕಾಗಿ ಸದ್ಯ ಪಾಲಿಸಲಾಗುತ್ತಿರುವ ಸುಪ್ರೀಂ ಕೋರ್ಟ್ ಕೊಲಿಜಿಯಂ ಪದ್ಧತಿ ಅಪಾರದರ್ಶಕವಾಗಿದೆ. ಕೊಲಿಜಿಯಂಗೆ ಗೊತ್ತಿರುವವರು ನ್ಯಾಯಮೂರ್ತಿಗಳಾಗಿ ನೇಮಕವಾಗುತ್ತಿದ್ದಾರೆ. ಅದು ಈ ಪದ್ಧತಿಯ ಮೂಲ ಸಮಸ್ಯೆ' ಎಂದು ದೂರಿದ್ದಾರೆ.

ನ್ಯಾಯಮೂರ್ತಿಗಳ ನೇಮಕ ವಿಚಾರದಲ್ಲಿ ಸರ್ಕಾರ ಮಧ್ಯಪ್ರವೇಶಿಸಿದರೆ ಪ್ರಕ್ರಿಯೆ ಹೇಗೆ ಭಿನ್ನವಾಗಿರುತ್ತದೆ ಎಂಬ ಪ್ರಶ್ನೆಗೆ, 'ಮಾಹಿತಿ ಸಂಗ್ರಹಿಸುವ ವಿಚಾರದಲ್ಲಿ ಸರ್ಕಾರ ಸ್ವತಂತ್ರ ಕಾರ್ಯವಿಧಾನ ಹೊಂದಿದೆ. ನಿರ್ಧಾರ ಕೈಗೊಳ್ಳುವ ಮೊದಲು ಗುಪ್ತಚರ ಇಲಾಖೆಯ ಮಾಹಿತಿ ಹಾಗೂ ಇತರ ವರದಿಗಳನ್ನು ಪರಿಗಣಿಸಲಾಗುತ್ತದೆ. ನ್ಯಾಯಾಂಗ ಅಥವಾ ನ್ಯಾಯಾಮೂರ್ತಿಗಳು ಈ ವ್ಯವಸ್ಥೆಯನ್ನು ಹೊಂದಿಲ್ಲ' ಎಂದು ಉತ್ತರಿಸಿದ್ದಾರೆ.

'ಸರ್ಕಾರವೇ ನ್ಯಾಯಮೂರ್ತಿಗಳನ್ನು ನೇಮಿಸುವ ಪದ್ಧತಿ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಇದೆ. ನ್ಯಾಯಮೂರ್ತಿಗಳು ನ್ಯಾಯದಾನದ ಪ್ರಕ್ರಿಯೆಗಾಗಿ ಹೆಚ್ಚು ಸಮಯ ಮೀಸಲಿಡಬೇಕೆ ಅಥವಾ ಇಂತಹ ಆಡಳಿತಾತ್ಮಕ ಕಾರ್ಯಗಳಲ್ಲಿ ಹೆಚ್ಚು ತೊಡಗಿಕೊಳ್ಳಬೇಕೆ' ಎಂದೂ ಪ್ರಶ್ನಿಸಿದ್ದಾರೆ.

ಸುಪ್ರೀಂ ಕೋರ್ಟ್, ರಾಷ್ಟ್ರೀಯ ನ್ಯಾಯಾಂಗ ನೇಮಕಾತಿಗಳ ಆಯೋಗ ಕಾಯ್ದೆ ತಿರಸ್ಕರಿಸಿರುವುದರ ಕುರಿತು ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್, ಕಾಯ್ದೆ ತಿರಸ್ಕರಿಸಿದಾಗ ಸರ್ಕಾರ ಏನಾದರೂ ಮಾಡಬಹುದಿತ್ತು. ನ್ಯಾಯಾಂಗದ ಮೇಲಿರುವ ಗೌರವದಿಂದಾಗಿ ಪರ್ಯಾಯ ಹೆಜ್ಜೆಗಳನ್ನು ಇಡಲಿಲ್ಲ. ಹಾಗಂತ ಎಲ್ಲಾ ಸಂದರ್ಭಗಳಲ್ಲೂ ಸರ್ಕಾರ ಮೌನವಾಗಿರುತ್ತದೆ ಎಂದು ಭಾವಿಸಬೇಕಿಲ್ಲ' ಎಂದಿದ್ದಾರೆ.

'ಮೋದಿ ಸರ್ಕಾರಕ್ಕೆ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇದೆ. ಹೀಗಾಗಿ ಅದನ್ನು ದುರ್ಬಲಗೊಳಿಸುವ ಯಾವ ಕಾರ್ಯಕ್ಕೂ ಕೈಹಾಕಿಲ್ಲ. ನ್ಯಾಯಾಂಗವು ಕಾರ್ಯಾಂಗದ ಪಾತ್ರ ನಿಭಾಯಿಸಲು ಮುಂದಾಗಬಾರದು. ನ್ಯಾಯಮೂರ್ತಿಗಳು ತಾವು ನೀಡುವ ಆದೇಶಗಳಿಗೆ ಸಂಬಂಧಿಸಿದಂತೆ ಮಾತ್ರ ಮಾತನಾಡಬೇಕು. ಅದನ್ನು ಬಿಟ್ಟು ಅನಗತ್ಯ ಹೇಳಿಕೆಗಳನ್ನು ನೀಡಿ ಟೀಕೆಗೆ ಗುರಿಯಾಗಬಾರದು' ಎಂದು ತಿಳಿಸಿದ್ದಾರೆ.

'ನ್ಯಾಯಾಂಗದಲ್ಲೂ ರಾಜಕೀಯವಿದೆ'

'ನ್ಯಾಯಾಂಗ ವ್ಯವಸ್ಥೆಯಲ್ಲೂ ರಾಜಕೀಯ ಹಾಸುಹೊಕ್ಕಾಗಿದೆ. ಆದರೆ ನ್ಯಾಯಮೂರ್ತಿಗಳು ಅದನ್ನು ತೋರ್ಪಡಿಸುವುದಿಲ್ಲ' ಎಂದು ಕೊಲಿಜಿಯಂ ಪದ್ಧತಿಯನ್ನು ಉಲ್ಲೇಖಿಸಿ ಹೇಳಿದ್ದಾರೆ.

'ಯಾವ ಪದ್ಧತಿಯೂ ಪರಿಪೂರ್ಣವಾದುದಲ್ಲ. ಅದನ್ನು ಉತ್ತಮಗೊಳಿಸಲು ನಾವು ಪ್ರಯತ್ನಿಸುತ್ತಲೇ ಇರಬೇಕು. ಆ ದಿಸೆಯಲ್ಲಿ ಕೆಲಸ ಮಾಡಬೇಕು' ಎಂದಿದ್ದಾರೆ.

'ನೇಮಕಾತಿ ಪದ್ಧತಿಯು ಪಾರದರ್ಶಕವಾಗಿರಬೇಕು. ಜೊತೆಗೆ ಜವಾಬ್ದಾರಿಯಿಂದ ಕೂಡಿರಬೇಕು. ಇದು ಅಪಾರದರ್ಶಕವಾಗಿದ್ದಾಗ ಅದರ ವಿರುದ್ಧ ಸಂಬಂಧಪಟ್ಟ ಸಚಿವರಲ್ಲದೆ ಬೇರೆ ಯಾರು ಮಾತನಾಡಲು ಸಾಧ್ಯ. ಈ ವಿಚಾರದಲ್ಲಿ ನಾನು ಈ ದೇಶದಲ್ಲಿರುವ ವಕೀಲರು, ಕೆಲ ನ್ಯಾಯಮೂರ್ತಿಗಳು ಹಾಗೂ ನಾಗರಿಕರ ಚಿಂತನೆಯನ್ನು ಪ್ರತಿಬಿಂಬಿಸುತ್ತಿದ್ದೇನೆ' ಎಂದು ತಮ್ಮ ಮಾತುಗಳನ್ನು ಸಮರ್ಥಿಸಿಕೊಂಡಿದ್ದಾರೆ.

'ದೇಶದ್ರೋಹ ಕಾನೂನಿನ ಬಗ್ಗೆ ಮರುಪರಿಶೀಲನೆ ನಡೆಸುವುದಾಗಿ ಸರ್ಕಾರ ಹೇಳುತ್ತಲೇ ಇದೆ. ಹೀಗಿದ್ದರೂ ಸುಪ್ರೀಂ ಕೋರ್ಟ್ ಈ ವಿಚಾರಕ್ಕೆ ಜೋತು ಬಿದ್ದಿದೆ. ಎಲ್ಲದಕ್ಕೂ ಲಕ್ಷ್ಮಣ ರೇಖೆಯೊಂದಿದೆ. ಅದನ್ನು ಯಾರೂ ದಾಟಬಾರದು' ಎಂದು ನ್ಯಾಯಾಲಯದ ನಿಲುವನ್ನು ಟೀಕಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಜನ ಗಣ ಮನ, ವಂದೇ ಮಾತರಂಗೆ ಸಮಾನ ಗೌರವ'

ನವದೆಹಲಿ (ಪಿಟಿಐ): ರಾಷ್ಟ್ರ ಗೀತೆ 'ಜನ ಗಣ ಮನ' ಮತ್ತು ರಾಷ್ಟ್ರೀಯ ಹಾಡು 'ವಂದೇ ಮಾತರಂ' ಒಂದೇ ಮಟ್ಟದಲ್ಲಿದ್ದು ನಾಗರಿಕರು ಇವುಗಳಿಗೆ ಸಮಾನ ಗೌರವ ನೀಡಬೇಕು ಎಂದು ಕೇಂದ್ರ ಸರ್ಕಾರ ಶನಿವಾರ ದೆಹಲಿ ಹೈಕೋರ್ಟ್‌ಗೆ ಹೇಳಿದೆ.

'ವಂದೇ ಮಾತರಂ'ಗೂ ರಾಷ್ಟ್ರ ಗೀತೆಗೆ ಸಮಾನವಾದ ಸ್ಥಾನಮಾನ ಮತ್ತು ಗೌರವ ನೀಡುವುದನ್ನು ಖಾತರಿಪಡಿಸಿಕೊಳ್ಳಬೇಕೆಂದು ಕೋರಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಕೇಂದ್ರ ಗೃಹ ಸಚಿವಾಲಯವು ಈ ಪ್ರತಿಕ್ರಿಯೆ ನೀಡಿದೆ.

'ವಂದೇ ಮಾತರಂ'ಗೆ ಜನರ ಮನಸ್ಸಿನಲ್ಲಿ ವಿಶೇಷವಾದ ಸ್ಥಾನವಿದೆ ಎಂದೂ ಸಚಿವಾಲಯವು ಹೈಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಹೇಳಿದೆ.

ಮೀಸಲಾತಿ: ನಾಳೆ 'ಸುಪ್ರೀಂ' ತೀರ್ಪು

ನವದೆಹಲಿ: ಮೇಲ್ವರ್ಗಗಳಲ್ಲಿನ ಆರ್ಥಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ಕಲ್ಪಿಸಲು ಸಂವಿಧಾನಕ್ಕೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರದ ನಿಲುವು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು ಸೋಮವಾರ ತೀರ್ಪು ಪ್ರಕಟಿಸಲಿದೆ.

'ಜನಹಿತ ಅಭಿಯಾನ' ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಹಾಗೂ ಇತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಒಟ್ಟು 7 ದಿನಗಳ ಕಾಲ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್, ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ, ಎಸ್. ರವೀಂದ್ರ ಭಟ್, ಬೇಲಾ ಎಂ.ತ್ರಿವೇದಿ ಮತ್ತು ಜೆ.ಬಿ.ಪರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ಸೆಪ್ಟೆಂಬರ್ 27ರಂದು ಈ ಕುರಿತ ತೀರ್ಪು ಕಾಯ್ದಿರಿಸಿತ್ತು.

ಮುಖ್ಯ ನ್ಯಾಯಮೂರ್ತಿ ಲಲಿತ್ ಹಾಗೂ ನ್ಯಾಯಮೂರ್ತಿ ರವೀಂದ್ರ ಭಟ್ ಅವರು ಸೋಮವಾರ ಪ್ರತ್ಯೇಕವಾಗಿ ತೀರ್ಪು ಪ್ರಕಟಿಸಲಿದ್ದಾರೆ' ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಜ್ಞಾನವಾಪಿ: ಅರ್ಜಿ ವಿಚಾರಣೆಗೆ ಹೈಕೋರ್ಟ್ ಸಮ್ಮತಿ

ಲಖನೌ: ಜ್ಞಾನವಾಪಿ ಮಸೀದಿಯಲ್ಲಿ ಪತ್ತೆಯಾಗಿರುವ ಶಿವಲಿಂಗವನ್ನು 'ಕಾರ್ಬನ್ ಡೇಟಿಂಗ್' ಪರೀಕ್ಷೆಗೆ ಒಳಪಡಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಾರಾಣಸಿ ಜಿಲ್ಲಾ ನ್ಯಾಯಾಲಯ ವಜಾಗೊಳಿಸಿದ್ದು, ಈ ತೀರ್ಪು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಅಲಹಾಬಾದ್ ಹೈಕೋರ್ಟ್ ಸಮ್ಮತಿಸಿದೆ.

ಹಿಂದೂ ಸಮುದಾಯಕ್ಕೆ ಸೇರಿದ ನಾಲ್ವರು ಮಹಿಳೆಯರು ಸಲ್ಲಿಸಿರುವ ದಾವೆಯನ್ನು ನ್ಯಾಯಾಮೂರ್ತಿ ಜೆ.ಜೆ. ಮುನೀರ್ ನೇತೃತ್ವದ ಏಕ ಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ. ಕಾರ್ಬನ್ ಡೇಟಿಂಗ್ ವಿಧಾನದಿಂದ ಶಿವಲಿಂಗಕ್ಕೆ ಏನಾದರೂ ಹಾನಿ ಆಗಲಿದೆಯೇ ಎಂಬುದರ ಕುರಿತು ಪ್ರತಿಕ್ರಿಯೆ ನೀಡುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಸೂಚಿಸಿದೆ. ಅಂಜುಮನ್ ಇಂತೆಜಾಮೀಯಾ ಮಸೀದಿ ಸಮಿತಿ ಹಾಗೂ ಇತರರಿಗೆ ನೋಟಿಸ್ ಕೂಡ ಜಾರಿ ಮಾಡಿದೆ.

ಶಿವಲಿಂಗದ ಕಾಲಮಾನ, ಸ್ವಭಾವ ಹಾಗೂ ಇತರ ಮಾಹಿತಿಗಳ ಪತ್ತೆಗಾಗಿ ಕಾರ್ಬನ್ ಡೇಟಿಂಗ್, ಗ್ರೌಂಡ್ ಪೆನೆಟ್ರೇಟಿಂಗ್ ರಡಾರ್ ಮತ್ತು ಉತ್ಖನನದಂತಹ ವಿಧಾನಗಳನ್ನು ಅನುಸರಿಸಿದರೆ ಶಿವಲಿಂಗಕ್ಕೆ ಧಕ್ಕೆಯಾಗಲಿದೆಯೇ ಇಲ್ಲವೆ ಎಂಬ ಕುರಿತು ಮುಂದಿನ ವಿಚಾರಣೆ ವೇಳೆಗೆ ವರದಿ ನೀಡುವಂತೆ ಎಎಸ್‌ಐನ ಮಹಾನಿರ್ದೇಶಕರಿಗೆ ನ್ಯಾಯಪೀಠ ನಿರ್ದೇಶಿಸಿದೆ.

5 ವಿದ್ಯಾರ್ಥಿಗಳು, ಶಿಕ್ಷಕ ನೀರುಪಾಲು

ಹೈದರಾಬಾದ್ (ಪಿಟಿಐ): ಇಲ್ಲಿಯ ಮದರಸಾ ಒಂದರ ಐವರು ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಬ್ಬರು ಶನಿವಾರ ಇಲ್ಲಿನ ಮಲ್ಕಾರಾಮ್ ಪ್ರದೇಶದ ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವ ಸಲುವಾಗಿ ಅವರೆಲ್ಲರೂ ಮಲ್ಕಾರಾಮ್ ಪ್ರದೇಶಕ್ಕೆ ಬಂದಿದ್ದರು ಎಂದು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1420 (1390)
ಸೂರ್ಯಕಾಂತಿ (ರಿಫೈನ್ಡ್)	₹1660 (1660)
ಪಾಮೋಲಿನ್	₹1040 (1030)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹388-665
ದ್ವಿತಳಿ (ಬಿ.ವಿ)	₹335-836

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2500-3500
ಮಧ್ಯಮ	₹1500-2500
ಸಣ್ಣ	₹500-1500

ಸುಸ್ತಿ ಸಾಲ ಇಳಿಕೆ, ಬಡ್ಡಿ ವರಮಾನ ಹೆಚ್ಚಳ ಪರಿಣಾಮ

ಎಸ್‌ಬಿಐ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 79ರಷ್ಟು ಹೆಚ್ಚಾಗಿದ್ದು ₹13,265 ಕೋಟಿಗೆ ಏರಿಕೆ ಆಗಿದೆ.

ಸುಸ್ತಿ ಸಾಲ ಕಡಿಮೆ ಆಗಿರುವುದು ಹಾಗೂ ಬಡ್ಡಿ ವರಮಾನ ಹೆಚ್ಚಾಗಿರುವ ಕಾರಣಗಳಿಂದಾಗಿ ಲಾಭದಲ್ಲಿ ಏರಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ಲಾಭವು ₹7,627 ಕೋಟಿ ಇತ್ತು. ಬ್ಯಾಂಕ್‌ನ ಒಟ್ಟು ವರಮಾನ ₹ 77,689 ಕೋಟಿಯಿಂದ ₹88,734 ಕೋಟಿಗೆ ಏರಿಕೆ ಆಗಿದೆ.

ನಿವ್ವಳ ಬಡ್ಡಿ ವರಮಾನ (ಎನ್‌ಐಐ) ಶೇ 13ರಷ್ಟು ಹೆಚ್ಚಾಗಿ ₹35,183 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಎನ್‌ಐಐ ₹31,184 ಕೋಟಿ ಇತ್ತು.

ಬ್ಯಾಂಕ್‌ನ ವಸೂಲಾಗದ ಸರಾಸರಿ ಸಾಲದ ಪ್ರಮಾಣವು 2022ರ ಸೆಪ್ಟೆಂಬರ್ 30ರ ಅಂತ್ಯಕ್ಕೆ ಶೇ 3.52ಕ್ಕೆ ಇಳಿಕೆ ಆಗಿದೆ. 2021ರ ಸೆಪ್ಟೆಂಬರ್ 30ರ ಅಂತ್ಯಕ್ಕೆ ಶೇ 4.90ರಷ್ಟು ಇತ್ತು. ನಿವ್ವಳ ಎನ್‌ಪಿಎ ಶೇ 1.52 ರಿಂದ ಶೇ 0.80ಕ್ಕೆ ಇಳಿಕೆ ಆಗಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹ 2,699 ಕೋಟಿಯಿಂದ ₹2,011 ಕೋಟಿಗೆ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಎಸ್‌ಬಿಐ ಸಮೂಹದ ಲಾಭವು ಶೇ 66ರಷ್ಟು ಹೆಚ್ಚಾಗಿ ₹14,752 ಕೊಟಿಗೆ ತಲುಪಿದೆ.

ಪ್ರಯಾಣಿಕ ವಾಹನ ಬೆಲೆ ಹೆಚ್ಚಿಸಿದ ಟಾಟಾ ಮೋಟರ್ಸ್

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಸೋಮವಾರದಿಂದ ಜಾರಿಗೆ ಬರುವಂತೆ ಪ್ರಯಾಣಿಕ ವಾಹನಗಳ ಬೆಲೆಯನ್ನು ಅಲ್ಪ ಹೆಚ್ಚಳ ಮಾಡಿದೆ. ವಿವಿಧ ಮಾದರಿಗಳು ಮತ್ತು ಅವತರಣಿಕೆಗಳಿಗೆ ಅನುಗುಣವಾಗಿ ಸರಾಸರಿ ಬೆಲೆ ಏರಿಕೆಯು ಶೇ 0.9ರಷ್ಟು ಇರಲಿದೆ ಎಂದು ಹೇಳಿದೆ.

ತಯಾರಿಕಾ ವೆಚ್ಚದಲ್ಲಿ ಆಗುತ್ತಿರುವ ಹೆಚ್ಚಳದ ಒಂದಿಷ್ಟು ಭಾಗವನ್ನು ಮಾತ್ರವೇ ಗ್ರಾಹಕರಿಗೆ ವರ್ಗಾಯಿಸಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ. ಟಿಯಾಗೊ, ಪಂಚ್, ನೆಕ್ಸಾನ್, ಹ್ಯಾರಿಯರ್ ಮತ್ತು ಸಫಾರಿಯಂತಹ ಪ್ರಯಾಣಿಕ ವಾಹನಗಳನ್ನು ದೇಶದಲ್ಲಿ ಮಾರಾಟ ಮಾಡುತ್ತಿದೆ.

ಟ್ವಿಟರ್‌ನಲ್ಲಿ ಉದ್ಯೋಗ ಕಡಿತ: ಮಸ್ಕ್ ಸಮರ್ಥನೆ

ನ್ಯೂಯಾರ್ಕ್ (ಪಿಟಿಐ): ಟ್ವಿಟರ್‌ನಲ್ಲಿ ಉದ್ಯೋಗ ಕಡಿತ ಮಾಡಿರುವ ನಿರ್ಧಾರವನ್ನು ಕಂಪನಿಯ ನೂತನ ಮಾಲೀಕ ಇಲಾನ್ ಮಸ್ಕ್ ಅವರು ಸಮರ್ಥಿಸಿಕೊಂಡಿದ್ದಾರೆ.

ಕಂಪನಿಯ ಪ್ರತಿದಿನವೂ ₹32 ಕೋಟಿಗೂ ಅಧಿಕ ಹಣವನ್ನು ಕಳೆದುಕೊಳ್ಳುತ್ತಿರುವಾಗ ಬೇರೆ ಯಾವುದೇ ಆಯ್ಕೆ ಇರಲಿಲ್ಲ ಎಂದು ಅವರು ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

2022ರ ಜೂನ್ 30ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯು ₹2,227 ಕೋಟಿ ನಿವ್ವಳ ನಷ್ಟ ಅನುಭವಿಸಿದೆ. ಕಳೆದ ವರ್ಷದ ಜೂನ್ ತ್ರೈಮಾಸಿಕ ಅವಧಿಯಲ್ಲಿ ಕಂಪನಿಯು ₹544 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಸಕಾರಾತ್ಮಕ ಅಂತ್ಯ

ಮುಂಬೈ (ಪಿಟಿಐ): ಷೇರುಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿದೆ. ಬಿಎಸ್‌ಇ ಸೆನ್ಸೆಕ್ಸ್ 990 ಅಂಶ ಹೆಚ್ಚಾಗಿದ್ದರೆ, ನಿಫ್ಟಿ 330 ಅಂಶ ಏರಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-56000
ಮಂಗಳೂರು	
ಹಳತು	52500-56000
ಹೊಸತು	42000-48500
ಕೋಕ	24000-28500
ಶಿವಮೊಗ್ಗ	
ಗೊರಬಲು	17000-36069
ಹೊಸತು	45509-46689
ರಾಶಿ	44859-47819
ಸರಕು	56869-80040
ಸಿದ್ದಾಪುರ	
ಬಿಳಿಗೋಟು	27199-33499
ಚಾಲಿ	37129-41509
ಕೋಕ	27319-32482
ಕೆಂಪುಗೋಟು	33199-33199
ರಾಶಿ	43099-46109
ತಟ್ಟಿಬೆಟ್ಟೆ	36009-38889
ಶಿರಸಿ	
ಬೆಟ್ಟೆ	16069-44899
ಬಿಳಿಗೋಟು	24399-36699
ಚಾಲಿ	36812-43151
ರಾಶಿ	43299-47099

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14500	14200	175.75 ಸೆಂಟ್ಸ್
ಎಸಿ	7280	7300	7300	
ಆರ್‌ಪಿ	8500	8000	8800	ಲಂಡನ್
ಆರ್‌ಸಿ	4600	4300	4300	1869 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

5–11-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	1330 (1332)
ಪಾಮ್ ವಾರದ ಡೆಲಿವರಿ	1038 (1028)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,850 (50,250)
ಬೆಳ್ಳಿ ಕೆ.ಜಿ 60,550 (58,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬ್ಯಾಂಕ್ ಆಫ್ ಬರೋಡಾ ಲಾಭ ₹3,313 ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ₹3,313 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹2,088 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 59ರಷ್ಟು ಹೆಚ್ಚಾಗಿದೆ.

ಸುಸ್ತಿ ಸಾಲದ ಪ್ರಮಾಣ ಇಳಿಕೆ ಆಗಿರುವುದು ಹಾಗೂ ಬಡ್ಡಿ ವರಮಾನ ಹೆಚ್ಚಾಗಿರುವುದರಿಂದ ಲಾಭದಲ್ಲಿ ಏರಿಕೆ ಕಂಡುಬಂದಿದೆ. ಒಟ್ಟು ವರಮಾನ ₹20,270 ಕೋಟಿಯಿಂದ ₹23,080 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ಮಾಹಿತಿ ನೀಡಿದೆ.

ನಿವ್ವಳ ಬಡ್ಡಿ ವರಮಾನ ಶೇ 34.5ರಷ್ಟು ಏರಿಕೆ ಕಂಡು ₹10,714 ಕೋಟಿಗೆ ತಲುಪಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 8.11 ರಿಂದ ಶೇ 5.31ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 2.83 ರಿಂದ ಶೇ 1.16ಕ್ಕೆ ಇಳಿಕೆ ಕಂಡಿದೆ.

ಅಮೆರಿಕ ಉಪಚುನಾವಣೆ: ಐವರು ಭಾರತ ಮೂಲದವರು

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಜನಪ್ರತಿನಿಧಿಗಳ ಸಭೆಗೆ ನ.8ರಂದು ನಡೆಯಲಿರುವ ಮಧ್ಯಂತರ ಚುನಾವಣೆಯಲ್ಲಿ ಭಾರತ ಮೂಲದ ಅಮೆರಿಕದ ಐವರು ಪ್ರಭಾವಿ ರಾಜಕಾರಣಿಗಳು ಕಣದಲ್ಲಿದ್ದಾರೆ. ರಾಜಕೀಯ ವಿಶ್ಲೇಷಕರ ಪ್ರಕಾರ, ಇವರ ಗೆಲುವು ಬಹುತೇಕ ಖಚಿತವಾಗಿದೆ.

ಹಾಲಿ ಸದಸ್ಯರೂ ಆಗಿರುವ ಡೆಮಾಕ್ರಟಿಕ್ ಪಾರ್ಟಿಯ ಅಮಿ ಬೆರಾ, ರಾಜಾ ಕೃಷ್ಣಮೂರ್ತಿ, ರೋ ಖನ್ನಾ ಮತ್ತು ಪ್ರಮೀಳಾ ಜಯಪಾಲ್ ಅವರು ಬಹುತೇಕ ಮರು ಆಯ್ಕೆಯಾಗುವುದು ನಿಶ್ಚಿತ ಎನ್ನಲಾಗಿದೆ.

ಅಲ್ಲದೆ, ಉದ್ಯಮಿ ಥಾಣೆದಾರ್ ಅವರೂ ಮಿಚಿಗನ್‌ನ 13ನೇ ಸಾಂಸ್ಥಿಕ ಜಿಲ್ಲೆಯಿಂದ ಆಯ್ಕೆ ಬಯಸಿ ಕಣದಲ್ಲಿದ್ದಾರೆ. ಕ್ಯಾಲಿಫೋರ್ನಿಯಾದಿಂದ ಬೆರಾ, ಖನ್ನಾ ಹಾಗೂ ಇಲಿನಾಯಸ್‌ನಿಂದ ಕೃಷ್ಣಮೂರ್ತಿ ಮತ್ತು ವಾಷಿಂಗ್ಟನ್‌ನಿಂದ ಪ್ರಮೀಳಾ ಅವರು ಚುನಾವಣಾ ಕಣದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉಕ್ರೇನ್: ಕ್ಷಿಪಣಿ ದಾಳಿಗೆ ಮೂವರ ಸಾವು

ಕೀವ್ (ಎಪಿ): ಉಕ್ರೇನ್‌ನ ವಿದ್ಯುತ್ ಪೂರೈಕೆ ಮೂಲಸೌಲಭ್ಯಗಳನ್ನು ಗುರಿಯಾಗಿಸಿ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ. ಪರಿಣಾಮ, ಕೀವ್ ಸೇರಿದಂತೆ ಏಳು ಪ್ರಮುಖ ನಗರಗಳಲ್ಲಿ ವಿದ್ಯುತ್ ಪೂರೈಕೆ ತೀವ್ರ ವ್ಯತ್ಯಯವಾಗಿದೆ ಎಂದು ಉಕ್ರೇನ್ ತಿಳಿಸಿದೆ.

ಚೆರ್ನಿಹಿವ್, ಚೆರ್ಕಾಸಿ, ಸುಮಿ, ಪೊಲ್ಟಾವಾ, ಹಾರ್ಕಿವ್ ನಗರಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ರಷ್ಯಾ ಶನಿವಾರವು ವಿವಿಧ ನಗರಗಳ ಮೇಲೆ 40 ಶೆಲ್‌ಗಳನ್ನು ಪ್ರಯೋಗಿಸಿದೆ. ವಸತಿ ಪ್ರದೇಶಗಳ ಮೇಲೂ ದಾಳಿ ಆಗಿದೆ.

ದಾಳಿಯಿಂದ ಕಳೆದ 24 ಗಂಟೆಗಳಲ್ಲಿ ಕನಿಷ್ಠ ಮೂವರು ನಾಗರಿಕರು ಮೃತಪಟ್ಟಿದ್ದು, 8 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್‌ನ ಅಧ್ಯಕ್ಷರ ಕಚೇರಿ ತಿಳಿಸಿದೆ. ಈ ಮಧ್ಯೆ, ಉಕ್ರೇನ್‌ನಲ್ಲಿ ದಾಳಿಗೆ ಬಳಸಿರುವ ಡ್ರೋನ್‌ಗಳು ಇರಾನ್‌ನಿಂದ ಬಂದಿದ್ದವು ಎಂಬುದನ್ನು ರಷ್ಯಾ ನಿರಾಕರಿಸಿದೆ. ಆದರೆ, ಇರಾನ್‌ನ ವಿದೇಶಾಂಗ ಸಚಿವರು, ರಷ್ಯಾಗೆ ಸೀಮಿತ ಸಂಖ್ಯೆಯ ಡ್ರೋನ್‌ಗಳನ್ನು ಉಕ್ರೇನ್ ಮೇಲೆ ಅತಿಕ್ರಮಣಕ್ಕೆ ಪೂರೈಸಲಾಗಿತ್ತು ಎಂದಿದ್ದಾರೆ.

'ಸೈಬರ್ ಬೆದರಿಕೆ: ಕೌಶಲ ವೃದ್ಧಿ ಅಗತ್ಯ'

ಸಿಂಗಪುರ (ಪಿಟಿಐ): 'ಸೈಬರ್ ಬೆದರಿಕೆಯನ್ನು ಭವಿಷ್ಯದಲ್ಲಿ ಪರಿಣಾಮಕಾರಿಯಾಗಿ ಎದುರಿಸಲು ಭಾರತ ಸರ್ಕಾರ, ಶಿಕ್ಷಣ ಕ್ಷೇತ್ರದ ವಾರ್ಷಿಕ ಆಯವ್ಯಯದ ಶೇ 50ರಷ್ಟನ್ನು ಎಂಜಿನಿಯರ್‌ಗಳ ಕೌಶಲ ಹೆಚ್ಚಿಸಲು ವ್ಯಯಿಸಬೇಕಿದೆ' ಎಂದು ಉದ್ಯಮದ ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಪ್ರಸ್ತುತ, ದೇಶದಲ್ಲಿ ಡಿಜಿಟಲೀಕರಣ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಆದ್ಯತೆ ಮೇರೆಗೆ ಮೊದಲಿಗೆ ಸೈಬರ್ ಭದ್ರತೆ ಕುರಿತು ಜಾಗೃತಿ ಮೂಡಿಸಬೇಕಿದೆ ಎಂದು ಸೌತ್ ಈಸ್ಟ್ ಏಷ್ಯಾದ ಉಪಾಧ್ಯಕ್ಷ ನಿಲೇಶ್ ಜೈನ್ ಹೇಳಿದರು.

ಅನಾರೋಗ್ಯ: ಏಷ್ಯಾದ 45 ವರ್ಷದ ಹೆಣ್ಣಾನೆಗೆ ದಯಾಮರಣ

ಸ್ಯಾನ್ ಡಿಯಾಗೊ (ಎಪಿ): ಸ್ಥಳೀಯ ಮೃಗಾಲಯದಲ್ಲಿದ್ದ, ಅನಾರೋಗ್ಯದಿಂದ ಬಳಲುತ್ತಿದ್ದ ಏಷ್ಯಾದ 45 ವರ್ಷದ ಹೆಣ್ಣಾನೆಗೆ ದಯಾಮರಣ ಕಲ್ಪಿಸಲಾಗಿದೆ ಎಂದು ಮೃಗಾಲಯ ಆಡಳಿತ ಪ್ರಕಟಿಸಿದೆ.

ದೇವಿ ಹೆಸರಿನ ಈ ಆನೆಯನ್ನು ಶ್ರೀಲಂಕಾದಿಂದ 1977ರಲ್ಲಿ ಕರೆತರಲಾಗಿತ್ತು. 'ದೇವಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ನಿಶ್ಯಕ್ತಳಾಗಿದ್ದರಿಂದ ನಡೆಯಲೂ ಆಗುತ್ತಿರಲಿಲ್ಲ. ಹೀಗಾಗಿ, ವನ್ಯಜೀವಿ ಆರೈಕೆ ತಜ್ಞರು ಈ ಕಠಿಣ ನಿರ್ಧಾರಕ್ಕೆ ಬಂದರು' ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಮೃಗಾಲಯದಲ್ಲಿ ದೇವಿ ಜೊತೆಗೆ ಏಷ್ಯಾದ 58 ವರ್ಷದ ಮೇರಿ, ಆಫ್ರಿಕಾದ 42 ವರ್ಷದ ಶಾಬಾ ಇದ್ದವು. ಅಧಿಕಾರಿಗಳ ಪ್ರಕಾರ, ಈ ಹಿಂದೆ 2016ರಲ್ಲಿ ಏಷ್ಯಾದ ಗಂಡಾನೆ, 50 ವರ್ಷದ ರಾಂಚಿಪುರ್ ಮತ್ತು48 ವರ್ಷದ ಆಫ್ರಿಕಾದ ಹೆಣ್ಣಾನೆ ಟೆಂಬೊಗೆ ದಯಾಮರಣ ಕಲ್ಪಿಸಲಾಗಿತ್ತು.

ಪ್ರೊ ಕಬಡ್ಡಿ ಲೀಗ್: ಗುಜರಾತ್ ತಂಡಕ್ಕೆ ಸೋಲುಣಿಸಿದ ಬೆಂಗಾಲ್

ಮಣಿಂದರ್ ಸಿಂಗ್ ಭರ್ಜರಿ ಆಟ

ಪುಣೆ (ಪಿಟಿಐ): ನಾಯಕ ಮಣಿಂದರ್ ಸಿಂಗ್ ಗಳಿಸಿದ ಅಮೋಘ 20 ಪಾಯಿಂಟ್ಸ್ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಜಯ ಗಳಿಸಿತು.

ಇಲ್ಲಿಯ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬೆಂಗಾಲ್ 45–40ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಪರಾಭವಗೊಳಿಸಿತು.

ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದ ಪಂದ್ಯದಲ್ಲಿ ಗುಜರಾತ್ ತಂಡ ಒಂಬತ್ತನೇ ನಿಮಿಷದಲ್ಲಿ 10–8ರಿಂದ ಮುನ್ನಡೆ ಸಾಧಿಸಿತು. 12ನೇ ನಿಮಿಷದಲ್ಲಿ ಎದುರಾಳಿಯನ್ನು ಆಲೌಟ್ ಮಾಡಿದ ಬೆಂಗಾಲ್ 14–12ರ ಮೇಲುಗೈ ಸಾಧಿಸಿತು. ಬಳಿಕ ಸೂಪರ್ ರೇಡ್ ಮಾಡಿದ ಮಣಿಂದರ್ ತಂಡದ ಮುನ್ನಡೆಯನ್ನು 21–14ಕ್ಕೆ ಕೊಂಡೊಯ್ದರು.

ಬಳಿಕ ಮತ್ತೊಂದು ಬಾರಿ ಗುಜರಾತ್‌ಅನ್ನು ಆಲೌಟ್ ಮಾಡಿದ ಬೆಂಗಾಲ್ ಮುನ್ನಡೆ ಮತ್ತಷ್ಟು ಹೆಚ್ಚಿತು.



ಮಣಿಂದರ್ ಸಿಂಗ್

ಮೊದಲಾರ್ಧದ ವೇಳೆಗೆ ಮಣಿಂದರ್ ಬಳಗ 32–18ರಿಂದ ಮುಂದಿತ್ತು.

ದ್ವಿತೀಯಾರ್ಧದಲ್ಲಿ ಗುಜರಾತ್ ತಿರುಗೇಟು ನೀಡುವ ಸೂಚನೆ ನೀಡಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	10	6	2	2	37
ಬೆಂಗಳೂರು	10	6	3	1	35
ಜೈಪುರ	10	6	4	0	32
ಮುಂಬಾ	10	6	4	0	32
ಡೆಲ್ಲಿ	11	5	6	0	30
ಬೆಂಗಾಲ್	10	5	4	1	29

28ನೇ ನಿಮಿಷದಲ್ಲಿ ಆ ತಂಡವು ಎದುರಾಳಿಯನ್ನು ಆಲೌಟ್ ಮಾಡಿತು. ಆದರೂ ಬೆಂಗಾಲ್ 37–31ರ ಮುನ್ನಡೆ ಕಾಯ್ದುಕೊಂಡಿತು. ಇದಾದ ಬಳಿಕ ಮತ್ತೊಂದು ಬಾರಿ ಗುಜರಾತ್ ತಂಡವು ಬೆಂಗಾಲ್ ಆಟಗಾರರನ್ನು ಮತ್ತೊಮ್ಮೆ ಆಲೌಟ್ ಮಾಡಿ 36–38ರಿಂದ ಹಿನ್ನಡೆ ತಗ್ಗಿಸಿಕೊಂಡಿತು. ಆದರೆ ಕೊನೆಯ ಹಂತದ ಒತ್ತಡ ಮೀರಿ ನಿಂತ ಗುಜರಾತ್ ಗೆಲುವು ಒಲಿಸಿಕೊಂಡಿತು.

ಈ ಗೆಲುವಿನೊಂದಿಗೆ ಬೆಂಗಾಲ್ ವಾರಿಯರ್ಸ್ ತಂಡವು 29 ಪಾಯಿಂಟ್ಸ್ ಗಳಿಸಿ ಆರನೇ ಸ್ಥಾನಕ್ಕೇರಿತು. ಪುಣೇರಿ ಪಲ್ಟನ್ ಮೊದಲ ಸ್ಥಾನದಲ್ಲಿದೆ.

ಇನ್ನೊಂದು ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡವು 39–31ರಿಂದ ತೆಲುಗು ಟೈಟನ್ಸ್ ತಂಡಕ್ಕೆ ಸೋಲುಣಿಸಿತು. ವಿಜೇತ ತಂಡಕ್ಕಾಗಿ ರೇಡರ್ ಅಜಿಂಕ್ಯ ಪವಾರ್ 12 ಪಾಯಿಂಟ್ಸ್ ಕಲೆಹಾಕಿದರು. ಡಿಫೆಂಡರ್ ಸಾಗರ್ (8) ಮತ್ತು ಹಿಮಾಂಶು ಸಿಂಗ್ (7) ಕೂಡ ಕಾಣಿಕೆ ನೀಡಿದರು.

ತೆಲುಗು ಟೈಟನ್ಸ್ ಪರ ಸಿದ್ಧಾರ್ಥ್ ದೇಸಾಯಿ ಗಳಿಸಿದ 14 ಪಾಯಿಂಟ್ಸ್ ವ್ಯರ್ಥವಾದವು. ಮೊಹಸಿನ್ 5 ಪಾಯಿಂಟ್ಸ್ ಕಲೆಹಾಕಿದರು.

ಇಂದಿನ ಪಂದ್ಯಗಳು
ಬೆಂಗಳೂರು ಬುಲ್ಸ್–ಗುಜರಾತ್ ಜೈಂಟ್ಸ್
ಪುಣೇರಿ ಪಲ್ಟನ್– ತಮಿಳ್ ತಲೈವಾಸ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೌಂಟ್ಸ್ ಕ್ಲಬ್ ಚಾಂಪಿಯನ್

ಬ್ಯಾಸ್ಕೆಟ್‌ಬಾಲ್: ಪುರುಷರ ವಿಭಾಗದಲ್ಲಿ ಬ್ಯಾಂಕ್ ಆಫ್ ಬರೋಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ ಮತ್ತು ಮೌಂಟ್ಸ್ ಕ್ಲಬ್ ತಂಡಗಳು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪುರುಷರ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೋಡ 66–54ರಿಂದ ಮಂಗಳೂರು ಬಿ.ಸಿ. ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ಹರೀಶ್ 21 ಪಾಯಿಂಟ್ಸ್ ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ಯಂಗ್ ಓರಿಯನ್ಸ್ 71–51ರಿಂದ ಸಿಎಂಪಿ ತಂಡವನ್ನು ಸೋಲಿಸಿತು.

ಯಂಗ್ ಓರಿಯನ್ಸ್ ಎರಡನೇ ಸ್ಥಾನ ಗಳಿಸಿತು. ಮಂಗಳೂರು ಮತ್ತು ಸಿಎಂಪಿ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ತಮ್ಮದಾಗಿಸಿಕೊಂಡವು.

ಮುಖ್ಯಾಂಶಗಳು
- ಯಂಗ್ ಓರಿಯನ್ಸ್ ತಂಡಕ್ಕೆ ಎರಡನೇ ಸ್ಥಾನ
- ಮಿಂಚಿದ ಹರೀಶ್

ಮಹಿಳೆಯರ ವಿಭಾಗದ ಸೆಮಿಫೈನಲ್ ಲೀಗ್‌ನಲ್ಲಿ ಮೌಂಟ್ಸ್ ಕ್ಲಬ್ 78–54ರಿಂದ ಡಿವೈಇಎಸ್ ಮೈಸೂರು ಎದುರು ಜಯಿಸಿತು. ವಿಜೇತ ತಂಡದ ಪರ ಲೋಪಮುದ್ರಾ 23 ಪಾಯಿಂಟ್ಸ್ ಕಲೆಹಾಕಿದರೆ, ಮೈಸೂರು ತಂಡಕ್ಕಾಗಿ ಸಹನಾ 25 ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಸೌತ್ ವೆಸ್ಟರ್ನ್ ರೈಲ್ವೆ ತಂಡವು 70–36ರಿಂದ ಕೆ.ಎಸ್. ಹೆಗ್ಡೆ ನಿಟ್ಟೆ ವಿರುದ್ಧ ಗೆದ್ದಿತು. ಸೌತ್ ವೆಸ್ಟರ್ನ್ ರೈಲ್ವೆ ಎರಡನೇ ಸ್ಥಾನ ಗಳಿಸಿದರೆ, ಡಿವೈಇಎಸ್ ಮೈಸೂರು, ಕೆ.ಎಸ್. ಹೆಗ್ಡೆ ನಿಟ್ಟೆ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದವು.



ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ ಮೌಂಟ್ಸ್ ಕ್ಲಬ್: ಎಡದಿಂದ– ಕುಳಿತವರು: ಹನ್ನಾ, ತನುಶ್ರೀ, ಡೈಸಿ, ಮೃದ್ಯಾ, ನಕ್ಷತ್ರ, ಗೋಮೇಧಾ. ನಿಂತವರು: ನಿಹಾರಿಕಾ, ಪಾವನಿ, ರಿತ್ವಿಕಾ, ಜಯಂತಿ (ಕೋಚ್), ಲೋಪಮುದ್ರಾ, ರೋಶಿನಿ, ಅಭಿಗೈಲ್– ಪ್ರಜಾವಾಣಿ ಚಿತ್ರ

ತಯ್ಯಬ್ ಇಕ್ರಂ ಎಫ್‌ಐಎಚ್ ಅಧ್ಯಕ್ಷ

ಲಾಸನ್ (ಪಿಟಿಐ): ಏಷ್ಯನ್ ಹಾಕಿ ಫೆಡರೇಷನ್ (ಎಎಚ್‌ಎಫ್) ಸಿಇಒ ಆಗಿರುವ ಪಾಕಿಸ್ತಾನದ ತಯ್ಯಬ್ ಇಕ್ರಂ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) ನೂತನ ಅಧ್ಯಕ್ಷರಾಗಿ ಶನಿವಾರ ಆಯ್ಕೆಯಾದರು.

ವರ್ಚುವಲ್ ಆಗಿ ನಡೆದ ಎಫ್‌ಐಎಚ್ 48ನೇ ಸಾಮಾನ್ಯ ಸಭೆಯಲ್ಲಿ ಅವರ ಆಯ್ಕೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವರು 79–47 ರಲ್ಲಿ ಬೆಲ್ಜಿಯಂನ ಮಾರ್ಕ್ ಕಾಡ್ರನ್ ಅವರನ್ನು ಮಣಿಸಿದರು. 129 ರಾಷ್ಟ್ರಗಳ ಪ್ರತಿನಿಧಿಗಳು ಮತದಾನದಲ್ಲಿ ಪಾಲ್ಗೊಂಡರು. ಮೂರು ಮತಗಳು ಅಸಿಂಧು ಆದವು.

ಭಾರತದ ನರೀಂದರ್ ಬಾತ್ರಾ ಅವರ ರಾಜೀನಾಮೆಯಿಂದಾಗಿ ಎಫ್‌ಐಎಚ್ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಇಕ್ರಂ ಅವರ ಅಧಿಕಾರದ ಅವಧಿ ಎರಡು ವರ್ಷ ಇರಲಿದೆ.

ಮುಂಬೈಗೆ ದೇಶಿ ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಪ್ರಶಸ್ತಿ; ಹಿಮಾಚಲಕ್ಕೆ ನಿರಾಶೆ

ರಹಾನೆ ಪಡೆಗೆ ಮುಷ್ತಾಕ್ ಅಲಿ ಟ್ರೋಫಿ

ಕೋಲ್ಕತ್ತ (ಪಿಟಿಐ): ದೇಶಿ ಕ್ರಿಕೆಟ್ ದಿಗ್ಗಜ ಮುಂಬೈ ತಂಡದ ಬಹುದಿನಗಳ ಕನಸು ಶನಿವಾರ ನನಸಾಯಿತು. ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿತು.

41 ಬಾರಿ ರಣಜಿ ಟ್ರೋಫಿ ಸೇರಿದಂತೆ ಎಲ್ಲ ದೇಶಿ ಟೂರ್ನಿಗಳಲ್ಲಿಯೂ ಚಾಂಪಿಯನ್ ಆಗಿತ್ತು. ಆದರೆ ಇದುವರೆಗೆ ದೇಶಿ ಟಿ20 ಟ್ರೋಫಿ ಮಾತ್ರ ಒಲಿದಿರಲಿಲ್ಲ. ಇದೀಗ ಮುಂಬೈನ ಈ ಕೊರತೆಯೂ ನೀಗಿದೆ. ಶನಿವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ತನುಷ್ ಕೋಟ್ಯಾನ್ (15ಕ್ಕೆ3) ಅವರ ಉತ್ತಮ ಬೌಲಿಂಗ್‌ನಿಂದ ಮುಂಬೈ ತಂಡವು 3 ವಿಕೆಟ್‌ಗಳಿಂದ ಹಿಮಾಚಲ ಪ್ರದೇಶವನ್ನು ಸೋಲಿಸಿತು.

ಟಾಸ್ ಗೆದ್ದ ಮುಂಬೈ ತಂಡದ ಬೌಲರ್‌ಗಳಾದ ತನುಷ್ ಹಾಗೂ ಮೋಹಿತ್ ಅವಸ್ತಿ (21ಕ್ಕೆ3) ಹಿಮಾಚಲ ಪ್ರದೇಶದ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡಿದರು. ಹಿಮಾಚಲ ತಂಡವು ಏಕಾಂತ್ ಸೇನ್ (37; 29ಎಸೆತ, 4X3, 6X2) ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 ರನ್ ಗಳಿಸಿತು.

ಸಾಧಾರಣ ಗುರಿ ಬೆನ್ನಟ್ಟಿದ ಮುಂಬೈ ತಂಡವು 19.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 146 ರನ್ ಗಳಿಸಿ ಜಯಿಸಿತು. ಶ್ರೇಯಸ್ ಅಯ್ಯರ್ (34; 26ಎ, 4X4, 6X1) ಹಾಗೂ ಸರ್ಫರಾಜ್ ಖಾನ್ (ಔಟಾಗದೆ 36; 31ಎ, 4X3, 6X1) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಹಿಮಾಚಲ ಪ್ರದೇಶ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 (ನಿಖಿಲ್ ಗಂಗ್ತಾ 22, ಆಕಾಶ್ ವಸಿಷ್ಠ 25, ಏಕಾಂತ್ ಸೇನ್ 37, ಮಯಂಕ್ ದಾಗರ್ ಔಟಾಗದೆ 21, ಮೋಹಿತ್ ಅವಸ್ತಿ 21ಕ್ಕೆ3, ತನುಷ್ ಕೋಟ್ಯಾನ್ 15ಕ್ಕೆ3) ಮುಂಬೈ: 19.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 146 (ಯಶಸ್ವಿ ಜೈಸ್ವಾಲ್ 27, ಶ್ರೇಯಸ್ ಅಯ್ಯರ್ 34, ಸರ್ಫರಾಜ್ ಖಾನ್ ಔಟಾಗದೆ 36, ವೈಭವ್ ಅರೋರಾ 27ಕ್ಕೆ3, ರಿಷಿ ಧವನ್ 26ಕ್ಕೆ2, ಮಯಂಕ್ ದಾಗರ್ 24ಕ್ಕೆ2) ಫಲಿತಾಂಶ: ಮುಂಬೈ ತಂಡಕ್ಕೆ 3 ವಿಕೆಟ್‌ಗಳ ಜಯ ಮತ್ತು ಪ್ರಶಸ್ತಿ


ತನುಷ್ ಕೋಟ್ಯಾನ್

ಐಎಸ್‌ಎಲ್: ಹೈದರಾಬಾದ್‌ಗೆ ಜಯ

ಹೈದರಾಬಾದ್ (ಪಿಟಿಐ): ಉತ್ತಮ ಸಾಮರ್ಥ್ಯ ಮುಂದುವರಿಸಿದ ಹೈದರಾಬಾದ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಮತ್ತೊಂದು ಜಯ ಸಂಪಾದಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಹೈದರಾಬಾದ್ 1–0ಯಿಂದ ಒಡಿಶಾ ಎಫ್‌ಸಿ ತಂಡವನ್ನು ಸೋಲಿಸಿತು. ಇದರೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಂಡಿತು.

ಹೈದರಾಬಾದ್ ತಂಡದ ಪರ ಮೊಹಮ್ಮದ್ ಯಾಸಿರ್ 8ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ಆ ಬಳಿಕ ಉಭಯ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನಡೆಸಿದರೂ ಯಶಸ್ಸು ಸಾಧ್ಯವಾಗಲಿಲ್ಲ.

ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ನಾಲ್ಕರ ಘಟ್ಟಕ್ಕೆ ಕಿದಂಬಿ ಶ್ರೀಕಾಂತ್

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಉತ್ತಮ ಆಟ ಮುಂದುವರಿಸಿದ ಭಾರತದ ಕಿದಂಬಿ ಶ್ರೀಕಾಂತ್ ಅವರು ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಶ್ರೀಕಾಂತ್ 21-13, 21-19ರಿಂದ ಇಂಡೊನೇಷ್ಯಾದ ಜೋನಾಥನ್ ಕ್ರಿಸ್ಟಿ ಅವರನ್ನು ಪರಾಭವಗೊಳಿಸಿದರು. ಐದು ವರ್ಷಗಳಿಂದ ಪ್ರಶಸ್ತಿ ಬರ ಎದುರಿಸುತ್ತಿರುವ ಶ್ರೀಕಾಂತ್, 39 ನಿಮಿಷಗಳಲ್ಲಿ ಎದುರಾಳಿಯನ್ನು ಮಣಿಸಿದರು.

ಇಲ್ಲಿ ಗೆಲುವು ಸಾಧಿಸುವುದರೊಂದಿಗೆ ಭಾರತದ ಆಟಗಾರ, ವಿಶ್ವ ರ್‍ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಜೊನಾಥನ್ ಎದುರಿನ ಗೆಲುವಿನ ದಾಖಲೆಯನ್ನು 6–5ಕ್ಕೆ ಹೆಚ್ಚಿಸಿಕೊಂಡರು. ಶ್ರೀಕಾಂತ್ ಅವರು ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿದ್ದಾರೆ.


ಕಿದಂಬಿ ಶ್ರೀಕಾಂತ್– ಪಿಟಿಐ ಚಿತ್ರ

2021ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಶ್ರೀಕಾಂತ್, ಸೆಮಿಫೈನಲ್‌ನಲ್ಲಿ ಇಂಡೊನೇಷ್ಯಾದ ಆ್ಯಂಟನಿ ಸಿನಿಸುಕ ಗಿಂಟಿಂಗ್ ಅವರನ್ನು ಎದುರಿಸುವರು. ಆ್ಯಂಟನಿ ಎದುರು ಈ ಹಿಂದೆ ಆಡಿದ ಐದು ಪಂದ್ಯಗಳ ಪೈಕಿ ಶ್ರೀಕಾಂತ್ ಎರಡರಲ್ಲಿ ಗೆದ್ದಿದ್ದಾರೆ. ಮೂರು ಪಂದ್ಯಗಳನ್ನು ಇಂಡೊನೇಷ್ಯಾ ಆಟಗಾರ ಜಯಿಸಿದ್ದಾರೆ.

ಶುಕ್ರವಾರ ತ್ರಿಶಾ– ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ ಅವರು ಟೂರ್ನಿಯ ಮಹಿಳಾ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದ್ದರು.

ಹಾಕಿ: ಶಕೀಲ್, ರಯಾನ್ ಹ್ಯಾಟ್ರಿಕ್

ಬೆಂಗಳೂರು: ಶಕೀಲ್ ಎಂ. ಅಗಸಬಾಳ ಮತ್ತು ರಯಾನ್ ರಾಡ್ರಿಗಸ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕ್ರಮವಾಗಿ ಬಿಜಾಪುರ ಮತ್ತು ಬ್ಲ್ಯೂಸ್ಟಾರ್ ಹಾಕಿ ಕ್ಲಬ್ ತಂಡಗಳು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯಗಳಲ್ಲಿ ಜಯ ಗಳಿಸಿದವು.

ಶನಿವಾರ ನಡೆದ ಪಂದ್ಯದಲ್ಲಿ ಬಿಜಾಪುರ 5–2ರಿಂದ ಐಟಿಸಿ ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ಶಕೀಲ್ 1, 11 ಮತ್ತು 19ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಸಿರಾಜುದ್ದೀನ್ ಜಾಗೀರದಾರ (14ನೇ ನಿ.), ಸಿಕಂದರ್ ಜಾಗೀರದಾರ (25ನೇ ನಿ.) ಗೋಲು ದಾಖಲಿಸಿದರು. ಐಟಿಸಿ ಪರ ಸೆಂಥಿಲ್ ಕುಮಾರ್ (26ನೇ ನಿ.) ಮತ್ತು ರಾಹುಲ್ ಪಿ. (34ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಬ್ಲ್ಯೂಸ್ಟಾರ್ ತಂಡವು 9–0ಯಿಂದ ಲಿಯೊ ಸ್ಪೋರ್ಟ್ಸ್ ಎದುರು ಗೆದ್ದಿತು.

ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಸೆಮಿಫೈನಲ್‌ಗೆ ಮೀನಾಕ್ಷಿ, ಪ್ರೀತಿ

ನವದೆಹಲಿ (ಪಿಟಿಐ): ಭಾರತದ ಮೀನಾಕ್ಷಿ ಮತ್ತು ಪ್ರೀತಿ ಅವರು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿ, ಪದಕ ಖಚಿತಪಡಿಸಿಕೊಂಡರು.

ಶನಿವಾರ ನಡೆದ ಮಹಿಳೆಯರ 52 ಕೆ.ಜಿ. ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಮೀನಾಕ್ಷಿ 4–1 ರಲ್ಲಿ ಫಿಲಿಪ್ಪೀನ್ಸ್‌ನ ಐರಿಷ್ ಮಗ್ನೊ ಅವರನ್ನು ಮಣಿಸಿದರು. 57 ಕೆ.ಜಿ. ವಿಭಾದಲ್ಲಿ ಪ್ರೀತಿ 5–0 ರಲ್ಲಿ ತರ್ದಿಬೆಕೊವಾ ಸಿತೋರಾ ವಿರುದ್ಧ ಗೆದ್ದರು.

ನ.9 ರಂದು ನಡೆಯಲಿರುವ ಸೆಮಿ ಹಣಾಹಣಿಯಲ್ಲಿ ಮೀನಾಕ್ಷಿ, ಮಂಗೋಲಿಯದ ಲುತ್‌ಸೈಖನ್ ಅಲ್ತನ್‌ಸೆಸೆಗ್ ವಿರುದ್ಧವೂ; ಪ್ರೀತಿ, ಜಪಾನ್‌ನ ಐರಿ ಸೆನಾ ಎದುರೂ ಪೈಪೋಟಿ ನಡೆಸುವರು.


ಮೀನಾಕ್ಷಿ

54 ಕೆ.ಜಿ ವಿಭಾಗದಲ್ಲಿ ಸಾಕ್ಷಿ ನಿರಾಸೆ ಅನುಭವಿಸಿದರು. ಅವರು 0–5 ರಲ್ಲಿ ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಚೀನಾ ತೈಪೆಯ ಸಿಯಾವೊ–ವೆನ್ ಹುವಾಂಗ್ ಎದುರು ಪರಾಭವಗೊಂಡರು.

ಅನಂತ ಚೋಪಡೆ ಪುರುಷರ 54 ಕೆ.ಜಿ. ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಶುಕ್ರವಾರ ನಡೆದ ಹಣಾಹಣಿಯಲ್ಲಿ ಅವರು 5–0 ರಲ್ಲಿ ಜಪಾನ್‌ನ ತನಕ ಶೊಗೊ ವಿರುದ್ಧ ಗೆದ್ದರು. 60 ಕೆ.ಜಿ ವಿಭಾಗದಲ್ಲಿ ಎತಾಶ್ ಖಾನ್ 2–3 ರಲ್ಲಿ ಥಾಯ್ಲೆಂಡ್‌ನ ಖುನಟಿಪ್ ಪಿನಚ್ ಎದುರು ಸೋತರು.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಪರ್ವೀನ್ (63 ಕೆ.ಜಿ) ಮತ್ತು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ) ಅವರು ಭಾನುವಾರ ತಮ್ಮ ಅಭಿಯಾನ ಆರಂಭಿಸಲಿದ್ದಾರೆ.

ಬ್ಯಾಸ್ಕೆಟ್‌ಬಾಲ್ ತಂಡಗಳಿಗೆ ನಗದು ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದ ಕರ್ನಾಟಕ ಸೀನಿಯರ್ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡ ಮತ್ತು ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ತಂಡಗಳನ್ನು ಅಭಿನಂದಿಸಿ ನಗದು ಬಹುಮಾನ ನೀಡಲಾಯಿತು.

ಚೆನ್ನೈನಲ್ಲಿ ಏಪ್ರಿಲ್ 3ರಿಂದ 10ರವರೆಗೆ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಸ್ಥಾನ ಗಳಿಸಿದ ತಂಡಕ್ಕೆ ಕರ್ನಾಟಕ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ವತಿಯಿಂದ ₹ 5 ಲಕ್ಷ ನೀಡಲಾಯಿತು. ಜೂನಿಯರ್ ಚಾಂಪಿಯನ್‌ಷಿಪ್ ಜೂನ್ 4ರಿಂದ 10ರವರೆಗೆ ಚೆನ್ನೈನಲ್ಲಿ ನಡೆದಿತ್ತು. ಜೂನಿಯರ್ ತಂಡಕ್ಕೆ ₹ 1ಲಕ್ಷ ಬಹುಮಾನ ನೀಡಲಾಯಿತು.


ಕರ್ನಾಟಕ ಒಲಿಂಪಿಕ್ ಭವನದಲ್ಲಿ ಶನಿವಾರ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ (ಕೆಎಸ್‌ಬಿಬಿಎ) ಆಯೋಜಿಸಿದ್ದ ಸಮಾರಂಭದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದ ಕರ್ನಾಟಕ ಬ್ಯಾಸ್ಕೆಟ್‌ಬಾಲ್ ತಂಡವನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕೆಎಸ್‌ಬಿಬಿಎ ಉಪಾಧ್ಯಕ್ಷ ಆರ್.ರಾಜನ್, ಬಿಎಫ್‌ಐ ಅಧ್ಯಕ್ಷ ಮತ್ತು ಕೆಎಸ್‌ಬಿಬಿಎ ಗೌರವ ಕಾರ್ಯದರ್ಶಿ ಕೆ. ಗೋವಿಂದರಾಜು,ಕೆಎಸ್‌ಬಿಬಿಎ ಅಧ್ಯಕ್ಷ ಬಿ. ದಯಾನಂದ ಮತ್ತು ಖಜಾಂಚಿ ಶ್ರೀನಿವಾಸ ಮೂರ್ತಿ ಇದ್ದರು.



ಬೆಂಗಳೂರಿನ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ಶನಿವಾರ ನಡೆದ 'ಪ್ರಜಾವಾಣಿ ದೀಪಾವಳಿ ವಿಶೇಷಾಂಕ ಕಥೆ–ಕವನ ಸ್ಪರ್ಧೆ' ವಿಜೇತರು: (ಎಡದಿಂದ) ಪ್ರಕಾಶ್ (ಕಥಾ ಸ್ಪರ್ಧೆ– ತೃತೀಯ ಬಹುಮಾನ ಪಡೆದ ಕಾವ್ಯ ಅವರ ತಂದೆ), ಬಿ.ಎಂ. ಭಾರತಿ ಹಾದಿಗೆ (ಕಥಾ ಸ್ಪರ್ಧೆ– ದ್ವಿತೀಯ), ಇಂದ್ರಕುಮಾರ್ ಎಚ್.ಬಿ. (ಕಥಾ ಸ್ಪರ್ಧೆ– ಮೊದಲ) ಸಾಹಿತಿ ರಹಮತ್ ತರೀಕೆರೆ, ಮಂಜುಳಾ ಹಿರೇಮಠ್ (ಕಾವ್ಯ ಸ್ಪರ್ಧೆ– ಪ್ರಥಮ), ರತ್ನಾಕರ್ ಸಿ. ಕುನುಗೋಡು (ಕಾವ್ಯ ಸ್ಪರ್ಧೆ– ದ್ವಿತೀಯ) ಮತ್ತು ಪ್ರಕಾಶ್ ಮರಗೋಳ (ಕಾವ್ಯ ಸ್ಪರ್ಧೆ– ತೃತೀಯ) ಬಹುಮಾನ ಪಡೆದರು

'ಪ್ರಜಾವಾಣಿ ದೀಪಾವಳಿ ಕಥೆ–ಕವನ ಸ್ಪರ್ಧೆ'ಗಳ ವಿಜೇತರಿಗೆ ಬಹುಮಾನ ವಿತರಣೆ

'ಸಾಮಾನ್ಯರನ್ನೇ ನಾಯಕರಾಗಿಸಿದ್ದು ಸಾಹಿತ್ಯದ ಶಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಪ್ರಭುತ್ವದ ಆರಾಧನೆಯ ಮುಂದುವರಿಕೆಯಂತೆ ಪ್ರಜಾಪ್ರಭುತ್ವದಲ್ಲೂ ನಾಯಕತ್ವದ ಆರಾಧನೆ ಕಾಣುತ್ತಿದ್ದೇವೆ. ಹೀಗಿರುವಾಗ, ಸಾಮಾನ್ಯರನ್ನೇ ನಾಯಕರನ್ನಾಗಿಸಿದ ಬರಹಗಳು ಮೂಡಿಬರುತ್ತಿರುವುದೇ ಸಾಹಿತ್ಯದ ಶಕ್ತಿ' ಎಂದು ಸಾಹಿತಿ ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ 'ಪ್ರಜಾವಾಣಿ ದೀಪಾವಳಿ ವಿಶೇಷಾಂಕ–2022ರ ಕಥೆ–ಕವನ ಸ್ಪರ್ಧೆ'ಗಳ ವಿಜೇತರಿಗೆ ಬಹುಮಾನ ವಿತರಿಸಿ, 'ಕನ್ನಡದ ಸೃಜನಶೀಲತೆ ಸ್ವರೂಪ' ಎಂಬ ವಿಷಯ ಕುರಿತು ಅವರು ಶನಿವಾರ ವಿಶೇಷ ಉಪನ್ಯಾಸ ನೀಡಿದರು.

ಚಳವಳಿಗಳ ಕಾಲಘಟ್ಟದ ಲೇಖಕರು ನುಡಿದಂತೆ ನಡೆಯುತ್ತಿದ್ದರು. ಅದು ಅನಿವಾರ್ಯವೂ ಹೌದು. ಹಾಗೆ ಘನತೆಯಿಂದ ಬದುಕಿದ ಲೇಖಕರು ಸಾಂಸ್ಕೃತಿಕ ಹೀರೊಗಳಾಗಿ ರೂಪುಗೊಂಡಿದ್ದಾರೆ. ಕುಪ್ಪಳಿಯಲ್ಲಿ ಪ್ರದರ್ಶಿಸಿರುವ ಚಿತ್ರಗಳಲ್ಲಿ ಕುವೆಂಪು ಅವರು ವಿರಾಜಮಾನರಾಗಿ ಕುಳಿತಿದ್ದರೆ, 10–12 ಮುಖ್ಯಮಂತ್ರಿಗಳು ಅವರ ಪಕ್ಕ ವಿನೀತರಾಗಿ ನಿಂತಿರುವ ಅಥವಾ ಕುಳಿತಿರುವ ಫೋಟೋಗಳಿವೆ. ಹಿಂದೆ, ಸಾಹಿತಿಗಳು ಹೀಗೆ ಸಾಂಸ್ಕೃತಿಕ ಲೋಕವನ್ನು ಪ್ರಭಾವಿಸಿದ್ದರು ಎಂದರು.

> **ಪ್ರಜಾವಾಣಿ ಕಥೆ, ಕವನ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಭವಿಷ್ಯದಲ್ಲಿ ಬಹುದೊಡ್ಡ ಲೇಖಕರಾಗಿ ಹೊರಹೊಮ್ಮಿದ್ದಾರೆ. ಸಾವಿರಾರು ಲೇಖಕರನ್ನು ರೂಪಿಸಿದ ಹೆಗ್ಗಳಿಕೆ ಪತ್ರಿಕೆಗೆ ಸಲ್ಲುತ್ತದೆ.**
> **ರಹಮತ್ ತರೀಕೆರೆ,** ಸಾಹಿತಿ

ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು ಇತರೆ ಕ್ಷೇತ್ರಗಳಿಗೆ ಜಿಗಿದು ಅಲ್ಲಿಯೂ ಹೆಸರು ಮಾಡಿದ್ದಾರೆ. ಹಾಗೆಯೇ, ಇತರ ಕ್ಷೇತ್ರದವರೂ ಬರಹಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಹಿತ್ಯ ವೈವಿಧ್ಯಕ್ಕೆ ಕೊಡುಗೆ ಸಲ್ಲಿಸಿದ್ದಾರೆ. ಕುವೆಂಪು, ಮಾಸ್ತಿ, ಕಾರಂತ, ಲಂಕೇಶರನ್ನೂ ಒಳಗೊಂಡಂತೆ ಕೆಲವರು ಹಲವು ಮಾಧ್ಯಮಗಳಲ್ಲಿ ತೊಡಗಿಸಿಕೊಂಡಿದ್ದರು. ಇಂತಹ ಸೀಮೋಲ್ಲಂಘನೆಯ ಫಲವಾಗಿಯೇ ಸಾಹಿತ್ಯಕ್ಕೆ ಬಹುತ್ವದ ಶಕ್ತಿ ದೊರಕಿದೆ ಎಂದು ವಿಶ್ಲೇಷಿಸಿದರು.

'ಬರಹಗಾರರು ಪರಂಪರೆಯ ಜತೆಗೆ ನಡೆಸಿದ ಜಗಳಗಳ ಪರಿಣಾಮದಿಂದಲೂ ವಿಭಿನ್ನ ಸಾಹಿತ್ಯ ರಚನೆ ಸಾಧ್ಯವಾಗಿದೆ. ಕುವೆಂಪು ಅವರ ಜತೆ ಪೂರ್ಣಚಂದ್ರ ತೇಜಸ್ವಿಯವರು ಭಿನ್ನದೃಷ್ಟಿಯ ಜಗಳ ಮಾಡದೇ ಹೋಗಿದ್ದರೆ ತಂದೆಯ ನೆರಳಿನಿಂದ ಹೊರಬಂದು ತಮ್ಮದೇ ಛಾಪು ಮೂಡಿಸಲು ಸಾಧ್ಯವಾಗುತ್ತಿರಲಿಲ್ಲ. 'ಕರ್ವಾಲೊ'ದಂತಹ ಕಾದಂಬರಿ ಮೂಡುತ್ತಿರಲಿಲ್ಲ. ಅಪ್ಪ ಮಗನಿಗೆ, ಮಗ ಅಪ್ಪನಿಗೆ ಬರೆದ ಪತ್ರಗಳು ಅದಕ್ಕೆ ಸಾಕ್ಷಿಯಾಗಿವೆ' ಎಂದರು.

ಪರಂಪರೆ ಕಟ್ಟಿಕೊಡುವ ಸೃಜನಶೀಲ ಜಿಗಿತ ದೇಶದಿಂದ ದೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಸೀಮಿತವಾಗಿಲ್ಲ. ಭಿನ್ನ ಮಾಧ್ಯಮಗಳ ಮಧ್ಯೆಯೂ ನಿರಂತರವಾಗಿ ನಡೆಯುವ ಪ್ರಕ್ರಿಯೆ ಆಗಿದೆ. ಹಿಂಜರಿಕೆ ಇಲ್ಲದೆ, ವಿಫಲತೆಯ ಅಳುಕಿಲ್ಲದೆ ಹಲವು ಪ್ರಕಾರಗಳಲ್ಲಿ ಏಕಕಾಲಕ್ಕೆ ಹಲವರು ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಸಾಹಿತ್ಯ ಸೇರಿ ಯಾವುದೇ ಪ್ರಕಾರಗಳಲ್ಲಿ ಸೃಜನಶೀಲತೆ, ಸೃಜನಶೀಲವಲ್ಲದ್ದು ಎನ್ನುವ ವಿಂಗಡಣೆ ಸಲ್ಲದು. ರಾಜಕೀಯ ಸಿದ್ಧಾಂತಗಳ ಹೆಸರಿನಲ್ಲಿ ಬರಹಗಳನ್ನು ದೂಷಿಸುವ, ವೈಭವೀಕರಿಸುವ ವರ್ತನೆಗಳೂ ಅಪಾಯಕಾರಿ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಮನುಷ್ಯನ ಪ್ರತಿಭೆ ವ್ಯಕ್ತವಾಗುವ ಅಮೂರ್ತ ಶಕ್ತಿಯೇ ಸೃಜನಶೀಲತೆ. ಕಲ್ಪಕತೆ, ಭೌತಿಕತೆ, ಕಾಣ್ಕೆ, ಬರಹದ ರೂಪ ಹಾಗೂ ನಡೆ ಸೃಜನಶೀಲತೆಯ ಆಯಾಮಗಳು ಎಂದು ವಿವರಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನ್ಯಾಷನಲ್ ಕಾಲೇಜಿನ 'ನಿನಾದ' ತಂಡದವರು ನುಡಿಗೀತೆ ಹಾಡಿದರು.

> **'ಪ್ರಜಾವಾಣಿ' ಕಥಾ ಸ್ಪರ್ಧೆ ಪರಂಪರೆ ಆಯಾ ಕಾಲಘಟ್ಟದ ಸಾಹಿತ್ಯವನ್ನು ಉತ್ತೇಜಿಸುತ್ತಾ ಬಂದಿದೆ. ಈ ಬಾರಿ ಮೊದಲ ಬಹುಮಾನ ನನಗೆಸಂದಿರುವುದು ಮತ್ತಷ್ಟು ಸ್ಫೂರ್ತಿಯಾಗಿದೆ.**
> **ಎಚ್.ಬಿ.ಇಂದ್ರಕುಮಾರ್,** ಕಥಾ ಸ್ಪರ್ಧೆಯ ವಿಜೇತ.

> **ನನ್ನ 'ಗಾಯಗೊಂಡವರು' ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಸೇರಿದಂತೆ ಏಳು ಪ್ರಶಸ್ತಿಗಳು ಸಂದಿವೆ. ಹೊಸತನದ ಹುಡುಕಾಟದ ಕವನಕ್ಕೆ ಬಹುಮಾನ ಸಿಕ್ಕಿರುವುದು ಹೆಮ್ಮೆಯ ಗರಿ**
> **ಮಂಜುಳಾ ಹಿರೇಮಠ,** ಕವನ ಸ್ಪರ್ಧೆಯ ವಿಜೇತೆ.

ವಿಜೇತರೊಂದಿಗೆ ಸಂವಾದ

ಕಥೆ–ಕವನ ಸ್ಪರ್ಧೆಯ ವಿಜೇತರೊಂದಿಗೆ ನಡೆದ ಸಂವಾದದಲ್ಲಿ ಹಲವು ಪ್ರಶ್ನೆಗಳು ಎದುರಾದವು. ಅವುಗಳಿಗೆ ರಹಮತ್ ತರೀಕೆರೆ ಪ್ರತಿಕ್ರಿಯಿಸಿದ್ದ ಹೀಗೆ. . .

ಪ್ರಶ್ನೆ: ವಿಮರ್ಶೆಗಳಿಗೆ ಬಹುಮಾನಗಳಿಲ್ಲವೇಕೆ? ಹೊಸಬರು ಈ ಪ್ರಕಾರದತ್ತ ನಿರಾಸಕ್ತಿ ತೋರುತ್ತಿದ್ದಾರಲ್ಲವೆ?

ಉತ್ತರ: ವಿಮರ್ಶೆಯ ಸ್ವರೂಪ ಬದಲಾಗಿದೆ. ಎಲ್ಲರ ಪ್ರತಿಕ್ರಿಯೆಗಳ ಸಂಯೋಜನೆಯನ್ನೂ ವಿಮರ್ಶೆಯಾಗಿ ಪರಿಗಣಿಸಲಾಗುತ್ತಿದೆ. ಪತ್ರಿಕೆ, ಸೆಮಿನಾರ್‌ಗಳ ಹಂಗಿಲ್ಲದೆ ಹುಟ್ಟುವ ಅಭಿಪ್ರಾಯಗಳು ವಿಮರ್ಶೆಯ ಭಾಗವಾಗಿವೆ.

ಪ್ರಶ್ನೆ: ಕನ್ನಡವನ್ನು ಆಯಾ ಪ್ರದೇಶಗಳಲ್ಲಿ ವಿಭಿನ್ನವಾಗಿ ಬಳಸಲಾಗುತ್ತಿದೆ. ಏಕರೂಪದ ಗ್ರಾಂಥಿಕ ಭಾಷೆಯಲ್ಲೇ ಬಹುತೇಕ ಮಾಧ್ಯಮಗಳಲ್ಲಿ ಬರೆಯುತ್ತಿರುವುದು ಸೂಕ್ತವೇ?

ಉತ್ತರ: ಆಯಾ ನೆಲದ ಆಡುಮಾತಿನಂತೆ ಬರಹವಿದ್ದರೆ ಚೆಂದ. ಬದಲಾಯಿಸುವುದು ತರವಲ್ಲ. ಉತ್ತರ ಕರ್ನಾಟಕ, ದಕ್ಷಿಣ ಕನ್ನಡದ ಭಾಷೆಯನ್ನು ಹಾಗೆ ಬಳಸುವುದು ಕೃತಿಯ ಹೆಗ್ಗಳಿಕೆ. ಬದಲಾಯಿಸುವುದು ಭಾಷಾ ವೈವಿಧ್ಯದ ಹತ್ಯೆ ಮಾಡಿದಂತೆ.


ಪ್ರಶ್ನೆ: ಬರಹಗಾರರಿಗೆ ಸಾಹಿತ್ಯ ಪರಂಪರೆಯ ಜ್ಞಾನ ಕಡ್ಡಾಯವೇ?

ಉತ್ತರ: ಹಾಗೇನಿಲ್ಲ. ಪರಂಪರೆಯ ಜ್ಞಾನವಿಲ್ಲದ ಎಷ್ಟೋ ಜನರು ಅತ್ಯುತ್ತಮ ಕೃತಿಗಳನ್ನು ರಚಿಸಿದ್ದಾರೆ. ಆದರೆ, ಪರಂಪರೆಯ ಜ್ಞಾನವು ಬರಹವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ, ವಿಸ್ತರಿಸುತ್ತದೆ.

ತಮಿಳುನಾಡಿನಲ್ಲಿ ಆರೆಸ್ಸೆಸ್ ಯಾತ್ರೆ ರದ್ದು

ಚೆನ್ನೈ: ಮದ್ರಾಸ್ ಹೈಕೋರ್ಟ್ ಕೆಲವು ನಿರ್ಬಂಧಗಳನ್ನು ವಿಧಿಸಿದ ಬಳಿಕ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಭಾನುವಾರ ತಮಿಳುನಾಡಿನಲ್ಲಿ ನಡೆಸಲು ನಿರ್ಧರಿಸಿದ್ದ ಯಾತ್ರೆಯನ್ನು ರದ್ದು ಮಾಡಿದೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 6 ನವೆಂಬರ್ 2022




ಪಿರಮಿಡ್‌ಗಳ ಲೋಕದಲ್ಲಿ... 11



ಗೀಜಗನ ಗೂಡು ನುಗಿತ್ತಾ! 13

ಕುಸಿದಿದ್ದು ಕಟ್ಟಡ ಮಾತ್ರ ಅಲ್ಲ!

ಪರಂಪರೆ ಎಂದರೆ ಅದು ಕಟ್ಟಡಕ್ಕೆ ಮಾತ್ರ ಸೀಮಿತವಲ್ಲ. ಮೈಸೂರಿನ ಆಡಳಿತ, ಸಾಹಿತ್ಯ, ನೃತ್ಯ ಸಂಗೀತ, ಸಾಮಾಜಿಕ ಸಾಮರಸ್ಯ ಎಲ್ಲದರಲ್ಲೂ ಮೈಸೂರಿಗೆ ಒಂದು ಪರಂಪರೆ ಇದೆ. ಅಂತಹ ಪರಂಪರೆ ಉಳಿಯಬೇಕಿದೆ. ಕಟ್ಟಡ ಕುಸಿದರೆ ಮತ್ತೆ ಕಟ್ಟಬಹುದು. ಮಾನವೀಯತೆಯನ್ನು ಅಂತರ್ಗತ ಮಾಡಿಕೊಂಡು ಬೆಳೆದ ಪರಂಪರೆ ಕುಸಿದುಹೋದರೆ ಕಟ್ಟುವುದು ಕಷ್ಟ...



ರವೀಂದ್ರ ಭಟ್ಟ

ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ ಪರಂಪರೆಗಳ ನಗರ ಎಂಬ ಖ್ಯಾತಿಯೂ ಇದೆ. ಇಲ್ಲಿ ಈಗ ಪಾರಂಪರಿಕ ಕಟ್ಟಡಗಳು ಒಂದೊಂದಾಗಿ ಕುಸಿದು ಬೀಳುತ್ತಿವೆ. ಇತ್ತೀಚೆಗೆ ಮಹಾರಾಣಿ ವಿಜ್ಞಾನ ಕಾಲೇಜಿನ ಪಾರಂಪರಿಕ ಕಟ್ಟಡ ಕುಸಿದಿದೆ. ಕೆಲವೇ ದಿನಗಳ ಮೊದಲು ಅರಮನೆಯ ತಡೆಗೋಡೆ ಬಿದ್ದಿತ್ತು. ಈಗಾಗಲೇ ಪಾರಂಪರಿಕ ಕಟ್ಟಡಗಳಾದ ಲ್ಯಾನ್ಸ್ ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆ, ಸರಸ್ವತಿಪುರಂ ಅಗ್ನಿಶಾಮಕ ಠಾಣೆ, ಮಾನಸ ಗಂಗೋತ್ರಿಯಲ್ಲಿ ಇರುವ ಜಯಲಕ್ಷ್ಮೀ ವಿಲಾಸ ಅರಮನೆ ಚಾವಣಿ, ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ ಚಾವಣಿ ಸೇರಿದಂತೆ ಹಲವಾರು ಪಾರಂಪರಿಕ ಕಟ್ಟಡಗಳು ಕುಸಿದಿವೆ. ರಾಜ್ಯ ಸರ್ಕಾರ ಅಧಿಕೃತವಾಗಿ ಘೋಷಿಸಿರುವ 131 ಪಾರಂಪರಿಕ ಕಟ್ಟಡಗಳು ಮೈಸೂರಿನಲ್ಲಿ ಇವೆ. ಅವುಗಳಲ್ಲಿ 25ಕ್ಕೂ ಹೆಚ್ಚು ಕಟ್ಟಡಗಳು ಅಪಾಯದ ಅಂಚಿನಲ್ಲಿವೆ ಎಂದು ತಜ್ಞರು ಗುರುತಿಸಿದ್ದಾರೆ. ಐತಿಹಾಸಿಕ ಮಹತ್ವ ಇರುವ ಮತ್ತು ಪುರಾತನ ಶೈಲಿಯ ಕಟ್ಟಡಗಳನ್ನು ಉಳಿಸಿಕೊಳ್ಳಬೇಕು, ಅವುಗಳ ರಕ್ಷಣೆಗೆ ಒತ್ತು ನೀಡಬೇಕು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಮಹತ್ವದ ಪ್ರಶ್ನೆ ಎಂದರೆ ಮೈಸೂರಿನಲ್ಲಿ ಕಟ್ಟಡಗಳು ಮಾತ್ರ ಕುಸಿಯುತ್ತಿವೆಯಾ?

ಮೈಸೂರು ಎಂದ ತಕ್ಷಣ ಮೈಸೂರು ಮಲ್ಲಿಗೆ, ಮೈಸೂರು ವೀಳ್ಯದೆಲೆ, ಮೈಸೂರು ರೇಷ್ಮೆ, ಅಗರಬತ್ತಿ, ಮೈಸೂರು ಪಾಕ್, ಮೈಸೂರು ಪೇಟ ಎಲ್ಲವೂ ನೆನಪಿಗೆ ಬರುತ್ತವೆ. ಇವೆಲ್ಲವೂ ಪಾರಂಪರಿಕ ಮೌಲ್ಯಗಳನ್ನು ಹೊಂದಿವೆ. ಆದರೆ ಮಲ್ಲಿಗೆ ತಮಿಳುನಾಡಿನಿಂದ ಬರುತ್ತದೆ. ವೀಳ್ಯದೆಲೆ ತೋಟಗಳಲ್ಲಿ ಬಡಾವಣೆಗಳು ಎದ್ದಿವೆ. ಪೇಟ ಮುಂಬೈಯಿಂದ ಬರುತ್ತದೆ. ಮೈಸೂರಿನ ಐಡೆಂಟಿಟಿಯಲ್ಲಿ ಆಡಳಿತವೂ ಬಹಳ ಮುಖ್ಯವಾಗಿದೆ. ಸರ್ವ ಜನಾಂಗದ ಶಾಂತಿಯ ತೋಟವನ್ನು ನಿರ್ಮಿಸಿದ ಆಡಳಿತ ಮೈಸೂರಿನದ್ದು.

ಪರಂಪರೆ ಎಂದರೆ ಅದು ಕಟ್ಟಡಕ್ಕೆ ಮಾತ್ರ ಸೀಮಿತವಲ್ಲ. ಮೈಸೂರಿನ ಆಡಳಿತ, ಸಾಹಿತ್ಯ, ನೃತ್ಯ, ಸಂಗೀತ, ಸಾಮಾಜಿಕ ಸಾಮರಸ್ಯ ಎಲ್ಲದರಲ್ಲೂ ಮೈಸೂರಿಗೆ ಒಂದು ಪರಂಪರೆ ಇದೆ. 'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತಹ ರಾಜರು ಇದ್ದರೆ ನಮಗೆ ಸ್ವಾತಂತ್ರ್ಯವೇ ಬೇಡ' ಎಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಹೇಳಿದ್ದರು. ಜನಹಿತ, ಜನಕಲ್ಯಾಣವೇ ಮೈಸೂರು ರಾಜರ ಧ್ಯೇಯವಾಗಿತ್ತು. ಮೈಸೂರು ಮಹಾರಾಜರು ಎಂದಿಗೂ ಯುದ್ಧ ಮಾಡಿದವರಲ್ಲ. 'ಮೈಸೂರು ರಾಜ್ಯವೇ ರಾಮರಾಜ್ಯ' ಎಂದು ಮಹಾತ್ಮ ಗಾಂಧಿ ಬಣ್ಣಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರಾಜ ಋಷಿ ಎಂದು ಕೊಂಡಾಡಿದ್ದರು.

ಮೈಸೂರು ರಾಜರ ಜನಪರ ಆಡಳಿತಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ರಾಜರು ಮತ್ತು ರಾಣಿಯರ ಮೈಮೇಲಿನ ಬಂಗಾರವನ್ನು ಮಾರಿ ಕನ್ನಂಬಾಡಿ ಕಟ್ಟೆ ಕಟ್ಟಿದ ಅರಸರು ಅವರು. ಇಡೀ ಏಷ್ಯಾದಲ್ಲಿಯೇ ಮೊದಲ ಬಾರಿಗೆ ವಿದ್ಯುತ್ ಉತ್ಪಾದನೆ ಮಾಡಿದರೂ ವಿದ್ಯುತ್ ಬೆಳಕು ಮೊದಲು ಅರಮನೆಗೆ ಬರಲಿಲ್ಲ. ಕೆಜಿಎಫ್‌ಗೆ ಬಂತು. ನಂತರ ಬೆಂಗಳೂರಿಗೆ ಬಂತು. ಆ ಮೇಲೆ ಮೈಸೂರಿಗೆ ಬಂತು.

1806ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲ. ಮೈಸೂರಿಗೆ ಕಾಲರಾ ಅಪ್ಪಳಿಸಿತು. ಕೋಟೆಯ ಒಳಗೇ ಸಾವಿರಾರು ಮಂದಿ ಕಾಲರಾಕ್ಕೆ ಬಲಿಯಾದರು. ಅದೇ ಸಂದರ್ಭದಲ್ಲಿ ಕಾಲರಾ ನಿರೋಧಕ ಲಸಿಕೆ ಬಂತು. ಆದರೆ ಲಸಿಕೆ ಹಾಕಿಸಿಕೊಳ್ಳಲು ಜನರು ಮುಂದೆ ಬರಲಿಲ್ಲ. ಆಗ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರು ಮೂವರು ರಾಜಕುಮಾರಿಯರಿಗೆ ಸಾರ್ವಜನಿಕವಾಗಿ ಲಸಿಕೆ ಹಾಕಿಸಿದರು. ನಂತರವೇ ಸಾರ್ವಜನಿಕರು ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬಂದರು. ಈಗ ಕೊರೊನಾ ಲಸಿಕೆ ಹಾಕಿಸಿಕೊಳ್ಳುವಾಗ ಏನೇನಾಯಿತು ಎಂದು ನೆನಪಿಸಿಕೊಳ್ಳಿ.

ಮೈಸೂರು ಅರಸರು ರಾಜರ ಖರ್ಚಿಗೆ ನಿಗದಿಯಾಗಿದ್ದ ಹಣಕ್ಕಿಂತ ಒಂದು ಪೈಸೆ ಹಣವನ್ನೂ ಹೆಚ್ಚಿಗೆ ಖರ್ಚು ಮಾಡಲಿಲ್ಲ. ಅರಮನೆಯನ್ನು ಕಟ್ಟಿದ್ದು ತಮ್ಮ ಹಣದಲ್ಲಿಯೇ ವಿನಾ ಸಾರ್ವಜನಿಕ ಹಣದಲ್ಲಿ ಅಲ್ಲ. ರಾಜರ ಖರ್ಚಿಗೆ ಹಣ ಇಲ್ಲದೇ ಇದ್ದಾಗ ಒಡವೆಗಳನ್ನು ಅಡ ಇಟ್ಟ ಪ್ರಸಂಗಗಳೂ ಇವೆಯೇ ವಿನಾ ಜನರ ಹಣ ಬಳಸಿಕೊಂಡ ಉದಾಹರಣೆಗಳಿಲ್ಲ. ಮೈಸೂರಿನ ಜನರೂ ಹಾಗೆಯೇ ಇದ್ದರು. ಅದಕ್ಕೂ ಉದಾಹರಣೆಗಳಿವೆ.

1897 ಫೆಬ್ರುವರಿ 28ರಂದು ರಾಜಕುಮಾರಿ ಜಯಲಕ್ಷ್ಮಮ್ಮಣ್ಣಿ ಮತ್ತು ಸರ್ದಾರ್ ಎಂ.ಕಾಂತರಾಜೇ ಅರಸ್ ಅವರ ವಿವಾಹ. ಅದೇ ದಿನ ಅರಮನೆಗೆ ಬೆಂಕಿ ಬಿತ್ತು. ಅರಮನೆಯಲ್ಲಿ ಕೋಲಾಹಲ. ಜನ ದಿಕ್ಕಾಪಾಲಾದರು. ಆದರೆ ಮೈಸೂರಿನ ಜನರು ಬೆಂಕಿ ಜ್ವಾಲೆಯನ್ನು ಲೆಕ್ಕಿಸದೆ ಅರಮನೆಯ ಒಳಕ್ಕೆ ನುಗ್ಗಿ ಬಂಗಾರದ ಒಡವೆಗಳು, ಗ್ರಂಥಗಳು, ಪೀಠೋಪಕರಣಗಳು, ರೇಷ್ಮೆ ವಸ್ತ್ರಾಭರಣಗಳಲ್ಲದೆ ಅಮೂಲ್ಯ ವಸ್ತುಗಳನ್ನು ಕೈಯಿಂದ ಕೈಗೆ ದಾಟಿಸುತ್ತಾ ಹೊರಗೆ ಹಾಕಿದರು. ಒಡವೆ, ವಸ್ತ್ರ, ರಾಜಪೋಷಾಕು, ಹಾರ ತುರಾಯಿ, ಆಭರಣ ಎಲ್ಲವೂ ಎರಡು ರಾತ್ರಿ ಎರಡು ಹಗಲು ಅರಮನೆಯ ಅಂಗಳದಲ್ಲಿ ಅನಾಥವಾಗಿ ಬಿದ್ದಿದ್ದವು. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಮಂದಿ ಅರಮನೆಯ ಅಂಗಳದಲ್ಲಿ ನಿಂತು ರೋದಿಸಿದರೇ ವಿನಾ ಬೆಲೆಬಾಳುವ ವಸ್ತುಗಳನ್ನು ಮುಟ್ಟಲಿಲ್ಲ. ನಿಜವಾದ ಅರ್ಥದಲ್ಲಿ ಯಥಾ ರಾಜ ತಥಾ ಪ್ರಜಾ ಎಂಬ ಮಾತು ಅಲ್ಲಿ ನಿಜವಾಗಿತ್ತು.

ರಾಜರಂತೆಯೇ ದಿವಾನರೂ ಪ್ರಜಾಪಾಲಕರಾಗಿದ್ದರು. ಸರ್ ಎಂ.ವಿಶ್ವೇಶ್ವರಯ್ಯನವರು, ಮಿರ್ಜಾ ಇಸ್ಮಾಯಿಲ್ ಅವರು, ಕೆ.ಶೇಷಾದ್ರಿ ಅಯ್ಯರ್, ಎಂ.ಕಾಂತರಾಜ ಅರಸರು ಎಲ್ಲರೂ ಪಾರಂಪರಿಕ ಮೌಲ್ಯಗಳನ್ನು ಉಳಿಸಿಕೊಂಡೇ ಬಂದಿದ್ದರು. ಜನೋಪಕಾರದ ಕೆಲಸಗಳನ್ನು ಮಾಡಿದರು. ಈ ಪರಂಪರೆ ಈಗ ಎಲ್ಲಿಗೆ ಬಂದು ನಿಂತಿದೆ?

ಮೈಸೂರಿನಲ್ಲಿ ಗುರು ಶಿಷ್ಯ ಪರಂಪರೆಯೂ ಇತ್ತು. ವೆಂಕಣ್ಣಯ್ಯ, ಕುವೆಂಪು, ತ.ಸು.ಶಾಮರಾವ್, ಪರಮೇಶ್ವರ ಭಟ್ಟ, ಎಸ್.ವಿ.ರಂಗಣ್ಣ, ಡಿ.ಎಲ್.ನರಸಿಂಹಾಚಾರ್, ಪ್ರೊ.ಶ್ರೀಕಂಠಯ್ಯ ಹೀಗೆ ಸಾಲು ಸಾಲು ಗುರುಗಳು ಇದ್ದರು. ಅವರ ಗರಡಿಯಲ್ಲಿ ಕಲಿತ ಶಿಷ್ಯರೂ ಮುಂದೆ ಶ್ರೇಷ್ಠ ಗುರುಗಳಾಗಿ ಲೋಕಕ್ಕೆ ಅನನ್ಯ ಕೊಡುಗೆ ನೀಡಿದರು. ಶಿಷ್ಯರನ್ನು ಮನೆಯಲ್ಲಿಯೇ ಇಟ್ಟುಕೊಂಡು ಪಾಠ ಹೇಳುವ ಪದ್ಧತಿ ಇತ್ತು. ವಾರಾನ್ನದ ಪದ್ಧತಿ ಕೂಡ ಇತ್ತು. ಬಾಲಕಾರ್ಮಿಕನಾಗಿದ್ದ ಅಪ್ಪಾಜಿ ಗೌಡರನ್ನು ಮನೆಯಲ್ಲಿಯೇ ಇಟ್ಟುಕೊಂಡು ಊಟ ಹಾಕಿ ವಿದ್ಯೆ ಕಲಿಸಿದ ಕನ್ನಡದ ಕಣ್ವ ಬಿಎಂಶ್ರೀ, ನೂರಾರು ವಿದ್ಯಾರ್ಥಿಗಳಿಗೆ ಬೆಳಕಾದ ವೆಂಕಣ್ಣಯ್ಯ, ವಿಚಾರದೀವಿಗೆ ಹತ್ತಿಸಿದ ಕುವೆಂಪು ಹೀಗೆ ಮೈಸೂರಿನ ಗುರು ಪರಂಪರೆ ದೊಡ್ಡದು. ಮಧ್ಯರಾತ್ರಿ ಮಕ್ಕಳಿಗೆ ಪಾಠ ಮಾಡಿದ ಬೆಟ್ಟಹಲಸೂರು ವೆಂಕಟರಾಮ ಶಾಸ್ತ್ರಿಗಳು, ಡಾ.ರಾಳಪಲ್ಲಿ ಅನಂತಕೃಷ್ಣ ಶರ್ಮ ಮುಂತಾದವರು ಮೈಸೂರು ಗುರು ಪರಂಪರೆಗೆ ಮೆರುಗು ತಂದವರು. ಈಗ ಮೈಸೂರಿನ ಗುರುಗಳ ಗತಿ ಏನಾಗಿದೆ, ಶಿಷ್ಯರ ಕತೆ ಏನಾಗಿದೆ?

ಮೈಸೂರಿನ ಸಾಹಿತ್ಯ ಪರಂಪರೆಯೂ ಮೌಲಿಕವಾದದ್ದು. ರಾಜಪ್ರಭುತ್ವಕ್ಕೆ ಕಟ್ಟುಬಿದ್ದ ಸಾಹಿತ್ಯವಲ್ಲ ಅದು. ರಾಜರೆಂಬ ಒಂದೇ ಕಾರಣಕ್ಕೆ ತಲೆಬಾಗುವ ಸಾಹಿತ್ಯವಲ್ಲ ಅದು. ಆಸೆ ಆಮಿಷಕ್ಕೆ ಬಗ್ಗುವ ಸಾಹಿತ್ಯ ಪರಂಪರೆಯಲ್ಲ ಅದು. ಯುವರಾಜ ಚಾಮರಾಜ ಒಡೆಯರ್ ಅವರು ಕುವೆಂಪು ಅವರ ಶಿಷ್ಯರು. ಒಮ್ಮೆ ಜಯಚಾಮರಾಜ ಒಡೆಯರ್ ಅವರ ಕನ್ನಡ ಉತ್ತರ ಪತ್ರಿಕೆಯನ್ನು ಕುವೆಂಪು ಮೌಲ್ಯಮಾಪನ ಮಾಡಿದ್ದರು. 17 ಅಂಕ ಕೊಟ್ಟರು. ಇದು ಆಗಿನ ಕುಲಪತಿ ಎನ್.ಎಸ್.ಸುಬ್ಬರಾವ್ ಅವರಿಗೆ ಗೊತ್ತಾಯಿತು. ನಂತರ ಅದು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ತಿಳಿಯಿತು. ಈ ಬಗ್ಗೆ ವಿಚಾರಣೆ ನಡೆಸಲು ಟಿ.ಎಸ್.ವೆಂಕಣ್ಣಯ್ಯ ಅವರಿಗೆ ಕೇಳಿಕೊಳ್ಳಲಾಯಿತು. ವೆಂಕಣ್ಣಯ್ಯ ಅವರು 'ಏನಯ್ಯ, ರಾಜಕುಮಾರರಿಗೆ 17 ಅಂಕ ನೀಡಿದ್ದೀಯಂತಲ್ಲ' ಎಂದು ಕೇಳಿದರು. ಅದಕ್ಕೆ ಕುವೆಂಪು 'ನಾನು ನೀಡಿದ್ದಲ್ಲ, ಅವರು ಪಡೆದುಕೊಂಡಿದ್ದು' ಎಂದು ಉತ್ತರಿಸಿದರು. ಅದನ್ನು ಬದಲಾಯಿಸಲು ಕುವೆಂಪು ಒಪ್ಪಲಿಲ್ಲ. ಅದಕ್ಕೆ ಮಹಾರಾಜರು ಬೇಸರ ಮಾಡಿಕೊಳ್ಳಲೂ ಇಲ್ಲ. ಯುವರಾಜರಿಗೆ ಮನೆಪಾಠ ಮಾಡಲೂ ಕುವೆಂಪು ಒಪ್ಪಿಕೊಳ್ಳಲಿಲ್ಲ.

ಮೈಸೂರಿನ ಆಡಳಿತ ಪರಂಪರೆ ಕುಸಿಯುತ್ತಿರುವುದರ ಬಗ್ಗೆ ಕುವೆಂಪು ಅವರಿಗೆ ಭಾರಿ ಸಿಟ್ಟಿತ್ತು. 'ವಿಚಾರ ಕ್ರಾಂತಿಗೆ ಆಹ್ವಾನ' ಎನ್ನುವ ಭಾಷಣದಲ್ಲಿ ಅವರು ಈ ಬಗ್ಗೆ ಸಾಕಷ್ಟು ಕಿಡಿಕಾರಿದ್ದಾರೆ. 'ನೀತಿ ಸೂಕ್ತಿಗಳನ್ನು ಸಾಮೂಹಿಕವಾಗಿ, ಯಾಂತ್ರಿಕವಾಗಿ ಉಚ್ಚರಿಸಿ ಪ್ರತಿಜ್ಞೆ ಮಾಡಿದ ಲಕ್ಷಾಂತರ ಸ್ನಾತಕರೇ ಇಂದು ರಾಜಕೀಯ ರಂಗದಲ್ಲಿ ಆರ್ಥಿಕ, ಅಧಿಕಾರ, ಶಿಕ್ಷಣ ರಂಗದಲ್ಲಿ ನಿರ್ಲಜ್ಜರಾಗಿ ಪಾಪಮಯ ಭ್ರಷ್ಟಾಚಾರದಲ್ಲಿ ತೊಡಗಿ ದೇಶವನ್ನು ದುರ್ಗತಿಗೆ ಒಯ್ಯುತ್ತಿದ್ದಾರೆ' ಎಂದು ಬೇಸರಿಸಿಕೊಂಡಿದ್ದಾರೆ. ಆಗಲೇ ಹೇಳಿದ ಮಾತುಗಳು ಇವು. ಈಗ ಅವರು ಬದುಕಿದ್ದರೆ ಏನು ಹೇಳುತ್ತಿದ್ದರೋ ಕಾಣೆ.

ಪ್ರಜಾಪ್ರಭುತ್ವದ ಮೌಲ್ಯ ಕುಸಿಯುತ್ತಿರುವುದರ ಬಗ್ಗೆ ಅವರ ಮಾತುಗಳನ್ನು ಕೇಳಿ. 'ನಮ್ಮಲ್ಲಿ ಡೆಮಾಕ್ರಸಿ ಎನ್ನುವುದು ಬರಿಯ ಮಾಕರಿಯಾಗಿದೆ. ಕೋಟ್ಯಧೀಶರಲ್ಲದವರು ಚುನಾವಣೆಯಲ್ಲಿ ಗೆಲ್ಲುವುದು ಹಾಗಿರಲಿ ನಿಲ್ಲುವುದು ಕೂಡ ಅಸಾಧ್ಯ. ಜಾತಿ, ಮತ, ಹೆಂಡ, ದುಡ್ಡು ಇವೇ ಓಟರುಗಳಾಗಿವೆ. ಓಟು ಕೊಡುವ ಪ್ರಜೆಗಳೂ ಬರಿ ನಿಮಿತ್ತ ಮಾತ್ರ. ಮೂಕ ವಾಹನಗಳಷ್ಟೆ. ನಾಲ್ಕಾರು ಜನರು ಯಾತಕ್ಕೂ ಹೇಸದ ಖದೀಮರು ಸೇರಿ ಉಪಾಯದಿಂದಲಾದರೂ ಕಾಳಸಂತೆಯ ಕಪ್ಪುಹಣವೋ ಕಳ್ಳಸಾಗಣೆಯ ಹಳದಿ ಹಣವೋ ಅಂತೂ ಹೆಚ್ಚು ಹಣ ಒಟ್ಟು ಮಾಡಿದರಾಯ್ತು. ಚುನಾವಣೆ ಗೆಲ್ಲಬಹುದು. ಒಮ್ಮೆ ಗೆದ್ದು ಅಧಿಕಾರ ಹಿಡಿದರಾಯ್ತು. ನಾಡಿನ ಸರ್ವ ಪ್ರಚಾರ ಮಾರ್ಗಗಳನ್ನೂ ಅಧಿಕಾರದ ಭಯದಿಂದಲೋ ದುಡ್ಡಿನ ಬಲದಿಂದಲೋ ವಶಪಡಿಸಿಕೊಳ್ಳಬಹುದು. ಒಮ್ಮೆ ಜನಶಕ್ತಿ ಪ್ರತಿಭಟನೆಗೆ ನಿಂತರೆ ಪೊಲೀಸ್, ಸೇನೆ ಬಳಸಿ ವಿಫಲಗೊಳಿಸಬಹುದು' ಎಂದು ಕುವೆಂಪು ಸಿಟ್ಟು ಕಾರಿದ್ದರು. ಮೈಸೂರಿನ ಎಲ್ಲ ಪರಂಪರೆ ಕುಸಿಯುತ್ತಿರುವುದನ್ನು ಅವರು ಅಂದೇ ಗುರುತಿಸಿದ್ದರು.

ಕಟ್ಟಡ ಕುಸಿದರೆ ಮತ್ತೆ ಕಟ್ಟಬಹುದು. ಮಾನವೀಯತೆಯೇ ಕುಸಿದುಹೋದರೆ ಕಟ್ಟುವುದು ಕಷ್ಟ.

ಶಾಸನಗಳು ಹಾಡುಗಳಾಗಿ...



ರಾಯಚೂರಿನ ಮಸ್ಕಿ ಬಳಿ ಇರುವ ಅಶೋಕನ ಶಿಲಾಶಾಸನದ ನೋಟ...



ಶೈಲಜ

ಗಾಯಕ ಟಿ.ಎಂ. ಕೃಷ್ಣ ಅವರು ಅಶೋಕ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಅಶೋಕನ ಶಿಲಾಶಾಸನಗಳನ್ನು ಕರ್ನಾಟಕ ಸಂಗೀತಕ್ಕೆ ಅಳವಡಿಸಿ ಹಾಡುವ ಯೋಜನೆಯೊಂದನ್ನು 2021ರಲ್ಲಿ ಹಾಕಿಕೊಂಡರು. ಬಹುಶಃ ಅಂತಹ ಪ್ರಯತ್ನವನ್ನು ಈ ತನಕ ಯಾರೂ ಮಾಡಿದಂತಿಲ್ಲ. ಅವು ಸುಮಾರು 2200 ವರ್ಷಗಳಷ್ಟು ಪುರಾತನವಾದ (ಕ್ರಿ.ಪೂ. 268-232) ಶಿಲಾಶಾಸನಗಳು. ಅವುಗಳಲ್ಲಿ ಇವರಿಗೇಕೆ ಅಷ್ಟೊಂದು ಆಸಕ್ತಿ ಮೂಡಿತು? ಅವನ್ನು ಹಾಡುವುದಕ್ಕೆ ಇವರಿಗೇಕೆ ಅಷ್ಟೊಂದು ಉತ್ಸಾಹ? ಇಂದಿಗೆ ಅವು ಹೇಗೆ ಪ್ರಸ್ತುತ? ಅದಕ್ಕೆ ಕೃಷ್ಣ ಅವರೇ ಉತ್ತರ ನೀಡುತ್ತಾರೆ:

'ಒಮ್ಮೆ ಗೋಪಾಲಕೃಷ್ಣ ಗಾಂಧಿಯವರು ಅಶೋಕನ ಶಿಲಾಶಾಸನಗಳನ್ನು ಓದುವಂತೆ ಸೂಚಿಸಿದರು. ನಾನು ಅವುಗಳನ್ನು ಓದಲು ಪ್ರಾರಂಭಿಸಿದೆ. ಹಾಗೆ ಓದುತ್ತಿದ್ದಾಗ, ಆಶೋಕ ನನ್ನೊಂದಿಗೇ ಮಾತನಾಡುತ್ತಿದ್ದಾನೆ, ನಾನೇ ಆ ಸಂಘರ್ಷಗಳನ್ನು ಅನುಭವಿಸುತ್ತಿದ್ದೇನೆ ಅನ್ನಿಸುತ್ತಿತ್ತು. ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತ ಹೇಗಿರಬೇಕು ಅನ್ನುವ ಪ್ರಶ್ನೆ ನಮ್ಮೆಲ್ಲರನ್ನೂ ಕಾಡಿದೆ. ಎಲ್ಲರೂ ಒಟ್ಟಿಗೆ ಬದುಕುವುದು; ಪರಸ್ಪರ ಒಬ್ಬರಿಗೊಬ್ಬರು ತುಡಿಯುವುದು ಹೇಗೆ ಎನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತೇವೆ. ಏಕೆಂದರೆ, ನಾವೆಲ್ಲರೂ ಬೇರೆ ಬೇರೆ ಬ್ಯಾಗೇಜುಗಳನ್ನು, ಪೂರ್ವಗ್ರಹಗಳನ್ನು ಹೊತ್ತುಕೊಂಡೇ ಇರುತ್ತೇವೆ. ಈ ಪ್ರಶ್ನೆಗಳು ನನ್ನೊಳಗೇ ಬಂದಾಗ ಈ ತಾತ್ವಿಕ ಪ್ರಶ್ನೆಗಳಿಗೆ ಮತ್ತು ವಿಚಾರಗಳಿಗೆ ವಾಸ್ತವದೊಡನೆ ಸಂಬಂಧ ಕಲ್ಪಿಸುವುದು ಒಳ್ಳೆಯದೆನಿಸಿತು. ಆ ಕೆಲಸವನ್ನು ಅಶೋಕ ಮಾಡಿದ್ದ. ನಾವು ಕೂಡ ಆ ಕ್ರಮದಲ್ಲಿ ಯೋಚಿಸುವುದು ಸೂಕ್ತವೆನಿಸಿತು. ಇದು ನನ್ನನ್ನು ಅಶೋಕನೆಡೆಗೆ ತಳ್ಳಿತು.'


ಸಾಮಾನ್ಯವಾಗಿ ಪ್ರತಿಯೊಂದು ತಲೆಮಾರು ತನ್ನ ಆ ಕ್ಷಣದ ತುರ್ತಿನಿಂದ ಐತಿಹಾಸಿಕ ವ್ಯಕ್ತಿಗಳನ್ನು ಹೊಸದಾಗಿ ಆವಿಷ್ಕರಿಸಿ, ಮರುಕಲ್ಪಿಸಿಕೊಳ್ಳುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿ ಭಾರತದಲ್ಲಿ ಕೋಮು ಸೌಹಾರ್ದ ಕದಡಿದ್ದಾಗ ಅಶೋಕನ 'ಸರ್ವ ಧರ್ಮ ಸಮಭಾವ' ಸಿದ್ಧಾಂತ ನೆಹರೂ ಆಳ್ವಿಕೆಯಲ್ಲಿ ಮರುಹುಟ್ಟು ಪಡೆಯಿತು. ಈಗ 21ನೇ ಶತಮಾನದಲ್ಲಿ ನಾವು ಅಂತಹುದೇ ಸಂಕೀರ್ಣ ಧಾರ್ಮಿಕ, ಸಾಮಾಜಿಕ ಬಿಕ್ಕಟ್ಟಿನ ವಾತಾವರಣದಲ್ಲಿ ಬಂದು ನಿಂತಿದ್ದೇವೆ. ಜನರಿಗೂ ಜನನಾಯಕರಿಗೂ ನಡುವೆ ಪರಸ್ಪರ ಸಂವಹನವೇ ಕಡಿದು ಹೋಗಿದೆ. ಸ್ವತಃ ಜನಗಳ ನಡುವೆಯೂ ಸಂವಹನ ತಪ್ಪಿದೆ. ಯಾರೂ ಯಾರನ್ನೂ ಕೇಳಿಸಿಕೊಳ್ಳುತ್ತಿಲ್ಲ. ಸಂಶಯದ ಮನಃಸ್ಥಿತಿ ಆವರಿಸಿಕೊಂಡಿದೆ. ತಾನು ಮತ್ತು ಇತರರು ಎನ್ನುವ ಭಾವನೆ ಮತ್ತು ಇತರರನ್ನು ಕುರಿತ ಅಸಹನೆ ಮುಗಿಲುಮುಟ್ಟಿದೆ. ಭಾಷಾ ಗೊಂದಲ ಹಿಂದೆಂದೂ ಇಲ್ಲದಂತೆ ತಲೆಯೆತ್ತಿದೆ. ಹಾಗಾಗಿ ಕೃಷ್ಣ ಅವರಿಗೆ ಆಶೋಕನ ಶಾಸನಗಳು ಪ್ರಸ್ತುತವೆನಿಸಿವೆ.

ಅಶೋಕನ ಶಿಲಾಶಾಸನಗಳೆಲ್ಲವೂ ಕಳಿಂಗ ಯುದ್ಧದ ನಂತರದವು. ಒಂದರ್ಥದಲ್ಲಿ ಕಳಿಂಗ ಯುದ್ಧ ಅಶೋಕನ ಬದುಕಿನಲ್ಲಿ ಮತ್ತು ಅವನಿಂದಾಗಿ ಇಡೀ ಭರತ ಖಂಡದ ರಾಜಕೀಯ, ಸಾಮಾಜಿಕ, ಧಾರ್ಮಿಕ ವಲಯಗಳಲ್ಲಿ ವಿಭಿನ್ನ ಬಗೆಯ ಪಲ್ಲಟಗಳಿಗೆ ಕಾರಣವಾದ ಘಟನೆ. ಈ ಶಾಸನಗಳಲ್ಲಿ ರಾಜ್ಯದ ಆಡಳಿತವನ್ನು ಹೇಗೆ ನಡೆಸಬೇಕೆನ್ನುವುದಕ್ಕೆ ಪ್ರಾಯೋಗಿಕ ಸಲಹೆಗಳಿವೆ. ಅಲ್ಲಿ ಸಾಮ್ರಾಜ್ಯವನ್ನು ಧರ್ಮಶೀಲತೆ, ಸದಾಚಾರ, ಶಾಂತಿಯ ಬುನಾದಿಯ ಮೇಲೆ ಕಟ್ಟಬೇಕೆಂಬ ಹಂಬಲವಿದೆ. ತನ್ನ ಪ್ರಜೆಗಳ ನೈತಿಕ ಮತ್ತು ಆಧ್ಯಾತ್ಮಿಕ ಕ್ಷೇಮವೇ ತನ್ನ ಆಡಳಿತದ ಮೂಲಭೂತ ಕಾಳಜಿಯಾಗಬೇಕೆಂಬ ಆಸೆಯಿದೆ. ಈ ಧಮ್ಮವನ್ನು ಜನರ ನಡುವೆ ಕಾನೂನು, ಕಟ್ಟಲೆಗಳನ್ನು ವಿಧಿಸುವ ಮೂಲಕ ಜಾರಿಗೆ ತರಬಹುದು ಅಥವಾ ನಂಬಿಕೆ ಮತ್ತು ಮನವೊಲಿಸಿಕೆಯ ಮೂಲಕವೂ ಅನುಷ್ಠಾನಗೊಳಿಸಬಹುದು. ಆದರೆ, ನೈತಿಕ ವರ್ತನೆಯನ್ನು ಕಾನೂನಿನ ಮೂಲಕ ನಿಯಂತ್ರಿಸುವುದಕ್ಕಿಂತ, ಮನವೊಲಿಸುವಿಕೆಯ ಮೂಲಕ ಸಾಧಿಸುವುದು ಪರಿಣಾಮಕಾರಿ ಎನ್ನುತ್ತದೆ ಅಶೋಕನ ಶಾಸನ.

11ನೇ ಪುಟಕ್ಕೆ...

ಅಶೋಕನ ಶಿಲಾಶಾಸನಗಳ ಪಠ್ಯವನ್ನು ಸಂಗೀತಕ್ಕೆ ಅಳವಡಿಸುವ ಮೂಲಕ ಟಿ.ಎಂ. ಕೃಷ್ಣ ವಿನೂತನ ಪ್ರಯೋಗ ನಡೆಸಿದ್ದಾರೆ

ಇರಾನ್‌ನ ದ್ರೌಪದಿಯರು!



ಸುಕೃತ ಎಸ್.

'...**ಸ್ವರ್ಗಕ್ಕೆ** ಹೋಗಲೇಬೇಕು ಎಂಬ ನಿಮ್ಮ
ಒತ್ತಾಯಕ್ಕಾಗಿ..., ಕಸದ ರಾಶಿಗಳಲ್ಲಿ ಆಹಾರ ಮತ್ತು
ಕನಸುಗಳನ್ನು ಹುಡುಕುತ್ತಿರುವ ಬಡಮಕ್ಕಳಿಗಾಗಿ...,
ಸುದೀರ್ಘ ಕತ್ತಲ ಬಳಿಕ ಮೂಡುವ ಸೂರ್ಯನಿಗಾಗಿ...,
ನಾನು ಹುಡುಗನಾಗಿದ್ದರೆ ಚೆನ್ನಾಗಿತ್ತಲ್ಲವೇ ಎಂದು ಬಯಸುವ
ಹುಡುಗಿಗಾಗಿ..., ಮುತ್ತು ಕೊಡುವ ಹೊತ್ತಿನ ಭಯಕ್ಕಾಗಿ....
ಮಹಿಳೆಯರಿಗಾಗಿ, ಜೀವನಕ್ಕಾಗಿ, ಸ್ವಾತಂತ್ರ್ಯಕ್ಕಾಗಿ...'

'ಬರೊಯೆ' (ಇಂಗ್ಲಿಷ್‌ನಲ್ಲಿ 'ಫಾರ್' ಎಂದು ಅರ್ಥ)- ಇರಾನಿನ 25 ವರ್ಷದ ಗಾಯಕ ಶರ್ವಿನ್ ಹಜಿಪೌರ್ ಅವರು ಬರೆದು, ಹಾಡಿರುವ ಈ ಗೀತೆಯು ರಾತ್ರಿ ಬೆಳಗಾಗುವುದರ ಒಳಗಾಗಿ ಇರಾನಿನಲ್ಲಿ ನಡೆಯುತ್ತಿರುವ ಹಿಜಾಬ್ ವಿರೋಧಿ ಪ್ರತಿಭಟನೆಯ 'ರಾಷ್ಟ್ರಗೀತೆ'ಯಾಯಿತು. ಈ ಹಾಡನ್ನು ಅವರು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರು. 4 ಕೋಟಿ ಜನ ಅದನ್ನು ಕೇಳಿದ್ದರು. ಮರುದಿನವೇ ಈ ಯುವ ಗಾಯಕನನ್ನು ಅಲ್ಲಿನ ಸರ್ವಾಧಿಕಾರಿ ಸರ್ಕಾರ ಬಂಧಿಸಿತು. ಇನ್‌ಸ್ಟಾಗ್ರಾಂನಿಂದ ಆ ಹಾಡನ್ನು ಅಳಿಸಿ ಹಾಕಿತು. ಆದರೆ, ಅಷ್ಟೊತ್ತಿಗಾಗಲೇ ಈ ಹಾಡು ಇರಾನ್ ಜನರ ಮೈಮನಸ್ಸಿನಲ್ಲಿ ಇಳಿದು, ಪ್ರತಿಭಟನೆಯ ಕಿಡಿಯ ಕಾವನ್ನು ಹೆಚ್ಚಿಸಿತ್ತು.

--

ನಿಖಾ ಶಕರಮಿಗೆ ಆಗಿನ್ನೂ 16 ವರ್ಷ. ಹಾಡುವ ಹುಚ್ಚು ಹತ್ತಿಸಿಕೊಂಡವಳು. ವಿದೇಶದಲ್ಲಿ ಮುಂದಿನ ವ್ಯಾಸಂಗ ಮಾಡಬೇಕು ಎಂದು ಕನಸು ಕಂಡವಳು. ತನ್ನ ಲೋಕದಲ್ಲೇ ಸ್ವಚ್ಛಂದವಾಗಿ ಹಾರಾಡಿಕೊಂಡಿದ್ದ ನಿಖಾ, ಒಂದು ದಿನ ಹೊರಹೋದವಳು 15 ದಿನಗಳಾದರೂ ಮರಳಿ ಬರಲೇ ಇಲ್ಲ. ಮಗಳಿಗಾಗಿ ಅಲೆದಾಡಿದ ಪೋಷಕರಿಗೆ ಸಿಕ್ಕಿದ್ದು ಆಕೆಯ ಸಾವಿನ ಸುದ್ದಿ; ದೇಹದಿಂದ ಬೇರ್ಪಡಿಸಿ ಜಜ್ಜಿದ್ದ ತಲೆ, ಉದುರಿದ್ದ ಹಲ್ಲುಗಳು, ಕಳಚಿ ಬಿದ್ದಿದ್ದ ದವಡೆ. ಸರಿನಾ ಇಸ್ಮೈಲ್ಜದಿಸ್ ಎಂಬ ಯುವತಿಯದ್ದೂ ಇಂತಹುದೇ ಕತೆ. ತಲೆಯು ದೇಹದಿಂದ ಬೇರ್ಪಟ್ಟಿತ್ತು. ತಲೆ ಎರಡು ಹೋಳಾಗಿತ್ತು.

ಇರಾನ್‌ನಲ್ಲಿ ನಡೆಯುತ್ತಿರುವ ಹಿಜಾಬ್ ವಿರೋಧಿ ಪ್ರತಿಭಟನೆಯ ಮುಖವಾಗಿದ್ದವರು ಈ ಇಬ್ಬರೂ ಹೆಣ್ಣುಮಕ್ಕಳು. ಈ ಕಾರಣಕ್ಕಾಗಿಯೇ ಅವರನ್ನು ಕೊಲ್ಲಲಾಯಿತು. ಹಿಜಾಬ್ ಹಾಕಿದ್ದು 'ಸರಿಯಾಗಿಲ್ಲ' ಎಂಬ ಕಾರಣಕ್ಕೆ ಬಂಧನಕ್ಕೆ ಒಳಗಾಗಿ, ಸೆರೆಯಲ್ಲಿಯೇ ಹತ್ಯೆಯಾದವರು ಮಹ್ಸಾ ಅಮೀನಿ. ಈ ಹತ್ಯೆಯ ಬಳಿಕ ಭಾರಿ ಜೋರಾಗಿ ಆರಂಭಗೊಂಡ ಪ್ರತಿಭಟನೆಯು ಈ ಇಬ್ಬರು ಯುವತಿಯರ ಹತ್ಯೆ ಬಳಿಕ ಇನ್ನೂ ತೀವ್ರಗೊಂಡಿತು.

12ನೇ ಪುಟಕ್ಕೆ...

ಪಿರಮಿಡ್‌ಗಳ ಲೋಕದಲ್ಲಿ...

ರಾಜೇಶ್ ಕಲ್ಲಾಜೆ

ಪ್ರವಾಸ



ಸುಮಾರು ನಾಲ್ಕೂವರೆ ಸಾವಿರ ವರ್ಷಗಳಿಂದ ಭವ್ಯವಾಗಿ ನಿಂತು ತನ್ನ ಮೊನಚಾದ ತುದಿಯಿಂದ ಆಕಾಶವನ್ನು ಚುಚ್ಚುವಂತೆ ಗೋಚರಿಸುವ ಈಜಿಪ್ಟಿನ ಪಿರಮಿಡ್‌ಗಳ ವೈಭವಕ್ಕೆ ಸಾಟಿಯಿಲ್ಲ. ನಿರ್ಮಾಣ ಸಮಯದಿಂದ ಮುಂದಿನ ಸುಮಾರು 3,800 ವರ್ಷಗಳವರೆಗೆ ಪ್ರಪಂಚದಲ್ಲಿ ಪಿರಮಿಡ್‌ಗಳಿಗಿಂತ ಎತ್ತರದ ಯಾವುದೇ ಮಾನವ ನಿರ್ಮಿತ ಭವನ/ಆಕೃತಿ ಇರಲಿಲ್ಲ

ಗೀಜಾ ಪಿರಮಿಡ್

ರಾಣಿ ಹಟ್‌ಶೆಪ್‌ಸುಟ್ ಕಟ್ಟಿಸಿದ ದೇವಾಲಯ

ಕಾಲಿಗೆ ಚಕ್ರ ಕಟ್ಟಿ ಸಾಧ್ಯವಾದಷ್ಟು ಪ್ರಪಂಚ ಸುತ್ತುವ ಬಯಕೆಯಿಂದ ಹೊರಟು ನಿಂತಾಗ ಮೊದಲು ತೋಚಿದ ದೇಶ ಈಜಿಪ್ಟ್. ನಾನು ಮತ್ತು ನನ್ನ ಪತ್ನಿ ಪ್ರಣೀತಾ ಈಜಿಪ್ಟಿನ ರಾಜಧಾನಿ ಕೈರೊಗೆ ಬಂದಿಳಿದಾಗ, ನಿಗದಿ ಮಾಡಿದ್ದ ಪ್ರವಾಸಿ ಕಂಪನಿಯ ಪ್ರತಿನಿಧಿ ನಮ್ಮನ್ನು ಸ್ವಾಗತಿಸಿ ಹೋಟೆಲಿನತ್ತ ಕರೆದೊಯ್ದ.

ಹತ್ತು ಕೋಟಿ ಜನಸಂಖ್ಯೆಯ ಈಜಿಪ್ಟ್ ದೇಶದ ಶೇ 20ರಷ್ಟು ಜನ ಕೈರೊ ನಗರದ ನಿವಾಸಿಗಳು! ಆದ್ದರಿಂದ ಕೈರೊದಲ್ಲಿ ಟ್ರಾಫಿಕ್ ಸಮಸ್ಯೆಯೂ ಹೆಚ್ಚು. ಆದರೆ ನಗರದೊಳಗೆ ಪ್ರಯಾಣಿಸುವಾಗ ಟ್ರಾಫಿಕ್ ಭಯಾನಕ ಎಂದೆನಿಸಲಿಲ್ಲ. ಬೆಂಗಳೂರಿನ ಟ್ರಾಫಿಕ್ ಕಂಡವರಿಗೆ ಕೈರೊ ಏನು ಮಹಾ!

ಮಧ್ಯಾಹ್ನದ ಊಟ ಮುಗಿಸಿ ಈಜಿಪ್ಟಿನ ಕೇಂದ್ರಬಿಂದು ಗೀಜಾ ಪಿರಮಿಡ್‌ಗಳ ಕಡೆಗೆ ಹೊರಟೆವು. ವಿಶ್ವದ ಏಳು ಅದ್ಭುತಗಳಲ್ಲಿ ಅತ್ಯಂತ ಹಳೆಯದು ಇದು. ಸುಮಾರು ನಾಲ್ಕೂವರೆ ಸಾವಿರ ವರ್ಷಗಳಿಂದ ಭವ್ಯವಾಗಿ ನಿಂತು ತನ್ನ ಮೊನಚಾದ ತುದಿಯಿಂದ ಆಕಾಶವನ್ನು ಚುಚ್ಚುವಂತೆ ಗೋಚರಿಸುವ ಈಜಿಪ್ಟಿನ ಪಿರಮಿಡ್‌ಗಳ ವೈಭವಕ್ಕೆ ಸಾಟಿಯಿಲ್ಲ. ನಿರ್ಮಾಣ ಸಮಯದಿಂದ ಮುಂದಿನ ಸುಮಾರು 3,800 ವರ್ಷಗಳವರೆಗೆ ಪ್ರಪಂಚದಲ್ಲಿ ಪಿರಮಿಡ್‌ಗಳಿಗಿಂತ ಎತ್ತರದ ಯಾವುದೇ ಮಾನವ ನಿರ್ಮಿತ ಭವನ/ಆಕೃತಿ ಇರಲಿಲ್ಲ.

ಕ್ರಿಸ್ತಪೂರ್ವ 26ನೇ ಶತಮಾನದಲ್ಲಿ ಈಜಿಪ್ಟಿನ ರಾಜ (ಫೆರೋ) ಖುಫು ಕಟ್ಟಿಸಿದ 'ಗೀಜಾ'ದ, 'ಮಹಾ' ಪಿರಮಿಡ್ 27ವರ್ಷಗಳಲ್ಲಿ ಪೂರ್ಣಗೊಂಡಿತು. ಈ ಮಹಾಪಿರಮಿಡ್ಡಿನ ನಿರ್ಮಾಣಕ್ಕೆ ಸುಮಾರು 20 ಲಕ್ಷಕ್ಕಿಂತಲೂ ಹೆಚ್ಚು ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ ಮತ್ತು ಇವುಗಳ ಒಟ್ಟು ತೂಕ 60 ಲಕ್ಷ ಟನ್‌ಗಳು. ಪ್ರತಿ ಕಲ್ಲಿನ ತೂಕ ಎರಡರಿಂದ ಮೂರು ಟನ್‌ಗಳು. ಪಿರಮಿಡ್ಡಿನ ಒಳಗಡೆ ಶವಪೆಟ್ಟಿಗೆಯ (ಮಮ್ಮಿ) ಸುತ್ತ ಸುಮಾರು 80 ಟನ್ ಭಾರದ ಕಲ್ಲುಗಳನ್ನು ಬಳಸಲಾಗಿದೆ. ಸುಣ್ಣದ ಕಲ್ಲು ಮತ್ತು ಗ್ರಾನೈಟ್‌ಗಳನ್ನು ದೂರದಿಂದ ತರಲಾಗಿದೆ. 4,500 ವರ್ಷಗಳ ಹಿಂದೆ ನೈಲ್ ನದಿ ಮತ್ತು ಮರಳುಗಾಡಿನ ಮೇಲೆ ಮಣಭಾರದ ಕಲ್ಲುಗಳನ್ನು ಸಾಗಿಸಿದ್ದ ಈಜಿಪ್ಟಿನ ಕೌಶಲ ಎಂತಹದಿದ್ದಿತು?

ಹಲವು ಶತಮಾನಗಳ ಕಾಲ ಪಿರಮಿಡ್‌ಗಳನ್ನು ಕಟ್ಟಿಸಿದ ಫೆರೋಗಳು ನಂತರ, ಪ್ರಾಯಶಃ ಗೋರಿಗಳನ್ನು ಲೂಟಿ ಮಾಡುವ ದರೋಡೆಕೋರರನ್ನು ದೂರವಿಡುವ ಉದ್ದೇಶದಿಂದ ಲಕ್ಸರ್ ಎಂಬಲ್ಲಿ ಪರ್ವತಗಳ ಒಳಗೆ ಹೊಸ ಗೋರಿಗಳನ್ನು ಕಟ್ಟಲು ಪ್ರಾರಂಭಿಸಿದರು. ಶುಷ್ಕ ಹವೆ, ಹವಾಮಾನ ವೈಪರೀತ್ಯ, ನೀರಿನ ಅಭಾವ- ಈ ಎಲ್ಲ ಕಾರಣಗಳಿಂದ ಕಳ್ಳರು ಗೋರಿಗಳನ್ನು ದೋಚಲು ಬರಲಾರರೆಂದು ಫೆರೋಗಳು ನಂಬಿದ್ದರು. ಲಕ್ಸರ್ ಸಮೀಪ ಇರುವ ಈ ಗೋರಿಗಳ ಸ್ಥಳಕ್ಕೆ 'ರಾಜರ ಕಣಿವೆ' ಅಥವಾ 'ಮೃತ ರಾಜರ ಕಣಿವೆ' ಎಂದು ಕರೆಯುತ್ತಾರೆ. ಬೆಟ್ಟಗಳನ್ನು ಕೊರೆದು ಸುರಂಗ ಮಾಡಿ ಒಳಗೆ ರಾಜರುಗಳಿಗೆ ಸಲ್ಲಬೇಕಾದ ಎಲ್ಲ ಗೌರವಗಳೊಂದಿಗೆ, ಅವರ ಮೃತದೇಹಗಳನ್ನು ಮಮ್ಮೀಕರಿಸಿ, ಜೊತೆಗೆ ಅವರ ಇಷ್ಟದ ವಸ್ತುಗಳು, ಆಹಾರ ಚಿನ್ನಾಭರಣಗಳನ್ನು ಇಡಲಾಗುತ್ತಿತ್ತು. ಈ ಗೋರಿಗಳನ್ನು ನೋಡುವುದು ಒಂದು ಮರೆಯಲಾಗದ ಅನುಭವ.

ಪ್ರಾಚೀನ ಈಜಿಪ್ಟಿನ ಫೆರೋ ರಾಜರು ಪುನರ್ಜನ್ಮದಲ್ಲಿ ನಂಬಿಕೆ ಹೊಂದಿದ್ದರು: ಫೆರೋಗಳ ಮರಣಾನಂತರ ಅವರು ಇನ್ನೊಂದು ಲೋಕಕ್ಕೆ ಹೋಗಲು ಅನುಕೂಲವಾಗುವಂತೆ ಪಿರಮಿಡ್‌ಗಳ ಒಳಗೆ ಅವರ ಶವಪೆಟ್ಟಿಗೆಯ ಜೊತೆಗೆ ಚಿನ್ನಾಭರಣಗಳು, ಪಾತ್ರೆ, ಕುರ್ಚಿ, ಮೃತ ವ್ಯಕ್ತಿಗೆ ಇಷ್ಟವಾದ ಅನ್ನ ಸಾಮಗ್ರಿಗಳನ್ನು ಇಡಲಾಗುತ್ತಿತ್ತು. ಪಿರಮಿಡ್ಡಿನ ಮೊನಚಾದ ತುದಿಯ ಮೂಲಕ ಮೃತ ರಾಜನ ಆತ್ಮ ನೇರವಾಗಿ ಆಕಾಶಕ್ಕೆ ಹೋಗಿ ಸ್ವರ್ಗ ಸೇರುವುದು ಎಂಬ ನಂಬಿಕೆ ಇತ್ತು. ಫೆರೋಗಳ ಮುಖ್ಯ ದೇವತೆ ಸೂರ್ಯ ಅಥವಾ 'ರಾ'. ಸೂರ್ಯ ಮುಳುಗುವಾಗ ಕತ್ತಲು ಅಥವಾ ಮರಣ: ಹಾಗಾಗಿ ಈಜಿಪ್ಟಿನ ಎಲ್ಲ ಪಿರಮಿಡ್‌ಗಳು (ಈಜಿಪ್ಟಿನಲ್ಲಿ ಒಟ್ಟು 118 ಪಿರಮಿಡ್‌ಗಳಿವೆ) ನೈಲ್ ನದಿಯ ಪಶ್ಚಿಮ ಭಾಗದಲ್ಲಿ. ಸೂರ್ಯ ಉದಯಿಸುವಾಗ ಬೆಳಕು, ಹೊಸ ಜೀವನ. ಆದ್ದರಿಂದ ಈಜಿಪ್ಟ್ ದೇವತೆಗಳ ಎಲ್ಲ ದೇವಾಲಯಗಳು ನೈಲ್ ನದಿಯ ಪೂರ್ವ ತಟದಲ್ಲಿ.

ಗೀಜಾ ಪಿರಮಿಡ್‌ಗಳ ಸಮೀಪದಲ್ಲೇ ಮನುಷ್ಯನ ತಲೆ ಮತ್ತು ಸಿಂಹ ಶರೀರದ ವಿಶ್ವಪ್ರಸಿದ್ಧ ಬೃಹತ್ ಸ್ಫಿಂಕ್ಸ್ ಮೂರ್ತಿಯಿದೆ. ಫೆರೋ ಖುಫುವನ್ನು ವೈಭವೀಕರಿಸಲು ಅವನ ಪ್ರತಿರೂಪವಾಗಿ ಪ್ರಾಯಶಃ ಅವನ ಅಥವಾ ಅವನ ವಂಶಜರು ನಿರ್ಮಿಸಿದ ಪ್ರತಿಮೆಯಿದು ಎಂದು ಇತಿಹಾಸಕಾರರ ನಂಬಿಕೆ.

ಬಾಲಕ ಯೇಸು, ಮೇರಿ ಮತ್ತು ಸಂತ ಜೋಸೆಫ್ 2,000 ವರ್ಷಗಳ ಹಿಂದೆ ಈಜಿಪ್ಟಿಗೆ ಬಂದಾಗ ಉಳಿದುಕೊಂಡಿದ್ದರು ಎನ್ನಲಾಗುವ ಸ್ಥಳದಲ್ಲಿ ಈಗ ಬಹಳ ಪ್ರಸಿದ್ಧವಾದ ಸಂತ ಸರ್ಜಿಯಸ್ ಇಗರ್ಜಿಯಿದೆ. ನಗರದ ಇಸ್ಲಾಂ ಕೈರೊ ಭಾಗದಲ್ಲಿ ಪುರಾತನ ಮಸೀದಿಗಳು ಮತ್ತು ಅರೇಬಿಯನ್ ನೈಟ್ಸ್ ಕತೆಗಳನ್ನು ನೆನಪಿಸುವ ಹೆಸರಾಂತ ಖಾನ್-ಎಲ್ ಖಲೀಲಿ ಸಂತೆಯಿದೆ.

ನಮ್ಮ ಮುಂದಿನ ನಿಲ್ದಾಣ ಕೈರೊದಿಂದ ಸುಮಾರು 650 ಕಿ.ಮೀ. ದೂರದಲ್ಲಿರುವ ಲಕ್ಸರ್. ರಾಜರ ಕಣಿವೆಯ ಇಬ್ಬರು ಫೆರೋಗಳ ಗೋರಿಗಳನ್ನು ನೋಡಿದ ಬಳಿಕ ಈಜಿಪ್ಟಿನ ಅತಿ ಪ್ರಸಿದ್ಧ ರಾಣಿ ಹಟ್‌ಶೆಪ್‌ಸುಟ್ ಕಟ್ಟಿಸಿದ ಮಂದಿರ ನೋಡಲು ಹೊರಟೆವು. ಈಜಿಪ್ಟಿನಲ್ಲಿ ಕೆಲವು ರಾಣಿಯರು ಹಟ್‌ಶೆಪ್‌ಸುಟ್‌ಗಿಂತ ಮೊದಲು ಮಹಿಳಾ ಫೆರೋ ಆಗಿ ರಾಜ್ಯಭಾರ ಮಾಡಿದ್ದರೂ, 21 ವರ್ಷಗಳ ಕಾಲ ಆಳ್ವಿಕೆ ನಡೆಸಿದ ಹಟ್‌ಶೆಪ್‌ಸುಟ್ ಎಲ್ಲರಿಗಿಂತ ಹೆಚ್ಚು ಪ್ರಖ್ಯಾತೆ. ಫೆರೋಗಳು ತಾವು ಅಧಿಕಾರ ವಹಿಸಿಕೊಂಡ ತಕ್ಷಣ ಪ್ರಾರಂಭ ಮಾಡುತ್ತಿದ್ದ ಕೆಲಸ - ತಮ್ಮ ಮರಣಾನಂತರದ ಗೋರಿಯ ಮತ್ತು ತಮ್ಮ ಹೆಸರು ಮತ್ತು ಘನತೆಯನ್ನು ಹೆಚ್ಚಿಸಲು ಭವ್ಯ ಮಂದಿರಗಳ ನಿರ್ಮಾಣ. ಈ ಭವ್ಯ ದೇಗುಲಗಳನ್ನು ಹೆಚ್ಚಾಗಿ ಫೆರೋಗಳ ಗೋರಿಯ ಸಮೀಪದಲ್ಲೇ ಕಟ್ಟಲಾಗುತ್ತಿತ್ತು. ಆದ್ದರಿಂದ ಈ ದೇವಾಲಯಗಳಿಗೆ 'ಅಂತ್ಯಸಂಸ್ಕಾರದ ದೇವಾಲಯ'(ಫ್ಯುನರರಿ ಟೆಂಪಲ್) ಎಂದೂ ಕರೆಯುತ್ತಾರೆ. ಮೂರು ಹಂತಗಳಲ್ಲಿ ಹಟ್‌ಶೆಪ್‌ಸುಟ್ ರಾಣಿ ಕಟ್ಟಿಸಿದ ಈ ಮಂದಿರ ಆ ಕಾಲದಲ್ಲಿ ಇಡೀ ಈಜಿಪ್ಟ್‌ನಲ್ಲೇ ಅತ್ಯಂತ ಭವ್ಯ ಮತ್ತು ಸುಂದರ ದೇವಾಲಯವಾಗಿತ್ತು.

ವಿಭಿನ್ನ ಫೆರೋಗಳು ಹಂತ ಹಂತವಾಗಿ ಕಟ್ಟಿಸಿದ ಲಕ್ಸರ್ ಮಂದಿರ, ಪುರಾತನ ಈಜಿಪ್ಟ್‌ನ ಅತಿ ದೊಡ್ಡ ದೇವಾಲಯ. ಸುಮಾರು ಇಪ್ಪತ್ತು ಅಡಿ ಉದ್ದದ 61 ಕಂಬಗಳ ಮೇಲೆ ಹಟ್‌ಶೆಪ್‌ಸುಟ್ ರಾಣಿಯ ಅಡಳಿತಾವಧಿಯ ಸಾಧನೆಗಳು, ಹಲವು ದೇವರ ಕತೆಗಳು ಹಾಗೂ ಧರ್ಮಾಚರಣೆಗಳನ್ನು ಕೆತ್ತಲಾಗಿದೆ.

ಲಕ್ಸರ್ ದೇಗುಲದ ಸಮೀಪದಲ್ಲೇ ಇರುವ ಇನ್ನೊಂದು ದೊಡ್ಡ ದೇಗುಲ ಸಂಕೀರ್ಣ ಕಾರ್ನಕ್. ಮೂವತ್ತಕ್ಕಿಂತಲೂ ಹೆಚ್ಚು ಫೆರೋಗಳು ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಕಟ್ಟಿಸಿದ ಈ ಬೃಹತ್ ದೇವಾಲಯದ ಮಧ್ಯಭಾಗದಲ್ಲಿ 50,000 ವರ್ಗ ಮೀಟರ್ ಅಳತೆಯ ಸಭಾಂಗಣ ಇದೆ. ಹಲವು ಕಡೆ ಪಾಳು ಬಿದ್ದಿರುವ, 20 ರಿಂದ 24 ಮೀಟರ್ ಎತ್ತರದ 134 ಕಂಬಗಳು ಸೂರನ್ನು ಎತ್ತಿ ಹಿಡಿದಿವೆ: ದೇಗುಲದ ಕಂಬಗಳ ಮೇಲೆ ಹಲವು ಫೆರೋಗಳ ಯುದ್ಧದ ದೃಶ್ಯಗಳು ಮತ್ತು ಧರ್ಮಾಚರಣೆಗಳನ್ನು ಕೆತ್ತಲಾಗಿದೆ: ಕಾರ್ನಕ್ ದೇಗುಲ ಸಂಕೀರ್ಣದಲ್ಲಿ ಅಮುನ್, ಮಟ್, ಮೊಂತು ಹೀಗೆ ಹಲವು ದೈವಗಳ ದೇವಾಲಯಗಳಿವೆ.

ಈಜಿಪ್ಟಿನಲ್ಲಿ ನಮ್ಮ ಕಡೆಯ ದಿನದ ಭೇಟಿ ಅರುವತ್ತು ವರ್ಷಗಳ ಕಾಲ ಸುದೀರ್ಘ ಆಡಳಿತ ನಡೆಸಿದ ಫೆರೋ, ಎರಡನೇ ರಾಂಸೀಸ್ ಕಟ್ಟಿಸಿದ 'ಆಬು ಸಿಂಬಲ್' ದೇವಾಲಯಕ್ಕೆ. ಕೈರೊದಿಂದ ದಕ್ಷಿಣಕ್ಕೆ ಸುಮಾರು 1,100 ಕಿ.ಮೀ. ದೂರದಲ್ಲಿರುವ ಆಬು ಸಿಂಬಲ್‌ನಲ್ಲಿ ಎರಡು ದೇವಾಲಯಗಳಿವೆ- ಅಮುನ್, ರಾ, ಟಾಃ ಎಂಬ ಪುರಾತನ ಈಜಿಪ್ಟಿನ ದೈವಗಳಿಗೆ ಕಟ್ಟಿಸಿದ ದೊಡ್ಡ ದೇವಾಲಯ. ಇದರಲ್ಲಿ ಎರಡನೇ ರಾಂಸೀಸ್‌ನನ್ನು ದೈವೀಕರಿಸಿ ಬಿಂಬಿಸಲಾಗಿದೆ. ಇನ್ನೊಂದು ದೇವತೆ ಹಾಗೂ ಮತ್ತು ಎರಡನೇ ರಾಂಸೀಸ್‌ನ ಮುಖ್ಯ ರಾಣಿ ನೆಫೆರ್ಟೀಟಿ ಎಂಬಾಕೆಗೆ ಕಟ್ಟಿಸಲಾದ ಸಣ್ಣ ದೇವಾಲಯ. ಈ ದೇವಾಲಯದ ಪ್ರವೇಶ ದ್ವಾರದಲ್ಲಿ ಎರಡನೇ ರಾಂಸೀಸ್‌ನ ವಿಗ್ರಹದ ಸಮೀಪದಲ್ಲಿ ಅಷ್ಟೇ ಎತ್ತರದ ನೆಫೆರ್ಟೀಟಿ ವಿಗ್ರಹ ಕೆತ್ತಲಾಗಿದೆ. ಈ ಎರಡೂ ವಿಗ್ರಹಗಳ ಮೇಲೆ ವರ್ಷದಲ್ಲಿ ಎರಡು ಬಾರಿ ಸೂರ್ಯನ ಕಿರಣಗಳು ಬೀಳುವಂತೆ ದೇಗುಲದ ದಿಕ್ಕನ್ನು ಹೊಂದಿಸಲಾಗಿದೆ. ಆದರೆ ಇವರ ಪಕ್ಕದಲ್ಲೇ ಇರುವ ಪಾತಾಳಲೋಕದ (ಅಥವಾ ಕತ್ತಲಲೋಕ) ದೈವ 'ಟಾಃ' ಮೇಲೆ ಬೆಳಕು ಬೀಳುವುದೇ ಇಲ್ಲ!


ಪುರಾತನ ಈಜಿಪ್ಟಿನ ದೇವ ದೇವತೆಗಳ ಕತೆಗಳೂ ನಮ್ಮಲ್ಲಿಯ ಕತೆಗಳಂತೆಯೇ ಮನರಂಜಿಸುತ್ತವೆ. ಇಲ್ಲಿ ಹೆಜ್ಜೆಹೆಜ್ಜೆಗೂ ಇತಿಹಾಸವಿದೆ, ಕತೆಗಳಿವೆ. ಫೆರೋಗಳ ಆಳ್ವಿಕೆಯ ಕುರುಹುಗಳಿಗಾಗಿ ಶೋಧ ಕಾರ್ಯಗಳು ಇನ್ನೂ ನಡೆಯುತ್ತಲೇ ಇವೆ. ಇತಿಹಾಸ ಪ್ರಿಯರು ತಪ್ಪದೇ ಭೇಟಿ ಕೊಡಬೇಕಾದ ದೇಶ ಈಜಿಪ್ಟ್.



ಕಾರ್ನಕ್ ಮಂದಿರ



ರಾಜರ ಕಣಿವೆಯ ಗೋರಿಯೊಳಗೆ ಗೋಡೆಯ ಮೇಲಿನ ಚಿತ್ರ.



ಅಬು ಸಿಂಬಲ್ ಮಂದಿರ

ಸ್ಫಿಂಕ್ ಮೂರ್ತಿ

ಮುನ್ನೋಟ 06-11-2022 ರಿಂದ 12-11-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಆರ್ಥಿಕ ಸ್ಥಿತಿಯಲ್ಲಿ ಕೊಂಚ ಏರುಪೇರಾದರೂ ದೈವಾನುಗ್ರಹದಿಂದ ನಿಶ್ಚಿತ ಆದಾಯಕ್ಕೆ ತೊಂದರೆ ಇರುವುದಿಲ್ಲ. ಸಂಪನ್ಮೂಲಗಳ ಅಭಿವೃದ್ಧಿಗಾಗಿ ಹಲವಾರು ದಾರಿಗಳನ್ನು ಹುಡುಕುವಿರಿ. ಮಹತ್ತರವಾದ ಯೋಜನೆಗಳನ್ನು ಆರಂಭಿಸಬೇಡಿರಿ. ಮಕ್ಕಳ ವಿಷಯದಲ್ಲಿ ಸ್ವಲ್ಪ ಬೇಸರ ಮೂಡಬಹುದು. ಸ್ತ್ರೀಯರಿಗೆ ಅಧಿಕ ದೈಹಿಕ ಶ್ರಮ ಆಗಬಹುದು. ಹಣದ ವಿಷಯದಲ್ಲಿ ದುಡುಕಿನ ಮಾತುಗಳು ಬೇಡವೇ ಬೇಡ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಅವಿವಾಹಿತರಿಗೆ ಕಂಕಣ ಬಲ ಒದಗುವ ಸಾಧ್ಯತೆ ಇದೆ. ಸಾಮಾಜಿಕ ಕೆಲಸಗಳನ್ನು ಮಾಡುವವರಿಗೆ ಜನಮನ್ನಣೆ ಒದಗಿಬರುತ್ತದೆ. ನಿಮ್ಮ ಸೌಮ್ಯ ನುಡಿಗಳು ಬಂಧುಗಳಲ್ಲಿ ಸಮಾಧಾನ ತರಬಹುದು. ಚಿನ್ನದ ಆಭರಣಗಳನ್ನು ಕಂತಿನ ರೂಪದಲ್ಲಿ ಕೊಳ್ಳುವ ಯೋಗವಿದೆ. ನೀವು ಅಂದುಕೊಂಡ ಕಾರ್ಯಗಳನ್ನು ಸಾಧಿಸಲು ಹಲವು ಮಾರ್ಗಗಳ ಹುಡುಕಾಟ ಮಾಡುವಿರಿ. ಆರ್ಥಿಕ ಸಂಕಷ್ಟ ಸ್ವಲ್ಪಮಟ್ಟಿಗೆ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಹಿರಿಯ ಉದ್ಯೋಗಸ್ಥರಿಗೆ ಹೊಸ ರೀತಿಯ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ. ಹಣದ ಒಳಹರಿವು ಸಮಾಧಾನ ತರುತ್ತದೆ. ವೃತ್ತಿರಂಗದಲ್ಲಿ ಸೂಕ್ತ ಬೆಳವಣಿಗೆಯನ್ನು ಕಾಣಬಹುದು. ಕೆಲವು ರಾಜಕಾರಣಿಗಳಿಗೆ ಸ್ಥಾನಮಾನ ಅನಿರೀಕ್ಷಿತವಾಗಿ ದೊರೆಯುತ್ತದೆ. ಗುತ್ತಿಗೆ ವ್ಯವಹಾರವನ್ನು ಮಾಡುತ್ತಿರುವವರಿಗೆ ವ್ಯವಹಾರದಲ್ಲಿ ಮುನ್ನಡೆ ಇರುತ್ತದೆ. ಮನೆಪಾಠ ಮಾಡುವವರ ಆದಾಯ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಬೇಕಾದ ಅನಿವಾರ್ಯವಿದೆ. ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣಿತರ ಹತ್ತಿರ ವಿಚಾರ ಮಾಡುವಿರಿ. ಸಂಗೀತ ಮತ್ತು ಇತರೆ ಲಲಿತಕಲೆಗಳಲ್ಲಿ ಇರುವವರಿಗೆ ಮನ್ನಣೆ ದೊರೆತು ಸಂತಸವಾಗುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧ ಒದಗಿಬರುವ ಸಾಧ್ಯತೆ ಇದೆ. ಬೇರೆಯವರ ಹಣಕಾಸಿನ ವಿಚಾರದಲ್ಲಿ ಮಧ್ಯಸ್ಥಿಕೆ ಮಾಡಲು ಹೋಗಬೇಡಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಯಾವುದೇ ಕೆಲಸವನ್ನು ಆತುರದಿಂದ ಮಾಡಬೇಡಿರಿ. ಶುಭಕಾರ್ಯಗಳಿಗಾಗಿ ದೂರ ಪ್ರಯಾಣದ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಹಿರಿಯರ ಸಲಹೆಗಳಿಂದ, ಬರಲಿದ್ದ ಗಂಡಾಂತರಗಳಿಂದ ಪಾರಾಗುವಿರಿ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿ ಇರುತ್ತದೆ. ಗೃಹ ನವೀಕರಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಿರಿ. ಹಳೆ ವಾಹನವನ್ನು ನವೀಕರಣಗೊಳಿಸುವಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮದೇ ಭಿನ್ನಾಭಿಪ್ರಾಯದಿಂದಾಗಿ ನಿಂತುಹೋಗಿದ್ದ ಕೆಲಸ ಈಗ ಆರಂಭಗೊಳ್ಳುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಇರುತ್ತದೆ. ಸಂಪತ್ತಿನಲ್ಲಿ ವೃದ್ಧಿಯನ್ನು ಕಾಣಬಹುದು. ಜಲ ಸಂಬಂಧಿ ಉದ್ಯೋಗದಲ್ಲಿರುವವರಿಗೆ ಅಭಿವೃದ್ಧಿ ಇರುತ್ತದೆ. ನಿಮ್ಮ ಕೆಲಸಗಳಿಗೆ ರಾಜಕೀಯ ವ್ಯಕ್ತಿಗಳಿಂದ ಕಿರಿಕಿರಿ ಆಗಬಹುದು. ನಿಮ್ಮ ಅಭಿವೃದ್ಧಿಗೆ ಪೂರಕವಾದ ಕೆಲವು ಅವಕಾಶಗಳು ಒದಗಿಬರುತ್ತವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಕೆಲವು ನಿಲುವುಗಳಲ್ಲಿ ಆಕಸ್ಮಿಕ ಬದಲಾವಣೆಗಳನ್ನು ಮಾಡಿ ಜನರ ಕೆಂಗಣ್ಣಿಗೆ ಗುರಿಯಾಗುವ ಸಾಧ್ಯತೆಗಳಿವೆ. ವೈದ್ಯಕೀಯ ಔಷಧ ಸಂಶೋಧಕರಿಗೆ ಉತ್ತಮ ಫಲಿತಾಂಶ ದೊರೆಯುತ್ತದೆ. ವೃತ್ತಿಯಲ್ಲಿ ಹೆಚ್ಚಿನ ಒತ್ತಡಗಳು ಇರುವುದಿಲ್ಲ. ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಕೆಲವು ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭವನ್ನು ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಕೆಲಸಕಾರ್ಯಗಳಲ್ಲಿ ಪ್ರಗತಿ ಇರುತ್ತದೆ. ಸಾಂಸಾರಿಕ ಜೀವನದಲ್ಲಿ ಸಾಕಷ್ಟು ಹೊಂದಾಣಿಕೆಯನ್ನು ಕಾಣುವ ಸಾಧ್ಯತೆಗಳಿವೆ. ಎದುರಾದ ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ಸಾಮರ್ಥ್ಯ ಬರಲಿದೆ. ಆರ್ಥಿಕ ಸ್ಥಿತಿಯಲ್ಲಿ ನಿರೀಕ್ಷಿತ ಚೇತರಿಕೆಯನ್ನು ಕಾಣಬಹುದು. ನಿಕಟವರ್ತಿಗಳಿಂದ ಸಹಾಯ ದೊರೆತು ಆತ್ಮಸ್ಥೈರ್ಯ ಹೆಚ್ಚುವುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಕುಟುಂಬದಲ್ಲಿ ಹೊಂದಾಣಿಕೆಯಿಂದ ಎಲ್ಲರ ಬೆಂಬಲಗಳಿಸುವಿರಿ. ವಿದ್ಯಾರ್ಥಿಗಳಿಗೆ ಮಂದಗತಿಯ ಪ್ರಗತಿ ಇರುತ್ತದೆ. ಸರ್ಕಾರಿ ಉದ್ಯೋಗಿಗಳಿಗೆ ಸ್ಥಾನಪಲ್ಲಟವಾಗುವ ಸಾಧ್ಯತೆ ಇದೆ. ನಿಮ್ಮ ಜೀವನಶೈಲಿಯನ್ನು ಬದಲಾವಣೆ ಮಾಡಿಕೊಳ್ಳಲು ಈಗ ಸಕಾಲ. ನಿರೀಕ್ಷಿತ ಮೂಲಗಳಿಂದ ಆದಾಯವಿರುತ್ತದೆ. ಆದರೆ ಆದಾಯದಷ್ಟೇ ಖರ್ಚು ಇರುತ್ತದೆ. ಶುಭಕಾರ್ಯಗಳನ್ನು ಮಾಡುವ ಉತ್ಸಾಹ ಬರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಿಶಾಲ ಮನೋಭಾವದಿಂದ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಕ್ಲಿಷ್ಟವಾದ ಕೆಲಸಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಸಾಧಿಸಿ ಪ್ರಶಂಸೆಗೆ ಒಳಗಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಸೂತ್ರಧಾರರಾಗಿ ಕೆಲಸ ಮಾಡುವವರಿಗೆ ಬೆಳವಣಿಗೆ ಇರುತ್ತದೆ. ಧನಾದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ನಿಮ್ಮ ಒಂದು ಹವ್ಯಾಸ ಸಂಪಾದನೆ ಮಾಡುವ ವೃತ್ತಿಯಾಗಿ ಬದಲಾಗಬಹುದು.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಚಿನ್ನದ ಸಗಟು ಆಭರಣ ತಯಾರಕರಿಗೆ ಲಾಭವಿರುತ್ತದೆ. ಧನಾದಾಯ ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಅನುಕೂಲವಿರುತ್ತದೆ. ಸರ್ಕಾರಿ ನೌಕರರಿಗೆ ವೃತ್ತಿಯಲ್ಲಿನ ಅಕಾಲಿಕ ಪ್ರಯಾಣದಿಂದ ಕಿರಿಕಿರಿಯಾಗುತ್ತದೆ ಮತ್ತು ಖರ್ಚು ಇರುತ್ತದೆ. ಕೃಷಿಕರಿಗೆ ಆದಾಯ ಹೆಚ್ಚುವ ಲಕ್ಷಣವಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸ್ನೇಹಿತರೊಂದಿಗೆ ಮುಕ್ತವಾಗಿ ಮಾತನಾಡುವುದರಿಂದ ಮನಸ್ಸಿನಲ್ಲಿ ಇದ್ದ ತಪ್ಪು ಕಲ್ಪನೆಗಳು ದೂರವಾಗಿ ಸಂಬಂಧ ಗಟ್ಟಿಯಾಗುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವ್ಯವಸಾಯದಲ್ಲಿನ ಅಭಿವೃದ್ಧಿಯಿಂದ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ವೃತ್ತಿಯಲ್ಲಿ ಅಧಿಕ ಒತ್ತಡಗಳನ್ನು ತಡೆದುಕೊಳ್ಳಬೇಕಾದ ಅನಿವಾರ್ಯವಿರುತ್ತದೆ. ಸ್ವಂತ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಪದಬಂಧ 2762



ಮೇಲಿನಿಂದ ಕೆಳಕ್ಕೆ

1. ನೀರು ತುಂಬಿದ ಮನೆಯಲ್ಲಿ ಬದುಕು 4
2. ಸದಾ ಎದುರು ನೋಡುವ ಪೊಲೀಸ್ ಅಧಿಕಾರಿ 4
3. ಗಜ ಗಾತ್ರವಿಲ್ಲದಿದ್ದರು ಬತ್ತಿಗೆ ಬೆಂಕಿ ಮುಟ್ಟಿಸಿದರೆ ಢಂ ಢಮಾರ್ 5
4. ವಿನಾಯಕ ಚೌತಿಗೆ ಮಧುರವಾದ ಸೀಭಕ್ಷ 5
7. ಗೆಡ್ಡೆಯ ಜೊತೆಗಿನ ಕಂದಮೂಲ 3
9. ಇದು ಅರಣ್ಯ ಗಾರ್ದಭ 4
11. ಮನೋಕಲ್ಪಿತ ಪದ್ಯ ಪ್ರಕಾರದ ಸಾಹಿತ್ಯಾಮೃತ 4
12. ಚೆನ್ನವೀರ ಸಂಯೋಗವಾದ ಕಣಿವೆಯಲ್ಲಿ ಕಂಡ ಕವಿ 3
13. ಸಂಕ್ರಾಂತಿ ಸಂಭ್ರಮದಲ್ಲಿ ಹಸುಗಳನ್ನು ಬೆಂಕಿ ದಾಟಿಸುವ ಪದ್ಧತಿ 5
14. ಕೊಡುಗೈ ಅರಸ ತಿಂಗಳ ಮೊದಲ ದಿನ ಕಾಣಿಸಿಕೊಳ್ಳುತ್ತಾನೆ 5
15. ಕಾಯಿಲೆ ಗುಣವಾಗಲು ತೆಗೆದುಕೊಳ್ಳುವ ಗುಳಿಗೆ ಔಷಧಿ 4
16. ಅಭಿನಯದಲ್ಲಿ ಒಂಭತ್ತು ಭಾವಗಳ ಮಿಶ್ರಣ 4

ಎಡದಿಂದ ಬಲಕ್ಕೆ

1. ಮಂದಿಯ ಒಳಗಿನ ಮಾತು ಇಂಗಿತ 4
3. ಮಹಾಸೋಮಾರಿ ಹೀಗೆ ಕಾಣುತ್ತಾನೆ 3
5. ಒಂದೇ ಘಳಿಗೆಗೆ ಬರುವ ಸಿಟ್ಟು 4
6. ಕೋಪ ಬಂದಾಗ ಮುಖ ಈ ಬಿಂದಿಗೆ ಗಾತ್ರದಲ್ಲಿ ಊದಿಕೊಳ್ಳುತ್ತದೆ 3
8. ಕಾಲಕ್ಕೆ ಸರಿಯಾಗಿ ಕೂಡಿ ಬಂದದ್ದು 4
10. ಚಲಾವಣೆ ಕಳೆದುಕೊಂಡಿರುವ ತುಕ್ಕು ಹಿಡಿದ ನಾಣ್ಯ 5
12. ತೋಳದ ಜಾತಿಗೆ ಸೇರಿದ ಕಿರಾತಕ ಗಾರ್ದಭ 5
15. ಮರ್ಯಾದೆಯೇ ಸಂಪತ್ತಾಗಿರುವ 4
17. ಅಗಲಿಕೆಯ ನೋವು ಹಾಡಗಿ ಹೀಗೆ 3
18. ರಾಜಕಾರಣಿಗಳ ಕಾರ್ಯಕ್ರಮವಾಗಿರುವ ಕಾಲ್ನಡಿಗೆಯ ಪ್ರಯಾಣ 4
19. ಸಮುದ್ರದಲ್ಲಿ ಎದ್ದ ಬಹು ದೊಡ್ಡ ಅಲೆ ಒಳ್ಳೆಯ ಹೆಸರುಪಡೆದಿದೆ 3
20. ಹದ್ದಿನ ಕಣ್ಣಿಗೆ ಕಾಣಿಸಬಹುದಾದ ಎಲ್ಲೆ ಹಿಂದುಮುಂದಾಗಿದೆ 4

(ಕಳೆದ ವಾರ ಕಣ್ತಪ್ಪಿನಿಂದ ಪದಬಂಧ-2762ರ ಚೌಕಗಳು ಬದಲಾಗಿದ್ದವು. ಈ ವಾರ ಸರಿಪಡಿಸಿ ಕೊಡಲಾಗಿದೆ)

ಕಣ್ಮಣಿಗಳು ಇವರೇ ನೋಡಿ...

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಅರೆ ಬರೆ ಗೆರೆಗಳಲ್ಲಿ ಕನ್ನಡದ ಕಣ್ಮಣಿಗಳು ಲೇಖನದೊಟ್ಟಿಗೆ ಪ್ರಕಟವಾದ ವ್ಯಂಗ್ಯಚಿತ್ರಗಳಿಗೆ 'ವಸ್ತು'ವಾದ ಕನ್ನಡದ ಕಣ್ಮಣಿಗಳು ಇವರು...

1. ಡಾ. ರಾಜ್‌ಕುಮಾರ್	2. ಕುವೆಂಪು	3. ಪುಟ್ಟಣ್ಣ ಕಣಗಾಲ್
4. ಶಿವರಾಮ ಕಾರಂತ	5. ಬೀಚಿ	6. ದ.ರಾ.ಬೇಂದ್ರೆ
7. ಕೆ.ಎಸ್.ನರಸಿಂಹಸ್ವಾಮಿ	8. ಪೂರ್ಣಚಂದ್ರ ತೇಜಸ್ವಿ	9. ತ್ರಿವೇಣಿ
10. ಕೆ.ಎಸ್.ನಿಸಾರ್ ಅಹಮದ್	11. ಜಿ.ಪಿ.ರಾಜರತ್ನಂ	12. ಡಿ.ವಿ.ಗುಂಡಪ್ಪ

ಶಾಸನಗಳು ಹಾಡುಗಳಾಗಿ...

10ನೇ ಪುಟದಿಂದ...

'ಉಳಿದ ದೊರೆಗಳಂತೆ ಅಶೋಕನು ಬಲಪ್ರಯೋಗ ಮತ್ತು ಯುದ್ಧವನ್ನು ಒಂದು ಕ್ರಮವಾಗಿ ಸೂಚಿಸುವುದಿಲ್ಲ. ಅದು ಆ ಕಾಲಘಟ್ಟದಲ್ಲಿ ಒಂದು ಅದ್ಭುತವಾದ ನಿಲುವು' ಎನ್ನುತ್ತಾರೆ ಇತಿಹಾಸತಜ್ಞೆ ರೋಮಿಲಾ ಥಾಪರ್. 'ಕಳಿಂಗದಲ್ಲಿ ಅಶೋಕ ನಿಜವಾಗಿಯು ಗೆದ್ದನೇ?' ಎಂದು ಶಾಸನವೊಂದರಲ್ಲಿ ಸಾರ್ವಜನಿಕವಾಗಿ ಸ್ವತಃ ಆ ದೊರೆ ಮಾಡಿಕೊಳ್ಳುವ ಪಶ್ಚಾತ್ತಾಪಭರಿತ ಆತ್ಮವಿಮರ್ಶೆ ಬೆರಗುಗೊಳಿಸುತ್ತದೆ. ಕೃಷ್ಣ ಹೇಳುವಂತೆ 'ಅದೊಂದು ಅದ್ಭುತವಾದ ಪೊಲಿಟಿಕಲ್ ಸ್ಟೇಟ್‌ಮೆಂಟ್.'

ಅಶೋಕ ಈ ನಾಡನ್ನು ಬಹುಧರ್ಮೀಯ, ಬಹುಭಾಷಿಕ, ಬಹುತ್ವದ ನೆಲೆಯಲ್ಲಿ ಗ್ರಹಿಸಿಕೊಂಡಿದ್ದ. 'ಸಮಾಜದ ಪರಿವರ್ತನೆಗೆ ನೈತಿಕತೆ ಆಧಾರವಾಗಬೇಕು, ಅನುಕಂಪ ಮತ್ತು ಕಕ್ಕುಲತೆಯೇ ಈ ಬದಲಾವಣೆಯ ಬುನಾದಿಯಾಗಬೇಕೆನ್ನುತ್ತಾನೆ ಆತ. ನಮ್ಮ ಇಂದಿನ ಹೆಚ್ಚಿನ ಹೋರಾಟಗಳಲ್ಲಿ ಈ ಎಲ್ಲ ವಿಚಾರಗಳ ಅನುರಣನವನ್ನು ಕಾಣಬಹುದು. ಇಂದು ನಾವೆಲ್ಲಾ ಅತಿಯಾದ ದ್ವೇಷ, ರೋಷದಲ್ಲಿ, ಬಹುತ್ವವನ್ನು ಮರೆತು ದ್ವಿತ್ವದಲ್ಲಿ ಯೋಚಿಸುತ್ತಿದ್ದೇವೆ. ಪರಸ್ಪರ ಒಬ್ಬರನ್ನೊಬ್ಬರು ಕೇಳಿಸಿಕೊಳ್ಳುತ್ತಲೇ ಇಲ್ಲ. ಜನನಾಯಕರು ಪ್ರಜೆಗಳ ನಡುವಿನ ಸಂವಹವನವೇ ಮರೆಯಾಗಿರುವ ಹೊತ್ತಿನಲ್ಲಿ ಅಶೋಕ ಹೇಳುವ ಈ ಮಾತುಗಳು ಮೌಲಿಕವೆನಿಸುತ್ತವೆ: 'ನನ್ನ ಪ್ರಜೆಗಳು ನನ್ನ ಮಕ್ಕಳು. ಅವರ ಕಲ್ಯಾಣಕ್ಕಾಗಿ ನಾನು ಹಂಬಲಿಸುತ್ತೇನೆ. ಅವರಿಗೆ ಸೂಕ್ತವಾದ ನ್ಯಾಯ ಒದಗಿಸುವುದಕ್ಕಿಂತ ದೊಡ್ಡ ಕೊಡುಗೆ ಇನ್ನಾವುದೂ ಇಲ್ಲ. ಧಮ್ಮವನ್ನು (ನ್ಯಾಯ) ಸಂಭ್ರಮಿಸಿ ಅದರಲ್ಲಿ ಭಾಗವಹಿಸುವುದಕ್ಕಿಂತ ದೊಡ್ಡದು ಮತ್ತಾವುದೂ ಇಲ್ಲ. ಸಾಮರಸ್ಯವೇ ಅತ್ಯಂತ ಶ್ರೇಷ್ಠ. ಹಾಗಾದರೆ ಸಾಮರಸ್ಯ ಅಂದರೇನು? ಧಮ್ಮವನ್ನು ಕುರಿತ ಚಿಂತನೆಗಳನ್ನು ಎಲ್ಲರೂ ಇಷ್ಟಪಟ್ಟು ಕೇಳಿಸಿಕೊಳ್ಳುವುದೇ ಸಾಮರಸ್ಯ.'

ತಾನು ಹೇಳುವುದೆಲ್ಲವೂ ಪ್ರಜೆಗಳಿಗೆ ಸುಲಭವಾಗಿ ಅರ್ಥವಾಗಬೇಕೆಂಬ ಉದ್ದೇಶ ಅಶೋಕನದು. ತನ್ನ ಶಾಸನಗಳನ್ನು ಆಯಾ ಪ್ರಾಂತ್ಯದ ಜನಕ್ಕೆ ಅರ್ಥವಾಗುವ ಭಾಷೆ, ಲಿಪಿಗಳಲ್ಲಿ ಬರೆಸಿ ಜನಪ್ರೀತಿ ಮೆರೆದಿದ್ದಾನೆ. ಸ್ಥಳೀಯವಾಗಿ, ಜನ ಅದನ್ನು ಓದಿ ಸ್ಪಂದಿಸಬೇಕೆನ್ನುವುದು ಅವನ ಉದ್ದೇಶ. ಉದಾಹರಣೆಗೆ ಪರ್ಷಿಯನ್ ಪ್ರಭಾವಕ್ಕೆ ಒಳಪಟ್ಟಿದ್ದ ಮನ್ಸೇರಾ ಮತ್ತು ಷಹಬಾಜ್‌ಘರಿ ಪ್ರದೇಶಗಳಲ್ಲಿ ಖರೋಷ್ಟಿ ಲಿಪಿಯನ್ನು ಬಳಸಿದ್ದಾನೆ. ಗ್ರೀಕರ ಪ್ರಭಾವಕ್ಕೆ ಒಳಪಟ್ಟಿದ್ದ ಗಾಂಧಾರದಲ್ಲಿ ಗ್ರೀಕ್ ಮತ್ತು ಅರ್ಮೇನಿಕ್ ಭಾಷೆ ಬಳಸಲಾಗಿದೆ. ಕಾಂದಹಾರ್‌ನಲ್ಲಿ ದೊರಕಿರುವ ಶಾಸನ ಗ್ರೀಕ್ ಭಾಷೆಯಲ್ಲಿದೆ.

ಒಂದು ನಾಡಿನಲ್ಲಿ ಸಂಘರ್ಷಕ್ಕೆ ಕಾರಣವಾಗಬಹುದಾದ ಎಲ್ಲಾ ಸೂಕ್ಷ್ಮ ವಿಚಾರಗಳನ್ನೂ ಅಶೋಕ ಅತ್ಯಂತ ವಿವೇಚನೆಯಿಂದ ಗಮನಿಸಿ ನಿಯಮಗಳನ್ನು ರೂಪಿಸಿದ್ದಾನೆ. ಈ ಶಾಸನಗಳಲ್ಲಿ ಪರಿಸರ, ಕಾಡುಗಳು ಮತ್ತು ವನ್ಯಮೃಗಳ ಸುರಕ್ಷೆ ಕುರಿತು ಹಲವಾರು ವಿಚಾರಗಳಿವೆ. ಪ್ರಾಣಿಗಳನ್ನು ಕೊಲ್ಲಬಾರದು ಎನ್ನುವ ಅಶೋಕನಿಗೆ ಮಾಂಸಾಹಾರ ಈ ಸಂಸ್ಕೃತಿಯ ಬೇರ್ಪಡಿಸಲಾಗದ ಭಾಗ ಎಂಬ ವಾಸ್ತವ ತಿಳಿದಿದೆ. ಅವನು ಅಹಿಂಸೆಯ ತತ್ವ ಮತ್ತು ಸಂಸ್ಕೃತಿಯ ನಡುವಿನ ಸಂಘರ್ಷವನ್ನು ಗಮನದಲ್ಲಿಟ್ಟುಕೊಂಡು ನಿಯಮಗಳನ್ನು ರೂಪಿಸಿದ್ದಾನೆ. ಹಾಗಾಗಿ ಒಂದು ವಿಶಾಲವಾದ ರಾಜಕೀಯ ಚರ್ಚೆಯ ಹಿನ್ನೆಲೆಯಲ್ಲಿ ಅಶೋಕನ ಶಾಸನಗಳು ಗಮನಾರ್ಹ.

ಅವನ ವಿಚಾರಗಳಲ್ಲಿ ಬಹಳಷ್ಟನ್ನು ಇಂದಿಗೂ ಪ್ರಯೋಗಕ್ಕೆ ಹಚ್ಚಬಹುದು. ಧರ್ಮನಿಷ್ಠವಾದ ಬದುಕು, ಅಸಮಾನತೆ ಮತ್ತು ಅಧಿಕಾರಕ್ಕೆ ಸಂಬಂಧಿಸಿದ ಘರ್ಷಣೆಗಳು ಅಶೋಕನಲ್ಲಿದ್ದವು. ಅವು ಈಗಲೂ ಇವೆ. ಅನುಕಂಪೆಯನ್ನು ತನ್ನ ಆಡಳಿತದ ನಿರ್ಣಾಯಕ ತತ್ವವಾಗಿ ಅಶೋಕ ಕಲ್ಪಿಸಿಕೊಂಡ. ಭಾರತದ ಸಂವಿಧಾನ ಮುಖ್ಯವಾಗುವುದು ಕೂಡ ಈ ಕಾರಣಕ್ಕೇ. ಅನುಕಂಪೆಯೆಂಬುದು ನಿರ್ಣಾಯಕ ತತ್ವವಾದಾಗ ಮಾತ್ರ ಸಮಾನತೆ ಮುಂತಾದಂತಹ ವಿಚಾರಗಳೆಲ್ಲವೂ ಮುನ್ನೆಲೆಗೆ ಬರುವುದಕ್ಕೆ ಸಾಧ್ಯ.

ಭಾರತದ ಪ್ರಾಚೀನ ಇತಿಹಾಸವನ್ನು ಒಂದು ರೀತಿಯ ನಿಗೂಢ ಆವರಿಸಿಕೊಂಡಿದೆ. ಈ ನಿಗೂಢದ ತೆರೆಯನ್ನು ಕಿತ್ತೆಸೆಯದಿದ್ದರೆ ಗತವನ್ನು ವೈಭವೀಕರಿಸಲಾಗುತ್ತದೆ. ಆಗ ಗತವನ್ನು ಪ್ರಶ್ನಿಸುವುದಕ್ಕೇ ಸಾಧ್ಯವಾಗುವುದಿಲ್ಲ. ಹಾಗಾಗಿ ಈ ನಿಗೂಢವನ್ನು ಇಲ್ಲವಾಗಿಸುವುದು ಕೂಡ ಈ ಯೋಜನೆಯ ಉದ್ದೇಶಗಳಲ್ಲಿ ಒಂದು ಎನ್ನುತ್ತಾರೆ ಕೃಷ್ಣ.

ಈ ಶಾಸನಗಳನ್ನು ಹಾಡಬೇಕೆಂದುಕೊಂಡಾಗ ಹಲವಾರು ಸವಾಲುಗಳು ಎದುರಾದವು. 'ಈ ಶಾಸನಗಳನ್ನು ಹಾಡುವುದಿರಲಿ, ಜೋರಾಗಿ ಓದಿರುವಂತಹ ಪೂರ್ವನಿದರ್ಶನಗಳೂ ಇರಲಿಲ್ಲ. ಜನಸಾಮಾನ್ಯರ ಭಾಷೆಯಾದ ಮಾಗಧೀ ಪ್ರಾಕೃತ ಸಂಸ್ಕೃತದಂತೆ ಸಾಹಿತ್ಯಕವಾಗಿ ಪರಿಷ್ಕೃತ ಭಾಷೆಯಲ್ಲ. ಹಾಗಾಗಿ ಪ್ರಾಕೃತದಲ್ಲಿ ಸ್ವರಗಳನ್ನು ದೀರ್ಘವಾಗಿ ಎಳೆಯುತ್ತಾರೆ. ಸಾಂಗೀತಿಕ ಭಾಷೆಯಾಗಿ ಅದನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ಆಧುನಿಕ ಯುಗದಲ್ಲಿ ಪ್ರಯೋಗಗಳು ನಡೆದೇ ಇರಲಿಲ್ಲ' ಎಂಬುದನ್ನು ಕೃಷ್ಣ ದಾಖಲಿಸಿದ್ದಾರೆ. ಆದರೆ, ಇದ್ಯಾವುದೂ ಅವರ ಉತ್ಸಾಹಕ್ಕೆ, ಬದ್ಧತೆಗೆ ಅಡ್ಡಿಯಾಗಲಿಲ್ಲ.

'ನನ್ನ ಗಾಢವಾದ ನಂಬಿಕೆಯೇನೆಂದರೆ ಇವುಗಳನ್ನು ಹಾಡುವುದು, ಮಾತನಾಡುವುದು, ಚರ್ಚಿಸುವುದು ಅಥವಾ ಶಾಲೆಯಲ್ಲಿ ಮಕ್ಕಳು ಅಶೋಕನನ್ನು ಕುರಿತು ಓದುವಾಗ ಈ ವಿಚಾರಗಳನ್ನು ಮುನ್ನೆಲೆಗೆ ತರುವುದರ ಮೂಲಕ ಬದಲಾವಣೆ ಖಂಡಿತಾ ಸಾಧ್ಯ' ಎಂದು ಅವರು ಹೇಳುತ್ತಾರೆ. ಆದರೆ, ನಾವೆಲ್ಲ ನಿರೀಕ್ಷಿಸುವಂತೆ ಇದು ರಾತ್ರೋರಾತ್ರಿ, ಪವಾಡದಂತೆ ನಡೆಯುವುದಿಲ್ಲ. ಉಪ್ಪಿನಕಾಯಿಯಂತೆ, ವಿಚಾರಗಳು ಊರಿಕೊಳ್ಳುವುದಕ್ಕೂ ಸ್ವಲ್ಪ ಸಮಯ ಬೇಕು. ಈ ತರಹದ ಗದ್ಯವನ್ನು ಹಿಂದೆಂದೂ ಹಾಡಿರದ ಕೃಷ್ಣ ಅವರಿಗೆ ಅದನ್ನು ಹಾಡುವಾಗ 'ಅಶೋಕನೊಡನೆ ಒಂದು ಭಾವನಾತ್ಮಕ ನಂಟು ಮೂಡಿತು. ಅದೊಂದು ಅಪೂರ್ವ ಅನುಭವ. ಅವನ ಮಾತುಗಳಲ್ಲಿರುವ ಯಾವುದೋ ಒಂದು ಅಂಶ ನನ್ನ ಮನಸ್ಸಿಗೆ ತುಂಬಾ ಹತ್ತಿರವೆನಿಸಿತು. ಹಾಡುವಾಗ ಅದು ಮತ್ತಷ್ಟು ಆಪ್ತವೆನಿಸಿತು. ಸಂಗೀತಗಾರನಾಗಿ ಯಾವುದನ್ನೇ ಹಾಡಬೇಕಾದರೂ ಅದರ ಜೊತೆಯಲ್ಲಿ ನಮಗೊಂದು ತಾದಾತ್ಮ್ಯ ಬೇಕು.'

ಶಾಸನಗಳನ್ನು ಹಾಡುವ ಯೋಜನೆಯನ್ನು ಸದ್ಯಕ್ಕೆ ಎರಡು ಕಂತುಗಳಲ್ಲಿ ರೂಪಿಸಿಕೊಂಡಿದ್ದಾರೆ. ಮೊದಲನೆಯ ಕಂತಿಗೆ ನಾಲ್ಕು ಶಾಸನಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಶೋಕನ ಚಿಂತನೆಯನ್ನು ಮರುಕಲ್ಪಿಸಿಕೊಳ್ಳಲು ಸಾಧ್ಯವಾಗುವಂತಹ ಪಠ್ಯವಿರುವ ಶಾಸನಗಳನ್ನೇ ಕೃಷ್ಣ ಆಯ್ಕೆ ಮಾಡಿಕೊಂಡಿದ್ದಾರೆ. ಇವುಗಳನ್ನು ಅವರು ಕಾಪಿ, ಶುಭಪಂತುವರಾಳಿ, ಮೋಹನ ಮತ್ತು ದೇಶ್ ರಾಗಗಳಲ್ಲಿ ಹಾಗೂ ಆದಿತಾಳ, ಚತುರಶ್ರ ಝಂಪೆ, ಮಿಶ್ರ ಛಾಪು ಮತ್ತು ಖಂಡ ಛಾಪು ತಾಳಗಳಲ್ಲಿ ಕ್ರಮವಾಗಿ ಪ್ರಸ್ತುತಪಡಿಸಿದ್ದಾರೆ. ಕೃಷ್ಣ ತಮ್ಮ ಮೊದಲ ಯೋಜನೆಯನ್ನು ಅಂಬೇಡ್ಕರ್ ಬೌದ್ಧ ಧರ್ಮ ಅಪ್ಪಿದ ದಿನ (ಅಕ್ಟೋಬರ್ 14ರಂದು) ಲೋಕಾರ್ಪಣೆ ಮಾಡಿದರು.

ಈ ಯೋಜನೆಯ ಎರಡನೆಯ ಕಂತನ್ನು ಈ ವರ್ಷದ ಸೆಪ್ಟೆಂಬರ್ 22ರಂದು ಲೋಕಾರ್ಪಣೆ ಮಾಡಿದರು. ಇವುಗಳು ಆಡಳಿತಕ್ಕೆ, ಅಧಿಕಾರಕ್ಕೆ, ಸಾಮರಸ್ಯಕ್ಕೆ, ಸಹನೆ ಮತ್ತು ಪ್ರೀತಿಗೆ ಸಂಬಂಧಿಸಿದಂತೆ ತುಂಬಾ ಪ್ರಮುಖವಾದ ಮತ್ತು ಹೆಚ್ಚು ಸೂಕ್ಷ್ಮವಾದ ವಿಚಾರಗಳನ್ನು ಮುನ್ನೆಲೆಗೆ ತರುತ್ತವೆ. ಅನುಕಂಪೆಯನ್ನು ತನ್ನ ಆಡಳಿತ ಬುನಾದಿ ಎಂದು ಭಾವಿಸಿದ ಅಶೋಕ ತನ್ನ ಆಡಳಿತವನ್ನು ವಿಮರ್ಶಿಸಿಕೊಂಡು, 'ನಾನು ಬಹಳ ಕಾಲದಿಂದ ಜನಗಳಿಗಾಗಿ ಏನನ್ನೂ ಮಾಡಿಲ್ಲ ಮತ್ತು ಅವರ ದನಿಗಳನ್ನು ಕೇಳಿಸಿಕೊಂಡಿಲ್ಲ. ನಾನು ಊಟ ಮಾಡುತ್ತಿದ್ದಾಗ, ವಿಶ್ರಮಿಸುತ್ತಿದ್ದಾಗ, ಮಲಗಿದ್ದಾಗ, ಸ್ನಾನಮಾಡುತ್ತಿದ್ದಾಗ, ಕೆಲಸ ಮಾಡುತ್ತಿದ್ದಾಗ ಅಥವಾ ತೋಟದಲ್ಲಿ ಅಡ್ಡಾಡುತ್ತಿದ್ದಾಗ ಹೀಗೆ ಯಾವಾಗ ಬೇಕಾದರೂ ಜನ ನನ್ನ ಬಳಿಗೆ ತಮ್ಮ ಅಹವಾಲುಗಳೊಡನೆ ಬರಲಿ. ಇದು ನನ್ನ ಆಜ್ಞೆ. ಎಲ್ಲೆಡೆ ಇರುವ ಜನಗಳಿಗಾಗಿ ನಾನು ಶ್ರಮಿಸುತ್ತೇನೆ. ಯುದ್ಧಗಳು, ಕೊಲ್ಲುವಿಕೆ, ಸಾವುಗಳು ಮತ್ತು ಸ್ಥಳಾಂತರಗಳು ಇವುಗಳಿಗಾಗಿ ನಾನು ಪಶ್ಚಾತ್ತಾಪ ಪಡುತ್ತಿದ್ದೇನೆ,' ಎನ್ನುತ್ತಾನೆ.

ಅಶೋಕ ವಿಶ್ವವಿದ್ಯಾನಿಲಯದ ಇತಿಹಾಸತಜ್ಞೆ ನವಜ್ಯೋತ್ ಲಾಹಿರಿ ಹೇಳುವಂತೆ ಅಶೋಕ ಸಾರ್ವಜನಿಕ ವಲಯದಲ್ಲಿ ತನ್ನ ಆಡಳಿತದ ಮೂಲಕ ಅತ್ಯಂತ ಪ್ರಜಾಸತ್ತಾತ್ಮಕ ರೀತಿಯಲ್ಲಿ ಜನರನ್ನು ತಲುಪಲು ಪ್ರಯತ್ನಿಸಿದ. ಇದು ಇಂದು ಆಗಲೇಬೇಕಾದ್ದಲ್ಲವೇ? ಅಶೋಕನ ತತ್ವಗಳನ್ನು ಮರುಕಲ್ಪಿಸಿಕೊಳ್ಳಲು ನಮಗೆ ಇದಕ್ಕಿಂತ ಸೂಕ್ತ ಕಾರಣ ಬೇಕೇ?


ದನಾನುರಾಗಿ ವೈದ್ಯರ ಅನುಭವ ಕಥನ

ಚಿದಾನಂದ ಸಾಲಿ

ಒಳನೋಟ

ಪಶುವೈದ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಕ್ಷೇತ್ರದಲ್ಲಿ ಎದುರಾದ ಮೂವತ್ತೂರು ವಿಶಿಷ್ಟ ಸಂದರ್ಭಗಳ, ಸವಾಲುಗಳ ರೋಚಕ ನಿರೂಪಣೆಯ ಬರಹಗಳ ಸಂಕಲನ ಡಾ. ಮಿರ್ಜಾ ಬಷೀರರ 'ಗಂಗೆ ಬಾರೆ ಗೌರಿ ಬಾರೆ'. ಮೊದಲ ಮತ್ತು ಕೊನೆಯ ಬರಹಗಳು ಮಾತ್ರ ಇಡಿಯಾಗಿ ಅವರ ಪತ್ನಿಯ ಕುರಿತಾಗಿವೆ. ಆದರೆ, ಆಳದಲ್ಲಿ ಅವೂ ಕ್ರಮವಾಗಿ ಸಮಾಜದಲ್ಲಿ ಪಶುವೈದ್ಯವೃತ್ತಿಯ ಬಗೆಗಿರುವ ಅನಾದರವನ್ನೂ ಉತ್ತಮ ಪಶುವೈದ್ಯರೆನಿಸಿಕೊಂಡವರ ಮನೆಯವರ ಔದಾರ್ಯ ಹಾಗೂ ತ್ಯಾಗಗಳ ಬಗ್ಗೆ ಅಭಿಮಾನವನ್ನೂ ಪ್ರಕಟಿಸುತ್ತ ಕೃತಿಯ ಚೌಕಟ್ಟಿಗೆ ಪೂರಕವಾಗಿಯೇ ದುಡಿದಿವೆ.

ಒಂದರ್ಥದಲ್ಲಿ ಈ ಕೃತಿಯು ಕತೆ, ಪ್ರಬಂಧ ಮತ್ತು ಆತ್ಮಕತೆಗಳನ್ನು ಹದವಾಗಿ, ಬಿಡಿಸಲಾಗದಂತೆ ಬೆಸೆದು ಹೆಣೆದಿರುವ ಒಂದು ವಿಶಿಷ್ಟ ವೃತ್ತಿಜೀವನದ ಅನುಭವಕಥನ. ಈ ಕೃತಿಯ ಎರಡು ಪ್ರಾಮುಖ್ಯತೆಗಳನ್ನು ಹೀಗೆ ಸೂತ್ರೀಕರಿಸಿ ಹಿಡಿಯಬಹುದೆನಿಸುತ್ತದೆ. ಒಂದು- ಇದು ಇಷ್ಟು ಸಮಗ್ರವಾಗಿ ಕಾಣಿಸುತ್ತಿರುವ ಪಶುವೈದ್ಯಲೋಕವು ಕನ್ನಡ ಸಾಹಿತ್ಯದಲ್ಲಿ ಈವರೆಗೆ ಪ್ರಾಸಂಗಿಕವಾಗಿಯಾದರೂ ಎಲ್ಲೂ ಬಂದೇ ಇರದಷ್ಟು ಅಜ್ಞಾತವೂ, ಅಪರೂಪವೂ ಆಗಿರುವಂಥ ಅನುಭವಲೋಕವಾಗಿರುವುದು. ಮತ್ತೊಂದು- ಈವರೆಗಿನ ಕನ್ನಡದ ಇತರೆ ವೃತ್ತಿಜೀವನದ ಅನುಭವಕಥನಗಳ ಸಾಲಲ್ಲಿಟ್ಟು ನೋಡಿದಾಗಲೂ ಅವೆಲ್ಲವುಗಳಿಗಿಂತ ಭಿನ್ನವಾಗಿ, ಅನನ್ಯವಾಗಿ ತನ್ನ ರುಚಿವೈಶಿಷ್ಟ್ಯವನ್ನು ಸಾಬೀತುಪಡಿಸಿರುವುದು.



ಪು: 240
₹300

ಗಂಗೆ ಬಾರೆ ಗೌರಿ ಬಾರೆ
ಲೇ: ಡಾ.ಮಿರ್ಜಾ ಬಷೀರ್
ಪ್ರ: ಬಹುರೂಪಿ
ಸಂ: 7019182729

ಇಲ್ಲಿನ ಒಟ್ಟೂ ಬರಹಗಳಲ್ಲಿ ಪಶುವೈದ್ಯ ಬಷೀರರದೇ ಮೇಲುಗೈಯಾಗಿ ಒಂದೆರಡು ಬರಹಗಳು ಮಾತ್ರ ಪ್ರಸಂಗ ನಿರೂಪಣೆಯ ಹಂತದಲ್ಲಿ ಉಳಿದುಬಿಟ್ಟಿವೆ. ಇನ್ನುಳಿದಂತೆ ಕೇವಲ ವೈನೋದಿಕ ಪ್ರಸಂಗಗಳಾಗಬಹುದಾಗಿದ್ದ ಈ ಬಹುತೇಕ ಅನುಭವಗಳಲ್ಲಿ ಕತೆಗಾರ ಬಷೀರರು ತಮ್ಮ ಕಥನಪ್ರತಿಭೆಯಿಂದ ರಕ್ತ ಮಾಂಸ ತುಂಬಿ ಪ್ರಾಣಪೋಷಣೆ ಮಾಡಿದ್ದಾರೆ. ಒಂದು ಬಿಂದುವಿನಿಂದ ಪ್ರಾರಂಭವಾದ ಬರಹವು ವೃತ್ತಾಕಾರವಾಗಿ ಚಲಿಸಿ ಮತ್ತದೇ ಬಿಂದುವಿಗೆ ಬಂದು ತಲುಪಿ ಒಂದು ಪೂರ್ಣ ಕಥನಾನುಭವ ಒದಗುವಂತೆ ಇವುಗಳನ್ನು ನಿರೂಪಿಸಿರುವ ರೀತಿಯಂತೂ ಆಪ್ಯಾಯಮಾನವಾಗಿದೆ.

ಗಮನಾರ್ಹವಾದ ಮತ್ತೊಂದು ಅಂಶವೆಂದರೆ, ಇಡೀ ಕೃತಿಯಲ್ಲಿ ಡಾ. ಲೇಶಣ್ಣ, ಡಾ. ಸುನೀಲ್‌ಚಂದ್ರ, ಬೆಟ್ಟಯ್ಯರನ್ನು ಬಿಟ್ಟರೆ ನೌಕರಶಾಹಿ ಜಂಜಾಟಗಳು ಮತ್ತು ಸಂಘ-ಸಂಸ್ಥೆ-ಮಾಧ್ಯಮಗಳಂಥ ಒತ್ತಡ ಗುಂಪುಗಳ ಮಧ್ಯಪ್ರವೇಶಗಳ ಪ್ರಸ್ತಾಪವೇ ಇಲ್ಲದಿರುವುದು. ಅಧಿಕಾರಿ ದರ್ಜೆಯ ನೌಕರರಾದ ಪಶುವೈದ್ಯರಿಗೆ ಸಾಮಾನ್ಯವಾಗಿ ಸಮುದಾಯದ ಇತರೆ ಈ ಎಲ್ಲ ಭಾಗೀದಾರರೊಂದಿಗೆ ಅನಿವಾರ್ಯ ಸಂಬಂಧವಿದ್ದೇ ಇರುತ್ತದೆ. ಇವೆಲ್ಲ ಸೇರಿ ಸೂಚಿಸುತ್ತಿರುವುದೇನೆಂದರೆ, ಲೇಖಕರಿಗೆ ದನಗಳ ಮನದ ಮುಂದೆ ಜನಗಳ ಮನ ಗೌಣವೆನಿಸಿರಬಹುದು. ದನಾನುರಾಗಿಯಾದ ಅವರಿಗೆ ಬ್ಯಾಂಡ್ಸೆಟ್ ಹುಚ್ಚಯ್ಯ, ಅಮಾಸೇಗೌಡ, ಪುಷ್ಪಕ್ಕ, ಮುಂಡುಪ್ವಾಡಿ ಗಿರೀಶ, ರಾಮಾ ಜೋಯಿಸ, ನಾಣ್ಯಪ್ಪ ಪೂಜಾರಿ ಮುಂತಾದ ದನಸೇವಕರೇ ಮುಖ್ಯರೆನಿಸಿರುವುದು.

ಲೇಖಕರಲ್ಲದ ಪಶುವೈದ್ಯರು, ಲೇಖಕರಾಗಿದ್ದೂ ಜೀವನದ ಪ್ರತಿಯೊಂದರಲ್ಲೂ ಒಳ್ಳೆಯದನ್ನೇ ಕಾಣುವ ಮತ್ತು ಸ್ವೀಕರಿಸುವ ಗುಣವಿರದ ಪಶುವೈದ್ಯರು ಬರೆದಿದ್ದರೆ ಈ ಕೃತಿಯ ಸ್ವರೂಪ ಹೀಗಿರುತ್ತಿರಲಿಲ್ಲ. ಅಸಹಾಯಕತೆ, ಸ್ವಮರುಕ, ಪಾಪಪ್ರಜ್ಞೆ, ಆತ್ಮಪ್ರಶಂಸೆ, ವೃತ್ತಿಬದ್ಧತೆ ಮತ್ತು ಪಶುವೈದ್ಯಕೀಯ ಜ್ಞಾನಗಳು ಎಲ್ಲೂ ಅಂಕೆ ಮೀರದಂತೆ ಅಂಕುಶ ಹಾಕುತ್ತ ತನ್ನ ಕುರೂಪವನ್ನೂ ಕಾಣಿಸುವ ರಾಜಹಾಸ್ಯ ಮತ್ತು ಎಲ್ಲೆ ಮೀರದ ಪರಹಾಸ್ಯಗಳ ವಿಶಾಲವಾದ, ಘನವಾದ ಲೋಕದೃಷ್ಟಿಯಲ್ಲಿ ಅತ್ಯಂತ ಎಚ್ಚರದಿಂದ ಈ ಬರಹಗಳನ್ನು ಮುನ್ನಡೆಸಿದ್ದಾರೆ ಲೇಖಕರು. ಇದರಿಂದ ಇಡೀ ಕೃತಿ ಒಂದು ಸಮೃದ್ಧ ಓದಿನ ಅನುಭವ ನೀಡುವ ಸಜೀವ ಕಲಾಕೃತಿಯಾಗಿ ಮೈದಳೆದಿದೆ.

ಪಾರಿಭಾಷಿಕ ಪದಗಳ ಭಾರದಲ್ಲಿ ನಜ್ಜುಗುಜ್ಜಾಗಿಸದೆ ಒಂದು ಜ್ಞಾನಶಿಸ್ತನ್ನು ಹೀಗೆ ಲೋಕಾನುಭವದ ಪಾಕದಲ್ಲಿ ಅದ್ದಿ ಆಸಕ್ತಿಕರ ಪಠ್ಯವಾಗಿ ಮಾರ್ಪಡಿಸಿ ವಿದ್ಯಾರ್ಥಿಗಳಿಗೆ ಕೊಡಲು ಸಾಧ್ಯವೆಂಬುದನ್ನು ಈ ಕೃತಿಯು ನಿರೂಪಿಸಿದೆ. ಪಶುವೈದ್ಯಕೀಯ ವಿದ್ಯಾರ್ಥಿಗಳು, ಅಲ್ಲಿನ ಅಧ್ಯಾಪಕರು, ಕೃಷಿ ಮತ್ತು ಹೈನುಗಾರಿಕೆಯಲ್ಲಿ ಆಸಕ್ತಿಯಿರುವವರು, ಗೃಹಿಣಿಯರು, ಅಷ್ಟೇಕೆ ಸಾಹಿತ್ಯದ ಗಂಭೀರ ಪ್ರಕಾರಗಳ ಓದಷ್ಟೇ ನಿಜವಾದ ಓದೆಂಬ ಆಧುನಿಕ ಮೂಢನಂಬಿಕೆಯಲ್ಲಿರುವ ಸಾಹಿತ್ಯಾಭ್ಯಾಸಿಗಳು ಒಮ್ಮೆ ಕುತೂಹಲಕ್ಕಾದರೂ ಓದಿ ನೋಡಬೇಕು.

ಅನ್ಯ ಜ್ಞಾನಶಿಸ್ತುಗಳನ್ನು ಅವುಗಳ ಆಳವಿವರಗಳೊಟ್ಟಿಗೇ ಕಟ್ಟಿಕೊಡುವ ವಿಷಯಾಂಶ, ಚೇತೋಹಾರಿಯಾದ ಲವಲವಿಕೆಯ ಭಾಷೆಯಲ್ಲಿ ಅವುಗಳನ್ನು ದಾಟಿಸುವ ಶೈಲಿ ಮತ್ತು ಅಗೋಚರ, ಅಗಮ್ಯ, ಅಗ್ರಾಹ್ಯ, ಅಮುಖ್ಯವೆಂಬಂತಿರುವ ಸಂಗತಿಗಳಲ್ಲಿ ಅಡಗಿರುವ ಜೀವನತತ್ವವನ್ನು ಹಿಡಿದೆತ್ತಿ ತೋರುವ ಅಧ್ಯಾತ್ಮಗಳನ್ನು ಮುಪ್ಪುರಿಗೊಳಿಸಿಕೊಂಡಿರುವ ಬರಹಗಳ ಸಂಖ್ಯೆ ಕನ್ನಡದಲ್ಲಿ ಅಷ್ಟಿಲ್ಲ. ಆ ಮಾದರಿಯ ಕೃತಿಗಳಾದ ಬಿಜಿಎಲ್ ಸ್ವಾಮಿಯವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ', ಹಾರ್ನಳ್ಳಿ ರಾಮಸ್ವಾಮಿಯವರ 'ಮೈ ಲಾರ್ಡ್', ಎಸ್. ವಿ.ಶ್ರೀನಿವಾಸರಾಯರ 'ರಂಗಣ್ಣನ ಕನಸಿನ ದಿನಗಳು', ತೇಜಸ್ವಿಯವರ 'ಪರಿಸರದ ಕತೆಗಳು', ನಾಗೇಶ ಹೆಗಡೆಯವರ 'ಇರುವುದೊಂದೇ ಭೂಮಿ'ಗಳ ಸಾಲಿಗೆ ಸೇರುತ್ತದೆ ಈ ಕೃತಿ. ಗುಜ್ಜಾರಪ್ಪನವರ ರೇಖಾಚಿತ್ರಗಳು ಮತ್ತು ಸಾಗರ್ ಅವರ ಪುಟವಿನ್ಯಾಸ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.

ಭಿನ್ನ ಅನುಭವಲೋಕದ ಅನಾವರಣ

ದೇವು ಪತ್ತಾರ

ಅವಲೋಕನ


ವೃತ್ತಿಯಿಂದ ಸಿವಿಲ್ ಎಂಜಿನಿಯರ್ ಆಗಿರುವ ಕತೆಗಾರ ಕರ್ಕಿ ಕೃಷ್ಣಮೂರ್ತಿ ಅವರ ಕತೆಗಳ ಮೂರನೇ ಸಂಕಲನವಿದು. ಈ ಸಂಕಲನಕ್ಕೂ ಮುನ್ನ ಅವರು 'ಮಳೆ ಮಾರುವ ಹುಡುಗ' ಮತ್ತು 'ಗಾಳಿಗೆ ಮೆತ್ತಿದ ಬಣ್ಣ' ಎನ್ನುವ ಎರಡು ಸಂಕಲನಗಳನ್ನು ಪ್ರಕಟಿಸಿದ್ದರು. ಈ ಸಂಕಲನದಲ್ಲಿ ಒಟ್ಟು ಎಂಟು ಕತೆಗಳಿವೆ. ಅವು ಒಂದಕ್ಕಿಂತ ಮತ್ತೊಂದು ಭಿನ್ನವಾದ ಅನುಭವ ಲೋಕವನ್ನು ಅನಾವರಣ ಮಾಡುತ್ತವೆ ಎನ್ನುವುದು ವಿಶೇಷ.

ಈ ಕತೆಗಳನ್ನು 'ಬರೆದ ಕತೆಗಳು' ಮತ್ತು 'ಬರೆಸಿಕೊಂಡ ಕತೆಗಳು' ಎಂದು ವಿಭಾಗಿಸಿಕೊಳ್ಳಬಹುದು. ಕತೆಗಾರ ತನ್ನ ಒಳಗೆ ಮೊಳಕೆಯೊಡೆದು ಹುಟ್ಟಿ ಕಾಪಿಟ್ಟು ಕಾದು ಕತೆಯಾಗಿಸಿದ ಕತೆಗಳನ್ನು ಬರೆಸಿಕೊಂಡ ಕತೆಗಳು ಎನ್ನಬಹುದಾದರೆ, ಕತೆಗಾರನ ಕತೆ ಹೇಳುವ ಹಂಬಲಕ್ಕಾಗಿ ರಚನೆಯಾದ ಕತೆಗಳನ್ನು ಬರೆದ ಕತೆಗಳು ಎನ್ನಬಹುದು. ಈ ಎರಡೂ ಬಗೆಯ ಕತೆಗಳು ಈ ಸಂಕಲನದಲ್ಲಿವೆ.

ಹಾಗೆಂದರೆ ಮೊದಲನೆಯ ಗುಂಪಿಗೆ ಸೇರಿದ ಕತೆಗಳು ಯಶಸ್ವಿ ಎಂದಾಗಲಿ, ಎರಡನೆಯ ಗುಂಪಿಗೆ ಸೇರಿಸಿದ ಕತೆಗಳು 'ಸಾಧನೆ'ಯ ದೃಷ್ಟಿ ಕಡಿಮೆ ಎಂದಾಗಲಿ ಅಲ್ಲ. ಹಾಗಿದ್ದರೆ ಈ ವರ್ಗೀಕರಣ ಏಕಾಗಿ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. 'ತೀವ್ರತೆ' ಹಾಗೂ ಬಹು ಆಯಾಮದ ಓದಿಗೆ ಅನುವು ಮಾಡಿಕೊಡುವುದು, ಕತೆಗಳು ಓದುಗನನ್ನು ತನ್ನೊಳಗೇ ಸೆಳೆದುಕೊಂಡು ತಾನೂ ಬೆಳೆಯುತ್ತ ಹೋಗುವುದು. ಓದಿನ ಸುಖ ಹೆಚ್ಚಿಸುವ ಕತೆಗಳ ಸಂಖ್ಯೆ ಹೆಚ್ಚಿರುವುದು ವಿಶೇಷ. ಇನ್ನೊಂದು ವರ್ಗದಲ್ಲಿ 'ಕತೆಗಳಿವೆ'. ಅವು ಕೇವಲ ಕತೆಗಳಾಗಿವೆ. ಅದಕ್ಕಿಂತ ಹೆಚ್ಚಿನ ಜಿಗಿತ ಸಾಧ್ಯವಾಗಿಲ್ಲ. ಒಬ್ಬ ಕತೆಗಾರನ ಎಲ್ಲ ಕತೆಗಳ ಯಶಸ್ಸು ಏಕರೂಪಿಯಾಗಿರಬೇಕು ಎಂದೇನಿಲ್ಲ. ಹಾಗೆ ಇರಲಾರದು ಎನ್ನುವುದು ಸೃಷ್ಟಿ ಕ್ರಿಯೆಯ ವಿಶೇಷ. ಕತೆಗಾರನನ್ನು ಮೀರಿ ಕತೆಗಳು ಬೆಳೆಯುತ್ತ ಹೋಗುವುದೇ ಹೀಗೆ.

ಎಂಟೂ ಕತೆಗಳು ನಡೆಯುವ ನೆಲ ವಿದೇಶ. ಕತೆಗಾರರೇ ಕರೆದುಕೊಂಡಂತೆ ಇಲ್ಲಿರುವ 'ವಿದೇಶಿ ನೆಲದ ಕತೆಗಳು' ಕೇವಲ ವಸ್ತುವಿನ ಕಾರಣಕ್ಕಾಗಿ ವಿದೇಶಿ ಅಷ್ಟೇ. ಆದರೆ, ಅವು ಮಿಡಿಯುವ ಸಂವೇದನೆ ಮಾನವೀಯ. ಇದೇ ಕಾರಣಕ್ಕಾಗಿ ಅವು ನಾವೇ ಕಟ್ಟಿಕೊಂಡ ಗಡಿಗಳನ್ನು ಮೀರುತ್ತವೆ. ಕತೆ ನಡೆಯುವ ನೆಲ ವಿದೇಶವಾಗಿದ್ದರೂ ಅವು ಕಟ್ಟುವ ಸೊಗಸಾದ ಕ್ರಮದಿಂದಾಗಿ 'ವಿದೇಶಿ' ಆಗುವುದಿಲ್ಲ. ಹಾಗೆ ನೋಡಿದರೆ ಅವು ಯಾವುದೇ ನೆಲದಲ್ಲಾದರೂ ಸಂಭವಿಸಬಹುದಾದವು. ಹೀಗಾಗಿ ವಿದೇಶಿ ನೆಲದಲ್ಲಿ ನಡೆಯುವುದು ಕತೆಗಾರರು ಕತೆಗಳನ್ನು ಚೆಂದಗಾಣಿಸುವುದಕ್ಕೆ ಬಳಸಿದ ತಂತ್ರ. ಅದು ಕೇವಲ ತಂತ್ರವಾಗಿ ಬಳಕೆಯಾಗಿಲ್ಲ. ಅದು ಕತೆಗಳ ಸಾವಯವ ಗುಣವೇ ಆಗಿದೆ. ಹೀಗಾಗಿಯೇ ಈ ಕತೆಗಳಿಗೆ ಕಾಲಾತೀತವಾಗುವ ಗುಣ ಲಭಿಸಿದೆ.

ಸಂಕಲನದ ಮೊದಲ ಕತೆಯಾಗಿ ಪ್ರಕಟವಾಗಿರುವ 'ಅದು ಹಾಗೇ' ಗಮನ ಸೆಳೆಯುವುದು ಮನುಷ್ಯಲೋಕದ ಸಂಕೀರ್ಣ ಸಂಗತಿಗಳನ್ನು ಸೊಗಸಾಗಿ ದಾಖಲಿಸುವ ಕಾರಣದಿಂದಾಗಿ. ಅಲ್ಲಿ ಬಳಸಿರುವ ಭಾಷೆ ಕಟ್ಟುವ ಕ್ರಮ ಹಾಗೂ ನಿರ್ವಹಿಸಿದ ರೀತಿ ಅದ್ಭುತ ಎನ್ನುವಷ್ಟು ಚೆನ್ನಾಗಿವೆ. ಈ ಸುದೀರ್ಘ ಕತೆಯು ಕತೆಗಾರರ ಯಶಸ್ಸಿನ ದ್ಯೋತಕದಂತಿದೆ. ಚೀನಾದ ಮಹಾಗೋಡೆ ನೋಡಲು ಹೋದ ನಾಯಕ ನೋಡಿಯೂ ನೋಡದೇ ಬರುವುದು, ಕಂಡರೂ ಕಾಣಿಸದೇ ಇರುವ ಆದರೆ ನೋಡಬಯಸುವ ಹುಡುಕಾಟವನ್ನು ಹಿಡಿದಿಟ್ಟ ಕ್ರಮ ವಿಶಿಷ್ಟ. 'ಬಂದರ್ ಎ ಅಬ್ಬಾಸ್' ಕೂಡ ಇದೇ ಸಾಲಿನಲ್ಲಿ ನಿಲ್ಲುವ ಕತೆ.



ಪು: 152
₹175

ದಿಬ್ಬದಿಂದ ಹತ್ತಿರ ಆಗಸಕ್ಕೆ
ಲೇ: ಕರ್ಕಿ ಕೃಷ್ಣಮೂರ್ತಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಸಂ: 9019190502

'ಕಾಣದ ಗೆರೆಗಳು' ಮತ್ತು 'ಸಮಾಧಿ ಶಿವು' ಕತೆಗಳು ಕಾರ್ಪೊರೇಟ್ ಲೋಕದ ಕ್ರೌರ್ಯವನ್ನು ಹೇಳುವುದರ ಜೊತೆಗೆ ಮನುಷ್ಯ ಸಹಜ ಸಣ್ಣತನವನ್ನೂ ದಾಖಲಿಸುತ್ತವೆ. 'ಸಮಾಧಿ ಶಿವು' ನೇರವಾಗಿ ಎಲ್ಲವನ್ನೂ ಹೇಳಿ ಬಿಡುವ ಕತೆಯಾದರೆ 'ಕಾಣದ ಗೆರೆಗಳು' ಸಂಕೀರ್ಣವಾಗಿದೆ.

ಮನುಷ್ಯ ಸಹಜ ಹುಡುಕಾಟ, ಕುತೂಹಲಗಳು ಪಡೆದುಕೊಳ್ಳುವ ತೀವ್ರತೆಯ ಸ್ವರೂಪವನ್ನು ದಾಖಲಿಸುವ 'ತುದಿ'ಯ ವಸ್ತು ಅಪರೂಪದ್ದು. ಅದರ ವಿವರಗಳು ಓದುಗನಲ್ಲಿ ಆಸಕ್ತಿ ಹುಟ್ಟಿಸಲು ಕಾರಣವಾಗುವುದರ ಜೊತೆಗೆ ಅದು ಬಿಚ್ಚಿಕೊಳ್ಳುತ್ತ ಹೋಗುವ ಕ್ರಮ ಪ್ರಿಯವಾಗುವ ಹಾಗಿದೆ. ಗಾತ್ರದಲ್ಲಿ ಅಕ್ಷರಶಃ ಸಣ್ಣಕತೆಗಳಾಗಿರುವ 'ಕಾಯುವ ಕಾಯಕ' ಮತ್ತು 'ಸನ್ನೆ'ಗಳು ಹೇಳುವುದಕ್ಕಾಗಿ ಬರೆದ ಕತೆಗಳು ಅನ್ನಿಸದೇ ಇರದು. ಅವುಗಳ ಉದ್ದೇಶವೇ ಸರಳ ಮತ್ತು ನೇರ ಆಗಿದೆ.


'ಜಂಜಿ ಡಪಾತಿ' (ಕೊಟ್ಟ ಭರವಸೆ ಈಡೇರಿಸಲಾಗಿದೆ) ಕತೆಯನ್ನು ಆಧರಿಸಿ ಲೇಖಕರು 'ಚುಕ್ಕಿ ಬೆಳಕಿನ ಜಾಡು' (2020) ಎಂಬ ಕಾದಂಬರಿಯನ್ನು ಪ್ರಕಟಿಸಿದ್ದರು. ಈ ಸಂಕಲನದ ಕತೆಗಳು ಒಂದು ಮತ್ತೊಂದಕ್ಕಿಂತ ಭಿನ್ನವಾಗಿವೆ. ಅದು ವಸ್ತುವಿನ ದೃಷ್ಟಿಯಿಂದ ಮಾತ್ರವಲ್ಲ. ಅವು ನಡೆಯುವ ನೆಲ ಭಿನ್ನವಾಗಿರುವ ಹಾಗೆಯೇ ಬಳಕೆಯಾಗಿರುವ ಭಾಷೆ, ಹೇಳುವ ತಂತ್ರಗಳಿಂದ ಕೂಡ.

ಮೊದಲ ಓದು

ದೇಶ ಕಟ್ಟುವ ಆಶಯ ಹೊತ್ತು...

ಸರ್ವಜನಾಂಗದ ಶಾಂತಿಯ ತೋಟವಾದ ನಮ್ಮ ನಾಡು ಈಗ ಧರ್ಮದ್ವೇಷದ ಕಿಚ್ಚಿಗೆ ಬೆಂದಿದೆ. ದ್ವೇಷದ ಕಿಡಿ ಎಲ್ಲೆಡೆ ಹರಡುತ್ತಿದ್ದಾಗ ಆ ಕಿಡಿಯನ್ನು ಸೌಹಾರ್ದದ ಸಿಂಚನದಿಂದ ನಂದಿಸುವ ಕೆಲಸವನ್ನು ಹಲವು ಸಂಘಟನೆಗಳು ಮಾಡಿದ್ದವು. ಈ ನಡೆಯಲ್ಲಿ ನಾಡಿನ ಪ್ರಗತಿಪರ ಸಂಘಟನೆಗಳು ಬೆಂಗಳೂರಿನಲ್ಲಿ 'ಸೌಹಾರ್ದ ಸಂಸ್ಕೃತಿ ಸಮಾವೇಶ' ಆಯೋಜಿಸಿದ್ದವು. ಈ ಸಮಾವೇಶದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಮಾಡಿದ ಆಶಯ ಭಾಷಣವೇ ಈಗ ಈ ಕಿರುಹೊತ್ತಿಗೆ ರೂಪ ತಾಳಿದೆ.

ಸಮಾವೇಶದ ದಿನವೇ ಭಾಷಣದ ಕಿರು ಹೊತ್ತಿಗೆ ಮುದ್ರಣಗೊಂಡು ಪೂರ್ತಿ ಮಾರಾಟವಾಗಿದ್ದವು. ಕೃತಿಗೆ ಬೇಡಿಕೆ ಬಂದ ಕಾರಣ ಇದೀಗ ಮರುಮುದ್ರಿಸಲಾಗಿದೆ. ಸಮಾವೇಶದಲ್ಲಿ ಬರಗೂರು ಅವರು ಮಾಡಿದ್ದ ಮೌಖಿಕ ಭಾಷಣದಲ್ಲಿದ್ದ ಕೆಲವು ಹೊಸ ಅಂಶಗಳು, ಅವುಗಳ ವಿಸ್ತರಣೆ ಎರಡನೇ ಮುದ್ರಣದ ಸೇರ್ಪಡೆ.



ಪು: 32
₹25

ದ್ವೇಷ ಬಿಟ್ಟು ದೇಶ ಕಟ್ಟು
ಲೇ: ಬರಗೂರು ರಾಮಚಂದ್ರಪ್ಪ
ಪ್ರ: ಜನ ಪ್ರಕಾಶನ, ಬೆಂಗಳೂರು
ಸಂ: 9632329955

ಏರಿಕೆಯಾಗುತ್ತಿರುವ ಧರ್ಮದ್ವೇಷದ ಘಟನೆಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾ, 'ಯಾವುದೇ ಧರ್ಮಕ್ಕೆ ಸೇರಿದ ಬಹುಸಂಖ್ಯಾತರು ಇಂತಹ ದ್ವೇಷ ಇಷ್ಟಪಡುವುದಿಲ್ಲ. ಆಯಾ ಧರ್ಮಗಳ 'ಸಣ್ಣ ಸಂಖ್ಯಾತರು' ಬಹುಸಂಖ್ಯಾತರಲ್ಲೂ ಭೀತಿ ಹುಟ್ಟಿಸುವಂತೆ ವರ್ತಿಸುತ್ತಿರುವುದರಿಂದ ಆಗುತ್ತಿರುವ ಅನಾಹುತ ಆತಂಕಕಾರಿ' ಎನ್ನುತ್ತಾರೆ ಬರಗೂರರು. 'ಸಣ್ಣ ಸಂಖ್ಯಾತರು' ಎನ್ನುವುದು ಕಿಡಿಗೇಡಿಗಳು ಅಥವಾ ಕೀಳುಮನಃಸ್ಥಿತಿಯವರನ್ನು ಉಲ್ಲೇಖಿಸಲು ಬರಗೂರು ಅವರು ಹುಟ್ಟುಹಾಕಿದ ಪರ್ಯಾಯ ಪದದಂತೆ ತೋರುತ್ತದೆ. ಇದೇ ರೀತಿ ಪಕ್ಷಗಳ ಮತಬೇಟೆಯ ಪ್ರವೃತ್ತಿಯನ್ನು 'ಮತೋತ್ಪಾದನೆ', ಸಾಮ್ರಾಜ್ಯಶಾಹಿ ಮನೋವೃತ್ತಿಯ ಫಲವಾದ 'ಯುದ್ಧೋತ್ಪಾದನೆ'ಯಂಥ ಹಲವು ಪದ ಪ್ರಯೋಗಗಳನ್ನು ಅವರಿಲ್ಲಿ ಮಾಡಿದ್ದಾರೆ.

ಕದಡಿದ ವಾತಾವರಣವನ್ನು ತಿಳಿಗೊಳಿಸುವ ಹೊಣೆ ಧರ್ಮಗುರುಗಳು ಹಾಗೂ ಸಂವಿಧಾನ ತಜ್ಞರ ಮೇಲೆ ಎಷ್ಟಿದೆ ಎನ್ನುವುದನ್ನು ಇಲ್ಲಿ ಸ್ಥೂಲವಾಗಿ ವಿವರಿಸಿದ್ದಾರೆ. ಇವರಷ್ಟೇ ಅಲ್ಲದೆ, ಸಾಮಾನ್ಯರ ಸಾಮಾಜಿಕ ಜವಾಬ್ದಾರಿಯನ್ನೂ ಸೂಕ್ಷ್ಮವಾಗಿ ಹೇಳಿದ್ದಾರೆ. ಧರ್ಮ ಮತ್ತು ದೇವರನ್ನು ರಾಜಕೀಯ ವಿಚಾರಧಾರೆಗಳ ಭಾಗವಾಗಿಸುತ್ತಿರುವ 'ಸಣ್ಣ ಸಂಖ್ಯಾತರ'ನ್ನೂ ಕುಟುಕಿರುವ ಬರಗೂರು ಅವರು, ಸಮಾನತೆಯ ಸಮಾಜ ನಿರ್ಮಾಣದ ಆಶಯವನ್ನು ಮುನ್ನೆಲೆಗೆ ತರುವ ಅಗತ್ಯವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಅಂತ್ಯದಲ್ಲಿ ಹಲವು ಸರಣಿ ಪ್ರಶ್ನೆಗಳನ್ನು ಒಡ್ಡುತ್ತಾ, ವಿವೇಕದ ಉತ್ತರವನ್ನೂ ನೀಡುತ್ತಾ, 'ಜಾತಿಯೆಂಬುದು ಜೈಲಾಗಬಾರದು; ಧರ್ಮವೆಂಬುದು ದ್ವೇಷ ದ್ವೀಪವಾಗಬಾರದು. ಜಾತಿಮತ ಧರ್ಮಗಳು ದುಷ್ಟಶಕ್ತಿಗಳ ದಾಳವಾಗಬಾರದು; ಮುಗ್ಧ ಜನರನ್ನು ದಾಳವಾಗಿಸಲೂ ಬಾರದು; ಸಮಾನತೆ ಮತ್ತು ಸೌಹಾರ್ದಗಳ ಸ್ಪಂದನವಾಗಬೇಕು; ನಂದನವಾಗಬೇಕು. ಆಯಾ ಧರ್ಮಗಳ ಹಾದಿ ತಪ್ಪಿಸುವ ಎಲ್ಲ ಧರ್ಮಗಳ ಮೂಲಭೂತವಾದಿಗಳನ್ನು ವಿರೋಧಿಸಬೇಕು. 'ದ್ವೇಷ ಬಿಟ್ಟು ದೇಶ ಕಟ್ಟು' ಎನ್ನುವುದು ನಮ್ಮೆಲ್ಲರ ಕರುಳ ಕರೆಯಾಗಬೇಕು' ಎನ್ನುತ್ತಾರೆ ಬರಗೂರರು. ಸದಾ ಜನಪರ ಚಿಂತನೆಯ ಅವರ ಹೃದಯ ನಾಡಿನ ಒಳಿತಿಗಾಗಿ ಹೇಗೆ ಮಿಡಿಯುತ್ತಿದೆ ಎನ್ನುವುದರ ಕುರುಹುಗಳು ಪುಟ, ಪುಟದಲ್ಲೂ ಇವೆ. ಪುಟ್ಟ ಕೃತಿಯನ್ನು ಓದಿ ಮುಗಿಸಿದಾಗ ಸದ್ಯದ ಬಹುತೇಕ ಬಿಕ್ಕಟ್ಟುಗಳಿಗೆ ಇಲ್ಲಿ ಪರಿಹಾರವಿದೆ ಎನಿಸದಿರದು.

ವಿ.ವಿ. ಅಂಗಳದಲ್ಲಿ ಅರಳಿದ 'ಭಾರತಿ'

ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್. ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಕನ್ನಡ ಸಂಶೋಧನ ಸಂಘವು ಪ್ರಕಟಿಸಿರುವ 'ಕನ್ನಡ ಭಾರತಿ' ಎಂಬ ಅರ್ಧವಾರ್ಷಿಕ ಪತ್ರಿಕೆ ಮೂವತ್ತೇಳು ವಿಚಾರಪೂರ್ಣ ಸಂಶೋಧನಾ ಬರಹಗಳನ್ನು ಒಳಗೊಂಡಿದೆ. ಈ ಸದ್ಯದ ಕನ್ನಡ ನಾಡು, ನುಡಿ, ಸಂಸ್ಕೃತಿಯ ಚಿಂತನೆಗಳ ಮೇಲೆ ಬೆಳಕು ಹಾಯಿಸುತ್ತಾ ನಾಡಿನ ಅಸ್ಮಿತೆಗಳನ್ನೂ ಗುರುತಿಸಲಾಗಿದೆ. ಕನ್ನಡ ಪಡೆದುಕೊಳ್ಳಬಹುದಾದ ತಾಂತ್ರಿಕ ಸವಾಲಿನ ಸಾಧ್ಯತೆಗಳನ್ನು ಈ ಸಂಚಿಕೆ ಒಳಗೊಂಡಿದೆ. ಸಾಹಿತ್ಯ, ವಿಜ್ಞಾನ, ಮಾನವಿಕ ಸಂಗತಿಗಳ ಕುರಿತಾದ ವಿಷಯಗಳು, ಕರ್ನಾಟಕದ ಏಕೀಕರಣ, ಅಖಂಡ ಕರ್ನಾಟಕದ ಕನಸು, ಧಾರವಾಡ ಪರಿಸರದ ಸ್ಪಂದನೆ, ಅದರಲ್ಲಿ ವಿದ್ಯಾವರ್ಧಕ ಸಂಘದ ಪಾತ್ರ, ಕನ್ನಡ ಸಂಘ ಸಂಸ್ಥೆಗಳು ಬಳ್ಳಿಯಂತೆ ಹಬ್ಬಿನಿಂತ ಬಗೆ, ಹೊರನಾಡ ಕನ್ನಡ ಸಂಘಗಳ ಕುರಿತಾದ ಬರಹಗಳು ಇಲ್ಲಿ ಒಡಮೂಡಿವೆ.

ಪಂಪನು ತೋರಿದ ಕನ್ನಡ ಪರಿಸರದ ಪ್ರೀತಿ, ವಚನಕಾರರು, ತತ್ವಪದಕಾರರು, ಆಲೂರು ವೆಂಕಟರಾಯರು, ಉತ್ತಂಗಿ ಚೆನ್ನಪ್ಪ, ಶಿವಮೂರ್ತಿಶಾಸ್ತ್ರಿ, ಬಿಎಂಶ್ರೀ, ಸಿದ್ಧಯ್ಯ ಪುರಾಣಿಕ, ಡಿ.ಎಸ್.ಕರ್ಕಿ, ಕುವೆಂಪು, ಬೇಂದ್ರೆ, ತೇಜಸ್ವಿ, ವಿ.ಎಸ್.ಕಾಂತನವರ, ಅರವಿಂದ ಮಾಲಗತ್ತಿ ಅವರ ಬರಹಗಳಲ್ಲಿ ಕಾಣುವ ಕನ್ನಡ ಬಾಳಿನ ನಡೆಯನ್ನು ಗುರುತಿಸಲಾಗಿದೆ. ಭಾಷೆಯು ತನ್ನ ಹಲವು ವೈರುಧ್ಯಗಳ ನಡುವೆಯೂ ತಾಳುವ ತನ್ನರಿವಿನ ವಿಶಿಷ್ಟ ದಾರಿಯನ್ನು ಈ ಕನ್ನಡ ಭಾರತಿಯಲ್ಲಿ ಕಾಣಿಸಲಾಗಿದೆ. ಸಾಹಿತ್ಯದ ಕಾಲಘಟ್ಟಗಳು ರೂಪಿಸಿದ ಭಾಷಾವೈವಿಧ್ಯ, ಜನಪದ ರಂಗಭೂಮಿಯ ಕೊಡುಗೆ, ಜಾನಪದ ಮತ್ತು ಜಾಗತೀಕರಣ, ಅಂಕಣ ಸಾಹಿತ್ಯದ ಅಗತ್ಯ ಹೀಗೆ ಹಲವಾರು ಸಂಗತಿಗಳು ಇಲ್ಲಿ ಯುವ ಸಂಶೋಧಕರ ಬರಹದ ಮುಖ್ಯ ವಸ್ತು ಮತ್ತು ಕಾಳಜಿಯಾಗಿವೆ.



ಪು: 366
₹150

ಕನ್ನಡ ಭಾರತಿ
(ಕನ್ನಡ ಸಂಶೋಧನ ಸಂಘದ ಅರ್ಧವಾರ್ಷಿಕ ಪತ್ರಿಕೆ)
ಪ್ರ.ಸಂ: ಪ್ರೊ.ನಿಜಲಿಂಗಪ್ಪ ಮಟ್ಟಿಹಾಳ
ಸಂ: ಪ್ರೊ.ರಾಜೇಂದ್ರ ನಾಯಕ, ಡಾ.ನಿಂಗಪ್ಪ ಮುದೇನೂರು
ಪ್ರ: ಕನ್ನಡ ಸಂಶೋಧನ ಸಂಘ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಇದಕ್ಕೆ ಸ್ಪಂದನೆ ಎಂಬಂತೆ ಆರು ಜನ ಪ್ರಾಧ್ಯಾಪಕರು ತಮ್ಮ ವಿಶಿಷ್ಟ ಬರಹಗಳ ಮೂಲಕವೇ ಈ ನುಡಿ ಸಾಂಗತ್ಯಕ್ಕೆ ಒದಗಿದ್ದಾರೆ. ಕನ್ನಡದ ವಿ.ವಿಗಳನ್ನು ಕಟ್ಟಬೇಕಾದ 'ವಿವೇಕ' ಎನ್ನುವ ಲೇಖನವೊಂದರಲ್ಲಿ, ಕನ್ನಡ ವಿಶ್ವವಿದ್ಯಾಲಯದ ಸ್ಥಾಪಿತ ಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರ ಕ್ರಿಯಾಶಕ್ತಿ, ಕುಲಪತಿಯಾಗಿ ಕಾರ್ಯನಿರ್ವಹಿಸಿದ ರೀತಿ, ಅಲ್ಲಿ ಚಿರಸ್ಥಾಯಿಯಾಗಿ ಕೈಗೊಂಡ ಸಾಂಸ್ಕೃತಿಕ, ಸಾಹಿತ್ಯಿಕ, ಯೋಜನೆ ಪ್ರಕಟಣೆಯ ಕಾರ್ಯ, ನೆಲದ ಮರೆಯ ನಿಧಾನದಂತೆ ಕನ್ನಡ ವಿಶ್ವವಿದ್ಯಾಲಯ ಬೆಳಗಿನಿಂತ ಬಗೆ ಇದೆಲ್ಲವನ್ನೂ ಇಲ್ಲಿ ದಾಖಲಿಸಲಾಗಿದೆ.

ಮೊದಲ ಬಾರಿಗೆ ಹೊಸ ಸಂಚಿಕೆಯನ್ನು ರೂಪಿಸುವುದರ ಮೂಲಕ ಈ ಕನ್ನಡ ವಿಭಾಗದ ಕನ್ನಡ ಸಂಶೋಧನ ಸಂಘವು ಹೊಸ ಇತಿಹಾಸವನ್ನು ಬರೆದಿದೆ. ವಿಭಾಗದ ಸಂಶೋಧನೆಯ ಸ್ವರೂಪದಾಚೆ ನಾಡು ನುಡಿ ಚಿಂತನೆಯನ್ನು ಇಲ್ಲಿ ಕಟ್ಟಿಕೊಟ್ಟಿರುವುದು ಇನ್ನೊಂದು ವಿಶೇಷ. ಸ್ವತಃ ವಿದ್ಯಾರ್ಥಿ, ಪ್ರಾಧ್ಯಾಪಕರೇ ಆರ್ಥಿಕ ಸಂಪನ್ಮೂಲ ಕೂಡಿಸಿಕೊಂಡು ಇಂತಹದೊಂದು ಸಂಚಿಕೆಯನ್ನು ರೂಪಿಸಿರುವರು. ಕನ್ನಡ ಭಾರತಿಯಂತಹ ವಿಶಿಷ್ಟ ಕೃತಿ ಸಂಪುಟಗಳು ನಮಗೆ ಬೇಕು ಎಂಬುದು ಇಲ್ಲಿ ಸಾಕಾರಗೊಂಡಿದೆ. ಸಂಪಾದಕೀಯ ಬರಹಗಳು ಕೃತಿಯ ಒಟ್ಟು ಆಶಯವನ್ನು ಹೇಳಿವೆ. ಇಲ್ಲಿನ ಲೇಖಕರಿಗೂ ಸಂಪಾದಕರಿಗೂ ಅಭಿನಂದನೆಗಳು ಸಲ್ಲಲೇಬೇಕು.

ಇರಾನ್‌ನ ದ್ರೌಪದಿಯರು...!

10ನೇ ಪುಟದಿಂದ...

ಈ ಹತ್ಯಾ ಸರಣಿಯು ಮುಖಕ್ಕೆ ಮಸಿ ಬಳಿಯಲಿದೆ ಎಂದು ಅರಿತ ಇರಾನಿನ ಸರ್ವೋಚ್ಚ ನಾಯಕ ಅಲಿ ಖೊಮೇನಿ ನೇತೃತ್ವದ ಸರ್ಕಾರವು ಸಾವಿನ ಕುರಿತು ಸುಳ್ಳು ಸುದ್ದಿ ಹರಡಲು ಮುಂದಾಯಿತು. ಈ ಇಬ್ಬರೂ ಮಹಡಿ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮಾಧ್ಯಮಗಳ ಮುಂದೆ ಹೇಳಿಕೆ ಕೊಡುವಂತೆ ಪೋಷಕರಿಗೆ ಹಿಂಸೆ ನೀಡಿತು.

1979ರ ಇಸ್ಲಾಮಿಕ್ ಕ್ರಾಂತಿಯ ಬಳಿಕ, ಇರಾನ್ ಮಹಿಳೆಯರ ಬದುಕು ಅಸಹನೀಯವಾಗಿದೆ. ಧರ್ಮದ ಅಮಲೇರಿಸಿಕೊಂಡಿರುವ ಇರಾನ್ ಸರ್ಕಾರವು ಮಹಿಳೆಯನ್ನು ಧಾರ್ಮಿಕ ಚೌಕಟ್ಟಿನ ಒಳಗೆಯೇ ಕಟ್ಟಿಹಾಕುವ ಯತ್ನವನ್ನು ಮಾಡುತ್ತಲೇ ಬಂದಿದೆ. ಇದರ ವಿರುದ್ಧ ಮಹಿಳೆಯರು ಪ್ರತಿಭಟಿಸುತ್ತಲೇ ಬಂದಿದ್ದಾರೆ. ಈ ಪ್ರತಿಭಟನೆಯನ್ನು ಸರ್ಕಾರ ಹತ್ತಿಕ್ಕುತ್ತಲೇ ಬಂದಿದೆ. ಹೀಗಾಗಿಯೇ ಅಮೀನಿ ಹತ್ಯೆಯು ಮಹಿಳೆಯರ ಸಹನೆಯ ಕಟ್ಟೆಯನ್ನು ಒಡೆಯಿತು.

ಇಸ್ಲಾಮಿಕ್ ಕ್ರಾಂತಿ ಏಕಾಯಿತು?

ಇರಾನ್ ದೇಶವು ಆರ್ಥಿಕವಾಗಿ ಬಹಳ ಸದೃಢವಾಗಿತ್ತು. ಇಂಧನ, ಪ್ರಾಕೃತಿಕ ಸಂಪತ್ತು, ಮಾನವ ಸಂಪನ್ಮೂಲ ಹೀಗೆ ನಾನಾ ಕಾರಣಗಳಿಂದ ಇರಾನ್ ಸಮೃದ್ಧವಾಗಿತ್ತು. ಮೊಹಮ್ಮದ್ ರೇಝಾ ಶಾ ಪಹಲ್ಲವಿ (1919-1980) 1941ರಲ್ಲಿ ಇರಾನ್‌ನ ರಾಜನಾಗಿದ್ದರು.

ಸ್ವಿಟ್ಜರ್ಲೆಂಡ್‌ನಲ್ಲಿ ಓದಿ ಬಂದಿದ್ದ ಮೊಹಮ್ಮದ್ ಶಾ ಅವರು ಇರಾನ್ ಅನ್ನು ಆಧುನೀಕರಣಗೊಳಿಸಲು ಹಲವು ಪ್ರಯತ್ನ ಮಾಡಿದ್ದರು. ಮಹಿಳೆಯರ ವಿಚಾರದಲ್ಲಿ ಮೊಹಮ್ಮದ್ ಶಾ ಅವರು ತುಸುಮಟ್ಟಿಗೆ ಸುಧಾರಣಾವಾದಿ ಎನ್ನಿಸಿದ್ದರೂ ಸಾಮಾಜಿಕವಾಗಿ, ಕಾನೂನಾತ್ಮಕವಾಗಿ ಮಹಿಳೆಯರು ಪುರುಷರಿಗೆ ಸಮಾನರಾಗಿರಲಿಲ್ಲ. ಮಹಿಳೆಯರು ಹಿಜಾಬ್ ಧರಿಸುವುದನ್ನು ಮೊಹಮ್ಮದ್ ಶಾ ನಿಷೇಧಿಸಿದ್ದರು!

ಒಂದೆಡೆ, ಹಿಜಾಬ್ ನಿಷೇಧವು ಸ್ವತಃ ಮಹಿಳೆಯರಿಗೇ ಇಷ್ಟವಾಗಲಿಲ್ಲ. ಸಂಪ್ರದಾಯಸ್ಥ ಜನರಿಗೆ 'ಅತಿಯಾದ ಆಧುನೀಕರಣ'ವನ್ನು ಅರಗಿಸಿಕೊಳ್ಳಲು ಆಗಲಿಲ್ಲ. ಮತ್ತೊಂದೆಡೆ, ಅಮೆರಿಕದೊಂದಿಗೆ ಮೊಹಮ್ಮದ್ ಶಾ ಅವರ ಅತಿಯಾದ ಸ್ನೇಹವೂ ಜನರಿಗೆ ಇಷ್ಟವಾಗಿರಲಿಲ್ಲ. ಹೀಗಾಗಿಯೇ ರಾಜಪ್ರಭುತ್ವ ಬೇಡ, ಪ್ರಜಾಪ್ರಭುತ್ವ ಬೇಕು ಎಂದು ಅಲ್ಲಿನ ಜನರು ಬಯಸಿದ್ದರು.

ಮೊಹಮ್ಮದ್ ಶಾ ಮತ್ತು ಮೌಲ್ವಿ ಅಯಾತ್-ಉಲ್ಲಾ ರೋಹುಲ್ಲಾ ಖೊಮೇನಿ ಮಧ್ಯೆ ಕ್ರಾಂತಿಯ ಕಾಲದಲ್ಲಿ ಹಲವು ಕಿತ್ತಾಟಗಳು ನಡೆದವು. ಖೊಮೇನಿಯನ್ನು ಗಡಿಪಾರು ಮಾಡಿ ಮೊಹಮ್ಮದ್ ಶಾ ಆದೇಶ ಹೊರಡಿಸಿದ್ದರು. ಅಲ್ಲಿಂದ ಕ್ರಾಂತಿಯ ದಿಕ್ಕು ಬದಲಾಯಿತು.

ತಮ್ಮ ವಿರುದ್ಧ ಭುಗಿಲೆದ್ದ ಜನರನ್ನು ಮೊಹಮ್ಮದ್ ಶಾ ಪೊಲೀಸರ ಮೂಲಕ ಹತ್ಯೆ ಮಾಡಿಸಿದರು. ಗಡಿಪಾರಾಗಿದ್ದ ಖೊಮೇನಿ ಫ್ರಾನ್ಸ್‌ನಲ್ಲಿ ಕೂತು, ಹೋರಾಟವನ್ನು ಮುನ್ನಡೆಸಿದರು. ಇರಾನ್‌ನ ಜಾತ್ಯತೀತರು, ಚಿಂತಕರು, ಕಮ್ಯುನಿಸ್ಟರು, ಇಸ್ಲಾಂ-ಮಾರ್ಕ್ಸ್‌ವಾದಿಗಳು ಹೀಗೆ ಎಲ್ಲಾ ಎಡ ಚಿಂತನೆಯವರು ಖೊಮೇನಿಯೊಂದಿಗೆ ಕ್ರಾಂತಿಗಾಗಿ ಕೈಜೋಡಿಸಿದರು.

ಖೊಮೇನಿ ಈ ಪ್ರತಿಭಟನೆಯ ಮುಖವಾಗಿ ಕಾಣಿಸಿಕೊಂಡರು. 'ಇರಾನ್ ಜನರ ವಿಮೋಚನೆಕಾರ' ಎಂದು ವಿದೇಶಿ ಮಾಧ್ಯಮಗಳು ಇವರನ್ನು ಹಾಡಿ ಹೊಗಳಿದವು. ಕ್ರಾಂತಿಯು ಮತ್ತಷ್ಟು ತೀವ್ರವಾಗುತ್ತಿದ್ದಂತೆ ಮೊಹಮ್ಮದ್ ಶಾ ಅವರು ಇರಾನ್ ತೊರೆದು ಬೇರೆ ದೇಶಕ್ಕೆ ಓಡಿ ಹೋದರು. ಖೊಮೇನಿ ಇರಾನ್‌ನ ಸರ್ವೋಚ್ಚ ನಾಯಕನಾದರು.

12 ಸಾವಿರ ವಿರೋಧಿಗಳ ಹತ್ಯೆ: ತಮ್ಮ ಸರ್ವಾಧಿಕಾರಿ ಕ್ರಮಗಳಿಗೆ ವಿರೋಧ ತೋರಿದ 12 ಸಾವಿರಕ್ಕೂ ಹೆಚ್ಚು ಜನರನ್ನು ಖೊಮೇನಿ ಹತ್ಯೆ ಮಾಡಿಸಿದರು ಎಂಬ ವರದಿಗಳಿವೆ. ಜೊತೆಗೆ, ಧಾರ್ಮಿಕ ಗುರುವೇ ಸರ್ವಾಧಿಕಾರಿ ಎಂಬ ಕಾನೂನು ತಂದರು. ಧರ್ಮವನ್ನೇ ಆಳ್ವಿಕೆಯ ನೆಲೆಗಟ್ಟು ಮಾಡಿದರು. ಮಹಿಳೆಯರು ಹಿಜಾಬ್ ಧರಿಸುವುದನ್ನು ಕಡ್ಡಾಯಗೊಳಿಸಿದರು.

ಪ್ರಜಾಪ್ರಭುತ್ವ ಸರ್ಕಾರಕ್ಕಾಗಿ ಖೊಮೇನಿ ಅವರನ್ನು ಜನರು ಬೆಂಬಲಿಸಿದ್ದರು. ಆದರೆ, ಖೊಮೇನಿ ಅವರನ್ನು ಬೆಂಬಲಿಸುವ ಮೂಲಕ ತಮಗೆ ತಿಳಿಯದಂತೆಯೇ ಸರ್ವಾಧಿಕಾರಿ ಆಳ್ವಿಕೆಗೆ ಭದ್ರ ಬುನಾದಿ ಹಾಕಿಕೊಟ್ಟರು. ಸ್ವಾತಂತ್ರ್ಯದ ಕನಸು ಕಂಡಿದ್ದ ಮಹಿಳೆಯರ ಸ್ಥಿತಿ ಇನ್ನಷ್ಟು ದಯನೀಯವಾಯಿತು. ಅವರು ಬಂದಿಗಳಾದರು, ಮೂರನೇ ದರ್ಜೆಯ ಪ್ರಜೆಗಳಾದರು.

40 ವರ್ಷದ ಸುದೀರ್ಘ ಹೋರಾಟ


ಟೆಹರಾನ್ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ಪ್ರೊಫೆಸರ್ ಆಗಿದ್ದ ಹೈದಾ ದರಾಗಹಿ ಮಾಧ್ಯಮವೊಂದಕ್ಕೆ ಇತ್ತೀಚೆಗೆ ನೀಡಿರುವ ಸಂದರ್ಶನದಲ್ಲಿ, ಹಿಜಾಬ್ ಕಡ್ಡಾಯವಾದ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾರೆ: 'ಕ್ರಾಂತಿಯ ನಂತರ ಕೆಲವೇ ದಿನಗಳಲ್ಲಿ ಬಂದ ಮೊದಲ ಅಂತರರಾಷ್ಟ್ರೀಯ ಮಹಿಳಾ ದಿನ ಅದಾಗಿತ್ತು. ಈ ದಿನವನ್ನು ದೇಶದಾದ್ಯಂತ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ್ದೆವು. ಆದರೆ, ಮಹಿಳಾ ದಿನದ ಮುನ್ನಾ ದಿನವೇ ಹಿಜಾಬ್ ಕಡ್ಡಾಯ ಮಾಡಿ ಖೊಮೇನಿ ಆದೇಶ ಹೊರಡಿಸಿದರು. 'ಸರ್ಕಾರಿ ಕಚೇರಿಗಳಿಗೆ, ಕೆಲಸದ ಸ್ಥಳಗಳಿಗೆ ಹಿಜಾಬ್ ಧರಿಸಿಯೇ ಬರಬೇಕು. 'ನಗ್ನ'ರಾಗಿ ಕಚೇರಿಗಳಿಗೆ ಬರಬೇಡಿ' ಎಂದು ಆದೇಶದಲ್ಲಿ ಖೊಮೇನಿ ಹೇಳಿದ್ದರು'.

'ಸಂಭ್ರಮಾಚರಣೆಗೆಂದು ಸಿದ್ಧರಾಗಿದ್ದ ನಾವು ಪ್ರತಿಭಟನೆಗೆ ಅಣಿಯಾದೆವು. ಆಚರಣೆಗಾಗಿ ಹೇಳಿದ್ದ ಸ್ಥಳ ಮತ್ತು ಸಮಯದಲ್ಲೇ ಭಾರಿ ಪ್ರತಿಭಟನೆ ನಡೆಸಿದೆವು. ದೊಡ್ಡ ಮಟ್ಟದ ಪ್ರತಿಭಟನೆಯು ಹಲವು ದಿನಗಳ ಕಾಲ ನಡೆಯಿತು. ಪ್ರತಿಭಟನಕಾರರಿಗೆ ಇರಿದರು, ಕಲ್ಲು ತೂರಿದರು, ಇಟ್ಟಿಗೆಗಳಿಂದ ಹೊಡೆದರು, ಗಾಜಿನ ಚೂರುಗಳಿಂದ ಗಾಯ ಮಾಡಿದರು. ಪ್ರತಿಭಟನೆಯ ತೀವ್ರತೆಗೆ ಹಿಜಾಬ್ ಕಡ್ಡಾಯ ಆದೇಶವನ್ನು ಸರ್ಕಾರ ಹಿಂಪಡೆಯಿತು. ಅಷ್ಟರ ಮಟ್ಟಿಗೆ ಮಹಿಳೆಯರು ನಡೆಸಿದ ಪ್ರತಿಭಟನೆ ಯಶಸ್ವಿಯಾಗಿತ್ತು. ಆದರೆ, ಕೆಲವು ತಿಂಗಳ ಬಳಿಕ ಹಿಜಾಬ್ ಅನ್ನು ಸರ್ಕಾರ ಕಡ್ಡಾಯಗೊಳಿಸಿತು' ಎಂಬುದನ್ನು ಹೈದಾ ನೆನಪಿಸಿಕೊಳ್ಳುತ್ತಾರೆ.

ಕೂದಲು ಮತ್ತು ಘನತೆ

ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಹಲವು ಸಂಕೇತಗಳಿವೆ. ಮಹಿಳೆಯರು ತಮ್ಮ ಹಿಜಾಬ್ ಅನ್ನು ಬಿಚ್ಚಿ ಬೆಂಕಿಗೆ ಹಾಕುತ್ತಿರುವುದು ಮತ್ತು ತಮ್ಮ ಕೂದಲನ್ನು ಕತ್ತರಿಸಿಕೊಳ್ಳುತ್ತಿರುವುದು ಪ್ರತಿಭಟನೆಯ ಸಂಕೇತವೇ ಆಗಿದೆ.

ಕೂದಲು ಹೆಣ್ಣಿನ ಸೌಂದರ್ಯದ ಪ್ರತೀಕ. ಅದೊಂದು ಘನತೆಯೂ ಹೌದು. ಕೂದಲು ಸೌಂದರ್ಯದ ಪ್ರತೀಕವಾದ್ದರಿಂದಲೇ ಇದಕ್ಕೊಂದು ಧಾರ್ಮಿಕ ಚೌಕಟ್ಟು ಕಟ್ಟುವ ಕೆಲಸವನ್ನು ಪುರುಷ ಪ್ರಧಾನ ಮನಃಸ್ಥಿತಿ ಮಾಡಿದೆ. ಕೂದಲೇ ಹೆಣ್ಣಿನ ಆಕರ್ಷಣೆ ಎಂಬ ಕಾರಣಕ್ಕೆ ಅವರು ಹಿಜಾಬ್ ಕಟ್ಟಿಕೊಂಡು ಕೂದಲನ್ನು ಮುಚ್ಚಿಕೊಳ್ಳಬೇಕು ಎಂಬ ಪರಿಕಲ್ಪನೆ ಇಸ್ಲಾಂನಲ್ಲಿ ಬಂತು. ಹಿಂದೂ ಸಂಪ್ರದಾಯದಲ್ಲಿ ಈ ರೀತಿಯ ನೇರವಾದ ನಿರ್ಬಂಧ ಇಲ್ಲದಿದ್ದರೂ, ಹೆಣ್ಣು



ಮಕ್ಕಳು ಕೂದಲು ಬಿಚ್ಚಿ ಓಡಾಡುವುದನ್ನು ಇಷ್ಟಪಡದವರು ಬಹಳ ಮಂದಿ. ವಿಧವೆಯರು ತಲೆ ಬೋಳಿಸಿಕೊಳ್ಳಲೇಬೇಕಾದ ಕಟ್ಟುಪಾಡು ಇದ್ದದ್ದನ್ನು ಮರೆಯುವಂತಿಲ್ಲ.

ಸಂತಾಪ ಸೂಚಿಸಲು ಮತ್ತು ತಮ್ಮ ಸಿಟ್ಟನ್ನು ಹೊರಹಾಕಲು ಇರಾನ್ ಅಥವಾ ಮಧ್ಯಪ್ರಾಚ್ಯ ದೇಶಗಳಲ್ಲಿ ಕೂದಲನ್ನು ಕತ್ತರಿಸಿಕೊಳ್ಳುವ ಪದ್ಧತಿ ಇದೆ. ಇದಕ್ಕೆ ಚಾರಿತ್ರಿಕ ಹಾಗೂ ಸಾಹಿತ್ಯಿಕವಾದ ಇತಿಹಾಸವೂ ಇದೆ.

ಕೂದಲು ಮತ್ತು ಪ್ರತಿಜ್ಞೆಯ ಸಂಕೇತ ಭಾರತೀಯರಿಗೆ ಹೊಸದೇನಲ್ಲ. 'ಮುಡಿ ಕಟ್ಟುವುದಿಲ್ಲ' ಎಂದು ಕುರುಕುಲದ ನಾಶಕ್ಕಾಗಿ ದ್ರೌಪದಿ ಮಾಡಿದ್ದ ಪ್ರತಿಜ್ಞೆಯು ಮಹಿಳಾ ಹೋರಾಟದ ಹಿನ್ನೆಲೆಯಲ್ಲಿ ಬಹಳ ಮುಖ್ಯ ಸಂಕೇತ. ಈ ಪ್ರತಿಜ್ಞೆಯ ಮೂಲಕವೇ ದ್ರೌಪದಿ ಪಾತ್ರ ಮತ್ತೆ ಮತ್ತೆ ಪ್ರಸ್ತುತವಾಗುತ್ತದೆ.

ದ್ರೌಪದಿಯ ಮುಡಿಯನ್ನು ಪವಿತ್ರ ಜಲ ಸಿಂಪಡಿಸಿದ 'ಶ್ರೀಮುಡಿ' ಎಂದು ಕುಮಾರವ್ಯಾಸ ಕರೆದರೆ, ಕೌರವರನ್ನು ನಾಶ ಮಾಡಿದ 'ಕೇಶಪಾಶ ಪ್ರಪಂಚ' ಎನ್ನುತ್ತಾನೆ ಪಂಪ. ಇರಾನ್‌ನ ಧರ್ಮಾಂಧ ಸರ್ಕಾರವು ಮಹಿಳೆಯರ ಮುಡಿಗೆ ಕೈಹಾಕಿದೆ. ದ್ರೌಪದಿಯ ಮುಡಿಗೆ ಕೈಹಾಕಿದ ದುಶ್ಶಾಸನನ ಕತೆ ನಮಗೆಲ್ಲಾ ಗೊತ್ತೇ ಇದೆ.

ಪಂಪನ 'ವಿಕ್ರಮಾರ್ಜುನವಿಜಯ'ದಲ್ಲಿ, ದುಶ್ಶಾಸನನನ್ನು ಕೊಂದು ಆತನ ರಕ್ತವನ್ನು ದ್ರೌಪದಿಯ ಮುಡಿಗೆ ಹಚ್ಚಿ, ಮುಡಿ ಕಟ್ಟುವ ಸಂದರ್ಭದಲ್ಲಿ ಭೀಮನು ದ್ರೌಪದಿಗೆ ಹೀಗೆ ಹೇಳುತ್ತಾನೆ: 'ಇದರೊಳ್ ಶ್ವೇತಾತಪತ್ರ ಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಪುದಿದು ಅಳ್ಕಾಡಿತ್ತು ಅಡಂಗಿತ್ತು ಇದರೊಳ್ ಕುರುರಾಜಾನ್ವಯ ಮತ್ಪ್ರತಾಪಕ್ಕೆ ಇದರಿಂದಂ ನೋಡು ಅಗುರ್ವು ಉರ್ವಿದುದು ಇದುವೆ ಮಹಾಭಾರತಕ್ಕಾದಿಯಾಯ್ತು ಅಬ್ಜದಳಾಕ್ಷಿ ಪೇರಿ ಸಾಮಾನ್ಯಮೆ ಬಗೆಯೆ ಭವತ್ ಕೇಶಪಾಶ ಪ್ರಪಂಚಂ'

ಸಾರಾಂಶ: ಬಿಳಿಗೊಡೆಗಳಿರುವ ದಶದಿಕ್ಕುಗಳ ರಾಜಚಕ್ರವು ಕೂದಲಿನಿಂದಾಗಿ ನಾಶವಾಗಿದೆ. ಈ ಕೂದಲು ಕುರು ರಾಜವಂಶವನ್ನು ನಾಶಮಾಡಿತು. ರಾಜರ ಸಮೂಹವು ಮಣ್ಣು ಮುಕ್ಕಿತು, ನೋಡು, ನಿನ್ನ ಕೂದಲಿನಿಂದಾಗಿಯೇ ನನ್ನ ಶಕ್ತಿಯು ಇಮ್ಮಡಿಯಾಯಿತು, ನಿನ್ನ ಕೂದಲೇ ಮಹಾಭಾರತಕ್ಕೆ ಕಾರಣವಾಯಿತು. ಕಮಲದ ಕಣ್ಣಿನವಳೇ, ನಿನ್ನ ಕೂದಲು ಸಾಮಾನ್ಯವೇ ಹೇಳು.

ಇರಾನ್‌ನ ದ್ರೌಪದಿಯರ ಹೋರಾಟ ಯಶಸ್ವಿಯಾಗಲಿ ಎಂದು ಭಾರತೀಯ ಮನಸ್ಸುಗಳೂ ಆಶಿಸುತ್ತಿವೆ.

ಗೀಜಗನ ಗೂಡು ನುಂಗಿತ್ತಾ!

ನಿಸರ್ಗದ ಜಕಣಾಚಾರಿ ಎಂದೂ ದರ್ಜಿ ಎಂದೂ ಕರೆಯಿಸಿಕೊಳ್ಳುವ ಗೀಜಗ ಇತ್ತೀಚೆಗೆ ಕಾಣುತ್ತಿಲ್ಲ. ಅವುಗಳ ಗೂಡೂ ಕಾಣುತ್ತಿಲ್ಲ, ಯಾಕೋ?



ಶೀರ್ಷಾಸನವಲ್ಲ. ದ್ವಾರ- ದಾರಿಯ ತಪಾಸಣೆ



ಗೂಡಿಗೆ ಫೈನಲ್ ಟಚ್



ಸ್ವಂತ ಮನೆ ಮುಂದೆ ಸ್ವಚ್ಛಂದ ಹಾರಾಟ



ಕಟ್ಟುವುದೆಷ್ಟು ಕಷ್ಟ ಗೊತ್ತಾ...? ಗೂಡು ನೇಯುವುದರಲ್ಲಿ ನಿರತ ಗೀಜಗ

ಚಿತ್ರಗಳು: ಜಿ.ಆರ್. ಪಂಡಿತ್

ಅಖಿಲೇಶ್ ಚಿಪ್ಪಳಿ

ಸುಮಾರು ಎರಡೂವರೆ ದಶಕಗಳ ಹಿಂದೆ ಪ್ರಜಾವಾಣಿಯ ಭಾನುವಾರದ ಪುರವಣಿಯಲ್ಲೊಂದು ಲೇಖನವಿತ್ತು. ಆಗಿನ ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನಲ್ಲಿ ಪ್ರತಿವರ್ಷ ಜನವರಿ 14ರಂದು ಗೌರಿ ಹುಣ್ಣಿಮೆ ಆಚರಿಸುವ ಕುರಿತಾದ ಲೇಖನ ಅದಾಗಿತ್ತು. ಆಚರಣೆಯ ಒಂದು ಭಾಗ ಮಾತ್ರ ಮೂಢನಂಬಿಕೆಯ ಪರಕಾಷ್ಠೆಯಾಗಿತ್ತು. ಸಂಜೆಯ ಹೊತ್ತಿಗೆ ಊರಿನ ಯುವಕರು ಜಾಲಿ ಮರಗಳಲ್ಲಿರುವ ಗೀಜಗನ ಗೂಡುಗಳನ್ನು ಕಿತ್ತು ಅದಕ್ಕೆ ಬೆಂಕಿ ಹಚ್ಚಿ, ಗಾಳಿಯಲ್ಲಿ ತಿರುಗಿಸುತ್ತಾ ಊರ ತುಂಬಾ ಓಡುತ್ತಿದ್ದರಂತೆ. ಮೊಟ್ಟೆಗಳಿರುವ, ಮರಿಗಳಿರುವ ಗೂಡುಗಳನ್ನು ಸುಡಲಾಗುತ್ತದೆ ಎಂಬ ಆಘಾತಕಾರಿ ಅಂಶಗಳು ಆ ಲೇಖನದಲ್ಲಿದ್ದವು.

ಗೀಜಗನೊಟ್ಟಿಗೆ ನಾವು ಸಹಬಾಳ್ವೆ ಮಾಡಿದವರೇ ಆಗಿದ್ದೆವು. ನಮ್ಮ ತೋಟದಲ್ಲಿ ಅಡಕೆ ಮರದಿಂದ ಬಿದ್ದ ಹಳೆ ಗೂಡುಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಅಚ್ಚರಿಯಿಂದ ನೋಡುತ್ತಿದ್ದೆವು. ಮಲೆನಾಡಿನ ಹಳೆಯ ಮುಚ್ಚಿಗೆ ಮನೆಯ ಜಗುಲಿಯಲ್ಲಿ ಅದೊಂಥರ ಅಲಂಕಾರಿಕ ವಸ್ತುವಾಗಿ ನೇತಾಡುತ್ತಿತ್ತು. ಕೊಪ್ಪಳದಲ್ಲಿ ಗೀಜಗನ ಗೂಡು ಸುಡುವ ಸುದ್ದಿ ಓದಿ ಆಘಾತವಾಯಿತು. ಹೀಗಾದರೆ, ಅವುಗಳ ವಂಶವೇ ನಾಶವಾಗಿಬಿಡಬಹುದು ಎಂಬ ಆತಂಕ ಕಾಡಿತು. ಮಾರನೇ ದಿನವೆ ಜಿಲ್ಲಾಧಿಕಾರಿಯವರಿಗೆ ಒಂದು ಪತ್ರ ಬರೆದು, ಈ ಅನಿಷ್ಟ ಪದ್ಧತಿಯನ್ನು ನಿಲ್ಲಿಸಲು ಕೋರಿದ್ದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿ ಜಾತ್ರೆಯಲ್ಲಿ ಅನಾಗರಿಕವಾದ ಬೆತ್ತಲೆ ಸೇವೆ ನಡೆಯುತ್ತಿತ್ತು. ಸರ್ಕಾರದ ಇಚ್ಛಾಶಕ್ತಿಯಿಂದಾಗಿ ಆ ಅನಿಷ್ಟ ಪದ್ದತಿ ನಿಂತಿದೆ. ಹಾಗೆಯೇ ದಕ್ಷಿಣ ಕನ್ನಡದಲ್ಲಿ ಅಜಲು ಪದ್ಧತಿಯಿತ್ತು. ಅದನ್ನು ಸರ್ಕಾರ ಯಶಸ್ವಿಯಾಗಿ ನಿಲ್ಲಿಸಿದೆ. ಹಾಗೆಯೇ ಗೀಜಗನ ಗೂಡು ಸುಡುವುದನ್ನೂ ನಿಲ್ಲಿಸಲು ಸಾಧ್ಯವೇ ಎಂಬ ಒಕ್ಕಣೆ ಹಾಕಿ ಪತ್ರ ಬರೆದಿದ್ದೆ.

ಹಲವು ಕಾರಣಗಳಿಂದಾಗಿ ಮಲೆನಾಡಿನ ಜೀವಿವೈವಿಧ್ಯ ಅಳಿಯುತ್ತಿದೆ. ಸ್ಥಾನಿಕವಾಗಿ ಅತಿವೇಗವಾಗಿ ಅಳಿದು ಹೋದ ಪಕ್ಷಿಗಳಲ್ಲಿ ನಿಸರ್ಗದ ಜಕಣಾಚಾರಿಯೆಂದೇ ಕರೆಯಬಹುದಾದ ಗೀಜಗಗಳ ಸಂತತಿಯೂ ಒಂದಾಗಿದೆ. ಕೆರೆಗಳ ಬದುಗಳಲ್ಲಿ ಬೆಳೆಯುವ ಬಿದಿರು ಹಾಗೂ ಇನ್ನಿತರ ಮರಗಳ ತುದಿಯ ಕೊಂಬೆಯಲ್ಲಿ ಗೂಡು ಕಟ್ಟುವ ಗೀಜಗಗಳಿಗೆ ಆಹಾರವಾಗಿ ಭತ್ತದ ಬೆಳೆಯಿರಬೇಕು, ಗೂಡು ಕಟ್ಟುವ ಕಚ್ಚಾ ಸಾಮಗ್ರಿಯು ಭತ್ತ, ಕಬ್ಬು ಬೆಳೆಗಳ ಹಸಿ ಎಲೆಗಳೇ ಆಗಿರುತ್ತವೆ. ಕೆರೆಗಳ ಒತ್ತುವರಿ, ಗೂಡು ಕಟ್ಟಿಕೊಳ್ಳುವ ಮರಗಳ ನಾಶ, ಕೃಷಿಯಲ್ಲಿ ವಿಪರೀತ ರಾಸಾಯನಿಕಗಳ ಬಳಕೆ, ವಾಣಿಜ್ಯ ಬೆಳೆಗಳು ಗದ್ದೆಗಳನ್ನು ಆಕ್ರಮಿಸಿಕೊಂಡ ಕಾರಣಕ್ಕೆ ಗೀಜಗಗಳ ನೆಲೆ ಅಳಿಸಿಹೋಗುತ್ತಿದೆ.

ಸಾಗರದ ಅಮಟೇಕೊಪ್ಪದಲ್ಲಿ ಕಳೆದ ಹದಿನೈದು ವರ್ಷಗಳಿಂದ ನಮ್ಮ ನಿರ್ವಹಣೆಯಲ್ಲಿ ಬೆಳೆಯುತ್ತಿರುವ ಖಾಸಗಿ ಕಾಡು ಇದೀಗ ಜೀವಿವೈವಿಧ್ಯದ ಬೀಡಾಗಿದೆ. ಅಡಗಿಸಿಟ್ಟ ಕ್ಯಾಮೆರಾದಲ್ಲಿ ಅನೇಕ ಪ್ರಾಣಿಗಳು ಸೆರೆಸಿಕ್ಕಿವೆ. ಅಪರೂಪದ್ದೂ ಸೇರಿ 170 ಜಾತಿಯ ಪಕ್ಷಿ ಪ್ರಭೇದಗಳನ್ನು ಪಕ್ಷಿತಜ್ಞರು ಅಲ್ಲಿ ಗುರುತಿಸಿದ್ದಾರೆ. ಮಣ್ಣಿನ ಸೂಕ್ಷ್ಮಾಣುಗಳಿಂದ ಹಿಡಿದು ಕಾಟಿಯವರೆಗೆ ಅಲ್ಲೀಗ ಜೀವಿವೈವಿಧ್ಯ ಸಮೃದ್ಧವಾಗಿದೆ.

ಮೂಲತಃ ಸಾಗರ ತಾಲ್ಲೂಕಿನವರೇ ಆದ ನನ್ನ ಸ್ನೇಹಿತರೊಬ್ಬರು ಬೆಂಗಳೂರಿನಲ್ಲಿದ್ದಾರೆ. ಬೆಂಗಳೂರು ಹತ್ತಿರದಲ್ಲಿ ಅವರಿಗೆ ಜಮೀನು ಇದ್ದ ಕಾರಣಕ್ಕೆ ಅವರು ಅರೆಕಾಲಿಕ ಕೃಷಿಕರೂ ಹೌದು. ಬೆಂಗಳೂರಿನ ಆ ಸ್ನೇಹಿತರು ಇನ್ನೂ ಉಷಾಕಿರಣವನ್ನು ನೋಡಿಲ್ಲ; ಮೊದಲು ಹೇಗಿತ್ತು? ಈಗ ಹೇಗಿದೆ ಎಂಬ ಕಲ್ಪನೆ ಕೂಡಾ ಅವರಿಗಿಲ್ಲ. ಆದರೆ, ಹಂತ ಹಂತವಾಗಿ ನಾನು ಕಳುಹಿಸಿದ ಫೋಟೊಗಳು, ವರದಿಗಳು ಅವರನ್ನು ಉಷಾಕಿರಣದ ಕಾಡನ್ನು ಪ್ರೀತಿಸುವಂತೆ ಮಾಡಿವೆ. ಅವರಲ್ಲಿ ಹತ್ತು ಎಕರೆ ಖುಷ್ಕಿ ಜಮೀನು ಇತ್ತು. ಅದನ್ನು ಸದ್ವಿವಿನಿಯೋಗ ಮಾಡಬೇಕು ಎಂದುಕೊಂಡರು. ಮಲೆನಾಡಿನ ಅನಾನಸ್ ಬೆಳೆಗೆ ಉತ್ತರಭಾರತದಲ್ಲಿ ಬಲು ಬೇಡಿಕೆಯಿದೆ. ಅನಾನಸ್ ಕೃಷಿ ಮಾಡಲು ಒಬ್ಬ ರೈತ ಮುಂದೆ ಬಂದ. ಆ ಒಂಬತ್ತು ಎಕರೆಯಲ್ಲಿ ಅಡಕೆ ಇನ್ನಿತರೆ ಗಿಡಗಳನ್ನು ಹಾಕಿದರು. ಇವರ ಖುಷ್ಕಿ ಜಮೀನಿನ ಪಕ್ಕದಲ್ಲೇ ಭತ್ತದ ಗದ್ದೆಯೂ ಇದೆ. ಕೋವಿಡ್ ಪ್ರಾರಂಭವಾದ ಸಮಯದಲ್ಲಿ ಅವರು ಫೋನ್ ಮಾಡಿ, ಒಂದು ಎಕರೆಯಲ್ಲಿ ಕಾಡು ಬೆಳೆಸುವ ಇರಾದೆಯಿದೆ, ಸಹಾಯ ಬೇಕಲ್ಲ ಎಂದರು. ಸ್ವಾಭಾವಿಕವಾಗಿ ಇದು ಖುಷಿಯ ಸಂಗತಿಯಾಗಿತ್ತು. ‘ಆಗಲಿ’ ಎಂದೆ. ಮಳೆಗಾಲದಲ್ಲಿ ಸ್ಥಳೀಯ ಪ್ರಭೇದಗಳ ಗಿಡಗಳನ್ನು ನೆಟ್ಟೆವು. ಅಷ್ಟರಲ್ಲಿ, ಅವರು ತಮ್ಮ ಪೂರ್ಣ ಜಮೀನನ್ನು ರಾಸಾಯನಿಕ ರಹಿತ ಮಾಡಿದ್ದರು. ಈಗೊಂದು ಹದಿನೈದು ದಿನದ ಹಿಂದೆ ಫೋನ್ ಮಾಡಿ, ಒಂದಷ್ಟು ಗೀಜಗಗಳು ಗೂಡು ಕಟ್ಟುತ್ತಿವೆ ಎಂದರು. ಆ ಭಾಗದಲ್ಲಿ ಗೀಜಗಗಳ ಮರು ಆಗಮನವಾಗಿತ್ತು.



ಜಲ ಮತ್ತು ಆಹಾರ ಭದ್ರತೆಯಿದ್ದರೆ ಗೀಜಗಗಳು ಮತ್ತೆ ಬಂದು ನೆಲಸಬಲ್ಲವು ಎಂಬುದಕ್ಕೆ ಈ ಘಟನೆ ಸಾಕ್ಷಿ. ನಮ್ಮ ದೇಶದಲ್ಲಿ ವನ್ಯಜೀವಿಗಳಿಗಾಗಿಯೇ ಮೀಸಲಿಟ್ಟ ಪ್ರದೇಶ ಅತಿಕಡಿಮೆಯಿದೆ. ಸರ್ಕಾರದ ಆದ್ಯತೆಗಳು ಮನುಷ್ಯ ಕೇಂದ್ರಿತವಾಗಿದ್ದಾಗ ವನ್ಯಜೀವಿಗಳ ಆವಾಸಸ್ಥಾನ ಕುಗ್ಗುತ್ತಾ ಹೋಗುತ್ತದೆ. ನಮ್ಮ ಉಷಾಕಿರಣವೀಗ ಹಲವರಿಗೆ ಮಾದರಿಯಾಗಿದೆ. ಸಾಗರ ಸಮೀಪದಲ್ಲೇ ಒಟ್ಟು ಮೂರು ಜನ ಸೇರಿ ಎಂಟು ಎಕರೆಯನ್ನು ಕಾಡು ಬೆಳೆಸಲೇ ಮೀಸಲಿಟ್ಟಿದ್ದಾರೆ. ಹುಲಿ, ಆನೆಗಳಂತಹ ಮೇರುಪ್ರಾಣಿಗಳಿಗೆ ಇಂತಹ ಚಿಕ್ಕ ಚಿಕ್ಕ ಕಾಡುಗಳು ಪ್ರಯೋಜನವಾಗದಿದ್ದರೂ, ಇನ್ನಿತರ ಅಸಂಖ್ಯ ಜೀವಸಂಕುಲಗಳಿಗೆ ತವರಾಗುತ್ತವೆ.

ಉಷಾಕಿರಣಕ್ಕೆ ಭೇಟಿ ನೀಡಿದ ಮಹಾನುಭಾವರೊಬ್ಬರು ಇಷ್ಟು ಪ್ರದೇಶದಲ್ಲಿ ಕಾಡು ಬೆಳೆಸಿದರೆ ನಿಮಗಾಗುವ ಪ್ರಯೋಜನವೇನು? ಅದರ ಬದಲು ಭೂಪರಿವರ್ತನೆ ಮಾಡಿದ್ದರೆ, ಹಲವು ಕೋಟಿ ಲಾಭಗಳಿಸಬಹುದಿತ್ತು ಎಂದು ಉಲಿದರು. ಆಗ ಅವರಿಗೊಂದು ಲೆಕ್ಕಾಚಾರ ಹೇಳಿದೆ. 2020ರ ಜೂನ್ 1ರಿಂದ 2021ರ ಮೇ 31ರವರೆಗೆ ನಮ್ಮಲ್ಲಿ ಇಂಗಿದ ನೀರಿನ ಪ್ರಮಾಣ 28 ಕೋಟಿ ಲೀಟರ್. ಒಂದು ಲೀಟರ್ ನೀರಿನ ಬೆಲೆ ₹20 ಎಂದಾದರೆ ಒಟ್ಟು ಮೊತ್ತ ಎಷ್ಟಾಗಬಹುದು ನೀವೇ ಲೆಕ್ಕ ಹಾಕಿ ಎಂದೆ. ಮುಂದುವರಿದು, ಉಷಾಕಿರಣ ನೀಡುವ ಇನ್ನಿತರ ನೈಸರ್ಗಿಕ ಸೇವೆಗಳು, ಅಂದರೆ, ಇಂಗಾಲಾಮ್ಲ ಹೀರಿಕೊಂಡು ಆಮ್ಲಜನಕ ನೀಡುವುದು, ಜೀವಿವೈವಿಧ್ಯಕ್ಕೆ ಆಶ್ರಯ ನೀಡುವುದು, ಮಣ್ಣು ಸವಕಳಿ ತಡೆಯುವುದು ಮುಂತಾದವುಗಳ ಮೌಲ್ಯವನ್ನು ಸೇರಿಸಿದರೆ, ಸೈಟು ಮಾಡಿ ಮಾರಾಟ ಮಾಡುವುದಕ್ಕಿಂತ ಅದೆಷ್ಟೋ ಪಟ್ಟು ಲಾಭವಿದೆ ಎಂಬ ಉತ್ತರಕ್ಕೆ ಅವರು ಪೀಚು ನಗೆ ನಕ್ಕರಷ್ಟೆ.

ಕರ್ನಾಟಕದಲ್ಲಿ ಒಟ್ಟು ಮೂರು ಜಾತಿಯ ಗೀಜಗಗಳಿವೆ. ಬಯಲುನಾಡಿನ ಹುಲ್ಲುಗಾವಲು ಪ್ರದೇಶದಲ್ಲಿ ಮೂರೂ ಜಾತಿಯ ಗೀಜಗಗಳು ಕಂಡು ಬರುತ್ತವೆಯಾದರೂ, ಮಲೆನಾಡಿನ ಜೌಗು ಪ್ರದೇಶದಲ್ಲಿ ಬಾಯಾ ಗೀಜಗ ಮಾತ್ರ ಕಂಡು ಬರುತ್ತದೆ. ಬಯಲು ಹಾಗೂ ಮಲೆನಾಡಿನಲ್ಲಿ ಗೀಜಗಗಳ ಆವಾಸಸ್ಥಾನ, ಅವುಗಳಿಗೆ ಗೂಡು ಕಟ್ಟಲು ಬೇಕಾದ ಕಚ್ಚಾ ಸಾಮಗ್ರಿಗಳು ಮತ್ತು ಆಹಾರದ ಕೊರತೆಯಿಂದ ಇವು ವೇಗದಲ್ಲಿ ಕಣ್ಮರೆಯಾಗುತ್ತಿವೆ. ಗೀಜಗಗಳನ್ನು ಪಹರೆ ಜೀವಿಗಳೆಂದು ಕರೆಯಬಹುದು. ಇವುಗಳ ಸಂಖ್ಯೆ ನಶಿಸುತ್ತಿದೆಯೆಂದರೆ, ಬಯಲುನಾಡಿನಲ್ಲಿ ಹುಲ್ಲುಗಾವಲು ಹಾಗೂ ಮಲೆನಾಡಿನಲ್ಲಿ ಜೌಗು ಪ್ರದೇಶಗಳಾದ ಕೆರೆ-ಕುಂಟೆಗಳು ಕಡಿಮೆಯಾಗುತ್ತಿವೆ ಎಂದು ಅರ್ಥೈಸಬಹುದು. ಜೊತೆಗೆ ಗೀಜಗನ ಕಲಾವಂತಿಕೆಯ ಮೇರು ಕೃತಿಯಾದ ಅದರ ಗೂಡುಗಳನ್ನು ಕದ್ದು ಮಾರುವುದೂ ಅವುಗಳ ವಿನಾಶಕ್ಕೆ ಒಂದು ಮುಖ್ಯ ಕಾರಣವಾಗಿದೆ. ಮಾನವನ ಹಸ್ತಕ್ಷೇಪದಿಂದ ಪ್ರಪಂಚದ ಎಲ್ಲಾ ಜೀವಸಂಕುಲಗಳು ಆಪತ್ತಿಗೆ ಸಿಲುಕಿರುವುದು ಸತ್ಯಕ್ಕೆ ದೂರವಾದ ಮಾತೇನಲ್ಲವಲ್ಲ.



• ಎಂ.ಎಸ್.ಪೂಜಾರ


ಗಣಿತದಲ್ಲಿ ಗರ್ದಿ ಗಮ್ಮತ್ತು

ಸೋಜಿಗ - ಗಣಿತ

- ಕೆಲವು ವಿಷಯಗಳು ಮೇಲ್ನೋಟಕ್ಕೆ ಸರಳ ಎನಿಸುತ್ತವೆ. ಆಳವಾಗಿ ಇಳಿದು ಯೋಚಿಸಿದರೆ ಸೋಜಿಗವೆನಿಸುತ್ತವೆ. ಅಂತಹ ಲೆಕ್ಕವಿದು. ನಾನು ಜುಲೈ ತಿಂಗಳಲ್ಲಿ ನಿನಗೆ ದಿನಾಲು 1 ಲಕ್ಷ ರೂಪಾಯಿ ಕೊಡುತ್ತೇನೆ. ನೀನು ಮರಳಿ ನನಗೆ ಆಗಸ್ಟ್ ತಿಂಗಳಲ್ಲಿ ದಿನಾಲು 1 ಪೈಸೆ, 2 ಪೈಸೆ, 4 ಪೈಸೆ, 8 ಪೈಸೆ ಹೀಗೆ ದ್ವಿಗುಣಗೊಳಿಸುತ್ತಾ 31 ದಿನ ಕೊಟ್ಟರೆ ಸಾಕು ಎಂದಾಗ ಇದೇನು ಮಹಾ ಜುಜುಬಿ ಪೈಸೆಗಳಲ್ಲಿ ಕೊಡುವ ಮೊತ್ತ ತೀರಾ ಸಣ್ಣದೆಂದು ಅನಿಸಿತಾ? ಆದರೆ ಈ ಕೋಷ್ಟಕ ನೋಡು ದಂಗಾಗುತ್ತಿ.

1	1	17	65536
2	2	18	131072
3	4	19	262144
4	8	20	524288
5	16	21	1048576
6	32	22	2097152
7	64	23	4194304
8	128	24	8388608
9	256	25	16777216
10	512	26	33554432
11	1024	27	67108864
12	2048	28	134217728
13	4096	29	268435456
14	8192	30	536870912
15	16384	31	1073741824
16	32768		

ಕನ್ನಡ ಕಂದನ ಕನವರಿಕೆ



ಕನ್ನಡ ನಾಡs ನೋಡ್ತೀನಿ - ನಾ
ಕನ್ನಡ ಹಾಡs ಹಾಡ್ತೀನಿ
ಕನ್ನಡ ಕಂಪs ಹೀರ್ತೇನಿ - ನಾ
ಕನ್ನಡ ಗುಂಪs ಸೇರ್ತೀನಿ
ಕನ್ನಡವೆಂದರೆ ಬಲು ಇಷ್ಟ
ಅನ್ಯರ ಭಾಷೆ ಕಡು - ಕಷ್ಟ
ಕನ್ನಡದಲ್ಲೇ ಕಲಿತೇನಿ ನಾ
ಕನ್ನಡದಲ್ಲೇ ನಲಿತೇನೆ
ಕನ್ನಡ ಸತ್ವ ಅರಿತೇನಿ ನಾ
ಕನ್ನಡ ಮಹತ್ವ ಸಾರ್ತೇನಿ
ಕನ್ನಡ ತಿರುಳs ತಿಳಿತೇನೆ ನಾ
ಕನ್ನಡದಲ್ಲೇ ಬೆಳಿತೇನಿ
ಬೇಂದ್ರೆ ಪದ್ಯ ಹಾಡ್ತೀನಿ ನಾ
ಕುವೆಂಪು ಗದ್ಯ ಓದ್ತೀನಿ
ಕಾರಂತಲೋಕ ನೋಡ್ತೀನಿ - ನಾ
‘ಮಾಸ್ತಿ ಆಸ್ತಿ’ ಅಂತೀನಿ

ಹೊಂದಿಸು-ಆನಂದಿಸು

ಇಲ್ಲಿ ಕೊಟ್ಟಿರುವ ಪ್ರಾಣಿ ಪಕ್ಷಿಗಳ ಮನೆ ಹೊಂದಿಸು.

1	ಗುಹೆ	A	ಮನೆ
2	ಗೂಡು	B	ಬಸವನ ಹುಳು
3	ದೊಡ್ಡಿ	C	ಕುದುರೆ
4	ಪೊಟರೆ	D	ಹಕ್ಕಿ
5	ಪಂಜರ	E	ಸಿಂಹ
6	ಬಿಲ	F	ಅಳಿಲು
7	ಲಾಯ	G	ಕುರಿಹಿಂಡು
8	ಶಂಖ	H	ಇಲಿ
9	ಹುತ್ತ	I	ಗಿಳಿ
10	ಮನುಷ್ಯ	J	ಹಾವು

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಬಳಸಿ ಪಕ್ಕದಲ್ಲಿರುವ ಸುಳಿವು ಆಧರಿಸಿ ಹೊಸ ಪದ ರಚಿಸಿ

	ಮ	ಗ	ಸುಳಿವು
1			ಮೋರೆ
2			ಮಾತು ಬಾರದವ
3			ತೀರು
4			ನಾಸಿಕ
5			ಕಂದ





ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ತಿಪ್ಪ ತುಳಿ = ____________
2. ತಕ್ಕ ಬಲೆ = ____________
3. ದಾರ ಹರಿ = ____________
4. ನರಸಮ್ಮ = ____________

ಡಜ್ಗ ಚಕ್ಕು ಕೇಳ್ರಪ್ಪ ಕಥೆಯ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಗ್ಗಟ್ಟಿನಲ್ಲಿ ಬಲವಿದೆ



ಒಂದು ಊರಿನಲ್ಲಿದ್ದ ರೈತನಿಗೆ ಮೂವರು ಮಕ್ಕಳಿದ್ದರು. ಅವರಲ್ಲಿ ಒಗ್ಗಟ್ಟು ಹೇಗಿದೆ ಎಂದು ಪರೀಕ್ಷಿಸಲು ರೈತನಿಗೆ ಮನಸ್ಸಾಯಿತು. ಮೂವರಿಗೂ ಕೋಲುಗಳ ಕಟ್ಟನ್ನು ಕೊಟ್ಟು ಅದನ್ನು ಮುರಿಯುವಂತೆ ಹೇಳಿದ



ಇಡೀ ಕಟ್ಟನ್ನು ಹಿಡಿದ ಮಕ್ಕಳಿಗೆ ಅದೆಷ್ಟೇ ಪ್ರಯತ್ನಿಸಿದರೂ ಯಾವುದೇ ಕೋಲನ್ನು ಮುರಿಯಲು ಆಗಲೇ ಇಲ್ಲ. ಸಾಕಷ್ಟು ಬಾರಿ ಪ್ರಯತ್ನಿಸಿ ಅವರು ಸೋತು ಹೋದರು.



ಬಳಿಕ ಒಬ್ಬ ಮಗ ಒಂದೊಂದೇ ಕೋಲನ್ನು ಮುರಿಯಲು ಪ್ರಯತ್ನಿಸಿದ. ಕೋಲು ತುಂಡಾಯಿತು. ಹೀಗೆ ಒಂದೊಂದೇ ಕೋಲನ್ನು ಮುರಿದ. ಕೋಲುಗಳು ಒಟ್ಟಾಗಿ ಒಂದೇ ಕಟ್ಟಿನಲ್ಲಿದ್ದಾಗ ಮುರಿಯಲಾಗಲಿಲ್ಲವಲ್ಲ ಎಂದು ರೈತ ಹೇಳಿದ



ಅದಕ್ಕೇ ನಾವೆಲ್ಲಾ ಒಟ್ಟಾಗಿ ಇದ್ದು ಸಹಬಾಳ್ವೆ ನಡೆಸಿದರೆ ಯಾರೂ ನಮ್ಮನ್ನು ಸೋಲಿಸಲಾರರು ಎಂದು ಮಕ್ಕಳಿಗೆ ನೀತಿ ಹೇಳಿದ. ಮುಂದೆ ಮಕ್ಕಳು ಅದೇ ಊರಿನಲ್ಲಿ ಎಲ್ಲರೊಂದಿಗೆ ಸಹಬಾಳ್ವೆ ನಡೆಸುತ್ತಾ ಸುಖವಾಗಿ ಬಾಳಿದರು

ಕಳೆದ ಸಂಚಿಕೆಯ ಸರಿ ಉತ್ತರಗಳು

ತ್ರಿ-ಇನ್-ಒನ್ ಪದ ಸಂಕಲನ

1.ಅವಳಿ ನಗರ, 2. ಸರಳ ಕನ್ನಡ, 3. ಶೀತಲ ಸಮರ, 4. ಉನ್ನತ ವಿಚಾರ, 5. ಆಭಾರ ಮನ್ನಣೆ

ಹೊಂದಿಸು - ಆನಂದಿಸು

1. ಪೂರ್ಣವಿರಾಮ ಚಿಹ್ನೆ .
2. ಅಲ್ಪ ವಿರಾಮ ಚಿಹ್ನೆ ,
3. ಅರ್ಧ ವಿರಾಮ ಚಿಹ್ನೆ ;
4. ಪ್ರಶ್ನಾರ್ಥಕ ಚಿಹ್ನೆ ?
5. ಭಾವಸೂಚಕ ಚಿಹ್ನೆ !
6. ಉದ್ಧರಣ ಚಿಹ್ನೆ “”
7. ಆವರಣ ಚಿಹ್ನೆ ()
8. ಸಮನಾರ್ಥಕ ಚಿಹ್ನೆ =
9. ವಿವರಣಾ ಚಿಹ್ನೆ :-

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಕವನ ಎ.
ಕ್ಯಾತಮಾರನಹಳ್ಳಿ (ಮೈಸೂರು)



ಅಮೋಘ ನಾಯಕರ
ಗಜೇಂದ್ರಗಡ (ಗದಗ)



ಧೀರಜ್‌ಕುಮಾರ್
ಚಳ್ಳಕೆರೆ (ಚಿತ್ರದುರ್ಗ)

ಸರಿ ಉತ್ತರ ಮುಂದಿನ ವಾರ... ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕುತೂಹಲದ ಕಣಜವಾದ ಗುಂಪು–2ರ ಪೈಪೋಟಿ; ಜಿಂಬಾಬ್ವೆ–ರೋಹಿತ್ ಪಡೆ ಹಣಾಹಣಿ; ಪಾಕ್–ಬಾಂಗ್ಲಾ ಸೆಣಸು

ಸೆಮಿಫೈನಲ್ ಪ್ರವೇಶದತ್ತ ಭಾರತ ಚಿತ್ತ

• ಆರ್. ಕೌಶಿಕ್


ಭಾರತ ತಂಡದ ನಾಯಕ ರೋಹಿತ್ ಶರ್ಮಾ ಪಿಚ್ ಪರಿಶೀಲಿಸಿದರು –ಎಎಫ್‌ಪಿ ಚಿತ್ರ

ಮೆಲ್ಬರ್ನ್: ಇನ್ನೊಂದು ಪಂದ್ಯ ಗೆದ್ದರೆ ಭಾರತ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವುದು ಖಚಿತ.

ಭಾನುವಾರ ಮೆಲ್ಬರ್ನ್ ಕ್ರಿಕೆಟ್ ಅಂಗಳದಲ್ಲಿ ನಡೆಯಲಿರುವ ಸೂಪರ್ 12ರ ಎರಡನೇ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗವು ಜಿಂಬಾಬ್ವೆಯನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಗೆದ್ದರೆ ನಾಲ್ಕರ ಘಟ್ಟದ ಪ್ರವೇಶ ಸರಾಗ. ಇಲ್ಲದಿದ್ದರೆ ಆತಂಕ. ಏಕೆಂದರೆ ಪಾಕಿಸ್ತಾನ ತಂಡವು ಈಚೆಗೆ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿರುವುದರಿಂದ ಭಾರತ ತಂಡವು ಸೋತರೆ ಕೊನೆಯ ಹಂತದ ಲೆಕ್ಕಾಚಾರಗಳನ್ನು ಕಾಯಬೇಕಾಗುತ್ತದೆ.

ಸೆಮಿ ಹಾದಿಯಿಂದ ಈಗಾಗಲೇ ಹೊರಬಿದ್ದಿರುವ ಜಿಂಬಾಬ್ವೆ ತಂಡವನ್ನು ರೋಹಿತ್ ಬಳಗವು ಸುಲಭ ಗುರಿಯೆಂದು ಪರಿಗಣಿಸುವ ಮನಸ್ಥಿತಿಯಲ್ಲಿ ಇಲ್ಲ. ಯಾವುದೇ ಸ್ಪರ್ಧಾತ್ಮಕ ಕ್ರೀಡೆಯಲ್ಲಿ ಎದುರಾಳಿಯನ್ನು ಗೌರವಪೂರ್ವಕವಾಗಿ ನೋಡುವುದು ಕ್ರೀಡಾಸ್ಫೂರ್ತಿ. ಇನ್ನೊಂದೆಡೆ ಪ್ರತಿಸ್ಪರ್ಧಿಯನ್ನು ಹಗುರವಾಗಿ ಪರಿಗಣಿಸಿ ಅತಿಅತ್ಮವಿಶ್ವಾಸದಿಂದ ಕಣಕ್ಕಿಳಿಯುವುದು ಕೂಡ ತಿರುಗುಬಾಣವಾಗುವ ಸಾಧ್ಯತೆ ಇರುತ್ತದೆ.

ಜಿಂಬಾಬ್ವೆ ತಂಡವು ಈ ಹಂತದವರೆಗೂ ಬರಲು ಬಹಳ ಸುದೀರ್ಘ ಹಾದಿಯನ್ನು ಸವೆಸಿದೆ. ಅರ್ಹತಾ ಸುತ್ತಿನ ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೂಪರ್ 12ರ ಹಂತಕ್ಕೆ ಪ್ರವೇಶಿಸಿತ್ತು. ಪರ್ತ್‌ನಲ್ಲಿ ಪಾಕಿಸ್ತಾನ ವಿರುದ್ಧ ಒಂದು ರನ್ ಅಂತರದ ರೋಚಕ ಜಯ ಸಾಧಿಸಿತ್ತು. ಬಾಂಗ್ಲಾ ಹಾಗೂ ನೆದರ್ಲೆಂಡ್ಸ್ ತಂಡಗಳ ಎದುರು ವಿರೋಚಿತ ಹೋರಾಟ ಮಾಡಿತ್ತು. ಕ್ರೇಗ್ ಇರ್ವಿನ್ ನಾಯಕತ್ವದ ಜಿಂಬಾಬ್ವೆಯ ಹೋರಾಟದ ಪರಿಯನ್ನು ರೋಹಿತ್ ಬಳಗವು ಗಂಭೀರವಾಗಿಯೇ ಪರಿಗಣಿಸುವುದು ಖಚಿತ. ಜಿಂಬಾಬ್ವೆಗೆ ಸೋಲಿನಿಂದ ಕಳೆದುಕೊಳ್ಳುವುದೇನೂ ಇಲ್ಲ. ಆದರೆ, ಬಲಿಷ್ಠ ತಂಡವನ್ನು ಮಣಿಸಿದ ಸಂತೃಪ್ತಿ ಅಮೂಲ್ಯವೇ ಅಲ್ಲವೇ?

ಈ ಐತಿಹಾಸಿಕ ತಾಣದಲ್ಲಿ ಜಿಂಬಾಬ್ವೆಯು ಇದುವರೆಗೆ ಕೇವಲ ಎರಡು ಪಂದ್ಯಗಳನ್ನು ಆಡಿದೆ. ಆದರೆ ಭಾನುವಾರ ಭಾರತ ತಂಡವನ್ನು ಬೆಂಬಲಿಸುವ ಸುಮಾರು 80 ಸಾವಿರ ಪ್ರೇಕ್ಷಕರು ಸೇರಲಿರುವ ಎಂಸಿಜಿಯಲ್ಲಿ ಜಿಂಬಾಬ್ವೆಗೆ ವಿಭಿನ್ನ ಅನುಭವ ಸಿಗುವುದು ಖಚಿತ.

ಇದಲ್ಲದೇ ಭಾರತ ಮತ್ತು ಜಿಂಬಾಬ್ವೆ ತಂಡಗಳು ಈ ಹಿಂದೆ ಒಟ್ಟಾರೆ ಏಳು ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಭಾರತವು 5–2 ಗೆಲುವಿನ ಮುನ್ನಡೆ ಹೊಂದಿದೆ. ಅಲ್ಲದೇ ಈ ಎಲ್ಲ ಪಂದ್ಯಗಳೂ ಹರಾರೆಯಲ್ಲಿಯೇ ನಡೆದಿವೆ. 2016ರ ನಂತರ ಉಭಯ ತಂಡಗಳು ಮುಖಾಮುಖಿಯಾಗುತ್ತಿರುವುದು ಈಗಲೇ.

ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿರುವ ಭಾರತ ಈ ಟೂರ್ನಿಯಲ್ಲಿ ಕೆಲವು ಸ್ಮರಣೀಯ ಸಾಧನೆಗಳನ್ನು ಮಾಡಿದೆ. ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ತಂಡಗಳ ವಿರುದ್ಧ ಕಠಿಣ ಪರಿಸ್ಥಿತಿಯನ್ನು ಎದುರಿಸಿಯೂ ಜಯಿಸಿದೆ. ನಾಯಕ ರೋಹಿತ್ ಹಾಗೂ ಉಪನಾಯಕ ಕೆ.ಎಲ್. ರಾಹುಲ್ ತಲಾ ಒಂದು ಅರ್ಧಶತಕ ಗಳಿಸಿದ್ದಾರೆ. ಆದರೆ, ಮೊದಲ ವಿಕೆಟ್‌ಗೆ ದೊಡ್ಡ ಜೊತೆಯಾಟ ಇವರಿಂದ ಇನ್ನೂ ಮೂಡಿಬಂದಿಲ್ಲ. ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ಅಥವಾ ಬೆನ್ನಟ್ಟಲು ಇವರಿಬ್ಬರ ಜೊತೆಯಾಟ ಪ್ರಮುಖವಾಗಿದೆ. ಇದುವರೆಗೆ ಅವರ ಜೊತೆಯಾಟದಲ್ಲಿ ದಾಖಲೆಯಾದ ಮೊತ್ತ 23 ರನ್‌ಗಳಷ್ಟೇ!

ಜಿಂಬಾಬ್ವೆಯ ಬೌಲರ್‌ಗಳಿಗೆ ಅನುಭವ ಹಾಗೂ ಕೌಶಲಗಳ ಕೊರತೆ ಇದೆ. ಸಿಕಂದರ್ ರಝಾ ಅವರ ಆಲ್‌ರೌಂಡ್ ಆಟದ ಮೇಲೆ ತಂಡವು ಹೆಚ್ಚು ಅವಲಂಬಿತವಾಗಿದೆ. ಎರಡು ವಾರಗಳ ಹಿಂದಷ್ಟೇ ಇದೇ ಅಂಗಳದಲ್ಲಿ ಭಾರತ ತಂಡವು ಪಾಕಿಸ್ತಾನದ ಶ್ರೇಷ್ಠ ಬೌಲಿಂಗ್ ಪಡೆಗೆ ಬಿಸಿ ಮುಟ್ಟಿಸಿತ್ತು. ವಿರಾಟ್ ಕೊಹ್ಲಿ ಅಬ್ಬರಿಸಿದ್ದರು. ಸೂರ್ಯಕುಮಾರ್ ಯಾದವ್ ಕೂಡ ಅಮೋಘ ಲಯದಲ್ಲಿರುವುದರಿಂದ ಜಿಂಬಾಬ್ವೆ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.30

ದ. ಆಫ್ರಿಕಾ, ಪಾಕ್‌ಗೆ ಜಯ ಅಗತ್ಯ

ಅಡಿಲೇಡ್ (ರಾಯಿಟರ್ಸ್): ಸೆಮಿಫೈನಲ್ ಮೇಲೆ ಕಣ್ಣಿಟ್ಟಿರುವ ದಕ್ಷಿಣ ಆಫ್ರಿಕಾ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ನೆದರ್ಲೆಂಡ್ಸ್ ಸವಾಲು ಎದುರಿಸಲಿದೆ.

ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾದ ಸೆಮಿಫೈನಲ್ ಕನಸು ನನಸಾಗಬೇಕಾದರೆ ಈ ಪಂದ್ಯ ಗೆಲ್ಲುವುದು ಅನಿವಾರ್ಯವಾಗಿದೆ.

ಎರಡನೇ ಗುಂಪಿನ ಪಂದ್ಯದಲ್ಲಿ ಗುರುವಾರ ಪಾಕಿಸ್ತಾನ ತಂಡದ ಎದುರು 33 ರನ್‌ಗಳಿಂದ ಸೋತಿದ್ದ ದಕ್ಷಿಣ ಆಫ್ರಿಕಾಗೆ ಭಾರಿ ಹಿನ್ನಡೆ ಉಂಟಾಗಿದೆ. ಈ ಪಂದ್ಯದಲ್ಲಿಯೂ ಎಡವಿದರೆ ತಂಡವು ಸತತ ಮೂರನೇ ಟಿ20 ವಿಶ್ವಕಪ್‌ನಲ್ಲಿ ನಾಕೌಟ್ ಸುತ್ತು ತಲುಪದೇ ಹೊರಬೀಳುವ ಆತಂಕದಲ್ಲಿದೆ.

ಬವುಮಾ ಬಳಗ ಸೋತರೆ ಪಾಕಿಸ್ತಾನ ಅಥವಾ ಬಾಂಗ್ಲಾದೇಶ ತಂಡಕ್ಕೆ ಸೆಮಿಫೈನಲ್ ಅವಕಾಶದ ಬಾಗಿಲು ತೆರೆಯಲಿದೆ. ನೆದರ್ಲೆಂಡ್ಸ್ ಈಗಾಗಲೇ ಸೆಮಿಫೈನಲ್ ಅವಕಾಶ ಕಳೆದುಕೊಂಡಿದೆ. ಹೀಗಾಗಿ ಈ ಪಂದ್ಯವು ಆ ತಂಡಕ್ಕೆ ಔಪಚಾರಿಕ ಎನಿಸಿದೆ.

ಪಾಕ್–ಬಾಂಗ್ಲಾ ಹಣಾಹಣಿ: ಅಡಿಲೇಡ್‌ನಲ್ಲಿ ನಡೆಯಲಿರುವ ಇನ್ನೊಂದು ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಸೆಣಸಲಿವೆ. ಸದ್ಯ ಗುಂಪು 2 ಪಾಯಿಂಟ್ಸ್ ಪಟ್ಟಿಯಲ್ಲಿ ಪಾಕ್ ಮತ್ತು ಬಾಂಗ್ಲಾ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನಗಳಲ್ಲಿವೆ.

ಬಾಂಗ್ಲಾದೇಶ– ಪಾಕಿಸ್ತಾನ
(ಆರಂಭ: ಬೆಳಿಗ್ಗೆ **9.30**)
ನೆದರ್ಲೆಂಡ್ಸ್– ದಕ್ಷಿಣ ಆಫ್ರಿಕಾ
(ಆರಂಭ: ಬೆಳಿಗ್ಗೆ **5.30**)
ಸ್ಥಳ: ಅಡಿಲೇಡ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	5	3	1	1	7	2.113
ಇಂಗ್ಲೆಂಡ್	5	3	1	1	7	0.473
ಆಸ್ಟ್ರೇಲಿಯಾ	5	3	1	1	7	-0.173
ಶ್ರೀಲಂಕಾ	5	2	3	0	4	-0.422
ಐರ್ಲೆಂಡ್	5	1	3	1	3	-1.615
ಅಫ್ಗಾನಿಸ್ತಾನ	5	0	3	2	2	-0.571
ಗುಂಪು 2						
ಭಾರತ	4	3	1	0	6	0.730
ದಕ್ಷಿಣ ಆಫ್ರಿಕಾ	4	2	1	1	5	1.441
ಪಾಕಿಸ್ತಾನ	4	2	2	0	4	1.117
ಬಾಂಗ್ಲಾದೇಶ	4	2	2	0	4	-1.276
ಜಿಂಬಾಬ್ವೆ	4	1	2	1	3	-0.313
ನೆದರ್ಲೆಂಡ್ಸ್	4	1	3	0	2	-1.233


ಲಂಕಾ ತಂಡದ ಬ್ಯಾಟರ್ ಔಟಾದಾಗ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ (ಬಲ) ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ನಾಲ್ಕರಘಟ್ಟಕ್ಕೆ ಇಂಗ್ಲೆಂಡ್

ಸಿಡ್ನಿ (ಪಿಟಿಐ): ಅಲೆಕ್ಸ್ ಹೇಲ್ಸ್ ಮತ್ತು ಬೆನ್ ಸ್ಟೋಕ್ಸ್ ಅವರ ಜವಾಬ್ದಾರಿಯುತ ಆಟದ ಬಲದಿಂದ ಇಂಗ್ಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಶನಿವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಜೋಸ್ ಬಟ್ಲರ್ ಬಳಗ, ಏಷ್ಯಾ ಕಪ್ ಚಾಂಪಿಯನ್ ಶ್ರೀಲಂಕಾ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತು. ಇಂಗ್ಲೆಂಡ್ ಗೆದ್ದ ಕಾರಣ ಆಸ್ಟ್ರೇಲಿಯಾ ತಂಡ ಟೂರ್ನಿಯಿಂದ ಹೊರಬಿತ್ತು.

ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ, ಪಥುಮ್ ನಿಸಾಂಕ (67 ರನ್, 45 ಎ., 4X2, 6X5) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 141 ರನ್ ಗಳಿಸಿತು. ಇಂಗ್ಲೆಂಡ್ ಎರಡು ಎಸೆತಗಳು ಇರುವಂತೆಯೇ 6 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು.

ಭರ್ಜರಿ ಆರಂಭ: ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಹೇಲ್ಸ್ (47 ರನ್, 30 ಎ., 4X7, 1X6) ಮತ್ತು ಬಟ್ಲರ್ (28 ರನ್, 23 ಎ.) ಮೊದಲ ವಿಕೆಟ್‌ಗೆ 43 ಎಸೆತಗಳಲ್ಲಿ 75 ರನ್ ಸೇರಿಸಿ ಭರ್ಜರಿ ಆರಂಭ ನೀಡಿದರು.

ಆದರೆ ಸ್ಪಿನ್ನರ್ ವನಿಂದು ಹಸರಂಗ (23ಕ್ಕೆ 2) ಏಳು ರನ್‌ಗಳ ಅಂತರದಲ್ಲಿ ಇಬ್ಬರನ್ನೂ ಪೆವಿಲಿಯನ್‌ಗಟ್ಟಿದರು. ಆ ಬಳಿಕ ಇಂಗ್ಲೆಂಡ್ ಮೇಲಿಂದ ಮೇಲೆ ವಿಕೆಟ್‌ಗಳನ್ನು ಕಳೆದುಕೊಂಡು ಒತ್ತಡಕ್ಕೆ ಒಳಗಾಯಿತು.

ಇಂಗ್ಲೆಂಡ್‌ಗೆ 33 ಎಸೆತಗಳಲ್ಲಿ 31 ರನ್ ಬೇಕಿದ್ದಾಗ ಐದನೇ ವಿಕೆಟ್ ರೂಪದಲ್ಲಿ ಮೊಯೀನ್ ಅಲಿ ಔಟಾದರು. ಈ ವೇಳೆ ಛಲದ ಆಟವಾಡಿದ ಸ್ಟೋಕ್ಸ್ (ಔಟಾಗದೆ 42, 36 ಎ.) ಅವರು ಸ್ಯಾಮ್ ಕರನ್ (6) ಮತ್ತು ಕ್ರಿಸ್ ವೋಕ್ಸ್ (ಔಟಾಗದೆ 5) ನೆರವಿನೊಂದಿಗೆ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 141 (ಪಥುಮ್ ನಿಸಾಂಕ 67, ಕುಸಾಲ್ ಮೆಂಡಿಸ್ 18, ಭಾನುಕಾ ರಾಜಪಕ್ಸ 22, ಮಾರ್ಕ್ ವುಡ್ 26ಕ್ಕೆ 3, ಬೆನ್ ಸ್ಟೋಕ್ಸ್ 24ಕ್ಕೆ 1, ಕ್ರಿಸ್ ವೋಕ್ಸ್ 24ಕ್ಕೆ 1, ಸ್ಯಾಮ್ ಕರನ್ 27ಕ್ಕೆ 1, ಆದಿಲ್ ರಶೀದ್ 16ಕ್ಕೆ 1)

ಇಂಗ್ಲೆಂಡ್ 19.4 ಓವರ್‌ಗಳಲ್ಲಿ 6 ವಿಕೆಟ್‌ಗೆ 144 (ಜೋಸ್ ಬಟ್ಲರ್ 28, ಅಲೆಕ್ಸ್ ಹೇಲ್ಸ್ 47, ಬೆನ್ ಸ್ಟೋಕ್ಸ್ ಔಟಾಗದೆ 42, ವನಿಂದು ಹಸರಂಗ ಡಿಸಿಲ್ವಾ 23ಕ್ಕೆ 2, ಲಾಹಿರು ಕುಮಾರ 24ಕ್ಕೆ 2, ಧನಂಜಯ ಡಿಸಿಲ್ವಾ 24ಕ್ಕೆ 2) ಇಂಗ್ಲೆಂಡ್‌ಗೆ 4 ವಿಕೆಟ್ ಗೆಲುವು

ನಾಲ್ಕು ಸಾವಿರ ರನ್ ಹೊಸ್ತಿಲಲ್ಲಿ ವಿರಾಟ್

ಭಾರತದ ರನ್ ಯಂತ್ರ ವಿರಾಟ್ ಕೊಹ್ಲಿಗೆ ಶನಿವಾರ 34ನೇ ಜನ್ಮದಿನದ ಸಂಭ್ರಮ. ಸಾಮಾಜಿಕ ಜಾಲತಾಣಗಳಲ್ಲಿ ಅವರಿಗೆ ಜನ್ಮದಿನ ಶುಭಾಶಯಗಳ ಮಹಾಪೂರವೇ ಹರಿದಿದೆ.

ಸದ್ಯ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ತಂಡವು ಆಸ್ಟ್ರೇಲಿಯಾದಲ್ಲಿದೆ. ಭಾನುವಾರ ಜಿಂಬಾಬ್ವೆ ವಿರುದ್ಧ ಪಂದ್ಯ ಆಡಲಿದೆ. ಮೆಲ್ಬರ್ನ್‌ನಲ್ಲಿ ಶನಿವಾರ ವಿರಾಟ್ ತಮ್ಮ ಸಹ ಆಟಗಾರರ ಮುಂದೆ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಿಕೊಂಡರು.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ನಲ್ಲಿ ಅತಿ ಹೆಚ್ಚು ರನ್ (3932) ಗಳಿಸಿರುವ ದಾಖಲೆಯನ್ನೂ ಬರೆದಿರುವ ಕೊಹ್ಲಿ ಇನ್ನೊಂದು ಮೈಲುಗಲ್ಲಿನ ಸನಿಹದಲ್ಲಿದ್ದಾರೆ. 68 ರನ್ ಗಳಿಸಿದರೆ ಅವರು ನಾಲ್ಕು ಸಾವಿರ ರನ್ ಸಾಧನೆ ಮಾಡಿದ ಮೊದಲ ಬ್ಯಾಟರ್ ಆಗಲಿದ್ದಾರೆ. ಈ ಟೂರ್ನಿಯಲ್ಲಿ ಅವರು ಈಗಾಗಲೇ ಮೂರು ಅರ್ಧಶತಕಗಳನ್ನು ಗಳಿಸಿ ಉತ್ತಮ ಲಯದಲ್ಲಿದ್ದಾರೆ.


ಮೆಲ್ಬರ್ನ್‌ನಲ್ಲಿ ಭಾರತ ತಂಡದ ಆಟಗಾರ ವಿರಾಟ್ ಕೊಹ್ಲಿ ತಮ್ಮ 34ನೇ ಜನ್ಮದಿನ ಆಚರಿಸಿಕೊಂಡರು. ತಂಡದ ಮೆಂಟಲ್ ಕಂಡಿಷನಿಂಗ್ ಕೋಚ್ ಪ್ಯಾಡಿ ಆಪ್ಟನ್ ಅವರಿಗೆ ಕೇಕ್ ತಿನ್ನಿಸಿದರು –ಪಿಟಿಐ ಚಿತ್ರ

ಆಸ್ಟ್ರೇಲಿಯಾ ಕನಸು ಭಗ್ನ

ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡ ಈ ಬಾರಿ ನಾಲ್ಕರಘಟ್ಟ ಪ್ರವೇಶಿಸದೆಯೇ ಟೂರ್ನಿಯಿಂದ ಹೊರಬಿದ್ದಿದೆ. ಆಸ್ಟ್ರೇಲಿಯಾದ ಸೆಮಿ ಸಾಧ್ಯತೆ ಇಂಗ್ಲೆಂಡ್– ಶ್ರೀಲಂಕಾ ಪಂದ್ಯವನ್ನು ಅವಲಂಬಿಸಿತ್ತು.

ಆತಿಥೇಯರು ಸೆಮಿ ಪ್ರವೇಶಿಸಬೇಕಾದರೆ ಶ್ರೀಲಂಕಾ ತಂಡ, ಇಂಗ್ಲೆಂಡ್‌ಅನ್ನು ಮಣಿಸಬೇಕಿತ್ತು. ಆದರೆ ಲಂಕಾ ತಂಡದ ಸೋಲು ಆಸ್ಟ್ರೇಲಿಯಾದ ಸೆಮಿ ಪ್ರವೇಶದ ಬಾಗಿಲು ಮುಚ್ಚಿತು.

‘ಗುಂಪು 1’ ರಲ್ಲಿ ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಲಾ ಏಳು ಪಾಯಿಂಟ್ಸ್ ಗಳಿಸಿದವು. ಉತ್ತಮ ರನ್ ರೇಟ್ ಆಧಾರದಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದ ನ್ಯೂಜಿಲೆಂಡ್ ಹಾಗೂ ಇಂಗ್ಲೆಂಡ್ ಸೆಮಿಫೈನಲ್‌ಗೆ ಅರ್ಹತೆ ಪಡೆದವು. ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಕೈಯಲ್ಲಿ ಎದುರಾದ ಸೋಲು ಫಿಂಚ್ ಬಳಗಕ್ಕೆ ಮುಳುವಾಗಿ ಪರಿಣಮಿಸಿತು.